₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 20.01.2026 ಸಂಪುಟ: 11 ಸಂಚಿಕೆ:6 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜೊಕೊವಿಚ್ ತ್ರಿಶತಕ!

ನೊವಾಕ್ ಜೊಕೊವಿಚ್ 2026ರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಅವರ ವಿರುದ್ಧ ಗೆಲುವು ಸಾಧಿಸಿ 3 ಗ್ರ್ಯಾನ್ ಸ್ಲಾಮ್‌ಗಳಲ್ಲಿ ನೂರಕ್ಕಿಂತ ಹೆಚ್ಚು ಪಂದ್ಯ ಗೆದ್ದ ಸಾಧನೆ ಮಾಡಿದ್ದಾರೆ. ಈ ಮೊದಲು ವಿಂಬಲ್ಡನ್ ಮತ್ತು ಫ್ರೆಂಚ್ ಓಪನ್ ನಲ್ಲಿ ಜೊಕೊವಿಚ್ ಈ ಸಾಧನೆ ಮೆರೆದಿದ್ದರು.

ಸೊಂಪಾದ ಪುಟಗಳು

ರಾಗಾ ಅಂತರದ ಹಿಂದಿರುವ ಲೆಕ್ಕಾಚಾರವೇನು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಇವತ್ತಿನ ಬದುಕು ಸ್ಯಾಕರಿನ್‌ನಂತೆ, ಸಿಹಿಯುಂಟು ಶಕ್ತಿಯಿಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 6

ದಾರಿದೀಪೋಕ್ತಿ

ಇತರರು ನಿಮ್ಮ ಮೇಲೆ ಇಟ್ಟಿರುವ ನಂಬಿಕೆಗಿಂತ, ನಿಮ್ಮ ಸಾಮರ್ಥ್ಯದ ಮೇಲೆ ನಿಮಗಿರುವ ಆತ್ಮವಿಶ್ವಾಸ ದೊಡ್ಡದಾಗಿರಬೇಕು. ಬೀಳುವುದರಲ್ಲಿ ಸೋಲಿಲ್ಲ, ಬಿದ್ದ ಮೇಲೆ ಮತ್ತೆ ಏಳಲು ನಿರಾಕರಿಸುವುದೇ ಅಸಲಿ ಸೋಲು.

ವಕ್ರತುಂಡೋಕ್ತಿ



ಈ ಕಾಲದಲ್ಲಿ ಎಲ್ಲರಿಗೂ ಸ್ಟೇಟಸ್ ಅನ್ನೋದು ಇರುತ್ತದೆ, ಆದರೆ ಅದು ಅನೇಕರಿಗೆ ವಾಟ್ಸಪ್‌ನಲ್ಲಿರುತ್ತದೆ

ಹೊಸೂರು ವಿಮಾನ ನಿಲ್ದಾಣಕ್ಕೆ ರೆಡ್ ಸಿಗ್ನಲ್

ಚೆನ್ನೈ: ಹೊಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಬೇಕೆಂಬ ತಮಿಳುನಾಡು ಸರಕಾರದ ಮನವಿಯನ್ನು ರಕ್ಷಣಾ ಸಚಿವಾಲಯ ಮತ್ತೊಮ್ಮೆ ತಿರಸ್ಕರಿಸಿದೆ. ಬೆಂಗಳೂರು ವಿಮಾನನಿಲ್ದಾಣಕ್ಕೆ ಕೇವಲ 72 ಕಿ.ಮೀ. ಹತ್ತಿರದಲ್ಲಿರುವ ಹೊಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವ ಮನವಿಯನ್ನು ನಾಗರಿಕ ವಿಮಾನ ಯಾನ ಸಚಿವಾಲಯ ಈ ಹಿಂದೆಯೇ ತಿರಸ್ಕರಿಸಿತ್ತು. ಇದೀಗ ಹಿಂದೂಸ್ತಾನ್ ಏರೋನಾಟಿಕ್ ಲಿಮಿಟೆಡ್ (ಎಚ್‌ಎಎಲ್) ನಿಯಂತ್ರಣದಲ್ಲಿರುವ ಈ ವಾಯುಪ್ರದೇಶದಲ್ಲಿ ಹೊಸ ವಿಮಾನ ನಿಲ್ದಾಣ ಸ್ಥಾಪಿಸುವುದರಿಂದ ರಕ್ಷಣಾ ಕಾರ್ಯಾಚರಣೆ ಮತ್ತು ತರಬೇತಿಗೆ ಅಡ್ಡಿಯಾಗಬಹುದು ಎಂದು ರಕ್ಷಣಾ ಸಚಿವಾಲಯ ಅನುಮತಿ ನಿರಾಕರಿಸಿದೆ. ಏಕೆಂದರೆ,ಈ ಮೊದಲು, ಬೆಂಗಳೂರು ವಿಮಾನ ನಿಲ್ದಾಣದಿಂದ ಹೊಸೂರು 150 ಕಿ.ಮೀ.ಗಿಂತ ಕಡಿಮೆ ಅಂತರದಲ್ಲಿದೆ. ಒಪ್ಪಂದದ ಪ್ರಕಾರ 20 ವರ್ಷಗಳ ಅವಧಿಗೆ ಈ ಅಂತರದಲ್ಲಿ ಹೊಸ ವಿಮಾನ ನಿಲ್ದಾಣ ಸ್ಥಾಪನೆ ಸಾಧ್ಯವಿಲ್ಲ ಎಂಬ ಕಾರಣ ನೀಡಿ ಉಡಾನ್ ಪಟ್ಟಿಯಿಂದ ಕೈಬಿಡಲಾಗಿತ್ತು.

ಜಿಮೇಲ್‌ನಲ್ಲೂ ಎಐ ತಂತ್ರಜ್ಞಾನ

ದೆಹಲಿ: ಜೆಮಿನಿ ಕೃತಕ ಬುದ್ಧಿಮತ್ತೆ (ಎಐ)ಯನ್ನು ಪರಿಚಯಿಸಿದ ಗೂಗಲ್ ಸಂಸ್ಥೆ ಇದೀಗ ಜಿಮೇಲ್‌ಗೂ ಎಐ ಅನ್ನು ಪರಿಚಯಿಸಲು ಮುಂದಾಗಿದೆ. ಇದು 3 ಶತಕೋಟಿ ಜಿಮೇಲ್ ಬಳಕೆದಾರರಿಗೆ ಸಹಾಯವಾಗಲಿದೆ ಎನ್ನಲಾಗಿದೆ. ಆದರೆ ಇದರಿಂದ ವೈಯಕ್ತಿಕ ಮಾಹಿತಿ ಸೋರಿಕೆಯಾಗುವ ಆತಂಕ ವ್ಯಕ್ತವಾಗಿದೆ. ಜಿಮೇಲ್‌ನಲ್ಲಿ ಪರಿಚಯಿಸಲು ಮುಂದಾಗಿರುವ ಈ ಎಐ, ಬಳಕೆದಾರರಿಗೆ ಹಲವು ರೀತಿಯಲ್ಲಿ ಸಹಾಯ ಮಾಡಲಿದೆ. ಜಿಮೇಲ್ ಸರ್ಚ್ ಕಾಲಂನಲ್ಲಿ ಯಾವುದೇ ಕೀವರ್ಡ್ ಅವಶ್ಯಕತೆಯಿಲ್ಲದೇ ಸುಲಭ ಭಾಷೆಯಲ್ಲಿ ಪ್ರಶ್ನೆಗಳನ್ನು ಕೇಳುವ ಅವಕಾಶವೂ ಸಿಗಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಡಿಸಿಎಂ ತಿನಿಸಿದ ಸ್ವೀಟನ್ನು ಬಾಯಿಂದ ತೆಗೆದು ಎಸೆದ ಸಿಎಂ

ಸುದ್ದಿ



ಜಿಬಿಎ ಚುನಾವಣೆಗೆ ಮತಪತ್ರ ಬಳಸಲು ಆಯೋಗ ನಿರ್ಧಾರ
ಏಕಕಾಲಕ್ಕೆ ಸ್ಥಳೀಯ ಸಂಸ್ಥೆ ಚುನಾವಣೆಗೆ ಕೈ ನಾಯಕರ ಒಲವು
ಪಂಚಾಯಿತಿ ಚುನಾವಣೆಗಳಿಗೂ ಇವಿಎಂ ಬಳಕೆ ಸಾಧ್ಯತೆ ದೂರ

ಮತ್ತೆ ಬ್ಯಾಲೆಟ್‌ಗೆ ಮಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಲೆಕ್ಟ್ರಾನಿಕ್ ಮತಯಂತ್ರದ ಬಳಕೆ (ಇವಿಎಂ) ವಿರುದ್ಧ ಸಮರ ಸಾರಿರುವ ಕಾಂಗ್ರೆಸ್ ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಮತಪತ್ರದ ಮೂಲಕವೇ ನಡೆಸುವ ಪ್ರಸ್ತಾಪಕ್ಕೆ ರಾಜ್ಯ ಚುನಾವಣಾ ಆಯೋಗ ಅಸ್ತು ಎಂದಿದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರಕಾರ, ಭವಿಷ್ಯದ ಎಲ್ಲಾ ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂ ಬದಲಿಗೆ ಮತಪತ್ರ ಬಳಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಲು ನಿರ್ಧರಿಸಿತ್ತು. ಆದರೆ ಚುನಾವಣಾ ಆಯೋಗದಿಂದ ಈ ಬಗ್ಗೆ ಯಾವುದೇ ಸ್ಪಷ್ಟನೆ ಸಿಕ್ಕಿರಲಿಲ್ಲ. ಆದರೀಗ, ಜಿಬಿಎ ವ್ಯಾಪ್ತಿಯ ಮತದಾರರ ಕರಡು ಪಟ್ಟಿ ಬಿಡುಗಡೆ ಸಮಯದಲ್ಲಿ, ಮತಪತ್ರದ ಮೂಲಕವೇ ಜಿಬಿಎ ಚುನಾವಣೆ ನಡೆಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್. ಸಂಗ್ರೇಶಿ ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ಮುಂಬರಲಿರುವ ಎಲ್ಲ ಚುನಾವಣೆಗಳಲ್ಲಿಯೂ ಮತಪತ್ರದ ಮೂಲಕವೇ ಚುನಾವಣೆ ನಡೆಸುವ ಸರಕಾರದ ತೀರ್ಮಾನವನ್ನು ಆಯೋಗವೂ ಅಸ್ತು ಎಂದಿದೆ.

ಮತಪತ್ರ ಬಳಕೆಗೆ ನಿರ್ಬಂಧವಿಲ್ಲ: ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಂಗ್ರೇಶಿ, ಬ್ಯಾಲೆಟ್ ಪೇಪರ್‌ಗಳನ್ನು ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಎಲ್ಲಿಯೂ ಹೇಳಿಲ್ಲ. ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಯಾಗಿದ್ದು, ಮತಪತ್ರಗಳ ಬಳಕೆ ಆಯೋಗದ ನಿರ್ಧಾರ. ಮತಪತ್ರಗಳನ್ನು ಆರಂಭದಿಂದಲೂ ಬಳಸಲಾಗುತ್ತಿತ್ತು. ಆದರೆ ಕಳೆದ 20-30 ವರ್ಷಗಳಿಂದ ಇವಿಎಂಗಳನ್ನು ಬಳಸಲಾಗುತ್ತಿದೆ. ಮತಪತ್ರಗಳ ಬಳಕೆಯನ್ನು ಕಾನೂನು ಅಥವಾ ಸುಪ್ರೀಂ ಕೋರ್ಟ್ ಸಹ ನಿಷೇಧಿಸಿಲ್ಲ. ಆದ್ದರಿಂದ ಮತಪತ್ರ ಬಳಸುವ ನಿರ್ಧಾರಿಸಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಲೋಕಸಭೆ ಚುನಾವಣೆ ಮತ್ತು ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಇವಿಎಂ ಬಳಸಿ ಅಧಿಕಾರಕ್ಕೇರಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಆರೋಪಿಸುತ್ತಾ ಬಂದಿದ್ದಾರೆ. ಇವಿಎಂ ಬಳಕೆ ನಿಲ್ಲಿಸಿ ಮರಳಿ ಮತ ಪತ್ರ ಬಳಕೆ ಜಾರಿಗೊಳಿಸುವಂತೆ ಸಂಸತ್ತಿನಲ್ಲಿ ಇಂಡಿ ಒಕ್ಕೂಟ ಆಗ್ರಹಿಸಿದೆ. ಇದೀಗ ಈ ಆಗ್ರಹದಂತೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತ ಪತ್ರ ಜಾರಿಯಾಗಿರುವುದು ಕಾಂಗ್ರೆಸ್ ನಿಲುವಿಗೆ ಪುಷ್ಟಿ ನೀಡಿದೆ.

ಏಕಕಾಲಕ್ಕೆ ಸ್ಥಳೀಯ ಸಂಸ್ಥೆ ಚುನಾವಣೆ?

ಮತಪತ್ರ ಬಳಕೆಯ ಬೆನ್ನಲ್ಲೇ, ಇದೀಗ ರಾಜ್ಯ ಕಾಂಗ್ರೆಸ್ ನಾಯಕರು ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಉತ್ಸಾಹದಲ್ಲಿದ್ದಾರೆ. ಈ ಬಗ್ಗೆ ಮಾತನಾಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ನಮ್ಮ ಸರಕಾರ ತೀರ್ಮಾನಿಸಿದೆ. ಇವುಗಳಿಗೆ ಇದ್ದ ಮೀಸಲು ಸಮಸ್ಯೆ ಬಗೆಹರಿಸಲು ಸಿಎಂ ಹಾಗೂ ಸಚಿವರು ತಿಳಿಸಿದ್ದಾರೆ. ಗ್ರಾಮ ಪಂಚಾಯಿತಿ ಚುನಾವಣೆಗಳನ್ನೂ ಪಕ್ಷದ ಚಿಹ್ನೆ ಮೇಲೆ ನಡೆಸಬೇಕು ಎಂದು ಅನೇಕರು ಸಲಹೆ ನೀಡಿದ್ದು, ನಾವಿನ್ನೂ ಆ ಬಗ್ಗೆ ತೀರ್ಮಾನ ಮಾಡಿಲ್ಲ. ಒಂದೇ ಬಾರಿಗೆ ಎಲ್ಲವನ್ನು ನಡೆಸಲು ಚಿಂತನೆ ನಡೆಯುತ್ತಿದೆ ಎಂದರು.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮತಯಂತ್ರ ಹೊರತಾಗಿ ಮತಪತ್ರ ಬಳಸಲು ತೀರ್ಮಾನಿಸಿರುವ ಮಾಹಿತಿ ಬಂದಿದೆ. ರಾಜ್ಯ ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಯಾಗಿದ್ದು, ಇದನ್ನು ತೀರ್ಮಾನಿಸುವ ಅಧಿಕಾರ ಅವರಿಗಿದೆ. ಹೀಗಾಗಿ ಇದು ಆಯೋಗಕ್ಕೆ ಬಿಟ್ಟ ವಿಚಾರ. ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗಲೇ 2020ರಲ್ಲಿ ತಂದ ಕಾನೂನಿನಲ್ಲಿ ಮತಪತ್ರ ಬಳಸಲು ಅವಕಾಶ ನೀಡಲಾಗಿದೆ. ನಾವು ಅದನ್ನು ಮುಂದುವರಿಸುತ್ತಿದ್ದೇವೆ. ಮತಪತ್ರ ಬಳಸುವುದರಲ್ಲಿ ತಪ್ಪೇನು ಇಲ್ಲ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಅಮೆರಿಕದಂತಹ ಅಭಿವೃದ್ಧಿ ಹೊಂದಿದ ದೇಶಗಳು ಸಹ ಮತಪತ್ರಗಳನ್ನು ಬಳಸುತ್ತವೆ. ಬ್ಯಾಲೆಟ್ ಪೇಪರ್ ಬಳಸಲು ಯಾರಿಂದಲೂ ಒತ್ತಡವಿರಲಿಲ್ಲ. ರಾಜ್ಯ ಚುನಾವಣೆ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಕಾನೂನಿನಲ್ಲಿ ಬ್ಯಾಲೆಟ್ ಪೇಪರ್ ಅಥವಾ ಇವಿಎಂಗಳನ್ನು ಬಳಸಿಕೊಂಡು ಚುನಾವಣೆಗಳನ್ನು ನಡೆಸಲು ಅವಕಾಶವಿದೆ. ಆಯೋಗವು ಇದನ್ನು ನಿರ್ಧರಿಸುವ ವಿವೇಚನಾಧಿಕಾರ ಹೊಂದಿದೆ.

-ಜಿ. ಎಸ್. ಸಂಗ್ರೇಶಿ , ರಾಜ್ಯ ಚುನಾವಣಾ ಆಯೋಗದ ಆಯುಕ್ತ

ಜಿಬಿಎ ವ್ಯಾಪ್ತಿಯಲ್ಲಿರುವ ಮತದಾರರ ಸಂಖ್ಯೆ (ಕರಡು)

- ಬೆಂಗಳೂರು ಪಶ್ಚಿಮ 27.25 ಲಕ್ಷ
- ಬೆಂಗಳೂರು ಉತ್ತರ 19.54 ಲಕ್ಷ
- ಬೆಂಗಳೂರು ದಕ್ಷಿಣ 17.44 ಲಕ್ಷ
- ಬೆಂಗಳೂರು ಕೇಂದ್ರ 14.25 ಲಕ್ಷ
- ಬೆಂಗಳೂರು ಪೂರ್ವ 10.41 ಲಕ್ಷ

ಡಿಜಿಪಿ ಸಮವಸ್ತ್ರದೊಂದಿಗೆ ಕಚೇರಿಯಲ್ಲೇ ರಾಸಲೀಲೆ
ರನ್ಯಾ ರಾವ್ ಪ್ರಕರಣದ ಬಳಿಕ ಮತ್ತೊಂದು ವಿವಾದ

ರಾಸಲೀಲೆ: ಡಿಜಿಪಿ ರಾವ್ ವಿರುದ್ಧ ಕ್ರಮಕ್ಕೆ ಸಿಎಂ ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡ ಬೆನ್ನಿಗೇ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ರಾಸಲೀಲೆ ವಿಡಿಯೋ ವೈರಲ್ ಆಗಿದ್ದು, ಸರಕಾರ ಮತ್ತು ಇಲಾಖೆಗೆ ಮುಜುಗರ ತಂದಿದೆ. ಈ ಹಿಂದೆ ರನ್ಯಾ ರಾವ್ ಚಿನ್ನ ಕಳ್ಳಸಾಗಾಟ ಪ್ರಕರಣದಲ್ಲಿ ಸಿಲುಕಿದ್ದ ಡಿಜಿಪಿ ರಾಮಚಂದ್ರ ರಾವ್ ಇದೀಗ ಕಚೇರಿಯಲ್ಲಿಯೇ ಮಹಿಳೆಯರನ್ನು ತಬ್ಬಿಕೊಂಡು ಸರಸ ಸಲ್ಲಾಪ ನಡೆಸಿದ ಆರೋಪಕ್ಕೆ ಗುರಿಯಾಗಿದ್ದಾರೆ.

ರಾವ್ ರಾಸಲೀಲೆಯ ವಿಡಿಯೊ ವೈರಲ್ ಆಗುತ್ತಿದ್ದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ. ಪರಮೇಶ್ವರ ಗರಂ ಆಗಿದ್ದು, ಅಧಿಕಾರಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದಾರೆ. ತಮ್ಮನ್ನು ಭೇಟಿ ಮಾಡಲು ಬಂದ ಅಧಿಕಾರಿಗೆ ಗೃಹ ಸಚಿವರು ಅವಕಾಶ ನಿರಾಕರಿಸಿದ್ದಾರೆ. ಈ ಬಳಿಕ ಡಿಜಿಪಿ ಡಾ. ರಾಮಚಂದ್ರ ರಾವ್ 10 ದಿನ ರಜೆ ಹಾಕಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ. ಈ ನಡುವೆ ಇದು ಹಳೆಯ ವಿಡಿಯೊ, ಎಐ ವಿಡಿಯೊ ಎಂದು ರಾವ್ ತಮ್ಮನ್ನು ತಾವು ಸಮರ್ಥಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿರುವ ಡಿಜಿಪಿ ಕಚೇರಿಯಲ್ಲಿ ಸಮವಸ್ತ್ರದಲ್ಲಿರುವಾಗಲೇ ಹಲವು ಮಹಿಳೆಯರ ಜೊತೆ ಡಾ.ರಾಮಚಂದ್ರರಾವ್ ರಾಸಲೀಲೆ ನಡೆಸಿರುವುದು ರಹಸ್ಯ ಕೆಮರಾದಲ್ಲಿ ರೆಕಾರ್ಡ್ ಆಗಿದೆ. ಕಚೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಿಳೆಯರನ್ನು ತಬ್ಬಿಕೊಂಡು ಮುತ್ತು ಕೊಟ್ಟಿದ್ದಾರೆ. ನಿವೃತ್ತಿಯ ಅಂಚಿನಲ್ಲಿರುವ ಹಿರಿಯ ಅಧಿಕಾರಿಯೊಬ್ಬರ ಈ ನಡೆಯಿಂದ ಪೊಲೀಸ್ ಇಲಾಖೆಯ ಶಿಸ್ತು, ಘನತೆ, ಗೌರವಕ್ಕೆ ಧಕ್ಕೆ ಉಂಟಾಗಿದ್ದು ಸಾರ್ವಜನಿಕರು ಈ ಬಗ್ಗೆ ಮಾತನಾಡಿಕೊಳ್ಳುವಂತಾಗಿದೆ.

→ 4

ನನ್ನ ವಿರುದ್ಧ ಮಾಡಿರುವ ಪಿತೂರಿ ಇದು. ಈ ವಿಡಿಯೊವನ್ನು ಎಐ ಮೂಲಕ ಮಾಡಿ ನನ್ನ ಹೆಸರಿಗೆ ಮಸಿ ಬಳಿಯುವ ಪ್ರಯತ್ನವನ್ನು ಮಾಡಿದ್ದಾರೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸುವೆ.

-ರಾಮಚಂದ್ರ ರಾವ್, ಡಿಜಿಪಿ

ನನಗೆ ಮುಂಜಾನೆ ಈ ವಿಚಾರ ಗೊತ್ತಾಗಿದೆ. ವಿಚಾರಣೆ ಮಾಡಿಸಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇವೆ. ಕಾನೂನು ಮುಂದೆ ಯಾರೂ ದೊಡ್ಡವರಲ್ಲ. ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಕ್ರಮ ಕೈಗೊಳ್ಳುತ್ತೇವೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸ್ಪೇನ್‌ನಲ್ಲಿ ರೈಲು ಡಿಕ್ಕಿ, 21 ಸಾವು

ಮ್ಯಾಡ್ರಿಡ್: ಸ್ಪೇನ್‌ನ ದಕ್ಷಿಣ ಭಾಗದ ಅಂದಲೂಸಿಯಾ ಪ್ರದೇಶದಲ್ಲಿ ಎರಡು ಹೈಸ್ಪೀಡ್ ರೈಲುಗಳು ಮುಖಾಮುಖಿ ಡಿಕ್ಕಿ ಯಾದ ಪರಿಣಾಮ 21 ಮಂದಿ ಸಾವನ್ನಪ್ಪಿ, 70ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ. ಮಲಾಗಾದಿಂದ ಮ್ಯಾಡ್ರಿಡ್‌ಗೆ ತೆರಳುತ್ತಿದ್ದ ಹೈಸ್ಪೀಡ್ ರೈಲು ಅಡಮುಝ ಬಳಿ ಹಳಿ ತಪ್ಪಿ ಮತ್ತೊಂದು ಹಳಿಗೆ ನುಗ್ಗಿದೆ. ಪರಿಣಾಮ, ಆ ಹಳಿಯಲ್ಲಿ ಬರುತ್ತಿದ್ದ ಇನ್ನೊಂದು ರೈಲು ಢಿಕ್ಕಿ ಹೊಡೆದು ಹಳಿ ತಪ್ಪಿದೆ. ದುರಂತದಲ್ಲಿ ಕನಿಷ್ಠ 21 ಮಂದಿ ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಅಬಕಾರಿ ಇಲಾಖೆ ಲಂಚ ಪ್ರಕರಣದ ಆಡಿಯೋ ತನಿಖಾ ಸಂಸ್ಥೆಗೆ ಸಲ್ಲಿಕೆ

ಸಚಿವ ತಿಮ್ಮಾಪುರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ಅಬಕಾರಿ ಇಲಾಖೆಯಲ್ಲಿ ಬಯಲಾಗಿರುವ ಲಂಚ ಪ್ರಕರಣ ಸಂಬಂಧ ಪ್ರಕರಣದ ದೂರುದಾರ ಲಕ್ಷ್ಮಿನಾರಾಯಣ್, ಸಚಿವ ಆರ್.ಬಿ. ತಿಮ್ಮಾಪುರ ಅವರ ವಿರುದ್ಧ ಲೋಕಾಯುಕ್ತಕ್ಕೆ ಮತ್ತೊಂದು ದೂರು ಸಲ್ಲಿಸಿದ್ದಾರೆ.

ಲಂಚಕ್ಕೆ ಬೇಡಿಕೆಯಿಟ್ಟ ಪ್ರಕರಣದಲ್ಲಿ ಸಚಿವರ ಪಾತ್ರದ ಕುರಿತು, ಅಬಕಾರಿ ಉಪ ಆಯುಕ್ತ (ಡಿಸಿ) ಜಗದೀಶ್ ನಾಯ್ಕ್ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಸಹಿತ ದಾಖಲೆಗಳನ್ನು ದೂರುದಾರ ಲಕ್ಷ್ಮಿ ನಾರಾಯಣ್ ಅವರು ಲೋಕಾಯುಕ್ತಕ್ಕೆ ಸಲ್ಲಿಕೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಲಕ್ಷ್ಮಿ ನಾರಾಯಣ್, ಟ್ರ್ಯಾಪ್ ಆದಾಗ ಮೂವರ ಬಂಧನವಾಗಿದೆ. ಮಂತ್ರಿಯ ವರಿಗೆ ಎಷ್ಟು ಹಣ ಕೊಡಬೇಕಿದೆ ಎಂದು ಅಬಕಾರಿ ಡಿಸಿಯವರು ಬಹಿರಂಗವಾಗಿ ಪ್ರಸ್ತಾಪಿಸಿದ್ದರು. ಆದ್ದರಿಂದ ಮಂತ್ರಿಯವರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ದೂರು ನೀಡಿದ್ದೇನೆ. ಆ ಆಡಿಯೋ ಸೇರಿದಂತೆ ಸೂಕ್ತ ದಾಖಲೆಗಳನ್ನು ಲೋಕಾಯುಕ್ತ ಎಸ್ಪಿ ಯವರಿಗೆ ನೀಡಿದ್ದೇನೆ. ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಒಂದು ವೇಳೆ ಕ್ರಮ ತೆಗೆದುಕೊಳ್ಳದಿದ್ದರೆ, ಬೇರೆ ಕಾನೂನು ಮಾರ್ಗಗಳ ಬಗ್ಗೆ ಪರಿಶೀಲಿಸುತ್ತೇವೆ ಎಂದರು.

ಡಿಸಿಎಂ ಇಂದು ದಾವೋಸ್‌ಗೆ

ಬೆಂಗಳೂರು: ವಿಶೇಷ ಅಧಿವೇಶನ ಹಾಗೂ ರಾಜಕೀಯ ಕಾರಣಗಳಿಗಾಗಿಗಾಗಿ ದಾವೋಸ್ ಪ್ರವಾಸವನ್ನು ರದ್ದುಗೊಳಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ದಾವೋಸ್‌ಗೆ ಪ್ರಯಾಣಿಸುವುದಾಗಿ ಹೇಳಿದ್ದಾರೆ.

ದೆಹಲಿಯಿಂದ ವಾಪಸಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೆಹಲಿಯಿಂದ ನನ್ನ ಪ್ರವಾಸಕ್ಕೆ ಅನುಮತಿ ಸಿಕ್ಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ತೆರಳುವಂತೆ ತಿಳಿಸಿದ್ದಾರೆ. ದಾವೋಸ್ ಸಭೆಯಲ್ಲಿ ಭಾಗವಹಿಸಬೇಕು ಎಂದು ನನಗೆ ಕರೆಗಳು ಬರುತ್ತಿವೆ. ಇದರೊಂದಿಗೆ ನಮ್ಮ ಪ್ರತಿಪಕ್ಷಗಳ ಸ್ನೇಹಿತರೂ ನನಗೆ ಇದೇ ಸಲಹೆ ನೀಡಿದ್ದಾರೆ ಎಂದರು.

ದಿಲ್ಲಿ ಪರೇಡ್‌ಗೆ ರಾಜ್ಯದ ಟ್ಯಾಬ್ಲೋ ಇಲ್ಲ

ಬೆಂಗಳೂರು: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಈ ಬಾರಿ ಕರ್ನಾಟಕದ ಸ್ತಬ್ಧಚಿತ್ರಕ್ಕೆ ಅವಕಾಶ ಸಿಕ್ಕಿಲ್ಲ ಎಂದು ತಿಳಿದುಬಂದಿದೆ.

ಈ ಬಾರಿ ಆತ್ಮನಿರ್ಭರ ಭಾರತಕ್ಕೆ ಸಿರಿಧಾನ್ಯದಿಂದ ತಂತ್ರಜ್ಞಾನದವರೆಗೆ ಕರ್ನಾಟಕದ ಸಮಗ್ರ ಕೊಡುಗೆಯನ್ನು ತಿಳಿಸುವ ಆಶಯದಲ್ಲಿ ಸ್ತಬ್ಧಚಿತ್ರವನ್ನು ಸಿದ್ಧಪಡಿಸಲಾಗಿತ್ತು. ಆದರೆ, ಈ ಸ್ತಬ್ಧಚಿತ್ರಕ್ಕೆ ಕೇಂದ್ರ ರಕ್ಷಣಾ ಇಲಾಖೆಯ ಸಮಿತಿ ಅನುಮತಿ ನೀಡದೇ ಇರುವುದರಿಂದ ವರ್ಣರಂಜಿತ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಈ ಬಾರಿ ಪಾಲ್ಗೊಳ್ಳುತ್ತಿಲ್ಲ. ಬದಲಿಗೆ ಪ್ರಗತಿ ಮೈದಾನದಲ್ಲಿ ಸ್ತಬ್ಧಚಿತ್ರ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ ಎಂದು ತಿಳಿದುಬಂದಿದೆ.

ಆತ್ಮನಿರ್ಭರ ಭಾರತದ ಹಾದಿ ಸ್ವಾವಲಂಬಿ ರಾಜ್ಯಗಳೊಂದಿಗೆ ಪ್ರಾರಂಭವಾಗುತ್ತದೆ. ಕರ್ನಾಟಕವು ಕೃಷಿ ಕೈಗಾರಿಕೆ, ನಾವೀನ್ಯತೆ ಮತ್ತು ಸಂಸ್ಕೃತಿಯಲ್ಲಿ ಸಮತೋಲಿತ ಪ್ರಗತಿ ಮೂಲಕ ರಾಷ್ಟ್ರವನ್ನು ಸಮೃದ್ಧ ಮತ್ತು ಸುಸ್ಥಿರ ಭವಿಷ್ಯದತ್ತ ಕೊಂಡೊಯ್ಯುತ್ತಿದೆ. ಆತ್ಮನಿರ್ಭರ ಭಾರತದ ದೃಷ್ಟಿಗೆ ಕರ್ನಾಟಕ ಸಮಗ್ರ ಕೊಡುಗೆ ನೀಡುತ್ತಿದೆ ಎಂಬುದು ಈ ಸ್ತಬ್ಧಚಿತ್ರದ ಸಂಕೇತವಾಗಿತ್ತು. ಕಳೆದ ಬಾರಿ ರಾಷ್ಟ್ರ ರಾಜಧಾನಿ ದೆಹಲಿಯ ಕರ್ತವ್ಯಪಥದಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಐತಿಹಾಸಿಕ ನಗರವಾದ ಲಕ್ಕುಂಡಿಯ ವೈಶಿಷ್ಟ್ಯಪೂರ್ಣ ಹಾಗೂ ಕಲಾತ್ಮಕ ದೇವಾಲಯಗಳ ಸ್ತಬ್ಧ ಚಿತ್ರ ಗಮನ ಸೆಳೆದಿತ್ತು.

ಬಿಜೆಪಿ ಅವಧಿಯಲ್ಲೂ ಆಯ್ಕೆಯಾಗಿರಲಿಲ್ಲ

ಈ ಹಿಂದೆ ಬಿಜೆಪಿ ಅವಧಿಯಲ್ಲಿಯೂ ಕರ್ನಾಟಕ ಸ್ತಬ್ಧಚಿತ್ರ ಆಯ್ಕೆಯಾಗಿರಲಿಲ್ಲ. ಆಗ ಕೇಂದ್ರ ಸರಕಾರ ರಾಜಕೀಯ ಕಾರಣಕ್ಕೆ ಕರ್ನಾಟಕದ ಟ್ಯಾಬ್ಲೋವನ್ನು ಪರಿಗಣಿಸಿಲ್ಲ ಎಂದು ಕಾಂಗ್ರೆಸ್ ಆರೋಪಿಸಿತ್ತು. 13 ವರ್ಷಗಳಿಂದ ನಿರಂತರವಾಗಿ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದ ರಾಜ್ಯದ ಸ್ತಬ್ಧಚಿತ್ರವನ್ನು ನಿರಾಕರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು. ಬಳಿಕ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರಕಾರದೊಂದಿಗೆ ಚರ್ಚಿಸಿ, ಪ್ರದರ್ಶನಕ್ಕೆ ಅನುವು ಮಾಡಿ ಕೊಟ್ಟಿದ್ದರು.

ಇಂದು ಬಿಜೆಪಿ ಅಧ್ಯಕ್ಷರ ಅಧಿಕಾರ ಸ್ವೀಕಾರ

ದೆಹಲಿ: ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ನಿತಿನ್ ನಬಿನ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು ಮಂಗಳವಾರ (ಜ.20) ನೂತನ ಅಧ್ಯಕ್ಷರು ಅಧಿಕಾರ ಸ್ವೀಕಾರ ಮಾಡಲಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬೇರೆ ಯಾವುದೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದ ಕಾರಣ ನಬಿನ್ ಅವಿರೋಧವಾಗಿ ಪಕ್ಷದ 12ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜೆ.ಪಿ. ನಡ್ಡಾ ಅವರ ಸ್ಥಾನವನ್ನು ನಬಿನ್ ತುಂಬಲಿದ್ದಾರೆ.

ಹಾಲಿ ಅಧ್ಯಕ್ಷ ಜೆ.ಪಿ. ನಡ್ಡಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಸಾರಿಗೆ ಸಚಿವ ನಿತಿನ್ ಗಡ್ಕರಿ, ಹಿರಿಯ ನಾಯಕರಾದ ಧರ್ಮೇಂದ್ರ ಪ್ರಧಾನ್, ಭೂಪೇಂದ್ರ ಯಾದವ್ ಮತ್ತು ಕಿರಣ್ ರಿಜಿಜು ಅವರ ಸಮ್ಮುಖದಲ್ಲಿ ಪಕ್ಷದ ಚುನಾವಣಾಧಿಕಾರಿ ಕೆ.ಲಕ್ಷ್ಮಣ್ ಅವರಿಗೆ ನಬಿನ್ 37 ನಾಮಪತ್ರಗಳ ಸೆಟ್ ಅನ್ನು ಹಸ್ತಾಂತರಿಸಿದರು.

ನಿತಿನ್ ಅವರನ್ನು ಬೆಂಬಲಿಸಿ, ಅರುಣಾಚಲ ಪ್ರದೇಶ ಮುಖ್ಯಮಂತ್ರಿ ಪೆಮಾ ಖಂಡು, ಯುಪಿ ಸಿಎಂ ಯೋಗಿ ಆದಿತ್ಯನಾಥ್, ಉತ್ತರಾಖಂಡದ ಸಿಎಂ ಪುಷ್ಕರ್ ಸಿಂಗ್ ಧಾಮಿ, ಹರಿಯಾಣ ಸಿಎಂ ನಯಾಬ್ ಸಿಂಗ್ ಸೈನಿ, ಗೋವಾ ಸಿಎಂ ಪ್ರಮೋದ್ ಸಾವಂತ್ ಸೇರಿದಂತೆ ಹಲವು ರಾಜ್ಯಗಳ ನಾಯಕರು ಉಪಸ್ಥಿತರಿದ್ದರು. ಬಿಹಾರ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಅಸ್ಸಾಂ, ಜಾರ್ಖಂಡ್ ಮತ್ತು ಇತರ ರಾಜ್ಯಗಳು 45 ವರ್ಷದ ನಿತಿನ್ ನಬಿನ್ ಅವರನ್ನು ಪಕ್ಷದ ರಾಷ್ಟ್ರಾಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಬೆಂಬಲಿಸಿ ನಾಮಪತ್ರಗಳನ್ನು ಸಲ್ಲಿಸಿದ್ದವು.

ಬಿಜೆಪಿಯ ಹಿರಿಯ ನಾಯಕ, ಬಿಹಾರದ ನಿತಿನ್ ನಬಿನ್, ಹಿರಿಯ ಬಿಜೆಪಿ ಮುಖಂಡ, ಮಾಜಿ ಶಾಸಕ ದಿವಂಗತ ನಬಿನ್ ಕಿಶೋರ್ ಪ್ರಸಾದ್ ಸಿನ್ಹಾ ಅವರ ಮಗ. ತಮ್ಮ ತಂದೆಯ ಅಕಾಲಿಕ ಮರಣದ ನಂತರ ನಿತಿನ್ ನಬಿನ್ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದ್ದರು. ನಿತಿನ್ ನಬಿನ್ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ರಸ್ತೆ ನಿರ್ಮಾಣ ಮತ್ತು ನಗರಾಭಿವೃದ್ಧಿ ಖಾತೆಗಳನ್ನು ಹೊಂದಿದ್ದರು. ಬಿಜೆಪಿಯ ಕಾರ್ಯಕಾರಿ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಈ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ನಂದಗಢದಲ್ಲಿ ವೀರಭೂಮಿ ಲೋಕಾರ್ಪಣೆ ರಾಯಣ್ಣನ ಪ್ರತಿಮೆ ಅನಾವರಣ

ಬೆಳಗಾವಿ: ಸಂಗೊಳ್ಳಿ ರಾಯಣ್ಣನ ಜತೆಗೆ ಯಾರು ಯಾರು ಗಲ್ಲಿಗೇರಿದ್ದಾರೋ ಅವರೆಲ್ಲರ ಸಮಾಧಿಗಳ ಅಭಿವೃದ್ಧಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಖಾನಾಪುರ ತಾಲೂಕಿನ ನಂದಗಡದಲ್ಲಿ ಸೋಮವಾರ ರಾಯಣ್ಣನ ವಸ್ತು ಸಂಗ್ರಹಾಲಯ 'ವೀರಭೂಮಿ'ಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ರಾಣಿ ಚನ್ನಮ್ಮ ಸೆರೆಯಾದ ನಂತರ ಸ್ವಾತಂತ್ರ್ಯ ಹೋರಾಟವನ್ನು ಸಂಗೊಳ್ಳಿ ರಾಯಣ್ಣ ಹಾಗೂ ಅವರ ಸಹಚರರು ಮುಂದುವರಿಸಿದರು. ಅವರೆಲ್ಲರೂ ಸ್ವಾತಂತ್ರ್ಯ ಹೋರಾಟಗಾರರೇ ಆಗಿದ್ದಾರೆ. ಎಲ್ಲರ ವಂಶಸ್ಥರನ್ನು ಪತ್ತೆ ಮಾಡಿ, ವೀರರ ಸಮಾಧಿಗಳನ್ನು ಗುರುತಿಸಿ ಅಭಿವೃದ್ಧಿ ಮಾಡಲಾಗುವುದು ಎಂದರು.

ನಂದಗಡದಲ್ಲಿರುವ ಸಂಗೊಳ್ಳಿ ರಾಯಣ್ಣ ಸಮಾಧಿ ಸ್ಥಳಕ್ಕೆ ಸಿಎಂ ಸಿದ್ದರಾಮಯ್ಯ ಅವರು ಸೋಮವಾರ ಭೇಟಿ ನೀಡಿ ಜ್ಯೋತಿ ಬೆಳಗಿದರು.

ಸಿಬಿಎಸ್‌ಇ ಮಾದರಿ ಎರಡು ಮಾದರಿ ಪಠ್ಯ, ಪರೀಕ್ಷೆಗೆ ಕ್ಯಾಮ್ಸ್ ಮನವಿ

ಎಸೆಸ್ಸೆಲ್ಸಿಗೆ ಸರಳ ಗಣಿತದ ಪರಿಚಯ?

ಬೆಂಗಳೂರು: ಕಬ್ಬಿಣದ ಕಡಲೆಯಾಗಿರುವ ಗಣಿತ ವಿಷಯದಲ್ಲಿ ಫೇಲಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಗ್ಗಿಸಲು ಎರಡು ರೀತಿಯ ಪರೀಕ್ಷೆ ನಡೆಸಬೇಕು ಎನ್ನುವ ಬೇಡಿಕೆ ಬಂದಿದ್ದು, ಇದಕ್ಕೆ ಸರಕಾರ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಲಿದೆ ಎನ್ನುವ ಕುತೂಹಲ ಶಿಕ್ಷಣ ವಲಯದಲ್ಲಿ ಶುರುವಾಗಿದೆ.

ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿಯೇ ಅನೇಕ ವಿದ್ಯಾರ್ಥಿ ಗಳು ಫೇಲಾಗುತ್ತಿದ್ದಾರೆ. ಅನುತ್ತೀರ್ಣಗೊಳ್ಳುವ ಅನೇಕ ವಿದ್ಯಾರ್ಥಿಗಳಿಗೆ ಗಣಿತದಲ್ಲಿ ಆಸಕ್ತಿ ಇರುವುದಿಲ್ಲ. ಇವರು ಪಿಯು ಹಂತದಲ್ಲಿ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಬಯಸು ವುದಿಲ್ಲ. ಆದರೆ ಇನ್ನು ಕೆಲ ವಿದ್ಯಾರ್ಥಿಗಳು ಗಣಿತದಲ್ಲಿಯೇ ಉನ್ನತ ಅಭ್ಯಾಸ ಮಾಡಬೇಕು ಎನ್ನುವ ಲೆಕ್ಕಾಚಾರದಲ್ಲಿರುತ್ತಾರೆ. ಆದ್ದರಿಂದ ಈ ಎರಡು ಭಿನ್ನ ಆಲೋಚನೆಯ ವಿದ್ಯಾರ್ಥಿಗಳಿಗೆ ಭಿನ್ನ ಮಾದರಿಯ ಪ್ರಶ್ನೆ ಪತ್ರಿಕೆ ನೀಡಬೇಕು ಎನ್ನುವ ಮನವಿ ಕೇಳಿಬಂದಿದೆ.

ಈ ಬಗ್ಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಕ್ಯಾಮ್ಸ್ ಸಂಘಟನೆ ಮನವಿ ಮಾಡಿದೆ. ಈಗಾಗಲೇ ಸಿಬಿಎಸ್‌ಇಯಲ್ಲಿ ಗಣಿತ ವಿಷಯಕ್ಕೆ ಎರಡು ಮಾದರಿಯ ಪಠ್ಯ ಅಸ್ತಿತ್ವದಲ್ಲಿದೆ. ಆದ್ದರಿಂದ ರಾಜ್ಯ ಪಠ್ಯಕ್ರಮಕ್ಕೂ ಇದನ್ನು ವಿಸ್ತರಿಸಬೇಕು. ಇದರಿಂದ ಗಣಿತದಲ್ಲಿ ಹೆಚ್ಚಿನ ವ್ಯಾಸಂಗ ಮಾಡದೇ ಕಲೆ, ವಾಣಿಜ್ಯವಿಭಾಗ ತಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಈ ರೀತಿ ಮಾಡುವುದರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಬರಲಿದೆ ಎಂದು ಕ್ಯಾಮ್ಸ್ ಅಭಿಪ್ರಾಯಪಟ್ಟಿದೆ.

ಹೇಗಿರಬೇಕು ಗಣಿತ ಪರೀಕ್ಷೆ?: ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ, ರಾಜ್ಯ ಪಠ್ಯಕ್ರಮದಲ್ಲಿ ಅಧ್ಯಯನ ಮಾಡುವ ಎಂಟರಿಂದ 10 ಲಕ್ಷ ವಿದ್ಯಾರ್ಥಿಗಳು ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಾರೆ. ಇದರಲ್ಲಿ ಶೇ.50ರಷ್ಟು ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ಅಥವಾ ಗಣಿತದ ವಿಷಯ ಬರುವ ಕೋರ್ಸ್‌ಗಳನ್ನು ತಗೆದುಕೊಳ್ಳುವುದಿಲ್ಲ. ಕಲೆ ಅಥವಾ ಇನ್ನಿತರೆ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳುವ ಅನೇಕ ವಿದ್ಯಾರ್ಥಿಗಳಿಗೆ ಗಣಿತ ವಿಷಯದ ಅವಶ್ಯಕತೆ ಹಾಗೂ ಆಸಕ್ತಿ ಇರುವು ದಿಲ್ಲ. ಆದ್ದರಿಂದ ಅಂತಹ ವಿದ್ಯಾರ್ಥಿಗಳಿಗೆ 'ಬೇಸಿಕ್' ಗಣಿತವೆಂದು ಪರಿಗಣಿಸಿ ಪ್ರತ್ಯೇಕ ಪ್ರಶ್ನೆ ಪತ್ರಿಕೆ ನೀಡಬೇಕು. ಗಣಿತದಲ್ಲಿ ಓದುವ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಈಗಿರುವಂತೆ ಪ್ರಶ್ನೆಪತ್ರಿಕೆಯನ್ನು ರೂಪಿಸಲಿ. ಇದರಿಂದ ಎರಡೂ ತರಹದ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುತ್ತದೆ. ಈ ರೀತಿಯ ವ್ಯವಸ್ಥೆ ಈಗಾಗಲೇ ಸಿಬಿಎಸ್‌ಇ ಪಠ್ಯದಲ್ಲಿದೆ. ಆದ್ದರಿಂದ ಅಲ್ಲಿ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ನ್ಯಾಯ, ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಾಂಗ ಮಾಡುವ ವಿದ್ಯಾರ್ಥಿಗಳಿಗೂ ಸಿಗಬೇಕು ಎಂದು ಮನವಿ ಸಲ್ಲಿಸಿದ್ದಾರೆ.

- ಸಿಬಿಎಸ್‌ಇ ಮಾದರಿಯಲ್ಲಿ ಪ್ರಾಥಮಿಕ ಮತ್ತು ಅತ್ಯುನ್ನತ ಗಣಿತದ ಮಧ್ಯೆ ವಿದ್ಯಾರ್ಥಿಗಳಿಗೆ ಆಯ್ಕೆ ಅವಕಾಶಕ್ಕೆ ಮನವಿ
- ಗಣಿತದಲ್ಲಿ ಆಸಕ್ತಿಯಿಲ್ಲದೇ ಅನುತ್ತೀರ್ಣಗೊಳ್ಳುವ ವಿದ್ಯಾರ್ಥಿಗಳ ಪ್ರಮಾಣ ಕಡಿಮೆ ಮಾಡಲು ಹೊಸ ಕಾರ್ಯತಂತ್ರ

ಗಣಿತದ ಪರೀಕ್ಷೆಯನ್ನು ಎರಡು ಹಂತದಲ್ಲಿ ನಡೆಸಬೇಕು ಎಂದು ಮನವಿ ಮಾಡಿದ್ದೇವೆ. ವಿದ್ಯಾರ್ಥಿಗಳಿಗೆ ಆರಂಭದಲ್ಲಿಯೇ ಯಾವ ಪಠ್ಯದಲ್ಲಿ ಮುಂದುವರಿಯಬೇಕು ಎನ್ನುವ ಆಯ್ಕೆಯನ್ನು ಮಾಡಲು ಅವಕಾಶ ಸಿಗುತ್ತದೆ. ಸಾಮಾನ್ಯ ಗಣಿತದಲ್ಲಿ ಈಗಿರುವ ಪಠ್ಯವಿದ್ದರೆ, ಸರಳ ಗಣಿತದಲ್ಲಿ ಜೀವನಕ್ಕೆ ಬೇಕಿರುವ ಗಣಿತ ಕಲಿಯುವ ಪಠ್ಯ ಇರುತ್ತದೆ. ಇದು ಈಗಾಗಲೇ ಸಿಬಿಎಸ್‌ಇ ಪಠ್ಯದಲ್ಲಿರುವುದರಿಂದ ರಾಜ್ಯ ಪಠ್ಯಕ್ಕೂ ಅಳವಡಿಸಿಕೊಳ್ಳಬೇಕು ಎನ್ನುವುದು ನಮ್ಮ ವಾದ. ಹಾಗೆಂದ ಮಾತ್ರಕ್ಕೆ ನಮ್ಮ ಮನವಿಯಲ್ಲಿ ಎರಡು ಭಾಗವಾಗಿ ಪರೀಕ್ಷೆ ಮಾಡಬೇಕು ಎಂಬ ಬೇಡಿಕೆ ಇಲ್ಲ.

-ಡಿ. ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ, ಕ್ಯಾಮ್ಸ್

ಸಮಾಚಾರ ಸಣ್ಣದಲ್ಲ

ಗುಂಡು ಹಾರಿಸಿಕೊಂಡು ಸುಬ್ಬಯ್ಯ ಆತ್ಮಹತ್ಯೆ

ಮಡಿಕೇರಿ: ಗುಂಡು ಹೊಡೆದುಕೊಂಡು ವೃದ್ಧರೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸೋಮವಾರಪೇಟೆ ತಾಲೂಕಿನ ತೋಳೂರು ಶೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಡ್ಲುಕೊಪ್ಪ ಗ್ರಾಮದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಟಿ.ಕೆ.ಸುಬ್ಬಯ್ಯ (78) ಎಂಬುವವರೇ ಮೃತ ವ್ಯಕ್ತಿಯಾಗಿದ್ದಾರೆ. ಟಿ.ಕೆ.ಸುಬ್ಬಯ್ಯ ಅವರು ಸೋಮವಾರ ಮುಂಜಾನೆ ಮನೆಯ ಬಳಿಯೇ ಒಂಟಿ ನಳಿಕೆ ಬಂದೂಕಿನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆಗೆ ಮಾಡಿಕೊಂಡಿದ್ದಾರೆ. ಕೆಲವು ಸಮಯಗಳಿಂದ ಕಾಲು ನೋವಿನಿಂದ ಬಳಲುತ್ತಿದ್ದ ಅವರು ಮನನೊಂದು ಆತ್ಮಹತ್ಯೆ ಮಾಡಿರಕೊಂಡಿರಬಹುದು ಎಂದು ಹೇಳಲಾಗಿದೆ. ಘಟನಾ ಸ್ಥಳಕ್ಕೆ ಸೋಮವಾರಪೇಟೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಬಂದೂಕನ್ನು ವಶಕ್ಕೆ ಪಡೆದಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ವೇಮನರ ತತ್ವಗಳು ಸಮಾಜಕ್ಕೆ ದಾರಿದೀಪ

ಗುಡಿಬಂಡೆ: ಮಹಾಯೋಗಿ ವೇಮನರು ವಚನಗಳ ಮೂಲಕ ಸಮಾಜದ ಅಂಕು-ಡೊಂಕು ತಿದ್ದಿ ಸರಿ ದಾರಿಗೆ ತರಲು ಯತ್ನಿಸಿದರು. ವೇಮನರ ವಚನಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದು ತಹಸೀಲ್ದಾರ್ ಸಿಗ್ಬತ್ತುಲ್ಲಾ ತಿಳಿಸಿದರು. ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮಹಾ ಶಿವಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಯಂತಿ ಆಚರಣೆಗಳು ಜಾತಿಯ ಒಗ್ಗಟ್ಟು, ಜಾತಿಯ ಬಲ ಪ್ರದರ್ಶನವಲ್ಲ. ಮಹನೀಯರನ್ನು ಯಾವುದೇ ಜಾತಿಗೆ ಸೀಮಿತ ಮಾಡುವುದು ಸರಿಯಲ್ಲ. ಮಹನೀಯರ ಸಂದೇಶ, ಬದುಕು, ವಿಚಾರಧಾರೆಗಳು ಇಡೀ ಮಾನವ ಸಂಕುಲಕ್ಕೆ ಸಂಬಂಧಪಟ್ಟಿವೆ. ವೇಮನರ ವಿಚಾರ ತಿಳಿದುಕೊಳ್ಳುವ ಮೂಲಕ ನಾವು ಮೌಲ್ಯಯುತ ಬದುಕು ರೂಢಿಸಿಕೊಳ್ಳಬೇಕು. ಅವರ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಂಡಾಗ ಮಾತ್ರ ನಾವು ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ನ್ಯೂ ವಿಷನ್ ಶಾಲೆಯ ಮುಖ್ಯಸ್ಥೆ ಡಿ.ಎಲ್. ಪರಿಮಳ ಮುಖ್ಯಭಾಷಣಕಾರರಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸರಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಮುನಿಕೃಷ್ಣಪ್ಪ, ಸಿಡಿಪಿಒ ರಫೀಕ್, ಬಿಸಿಎಂ ಇಲಾಖೆಯ ಶಂಕರಪ್ಪ, ಸಮಾಜ ಕಲ್ಯಾಣ ಇಲಾಖೆಯ ಲಕ್ಷ್ಮೀಪತಿರೆಡ್ಡಿ, ಪಪಂ ಮುಖ್ಯಾಧಿಕಾರಿ ಆರತಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್. ಮಂಜುನಾಥರೆಡ್ಡಿ, ಒಕ್ಕಲಿಗರ ಸಂಘದ ಮಂಜುನಾಥರೆಡ್ಡಿ, ವೇಣುಗೋಪಾಲ್, ಶಿವಣ್ಣ, ನಾರಾಯಣಸ್ವಾಮಿ ಸೇರಿದಂತೆ ಹಲವರಿದ್ದರು.

ಸಂಕ್ರಾಂತಿ ಸುಗ್ಗಿ ಸಂಭ್ರಮ, 15ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ | ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ

ಶ್ರಮ, ಸಂಸ್ಕೃತಿ ಭಾಗಿತ್ವದ ಸಂಗಮ ಸಂಕ್ರಾಂತಿ

ಮಂಡ್ಯ: ಸಂಕ್ರಾಂತಿ ಎಂದರೆ ಶ್ರಮ, ಸಂಸ್ಕೃತಿ, ಸಹಭಾಗಿತ್ವದ ಸುಂದರ ಸಂಗಮವಾಗಿದ್ದು, ಈ ಹಬ್ಬದಲ್ಲಿ ಎಳ್ಳು-ಬೆಲ್ಲದ ಸಿಹಿ, ಕಬ್ಬಿನ ಮಧುರತೆ, ಹೊಸ ಬೆಳೆಯ ಸಮೃದ್ಧಿ ಪ್ರತಿಯೊಬ್ಬರ ಜೀವನವನ್ನೂ ತುಂಬಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ ನಿಂಗರಾಜ್ ಗೌಡ ತಿಳಿಸಿದರು.

ನಗರದ ಕರ್ನಾಟಕ ಸಂಘ ಆವರಣದ ಕೆ.ವಿ. ಶಂಕರಗೌಡ ಶಮಾನೋತ್ಸವ ಭವನದಲ್ಲಿ ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ಸಂಕ್ರಾಂತಿ ಸುಗ್ಗಿ ಸಂಭ್ರಮ, 15ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಮಕರ ಸಂಕ್ರಾಂತಿಯನ್ನು ಸುಗ್ಗಿ ಹಬ್ಬ ಎಂದು ಕರೆಯುತ್ತಾರೆ. ಇದು ಹೊಸ ಬೆಳೆ ಕೊಯ್ಲು, ಸೂರ್ಯನ ಉತ್ತರಾಯಣ ಪ್ರಾರಂಭದ ಸಂಕೇತವಾಗಿದೆ. ರೈತರೊಡನೆ ಎಲ್ಲರೂ ಪ್ರಕೃತಿ, ಭೂಮಿ, ಸೂರ್ಯನಿಗೆ ಕೃತಜ್ಞತೆ ಸಲ್ಲಿಸುವ ಸಮೃದ್ಧಿಯ ಹಬ್ಬವಾಗಿ ಇದನ್ನು ಆಚರಿಸುತ್ತೇವೆ ಎಂದು ತಿಳಿಸಿದರು.

ವಿವಿಧ ಕ್ಷೇತ್ರದ ಸಾಧಕರಿಗೆ ಕರ್ನಾಟಕ ಸೇವಾ ಭೂಷಣ, ಕನ್ನಡ ರತ್ನ ಹಾಗೂ ಕಾವ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಳ್ಳು-ಬೆಲ್ಲ ಹಂಚಿಕೊಳ್ಳುವುದು, ಗಾಳಿಪಟ ಹಾರಿಸುವುದು, ಕಿಚ್ಚು ಹಾಯಿಸುವುದು, ಬಂಧು-ಮಿತ್ರರ ಮನೆಗಳಿಗೆ ತೆರಳಿ ಶುಭಾಶಯ ಹೇಳಿಕೊಳ್ಳುವುದು ಈ ಹಬ್ಬದ ಸಂಭ್ರಮದ ಭಾಗವಾಗಿದೆ. 'ಎಳ್ಳು ಬೆಲ್ಲ ತಿನ್ನಿ, ಒಳ್ಳೆ ಮಾತಾಡಿ' ಎಂದು ಜನರು ಹೇಳುತ್ತಾರೆ. ಸಿಹಿಯಾದ ಈ ಮಿಶ್ರಣದಂತೆಯೇ ಸಂಬಂಧಗಳೂ ಸಿಹಿಯಾಗಲಿ, ದ್ವೇಷಗಳು ದೂರವಾಗಿ, ಸ್ನೇಹ-ಸೌಹಾರ್ದ ಹೆಚ್ಚಾಗಲಿ ಎಂಬುದು ಇದರ ಒಳಾರ್ಥ ಎಂದು ಹೇಳಿದರು. ಅಕ್ಷರ ಜಾತ್ರೆಯ ಸಮ್ಮೇಳನಾಧ್ಯಕ್ಷ, ಹಾಗೂ ಇತಿಹಾಸಕಾರ ಡಾ.ಎಚ್.ಶ್ರೀಧರ ಮಾತನಾಡಿ, ಕನ್ನಡ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ ಚಾರಿತ್ರಿಕ ಭಾಷೆ. ಕನ್ನಡ ಭಾಷೆಗೆ ಸರ್ವ ಭಾಷೆಗಳ ಜನರನ್ನು ಆಕರ್ಷಿಸುವ ಶಕ್ತಿ ಇದೆ. ಅದು ಕನ್ನಡದ ಶಕ್ತಿ ಮತ್ತು ತಾಕತ್ತು ಎಂದು ಪ್ರತಿಪಾದಿಸಿದರು.

ಕನ್ನಡಕ್ಕೆ ಕನ್ನಡವೇ ಸಾಕ್ಷಿ. ಕನ್ನಡ ಭಾಷೆ ಕೇವಲ ಹಾಡು ಭಾಷೆಯಾಗಬಾರದು. ಅದು ಹಸಿವಿನ ಭಾಷೆ. ಉಸಿರಿನ ಭಾಷೆ. ಮನಸ್ಸಿನ ಭಾಷೆ. ಹೃದಯದ ಭಾಷೆ ಹಾಗೂ ಬದುಕಿನ ಭಾಷೆಯಾಗಬೇಕು. ಪ್ರತಿಯೊಬ್ಬ ಕನ್ನಡಿಗನು ತನ್ನ ಕನ್ನಡ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಗಟ್ಟಿ ಮನಸ್ಸು ಮತ್ತು ನಿರ್ಧಾರ ಮಾಡಬೇಕು ಎಂದು ಹೇಳಿದರು.

ಹಲ್ಮಿಡಿ ಶಾಸನದ ಮೂಲಕ ಅಧಿಕೃತ ಕನ್ನಡದ ಅಸ್ಮಿತೆ ಕಂಡು ಬಂದರೂ ಅದರ ಹಿಂದಿನ ಸರಿಸುಮಾರು 400-500 ವರ್ಷಗಳ ಕಾಲಘಟ್ಟದಲ್ಲಿ ಕನ್ನಡದ ಅಸ್ತಿತ್ವವನ್ನು ನಾವು ಗುರುತಿಸಬಹುದು ಎಂದು ತಿಳಿಸಿದರು.

> **ದ್ರಾವಿಡ ಭಾಷೆಗಳಲ್ಲಿ ಕನ್ನಡಕ್ಕೆ ಪ್ರಧಾನ ಸ್ಥಾನ**
>
> **ಕನ್ನಡ ಭಾಷೆಯು ದಕ್ಷಿಣದ ಧ್ರಾವಿಡ ಭಾಷೆಗಳಲ್ಲಿ ಪ್ರಧಾನ ಸ್ಥಾನವನ್ನು ಹೊಂದಿದೆ. ಕನ್ನಡ ಸಾಹಿತ್ಯ ಸಾರಸ್ವತ ಲೋಕ ಒಂದು ಬೃಹದಾಕಾರದ ಆಲದ ಮರವಿದ್ದಂತೆ. ಇಲ್ಲಿ ಕಥೆ, ಕಾದಂಬರಿ, ನಾಟಕ, ವಿಮರ್ಶೆ,ಮಿಮಾಂಸೆ, ಕಾವ್ಯ, ಕವನ, ಚುಟುಕು ಎಲ್ಲವೂ ಮೇಳೈಸಿವೆ. ಕರ್ನಾಟಕವನ್ನಾಳಿದ ಅನೇಕ ರಾಜಮನೆತನಗಳು, ಸಾಮ್ರಾಜ್ಯಗಳು, ಕನ್ನಡ ಭಾಷೆ, ಸಾಹಿತ್ಯವನ್ನು ಪೋಷಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದವು ಎಂದು ಸಮ್ಮೇಳನಾಧ್ಯಕ್ಷ, ಇತಿಹಾಸಕಾರ ಡಾ.ಎಚ್.ಶ್ರೀಧರ ಹೇಳಿದರು.**

ಬೇರೆ ಭಾಷೆಗಳನ್ನು ಕಲಿತರೂ ನಮ್ಮ ಭಾಷೆಯ ಬಗ್ಗೆ ಪ್ರತಿಯೊಬ್ಬ ಕನ್ನಡಿಗರು ಗೌರವ ಮತ್ತು ಅಭಿಮಾನವನ್ನು ಹೊಂದಿರಬೇಕು. ಕರ್ನಾಟಕವನ್ನು ಆಳಿದ ಅನೇಕ ರಾಜಮನೆತನಗಳು ಧರ್ಮ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಪರಂಪರೆ ಹಾಗೂ ಆಡಳಿತದ ಜೊತೆಗೆ ಅಭೂತಪೂರ್ವ ಸಾಹಿತ್ಯದ ಲೋಕವನ್ನು ಸೃಷ್ಟಿಸಿ ಕನ್ನಡ ಸಾಹಿತ್ಯ ಪರ್ವತವನ್ನೇ ನಿರ್ಮಿಸಿದೆ. ಎಂದು ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕರ್ನಾಟಕ ಸೇವಾ ಭೂಷಣ, ಕನ್ನಡ ರತ್ನ ಹಾಗೂ ಕಾವ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ಖ್ಯಾತ ವೈದ್ಯ ಹಾಗೂ ಸಾಹಿತಿ ಡಾ. ಚಂದ್ರಶೇಖರ್,ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ಬನ್ನಂಗಾಡಿ ಸಿದ್ದಲಿಂಗಯ್ಯ, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ, ವೇದಿಕೆಯ ಪದಾಧಿಕಾರಿಗಳಾದ ರಾಗಿಮುದ್ದನಹಳ್ಳಿ ನಾಗೇಶ್, ಮಂಗಲ ಶಿವಣ್ಣ, ರೂಪಾ ಹೊಸಹಳ್ಳಿ, ನೇತ್ರಾ ಉಪಸ್ಥಿತರಿದ್ದರು.

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಒತ್ತು ನೀಡಿ

ಮೈಸೂರು: ರೈತರ ಕೃಷಿ ಉತ್ಪನ್ನಗಳನ್ನು ಕೈಗಾರಿಕೆಗಳ ಸಹಯೋಗದೊಂದಿಗೆ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಕೃಷಿ ಹಾಗೂ ಕೈಗಾರಿಕೆಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಮೈಸೂರು ಕೈಗಾರಿಕೆಗಳ ಸಂಘದ ಪ್ರದಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಹೇಳಿದರು.

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರದ ವತಿಯಿಂದ ರಫ್ತು ನಿರ್ವಹಣಾ ತರಬೇತಿ ಹಾಗೂ ಕರ್ನಾಟಕ ಸರಕಾರದ ರೈತ ಸಮೃದ್ಧಿ ಯೋಜನೆಯಡಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಕೃಷಿ ಪ್ರಧಾನವಾದ ದೇಶ, ರೈತರು ತಾವು ಬೆಳೆದ ಬೆಳೆಗಳನ್ನು ಮೌಲ್ಯವರ್ಧನೆ ಮಾಡಲು ಸಣ್ಣ ಕೈಗಾರಿಕೆಗಳನ್ನು ಅವಲಂಬಿಸಿದ್ದಾರೆ. ಇದರಿಂದ ದೇಶ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ. ರೈತ ದೇಶದ ಬೆನ್ನೆಲುಬಿದ್ದಂತೆ, ಕೈಗಾರಿಕೆಗಳು ಪಕ್ಕೆಲುಬಿದ್ದಂತೆ ಎಂದು ಬಣ್ಣಿಸಿದರು. ಕೃಷಿ ಉತ್ಪನ್ನ ಮಾರಾಟ ಕೇಂದ್ರಗಳು ಅವರ ಕಾರ್ಯಗಳ ಮಧ್ಯದಲ್ಲಿ ಮೌಲ್ಯವರ್ಧನೆ ಯಲ್ಲೂ ಸಕ್ರಿಯವಾಗಿ ಭಾಗವಹಿಸಿದರೆ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುತ್ತದೆ ಎಂದರು.

ಕೃಷಿ ಇಲಾಖೆ ಉಪನಿರ್ದೇಶಕ ನಾಗರಾಜು ಮಾತನಾಡಿ, ಕೃಷಿ ಇಲಾಖೆಯು ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ ಸಮಗ್ರ ಯೋಜನಾ ಕೃಷಿಯನ್ನು ಉತ್ತೇಜನ ಮಾಡಲು ಕೃಷಿ ಯೊಂದಿಗೆ ಹೈನುಗಾರಿಕೆ, ರೇಷ್ಮೆ, ಮೀನುಗಾರಿಕೆ ಗಳಂತಹ ಉಪಕಸುಬು ರೂಢಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದೆ. ರೈತರು ಉಪಕಸುಬು ರೂಢಿಸಿಕೊಂಡು ಸಮಗ್ರವಾಗಿ ಲಾಭವನ್ನು ಗಳಿಸಬಹುದಾಗಿದೆ ಎಂದ ಅವರು, ರೈತರು ಬೆಳೆದ ಪದಾರ್ಥವನ್ನು ಮೌಲ್ಯವರ್ಧನೆ ಮಾಡಿಕೊಂಡು ಮಾರಾಟ ಮಾಡುವುದರಿಂದ ರೈತನೆ ಸ್ವತಃ ಲಾಭವನ್ನು ಪಡೆಯಬಹುದು ಎಂದರು.

ರಫ್ತು ನಿರ್ವಹಣಾ ತರಬೇತಿ ಹಾಗೂ ಕರ್ನಾಟಕ ಸರಕಾರದ ರೈತ ಸಮೃದ್ಧಿ ಯೋಜನೆಯಡಿ ಕಾರ್ಯಕ್ರಮವನ್ನು ಮೈಸೂರು ಕೈಗಾರಿಕೆಗಳ ಸಂಘದ ಪ್ರದಾನ ಕಾರ್ಯದರ್ಶಿ ಸುರೇಶ್ ಕುಮಾರ್‌ಜೈನ್ ಉದ್ಘಾಟಿಸಿದರು.

> ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರದ ಸಂಸ್ಥೆಯು ರಾಜ್ಯ ಸರಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಾಗಿದ್ದು, ರಫ್ತಿಗಾಗಿ ಮೀಸಲಾಗಿರುವ ಸಂಸ್ಥೆಯಾಗಿದೆ. ಆದರೆ, ಈ ಸಂಸ್ಥೆಯ ಬಗ್ಗೆ ರೈತರಿಗೆ ಹೆಚ್ಚಾಗಿ ಮಾಹಿತಿ ಇಲ್ಲ. ಈ ಸಂಸ್ಥೆಗೆ ಸರಕಾರವು ವಿವಿಧ ರೀತಿಯ ಸವಲತ್ತುಗಳನ್ನು ನೀಡುತ್ತಾ ಬಂದಿದೆ. ರೈತರು ಸದುಪಯೋಗಪಡಿಸಿಕೊಳ್ಳಿ.
>
> - ಸಿ.ಎಸ್.ಬಾಬು ನಾಗೇಶ್, ವಿಟಿಪಿಸಿ ಜಂಟಿ ನಿರ್ದೇಶಕ

ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕ ಸೋಮಶೇಖರ್,ಜಿಲ್ಲಾ ಪಂಚಾಯತ್ ಮತ್ತು ವಿಟಿಪಿಸಿ ರಫ್ತು ಸೌಲಭ್ಯ ಕೇಂದ್ರದ ಉಪ ನಿರ್ದೇಶಕ ಮೇಘಲಾ ಎಲ್, ಕಾರ್ಯಕ್ರಮ ಪ್ರಾಯೋಜಕ ಅರವಿಂದ ಭಟ್, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ ಲಿಂಗರಾಜು ಇತರರು ಉಪಸ್ಥಿತರಿದ್ದರು.

ಶ್ರೀಕುಂಬೇಶ್ವರ ಸ್ವಾಮಿಯ ಸಂಕ್ರಾಂತಿ ಹಬ್ಬದ ಸುಗ್ಗಿ ಜಾತ್ರಾ ಮಹೋತ್ಸವ

ಚಾಮರಾಜನಗರ: ಶ್ರೀಕುಂಬೇಶ್ವರಸ್ವಾಮಿಯ ಸಂಕ್ರಾಂತಿ ಹಬ್ಬದ ಸುಗ್ಗಿ ಜಾತ್ರೆಯೂ ಬಹಳ ವಿಜೃಂಬಣೆಯಿಂದ ನಡೆಯಿತು. ತಾಲೂಕಿನ ಚಂದಕವಾಡಿ ಹೋಬಳಿಗೆ ಸೇರಿದ ಕುಂಬೇಶ್ವರ ಕಾಲೋನಿ ಸಮೀಪದ ಕರಡಿಹಳ್ಳದ ಶ್ರೀಕುಂಬೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಂಕ್ರಾಂತ್ರಿ ಹಬ್ಬದ ಪ್ರಯುಕ್ತ ಜಾತ್ರೆಯು ಪ್ರತಿ ವರ್ಷದಂತೆ ಸಂಕ್ರಾಂತಿಯ ಹಬ್ಬದ ದಿನದಂದು ನಡೆಯಿತು.

ಶ್ರೀಮಹದೇಶ್ವರ ಸ್ವಾಮಿಯ ವಿಗ್ರಹವನ್ನು ಸವರ್ಣಾವತಿ ಹೊಳೆಯ ನೀರಿನಲ್ಲಿ ಅಭಿಷೇಕ ಮಾಡಿ ನಂತರ ದೇವಸ್ಥಾನಕ್ಕೆ ಹುಲಿವಾಹನ ಮರವಣಿಗೆಯಲ್ಲಿ ತರಲಾಯಿತು. ಈ ಸಂದರ್ಭದಲ್ಲಿ ದೇವರಸತ್ತಿಗೆ, ಡೊಳ್ಳು ಕುಣಿತ, ವೀರಭದ್ರ ಕುಣಿತ ಸೇರಿದಂತೆ ಇನ್ನು ಹಲವಾರು ಜನಪದ ಕುಣಿತಗಳು ಭಾಗವಹಿಂಸಿದ್ದವು. ಕುಂಬೇಶ್ವರ ಜಾತ್ರೆಗೆ ಚಾಮರಾಜನಗರ ಸುತ್ತಮುತ್ತಲಿನ ಭಕ್ತರು ಮತ್ತು ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಿಂದ ಆಗಮಿಸಿದ್ದರು.

ಜಾತ್ರೆಗೆ ಬರುವ ಭಕ್ತಧಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ಜಾತ್ರಾ ಮಹೋತ್ಸವದಲ್ಲಿ ಕುಂಬೇಶ್ವರ ಯುವಕರ ಸಂಘದ ಸದಸ್ಯರು ಗ್ರಾಮಸ್ಥರಾದ ವಾಟಾಳ್ ಬಾಬು, ನಾಗರಾಜು, ಸಿದ್ದಪ್ಪ, ಪುಟ್ಟಸ್ವಾಮಿ, ಬಸವೇಗೌಡ, ಎಚ್.ಎಸ್ ಮಂದೇಶ್, ಕೃಷ್ಣ ಹಾಗೂ ಇನ್ನು ಮುಂತಾದವರು ಜಾತ್ರೆಯಲ್ಲಿ ಭಾಗವಹಿಸಿದ್ದರು.

ಶ್ರೀಕುಂಬೇಶ್ವರಸ್ವಾಮಿಯ ಸಂಕ್ರಾಂತಿ ಹಬ್ಬದ ಸುಗ್ಗಿ ಜಾತ್ರೆಯೂ ಬಹಳ ವಿಜೃಂಬಣೆಯಿಂದ ನಡೆಯಿತು.

ಕೆನರಾ ಬ್ಯಾಂಕ್
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ

ಎ.ಆರ್.ಎಂ.-II, ಶಾಖೆ, 2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ. 86, ಎಂ.ಜಿ. ರಸ್ತೆ, ಬೆಂಗಳೂರು – 560001
ದೂರವಾಣಿ : 080-25310099, 080-25310181, ಇ-ಮೇಲ್ : cb6298@canarabank.com

ಸ್ಥಿರಾಸ್ತಿಗಳ ಹರಾಜು ಮಾರಾಟ ಸೂಚನೆ

(ನಿಯಮ 8(6)ರ ಅಡಿಯಲ್ಲಿ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 2002

ಪ್ರೋವಿಜನ್ ನಿಯಮ 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನ ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು ಮತ್ತು ಖಾತರಿದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ, **ಕೆನರಾ ಬ್ಯಾಂಕಿನ ಎಂ.ಐ.ಡಿ. ಕಾರ್ಪೋರೇಟ್ ಶಾಖೆ, ಮೈಸೂರು** ಗೆ ಅಡಮಾನ ಇಡಲಾದ / ವಿಧಿಸಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಯನ್ನು, **ಕೆನರಾ ಬ್ಯಾಂಕಿನ ಮೈಸೂರಿನ ಎಂ.ಐ.ಡಿ. ಕಾರ್ಪೋರೇಟ್ ಶಾಖೆಯ ಅಧಿಕೃತ ಅಧಿಕಾರಿಯು ಸ್ವಾಧೀನವನ್ನು** ತೆಗೆದುಕೊಂಡಿದ್ದಾರೆ, ಅದನ್ನು ಕೆಳಗೆ ತಿಳಿಸಲಾದ ಸಾಲಗಾರರಿಂದ ಬಾಕಿ ಬಾಕಿಗಳನ್ನು ವಸೂಲಿ ಮಾಡಲು **"ಎಲ್ಲಿದೆಯೋ ಹಾಗೆ", "ಏನಿದೆಯೋ ಹಾಗೆ", ಹೇಗಿದೆಯೋ ಹಾಗೆ"** ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಮೀಸಲು ಬೆಲೆ ಮತ್ತು ಅರ್ನಿಂಗ್ ಮನಿ ಠೇವಣಿಯನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಸಾಲಗಾರ(ರು) / ಜಾಮೀನುದಾರರ ಹೆಸರು ಮತ್ತು ವಿಳಾಸ	ಒಟ್ಟು ಹೊಣೆಗಾರಿಕೆಗಳು	ಸ್ಥಿರಾಸ್ತಿಯ ವಿವರಗಳು (ಮಾಲೀಕರ / ಅಡಮಾನುದಾರರ ಹೆಸರು)	ಹರಾಜಿನ ದಿನಾಂಕ & ಸಮಯ	ಮೀಸಲು ಬೆಲೆ & ಮುಂಗಡ ಹಣ ಠೇವಣಿ (ಇ.ಎಂ.ಡಿ.) ದಿನಾಂಕ & ಸಮಯ	ಬಿಡ್ ಹೆಚ್ಚಳ ಮೊತ್ತ
1. ಮೆ॥ ಸ್ವಾಭಿಮಾನ್ ಆಸ್ಪತ್ರೆ ಮಾಲೀಕರು : ಡಾ. ಕೆ ಎಸ್ ವೈಜಯಂತಿ ಸರ್ವೆ ನಂ. 85/4ಬಿ, ಬಟ್ಟಗೆರೆ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ – 572132. **ಹಾಗೂ ಇಲ್ಲಿ : ಮೆ॥ ಸ್ವಾಭಿಮಾನ್ ಆಸ್ಪತ್ರೆ** # 109, 2ನೇ ಮಹಡಿ, 8ನೇ ಮುಖ್ಯ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560055. **3. ಶ್ರೀ ಸುಬ್ರಮಣ್ಯಂ ಎಸ್ ಬಿನ್ ಸೇತುರಾಮನ್** ನಂ. 19, 2ನೇ ಮೇನ್, 5ನೇ ಕ್ರಾಸ್, ಬಾಹುಬಲಿ ನಗರ, ಜಾಲಹಳ್ಳಿ, ಬೆಂಗಳೂರು – 560013. **4. ಡಾ. ಕೆ ಎಸ್ ವೈಜಯಂತಿ ಕೋಂ. ಸುಬ್ರಮಣ್ಯಂ ಎಸ್** ನಂ. 19, ಜೇನುಗೋಡು, 2ನೇ ಮೇನ್, 5ನೇ ಕ್ರಾಸ್, ಬಾಹುಬಲಿ ನಗರ, ಜಾಲಹಳ್ಳಿ, ಬೆಂಗಳೂರು – 560013. **ಹಾಗೂ ಇಲ್ಲಿ : 5. ಶ್ರೀ ಸುಬ್ರಮಣ್ಯಂ ಎಸ್** ನಂ. 109, ರತ್ನಂ ಕಾಂಪ್ಲೆಕ್ಸ್, 2ನೇ ಮಹಡಿ, 8ನೇ ಮೇನ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560055.	ರೂ. 16,76,24,996.14 (ರೂಪಾಯಿ ಹದಿನಾರು ಕೋಟಿ ಎಪ್ಪತ್ತಾರು ಲಕ್ಷ ಇಪ್ಪತ್ನಾಲ್ಕು ಸಾವಿರ ಒಂಬೈನೂರ ತೊಂಭತ್ತಾರು ಮತ್ತು ಹದಿನಾಲ್ಕು ಪೈಸೆ ಮಾತ್ರ) ಹಾಗೂ ಹೆಚ್ಚುವರಿ ಬಡ್ಡಿ ಇದರೊಂದಿಗೆ ದಿನಾಂಕ : 16-01-2026 ರಿಂದ ಇತರೆ ವೆಚ್ಚಗಳು, ಖರ್ಚುಗಳು, ಇತ್ಯಾದಿ.	(1) ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರಾಸ್ತಿ ವಸತಿ ಕಟ್ಟಡ, ಬಸವೇಶ್ವರ ನಿಲಯ, ಇದರ ಕಾರ್ಪೋರೇಷನ್ ಸೈಟ್ ನಂ. 6ರ ವಾರ್ಡ್ ನಂ. 2, ಸೈಟ್ ನಂ. 22, ಸರ್ವೇ ನಂ. 74/1ರಲ್ಲಿ ಸ್ಥಾಪಿತ, ಸ್ಥಿರಾಸ್ತಿಯು ಜಾಲಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಹುಬಲಿ ನಗರ. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ 55/2=27.50', ಉತ್ತರದಿಂದ ದಕ್ಷಿಣಕ್ಕೆ 48' ರಲ್ಲಿ ನಿರ್ಮಾಣದೊಂದಿಗೆ, ಮೊದಲ ಮತ್ತು ಎರಡನೇ ಮಹಡಿ, ಮೊಸಾಯಿಕ್ ಮತ್ತು ಸಾಲ್ ಕಿಟಕಿಗಳನ್ನು ಹೊಂದಿರುವ 21 ಚೌಕಗಳ ಕಟ್ಟಡ ಮತ್ತು ಆಸ್ತಿ : **ಶ್ರೀಮತಿ ವೈಜಯಂತಿ ಸುಬ್ರಮಣಿಯನ್ ಇವರ ಹೆಸರಿನಲ್ಲಿ ಇದೆ. ಚಕ್ಕುಬಂಧಿ :- ಪೂರ್ವಕ್ಕೆ :** ಶ್ರೀಕಾಂತಾಚಾರಿಯವರ ಆಸ್ತಿ, **ಪಶ್ಚಿಮಕ್ಕೆ :** ಸರ್ವೇ ನಂ. 73 ರಲ್ಲಿರುವ ಆಸ್ತಿ ಮತ್ತು ಮಾರಾಟಗಾರರಿಂದ ಈಗಾಗಲೇ ಪರಭಾರೆ ಮಾಡಲಾದ ಆಸ್ತಿ, **ಉತ್ತರಕ್ಕೆ :** ಮಹಾದೇವಯ್ಯನವರ ಆಸ್ತಿ, **ದಕ್ಷಿಣಕ್ಕೆ :** ರಸ್ತೆ (1) ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರಾಸ್ತಿಯ ನಂ. 12ಎ (ಪೂರ್ವ ಭಾಗ), ಇದರ ಕಾರ್ಪೋರೇಷನ್ ಸೈಟ್ ನಂ. 2, ಜಾಲಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಹುಬಲಿ ನಗರ. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ 31 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ 36+37 ಅಡಿ ಮತ್ತು ಇದರ **ಚಕ್ಕುಬಂಧಿ :- ಪೂರ್ವಕ್ಕೆ :** ಖಾಸಗಿ ಆಸ್ತಿ, **ಪಶ್ಚಿಮಕ್ಕೆ :** ಶ್ರೀ ಆರ್. ಶಶಿಧರ್ ಅವರ ಆಸ್ತಿ, **ಉತ್ತರಕ್ಕೆ :** ಮಹೇಂದ್ರನಾಥ ಅವರ ಆಸ್ತಿ, **ದಕ್ಷಿಣಕ್ಕೆ :** ರಸ್ತೆ. ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರಾಸ್ತಿಯ ನಂ. 12ಎ (ಪಶ್ಚಿಮ ಭಾಗ), ಇದರ ಕಾರ್ಪೋರೇಷನ್ ಸೈಟ್ ನಂ. 2, ಜಾಲಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಾಹುಬಲಿ ನಗರ. ಅಳತೆ : ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ 36+35 ಅಡಿ ಮತ್ತು ಇದರ **ಚಕ್ಕುಬಂಧಿ :- ಪೂರ್ವಕ್ಕೆ :** ಶ್ರೀ ನರೇಂದ್ರಬಾಬು ಅವರಿಗೆ ಸೇರಿದ ಆಸ್ತಿ, **ಪಶ್ಚಿಮಕ್ಕೆ :** ಆಸ್ತಿ ನಂ. 12, **ಉತ್ತರಕ್ಕೆ :** ಮಹೇಂದ್ರನಾಥ ಅವರ ಆಸ್ತಿ, **ದಕ್ಷಿಣಕ್ಕೆ :** ರಸ್ತೆ (3) ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಭೂಮಿ ಅಳತೆ 45 ಎಕರೆಗಳು, ಸ್ಥಿರಾಸ್ತಿಯು ವಿವಿಧ ಸರ್ವೇ ನಂ.ಗಳಲ್ಲಿ ವಿವರಿಸಲಾಗಿದೆ ಇದರ ಮೌಲ್ಯಾಂಕನ ವರದಿ ಜೊತೆಗೆ ಕಟ್ಟಡವು ಸರ್ವೇ ನಂ. 85/4ಬಿ (ಪರಿವರ್ತಿತ ಭೂಮಿ) ಬಟ್ಟಗೆರೆ ಗ್ರಾಮ, ಪುವಾರ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ – 572132 ಇಲ್ಲಿ ನೆಲೆಗೊಂಡಿದೆ. **ಸ್ಥಿರಾಸ್ತಿಯು ವೈಜಯಂತಿ .ಕೆ.ಎಸ್. ಇವರ ಹೆಸರಿನಲ್ಲಿದೆ.**	25.02.2026 – ಮಧ್ಯಾಹ್ನ 01.00 ರಿಂದ 03.00 ರವರೆಗೆ (ಜೊತೆಗೆ ಮಾರಾಟದ ಮುಕ್ತಾಯದವರೆಗೆ ಪ್ರತಿಯೊಂದಕ್ಕೂ 5 ನಿಮಿಷಗಳ ಅವಧಿಯ ಅನಿಯಮಿತ ವಿಸ್ತರಣೆ)	ಆಸ್ತಿ ನಂ. 1 : ಮೀಸಲು ಬೆಲೆ : ರೂ. 247.24 ಲಕ್ಷಗಳು ಇ.ಎಂ.ಡಿ. : ರೂ. 24.73 ಲಕ್ಷಗಳು ಆಸ್ತಿ ನಂ. 2 : ಮೀಸಲು ಬೆಲೆ : ರೂ. 189.96 ಲಕ್ಷಗಳು ಇ.ಎಂ.ಡಿ. : ರೂ. 19.00 ಲಕ್ಷಗಳು ಆಸ್ತಿ ನಂ. 3 : ಮೀಸಲು ಬೆಲೆ : ರೂ. 687.62 ಲಕ್ಷಗಳು ಇ.ಎಂ.ಡಿ. : ರೂ. 68.76 ಲಕ್ಷಗಳು 24.02.2026 ಮೊದಲು ಅಥವಾ ನಂತರ	ಹೆಚ್ಚಳ ಮೊತ್ತ ರೂ. 1,00,000/- ಹೊಣೆಗಾರಿಗೆಗಳು : ಬ್ಯಾಂಕ್‌ಗೆ ತಿಳಿದಂತೆ ಯಾವುದೂ ಇಲ್ಲ

ಸೂಚನೆ : ಎಲ್ಲಾ ಆಸ್ತಿಗಳು ಬ್ಯಾಂಕಿನ ಸಾಂಕೇತಿಕ ಸ್ವಾಧೀನದಲ್ಲಿವೆ ಮತ್ತು "ಎಲ್ಲಿ ಎಲ್ಲಿದೆಯೋ ಹಾಗೆಯೇ" & "ಎಲ್ಲಿ ಏನು ಇದೆಯೋ ಹಾಗೆಯೇ" ಎಂಬ ಆಧಾರದ ಮೇಲೆ ಮಾರಾಟ ಮಾಡಲಾಗುತ್ತಿದೆ.

ಮಾರಾಟ ಸೂಚನೆಯ ವಿವರವಾದ ನಿಯಮಗಳು ಮತ್ತು ಷರತ್ತುಗಳು

ಎ) ಹರಾಜು / ಬಿಡ್ಡಿಂಗ್ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" ಮೂಲಕ ವೆಬ್‌ಸೈಟ್ : https://baanknet.com/ ಮೂಲಕ ಮಾತ್ರ ನಡೆಯಲಿದೆ. ಇ-ಹರಾಜು ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಬಿಡ್ಡರ್‌ಗಳು ವಿವರವಾದ ನಿಯಮಗಳಿಗಾಗಿ ವೆಬ್‌ಸೈಟ್ ಅನ್ನು ಪರಿಶೀಲಿಸಲು ಸೂಚಿಸಲಾಗಿದೆ.

ಬಿ) ಅಧಿಕೃತ ಅಧಿಕಾರಿಯೊಂದಿಗೆ ಪೂರ್ವ ನೇಮಕಾತಿಯೊಂದಿಗೆ ಆಸ್ತಿಯನ್ನು ಪರಿಶೀಲಿಸಬಹುದು.

ಸಿ) ಆಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಕೊಡುಗೆಯನ್ನು ಇನ್ನಷ್ಟು ಸುಧಾರಿಸಬಹುದು.

ಡಿ) **ಮೀಸಲು ಬೆಲೆಯ ಶೇ. 10% ರಷ್ಟು ಇಎಂಡಿ ಮೊತ್ತವನ್ನು ಮೆ॥ ಪಿಎಸ್ ಬಿ ಅಲಯನ್ಸ್ ಪ್ರೈವೇಟ್ ಅಮಿಟೆಡ್ (ಬ್ಯಾಂಕ್ ನೆಟ್) ಪೋರ್ಟಲ್‌ನ ಇ-ವ್ಯಾಲೆಟ್ ನಲ್ಲಿ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮೂಲಕ ಖಾತೆಯ ವಿವರಗಳಲ್ಲಿ ಎಂದು ಚಲನ್ ನಲ್ಲಿ ಉಲ್ಲೇಖಿಸಲಾಗಿದೆ RTGS / NEFT ಮೂಲಕ ಇಎಂಡಿಯನ್ನು ಠೇವಣಿ ಮಾಡಬೇಕು.**

ಇ) ಇ.ಎಂ.ಡಿ. ಮೊತ್ತವನ್ನು ಪಾವತಿಸಿದ ನಂತರ, ಉದ್ದೇಶಿತ ಬಿಡ್ ದಾರರು ಈ ಕೆಳಗಿನ ದಾಖಲೆಗಳ / ವಿವರಗಳ ನಕಲನ್ನು ಮೇಲ್ಕಂಡ **ದಿನಾಂಕ : 24.02.2026 ನಂತರ ಅಥವಾ ಮೊದಲು ಕೆನರಾ ಬ್ಯಾಂಕ್, ಎಆರ್‌ಎಂ-II ಶಾಖೆ, ಅವರಿಗೆ ಬೈಹ್ಯಾಂಡ್ ಸಲ್ಲಿಸಬಹುದು.**
(i) ಇಎಂಡಿ ಮೊತ್ತಕ್ಕೆ ಬೇಡಿಕೆ ಡ್ರಾಫ್ಟ್ / ಪೇ ಆರ್ಡರ್. RTGS / NEFT ಮೂಲಕ ಪಾವತಿಸಿದರೆ, UTR ಸಂಖ್ಯೆಯೊಂದಿಗೆ ಅದರ ಸ್ವೀಕೃತಿ ರಶೀದಿಯನ್ನು ಪಡೆಯಬಹುದು.
(ii) ಬಿಡ್‌ದಾರರು ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಟ್ಟ ಪಾನ್ ಕಾರ್ಡ್ ಪ್ರತಿಯನ್ನು ಮತ್ತು ಅವನ / ಅವಳ ಗುರುತಿನ ಪುರಾವೆ ಮತ್ತು ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್ ನಂತಹ ನಿವಾಸದ ಪುರಾವೆಗಳನ್ನು ಸಹ ಲಗತ್ತಿಸಬೇಕು. ಆದಾಗ್ಯೂ, ಬಿಡ್ ಮೊತ್ತದ ಶೇ. 25% ರ ಬಾಕಿ ಮೊತ್ತವನ್ನು ಪಾವತಿಸುವ ಸಮಯದಲ್ಲಿ ಯಶಸ್ವಿ ಬಿಡ್ಡುದಾರರು ಈ ದಾಖಲೆಗಳನ್ನು ಮೂಲದಲ್ಲಿ ಬ್ಯಾಂಕ್‌ಗೆ ಸಲ್ಲಿಸಬೇಕಾಗುತ್ತದೆ.
(iii) ಬಿಡ್ ಫಾರ್ಮ್ ಸಲ್ಲಿಸಬೇಕು.
ಉದ್ದೇಶಿತ ಬಿಡ್ಡುದಾರರು ತಮ್ಮ ಹೆಸರನ್ನು ಪೋರ್ಟಲ್ https:/baanknet.com/ ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ನಿರೀಕ್ಷಿತ ಬಿಡ್ಡುದಾರರು ಸೇವಾ ಪೂರೈಕೆದಾರರಿಂದ ಹರಾಜಿನ ಕುರಿತು ಆನ್‌ಲೈನ್ ತರಬೇತಿಯನ್ನು ಪಡೆಯಬಹುದು, **ಮೆ॥ ಪಿಎಸ್‌ಬಿ ಅಲೈಯನ್ಸ್ (ಬ್ಯಾಂಕ್‌ನೆಟ್)** ಇಮೇಲ್ : support.baanknet@psballiance.com ವಿಫಲವಾದ ಬಿಡ್ಡುದಾರಿಂದ ಠೇವಣಿ ಮಾಡಿದ ಇಎಂಡಿಯನ್ನು ಅವರಿಗೆ ಮರುಪಾವತಿಸಲಾಗುತ್ತದೆ. ಇಎಂಡಿ ಯಾವುದೇ ಬಡ್ಡಿಯನ್ನು ಹೊಂದಿರುವುದಿಲ್ಲ.

ಎಫ್) ಮೇಲೆ ತಿಳಿಸಿದಂತೆ ಮೀಸಲು ಬೆಲೆಯಲ್ಲಿ ಹರಾಜು ಪ್ರಾರಂಭವಾಗುತ್ತದೆ. ಬಿಡ್ ದಾರರು ತಮ್ಮ ಆಫರ್‌ಗಳನ್ನು **ಮೇಲೆ ತಿಳಿಸಿದ 'ಆನ್‌ಲೈನ್'** ಹರಾಜಿನ ಮುಕ್ತಾಯದ ಮೇಲೆ ಅತಿ ಹೆಚ್ಚು ಬಿಡ್‌ನ್ನು **ರೂ. 1,00,000/-** ಮೊತ್ತವನ್ನು (ಮೀಸಲು ಬೆಲೆಗಿಂತ ಹೆಚ್ಚು) ಸಲ್ಲಿಸುವ ಬಿಡ್ಡರ್ ಅನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ಯಶಸ್ವಿ ಬಿಡ್ ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ. ಭದ್ರತಾ ಸಾಲದಾತರಿಂದ ಅದೇ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

ಜಿ) ಯಶಸ್ವಿಯಾದ ಟೆಂಡರುದಾರರು ಆತನ / ಆಕೆಯ ಪರವಾಗಿ ಟೆಂಡರ್ ತೀರ್ಮಾನದ ನಂತರ ಅದೇ ದಿನ ತಕ್ಷಣ ಮಾರಾಟ ಬೆಲೆಯ ಶೇ. 25% ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು. ಬಾಕಿ ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಯಶಸ್ವಿಯಾದ ಟೆಂಡರುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಠೇವಣಿ ಹಣವನ್ನು ಅಧಿಕೃತ ಅಧಿಕಾರಿ ಇವರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಮೊತ್ತವನ್ನು ಕೆನರಾ ಬ್ಯಾಂಕ್‌ನ ಅಧಿಕೃತ ಅಧಿಕಾರಿಯ ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು. **ಎಆರ್.ಎಂ– II ಶಾಖೆ ಅಥವಾ ಕೆನರಾ ಬ್ಯಾಂಕ್, ಎಆರ್.ಎಂ– II** ಶಾಖೆ, ಖಾತೆ ಖಾತೆಯ ಕ್ರೆಡಿಟ್‌ಗೆ RTGS / NEFT / ನಿಧಿ ವರ್ಗಾವಣೆಯ ಮೂಲಕ ಠೇವಣಿ ಮಾಡಬೇಕು. ನಂ. 209272434, ಐಎಫ್‌ಎಸ್‌ಸಿ ಕೋಡ್ : CNRB0006298.

ಹೆಚ್) **ರೂ. 50 ಲಕ್ಷಗಳು (ಐವತ್ತು ಲಕ್ಷ ರೂಪಾಯಿಗಳು)** ಮತ್ತು ಅದಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕಾಗಿ, ಯಶಸ್ವಿ ಬಿಡ್‌ದಾರರು ಮಾರಾಟದ ಆದಾಯದ ಮೇಲೆ ದರದಲ್ಲಿ ಶೇ. 1% ಟಿಡಿಎಸ್ ಅನ್ನು ಕಡಿತಗೊಳಿಸಬೇಕು ಮತ್ತು ಜೆಡಿಎಸ್ ಪ್ರಮಾಣಪತ್ರದ ಮೂಲ ರಸೀದಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.

ಐ) ಎಲ್ಲಾ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ / ಜಿಎಸ್‌ಟಿ / ರಿಜಿಸ್ಟ್ರೇಷನ್ ಚಾರ್ಜ್‌ಗಳು ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಇತ್ಯಾದಿಯಂತಹ ಎಲ್ಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕು.

ಜೆ) ಯಾವುದೇ ಕಾರಣವನ್ನು ನೀಡದೆ ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ / ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ.

ಕೆ) ಇಂಟರ್ನೆಟ್‌ಗೆ ಪ್ರವೇಶವನ್ನು ಹೊಂದಿರದ ಆದರೆ ಇ-ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಬಿಡ್‌ದಾರರು ಇದ್ದರೆ, ಅವರು ಸಂಬಂಧಪಟ್ಟ **ಕೆನರಾ ಬ್ಯಾಂಕ್ ಸರ್ಕಲ್ ಕಚೇರಿ, ಬೆಂಗಳೂರು ಅಥವಾ ಎಆರ್.ಎಂ– II ಶಾಖೆ ಬೆಂಗಳೂರು** ಇವರನ್ನು ಸಂಪರ್ಕಿಸಬಹುದು, ಅನುಕೂಲಕರ ಕೇಂದ್ರವಾಗಿ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಾರೆ.

ಎಲ್) ಬಿಡ್ಡುದಾರರು ಶೀರ್ಷಿಕೆ, ವ್ಯಾಪ್ತಿ, ಪ್ರದೇಶದ ಬಾಕಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಆಸ್ತಿಯ ಸರಿಯಾದ ಶೀರ್ಷಿಕೆ ಮತ್ತು ಭೌತಿಕ ಪರಿಶೀಲನೆಯನ್ನು ಮಾಡಬೇಕು. ಬಿಡ್ ಸಲ್ಲಿಸಿದ ನಂತರ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : **ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಎ.ಆರ್.ಎಂ.– II ಶಾಖೆ,** (9113092975, 8921102717, 9201460154, 9483544116, 8709675503 ಮತ್ತು 080-25310181) ಇ-ಮೇಲ್ : cb6298@canarabank.com ಅಥವಾ ಸೇವಾ ಪೂರೈಕೆದಾರರು **ಮೆ॥ ಪಿಎಸ್‌ಬಿ ಅಲಯನ್ಸ್ ಪ್ರೈವೇಟ್ ಅಮಿಟೆಡ್ (ಬ್ಯಾಂಕ್‌ನೆಟ್)**, ಇಮೇಲ್ : support.baanknet@psballiance.com

ವಿಶೇಷ ಸೂಚನೆ / ಎಚ್ಚರಿಕೆ :

ಕೊನೆಯ ನಿಮಿಷಗಳು / ಸೆಕೆಂಡುಗಳಲ್ಲಿ ಬಿಡ್ಡಿಂಗ್ ಅನ್ನು ತಮ್ಮ ಸ್ವಂತ ಆಸಕ್ತಿಯಿಂದ ಬಿಡ್‌ದಾರರು ತಪ್ಪಿಸಬೇಕು. ಅಂತಹ ಸಂದರ್ಭಗಳಲ್ಲಿ ಯಾವುದೇ ತೊಂದರೆ ಅಥವಾ ವೈಫಲ್ಯ (ಇಂಟರ್ನೆಟ್ ವೈಫಲ್ಯ, ವಿದ್ಯುಚ್ಛಕ್ತಿ ವೈಫಲ್ಯ, ಇತ್ಯಾದಿ) ಉಂಟಾದಲ್ಲಿ ಗುತ್ತಿಗೆದಾರರು ಅಥವಾ ಮಾರಾಟಗಾರರ ಭಾಗವಾಗಿ ಕೆನರಾ ಬ್ಯಾಂಕ್ ಅಥವಾ ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಅನಿಶ್ಚಿತ ಪರಿಸ್ಥಿತಿಯನ್ನು ತಡೆಗಟ್ಟಲು, ವಿದ್ಯುತ್ ಸರಬರಾಜು ಮತ್ತು ಅಗತ್ಯವಿರುವ ಎಲ್ಲ ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಮಾಡಲು ಬಿಡ್ ದಾರರನ್ನು ಕೋರಲಾಗುತ್ತದೆ. ಅದ್ದರಿಂದ ಅವರು ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಸಮರ್ಥರಾಗಿದ್ದಾರೆ ಮತ್ತು ಯಶಸ್ವಿಯಾಗಿ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

ದಿನಾಂಕ : 19.01.2026
ಸ್ಥಳ : ಬೆಂಗಳೂರು ।

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಭಗತ್ ಸಿಂಗ್ ಯುವ ಸೇನೆಯಿಂದ ದಿನದರ್ಶಿಕೆ ಬಿಡುಗಡೆ

ಚಾಮರಾಜನಗರ: ತಾಲೂಕಿನ ಚಂದಕವಾಡಿ ಗ್ರಾಮದ ಶ್ರೀ ಲಕ್ಷ್ಮಿದೇವಿ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಭಗತ್ ಸಿಂಗ್ ಯುವಸೇನೆ ವತಿಯಿಂದ 2026ನೇ ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ಇದೇವೇಳೆ ಅಧ್ಯಕ್ಷ ಕೋಡಿಮೋಳೆ ಕಾಂತರಾಜು ಮಾತನಾಡಿ, ಭಗತ್ ಸಿಂಗ್ ಯುವಸೇನೆ ವತಿಯಿಂದ ಕಳೆದ ಎಂಟು ವರ್ಷಗಳಿಂದ ಸಮಾಜಮುಖಿ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದು, ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಣೆ, ಗಿಡ ನೆಡುವ ಕಾರ್ಯಕ್ರಮ, ಸ್ವಚ್ಛತೆ ಹಾಗೂ ಆರೋಗ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಸೇರಿದಂತೆ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಸಹ ಸಮಾಜ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎಂದರು.ಈ ಸಂದರ್ಭದಲ್ಲಿ ದೇವಸ್ಥಾನ ಅರ್ಚಕ ಮಹೇಶ್, ರಾಜಪ್ಪ,ಶಿವರಾಜ್, ಮನು, ಪ್ರಜ್ವಲ್, ಇತರರು ಇದ್ದರು.

2026ನೇ ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ಜ.26ರಿಂದ ಜಿಲ್ಲಾ ಮಟ್ಟದ ಫಲಪುಷ್ಪ ಪ್ರದರ್ಶನ

ಚಿಕ್ಕಬಳ್ಳಾಪುರ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ಜಿಲ್ಲಾ ಮಟ್ಟದ 'ಫಲಪುಷ್ಪ ಪ್ರದರ್ಶನ' ಕಾರ್ಯಕ್ರಮವನ್ನು ಜ.26 ಮತ್ತು 27 ರಂದು ನಗರದ ಸರ್. ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಆಹಾರ ಇಲಾಖೆ ಶಿಫಾರಸ್ಸಿನನ್ವಯ ಸಮತೋಲನ ಆಹಾರ ವಿಂಗಡಣೆ ಕುರಿತ ಕಲಾಕೃತಿ, ಹೂವು ಕುಂಡಗಳ ಜೋಡಣೆ, ವಿವಿಧ ರೀತಿಯ ದೇಶೀಯ ಹಾಗೂ ವಿದೇಶೀಯ ಹೂ, ಹಣ್ಣು ಹಾಗೂ ತರಕಾರಿಗಳ ಪ್ರದರ್ಶನ, ಇಲಾಖಾ ಯೋಜನೆಗಳ ಮಾಹಿತಿ ಹಾಗೂ ಇತ್ಯಾದಿ, ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಉತ್ಪಾದಿಸಲಾ ಗಿರುವ ಕಸಿ ಸಸಿಗಳ ಮಾರಾಟಕ್ಕಾಗಿ ಸಸ್ಯಸಂತೆ ಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕಿ ಗಾಯತ್ರಿ.ಎಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLAPMYS00445666 1. ಯೋಗಣ್ಣ ಹೋಟೆಲ್ ಸರೋವರದ ಮಾಲೀಕರು 2. ಸಿ. ಸರಸ್ವತಿ	ಮುನ್ಸಿಪಲ್ ಖಾತಾ ಸಂಖ್ಯೆ D3/3269/KL-841 ಹೊಂದಿರುವ ಆಸ್ತಿ, ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ, ಉತ್ತರದಿಂದ ದಕ್ಷಿಣಕ್ಕೆ 33 ಅಡಿ ಅಳತೆಯಲ್ಲಿದ್ದು, ಮನೆ ಸಂಖ್ಯೆ 841, 4ನೇ ಕ್ರಾಸ್, ವಿ.ವಿ. ನಗರ, ಕಲ್ಲಹಳ್ಳಿ, ಸರ್ವೆ ಸಂಖ್ಯೆ 209/2, ಮಂಡ್ಯ ಗ್ರಾಮ, ಕಸಬಾ ಹೋಬಳಿ, ಮಂಡ್ಯ ತಾಲ್ಲೂಕು, ಮಂಡ್ಯ - 571401, ಕರ್ನಾಟಕ ಮತ್ತು ಭೂಮಿಯ ಎಲ್ಲಾ ಭಾಗಗಳು.	04.12.2025	ದಿನಾಂಕ 23.12.2025 ರಂತೆ ರೂ. 47,53,608.98/- (ರೂಪಾಯಿ ನಲವತ್ತ ಏಳು ಲಕ್ಷ ಐವತ್ತ ಮೂರು ಸಾವಿರದ ಆರು ನೂರ ಎಂಟು ಮತ್ತು ಪೈಸೆ ತೊಂಬತ್ತ ಎಂಟು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಮಂಡ್ಯ **ಅಧಿಕೃತ ಅಧಿಕಾರಿ**

IN THE COURT OF THE 2nd ADDL CIVIL JUDGE & J.M.F.C. AT TUMAKURU
O.S. NO.873/2024
Plaintiff: Umesh,
V/S
Defendant; Shantharaju & others.
Summons to Defendant No-3.
D-3; Jayanthi w/o Late Nagaraju, Kestur village, Kora hobli, Tumakur taluk & dist.

Whereas the plaintiff above named has instituted the above sit against the above said defendant along with other defendants with respect of the suit schedule property, for the relief of easement right and permanent injunction. You are hereby summoned to appear in this court in person or by a pleader/advocate duly instrucated and able to answer relating to the above case on ;-20-02-2026 at 11-00 a.m in the forenoon, to answer the case and the day fixed for the final disposal of the case. You must be prepared to produce on that day all the witnesses and all the documents upon which you intend to rely in support of your case. Take notice that in default of your appearance on the day before mentioned, the above case will be heard and determined in your absence.

Suit Schedule Properties.
01.Landed property bearing Sy. No-65 situated at kestur village, kora hobli, Tumakuru taluk & dist, Now the Sy. No-56 is re-phoded as Sy.No- 56/6 and 56/7 in which the cart tract road which leads from Govt road in the southern side, To the Sy.No-56/2, 52/19 & 52/2 of plaintiffs land lands in northern side, as shown in the plaint rough sketch. 02. The 8 feet width cart trck road a shown in the rough sketch schedule which is "A, B, C, D" mentioned in Sy. No- 56/6 & 56/7 Of kestur village, Kora hobli, Tumakuru taluk, is bounded by;
East: Remaing land in Sy.No 56/6 & 56/7. Wast: Sy.No- 51, North: Plaintiffs land in Sy.No 56/2. South: Govt. Road. Given under my hand and seal of this court on 19-01-2026

By order of the court
Chif Administrative Officer
PRL.CJ & J.M.F.C.court
At Tumkuru.

Advocate for Appellants
H.C.Vrushabendra swamy BA.LLB
Near court complex
Koratagere taluk Tumkur dist.

ಸಮಾಚಾರ ಸಣ್ಣದಲ್ಲ

27ಕ್ಕೆ ಲವ್ ಜಿಹಾದ್ ವಿರುದ್ಧ ಪ್ರತಿಭಟನೆ

ಮಡಿಕೇರಿ: ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಲವ್ ಜಿಹಾದ್ ಮತ್ತು ಮತಾಂತರ ವ್ಯಾಪಕವಾಗಿ ನಡೆಯುತ್ತಿದ್ದು, ಇದರ ವಿರುದ್ಧವಾಗಿ ಕೊಡಗು ಹಿಂದೂ ಸುರಕ್ಷಾ ಸಮಿತಿ ವತಿಯಿಂದ ಜ.27 ರಂದು ಸಿದ್ದಾಪುರದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಜನಾಕ್ರೋಶ ಸಭೆ ನಡೆಯಿಲಿದೆಯೆಂದು ಸಮಿತಿಯ ಜಿಲ್ಲಾ ಸಂಚಾಲಕ ಕುಕ್ಕೇರ ಅಜಿತ್ ತಿಳಿಸಿದ್ದಾರೆ. ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30 ಗಂಟೆಗೆ ಸಿದ್ದಾಪುರದ ಶ್ರೀ ಅಯ್ಯಪ್ಪ ದೇವಾಲಯದ ಆವರಣದಿಂದ ಬಸ್ ನಿಲ್ದಾಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಲಿದೆ. ಬಳಿಕ ಬಸ್ ನಿಲ್ದಾಣದಲ್ಲೆ ಜನಾಕ್ರೋಶ ಸಭೆ ನಡೆಯಲಿದೆಯೆಂದು ಮಾಹಿತಿಯನ್ನಿತ್ತರು. ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆಗಳು ಲವ್ ಜಿಹಾದ್ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕುವಂತೆ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಹಿಂದೂ ಸುರಕ್ಷಾ ಸಮಿತಿಯ ಸಹ ಸಂಚಾಲಕ ಸಂತೋಷ್ ಕುಶಾಲನಗರ, ಪದಾಧಿಕಾರಿಗಳಾದ ಲಾಲಾ ಅಯ್ಯಣ್ಣ, ವೈ.ಪಿ. ಭೋಜೇಗೌಡ, ಪಿ.ಎ. ಕುಮಾರ್ ,ಪಿ.ಇ. ರಮೇಶ್ ಉಪಸ್ಥಿತರಿದ್ದರು.

ಜಿಲ್ಲಾ ಕಾಂಗ್ರೆಸ್ ಒಬಿಸಿ ಉಪಾಧ್ಯಕ್ಷರಾಗಿ ನೇಮಕ

ಚಾಮರಾಜನಗರ: ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾ ಉಪಾಧ್ಯಕ್ಷರಾಗಿ ಬಿ. ಮಲ್ಲಯ್ಯನಪುರದ ಚಿನ್ನಸ್ವಾಮಿ ಅವರನ್ನು ನೇಮಕ ಮಾಡಿ ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಹಿಂದುಳಿದ ವರ್ಗಗಳಿಗೆ ಪಕ್ಷದ ಕೊಡುಗೆ ಮತ್ತು ಸಂಘಟನೆಗಳಲ್ಲಿ ಹಿಂದುಳಿದ ವರ್ಗಗಳ ಯುವಕರು ಮತ್ತು ಮಹಿಳೆಯರನ್ನು ಸಂಘಟಿಸಿ, ಪಕ್ಷವನ್ನು ಮತ್ತಷ್ಟು ಸದೃಢಗೊಳಿಸಬೇಕು ಎಂದು ಆದೇಶ ಪ್ರತಿಯಲ್ಲಿ ತಿಳಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕಕ್ಕೆ ನನ್ನನ್ನು ನೇಮಕ ಮಾಡಲು ಕಾರಣಕರ್ತರಾದ ಕ್ಷೇತ್ರದ ಶಾಸಕರಾದ ಸಿ. ಪುಟ್ಟರಂಗಶೆಟ್ಟರು, ಕೊಳ್ಳೇಗಾಲ ಕ್ಷೇತ್ರದ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಚೇತನ್ಕುಮಾರ್ ಹಾಗೂ ಪಕ್ಷದ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ಚಿನ್ನಸ್ವಾಮಿ ತಿಳಿಸಿದ್ದಾರೆ.

ಅರಣ್ಯಾಧಿಕಾರಿ ಅನುಮಾನಾಸ್ಪದ ಸಾವು

ಮೈಸೂರು: ನಗರದ ಖಾಸಗಿ ಹೋಟೆಲ್ ನಲ್ಲಿ ಅರಣ್ಯ ಇಲಾಖೆ ಆರ್‌ಎಫ್ ಒ ಶವವಾಗಿ ಪತ್ತೆ ಆಗಿದ್ದಾರೆ. ತಿ. ನರಸೀಪುರದ ಆರ್‌ಎಫ್ ಒ ಕಾಂತರಾಜ್ ಚೌಹಾಣ್ ಅವರೇ ಕೇಂದ್ರ ಬಸ್ ನಿಲ್ದಾಣದ ಯುವರಾಜ್ ಗೆಲಾಕ್ಸಿ ವಸತಿ ಗೃಹದಲ್ಲಿ ಭಾನುವಾರ ಮಧ್ಯಾಹ್ನ ಸ್ನೇಹಿತ ಮಲ್ಲನಗೌಡ ಪಾಟೀಲ್ ಜೊತೆ ರೂಂ ಬುಕ್ ಮಾಡಿದ್ದರು. ಕಳೆದ ಹದಿನೈದು ದಿನಗಳ ಹಿಂದಷ್ಟೇ ತಿ. ನರಸೀಪುರಕ್ಕೆ ವರ್ಗವಾಗಿದ್ದ ಅವರು ಹೋಟೆಲ್ ನ ಹಿಂಭಾಗದ ಕಾರಿಡಾರ್‌ನಲ್ಲಿ ಶವವಾಗಿ ಬಿದ್ದಿದ್ದಾರೆ. ಜೊತೆಗಿದ್ದ ಗಂಗಾವತಿ ಮೂಲದ ಮಲ್ಲನಗೌಡ ಪಾಟೀಲ್ ನಾಪತ್ತೆ ಆಗಿದ್ದಾರೆ. ಇದು ಪೊಲಸರಿಗೆ ತೀವ್ರ ಅನುಮಾನ ಮೂಡಿಸಿದೆ. ಘಟನಾ ಸ್ಥಳಕ್ಕೆ ಲಷ್ಕರ್‌ಠಾಣೆ ಪೊಲೀಸರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದೆ.

ಮಹಿಳಾ ಡೇರಿಗೆ ಅಧ್ಯಕ್ಷರ ಆಯ್ಕೆ

ಮದ್ದೂರು: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ರೈತ ಹಾಗೂ ಜನ ವಿರೋಧಿ ನೀತಿ ಅನುಸರಿಸುವ ಮೂಲಕ ರಾಜ್ಯವನ್ನು ಸಂಕಷ್ಟಕ್ಕೆ ದೂಡುತ್ತಿದೆ ಎಂದು ಬಿ.ಜೆ.ಪಿ. ಮುಖಂಡ ಹಾಗೂ ಮನ್ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಆರೋಪಿಸಿದರು. ಪಟ್ಟಣದ ಬಿ.ಜೆ.ಪಿ. ಕಚೇರಿಯಲ್ಲಿ ಯರಗನಹಳ್ಳಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾದ ನಿರ್ದೇಶಕರನ್ನು ಅಭಿನಂದಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಯಲ್ಲಿ ರಾಜ್ಯದ ಜನರನ್ನು ವಂಚಿಸುತ್ತಿದ್ದು ಯಾವುದೇ ಅಭಿವೃದ್ಧಿ ಜರುಗುತ್ತಿಲ್ಲ. ದಿನನಿತ್ಯ ಅಧಿಕಾರದ ಕುರ್ಚಿಗಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಒಬ್ಬರ ಮೇಲೊಬ್ಬರು ಆರೋಪ ಮಾಡುತ್ತಾ ಅಧಿಕಾರ ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆಂದು ದೂರಿದರು. 2028ರ ಚುನಾವಣೆಯಲ್ಲಿ ಬಿ.ಜೆ.ಪಿ ಅಧಿಕಾರಕ್ಕೆ ಬರಲಿದ್ದು ಈಗಾಗಲೇ ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟಿಸಲು ಯೋಜನೆ ರೂಪಿಸಿದ್ದು ಮುಂಬರುವ ಜಿ.ಪಂ. ತಾ.ಪಂ. ಹಾಗೂ ಗ್ರಾ.ಪಂ. ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಪ್ರತಿಯೊಬ್ಬರೂ ಶ್ರಮಿಸಬೇಕಂದು ಹೇಳಿದರು. ಯರಗನಹಳ್ಳಿ ಗ್ರಾಮದ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಡಿ.ಸಿ. ಸುನೀತಾ (ಅಧ್ಯಕ್ಷೆ), ವಿ.ಆರ್.ಪವಿತ್ರ(ಉಪಾಧ್ಯಕ್ಷೆ) ಹಾಗೂ ನಿರ್ದೇಶಕರಾದ ನಯನ, ಕಲಾವತಿ, ಆರ್.ನಂದಿನಿ, ಭಾಗ್ಯಮ್ಮ, ಲಕ್ಷ್ಮಮ್ಮ, ಸೌಭಾಗ್ಯಮ್ಮ, ವೈ.ಆರ್. ಸೌಜನ್ಯ ರವರನ್ನು ಬಿ.ಜೆ.ಪಿ ಮುಖಂಡ ಎಸ್.ಪಿ.ಸ್ವಾಮಿ ಅಭಿನಂದಿಸಿದರು. ಈ ವೇಳೆ ಹೆಮ್ಮನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಎಚ್.ಕೆ.ನಂದೀಶ್ಗೌಡ, ಮುಖಂಡರಾದ ಅಪ್ಪಾಜಿ, ಸಚಿನ್, ಬಿ.ಜೆ.ಪಿ. ಯುವಮೋರ್ಚ ಉಪಾಧ್ಯಕ್ಷ ಎಸ್.ಕೆ.ಅಭಿಷೇಕ್ಗೌಡ ಇತರರಿದ್ದರು.

{ಜಿ.ಟಿ.ದೇವೇಗೌಡ } ಶಾಸಕ

ನಾನೇನು ಪಕ್ಷದ ಹಿರಿಯ ನಾಯಕರ ವಿರುದ್ಧ ಮಾತನಾಡಿಲ್ಲ. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಲ್ಲ. ನನ್ನ ಕ್ಷೇತ್ರ ಬಹಳ ದೊಡ್ಡದಿದೆ. ಹಾಗಾಗಿ ನನ್ನ ಕ್ಷೇತ್ರದಲ್ಲಿ ಓಡಾಡುತ್ತಿದ್ದೇನೆ. ನಾನು ಜೆಡಿಎಸ್ ನಲ್ಲೇ ಇದ್ದೇನೆ. ಇತ್ತೀಚೆಗೆ ಪಕ್ಷದಲ್ಲಿ ನಡೆದ ಕೆಲ ಬೆಳವಣಿಗೆಗಳಿಂದ ವೈಯಕ್ತಿಕವಾಗಿ ನನಗೆ ನೋವಾಗಿದೆ. ನಾನು ಇನ್ನೂ ಜೆಡಿಎಸ್ ಪಕ್ಷವನ್ನು ತೊರೆದಿಲ್ಲ.

ಕುಪ್ಯಾ ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಲೋಕಾರ್ಪಣೆ | ಮುಖ್ಯಮಂತ್ರಿ ಸಿದ್ದರಾಮಯ್ಯ

ಗ್ಯಾರಂಟಿ ಯೋಜನೆಗಳಿಂದ ಖಜಾನೆ ಖಾಲಿ ಆಗಲ್ಲ

ತಿ.ನರಸೀಪುರ: ಸರಕಾರದ ಗ್ಯಾರಂಟಿ ಯೋಜನೆಗಳಿಂದ ಖಜಾನೆ ಖಾಲಿಯಾಗಿದೆ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಾರೆ. ಖಜಾನೆ ಖಾಲಿಯಾಗಿದ್ದಾರೆ ಇಷ್ಟೆಲ್ಲ ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಸಾಧ್ಯ ಆಗುತ್ತಿತ್ತಾ ಎಂದು ವಿಪಕ್ಷದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

ತಾಲ್ಲೂಕಿನ ಕುಪ್ಯಾ ಗ್ರಾಮದಲ್ಲಿ ಬಾಬು ಜಗಜೀವನ್ ರಾಂ, ಡಾ.ಬಿ.ಆರ್.ಅಂಬೇಡ್ಕರ್,ಸಂಗೊಳ್ಳಿ ರಾಯಣ್ಣ ಪ್ರತಿಮೆಗಳನ್ನು ಹಾಗೂ ನೂತನ ಗ್ರಾಮ ಪಂಚಾಯತಿ ಕಟ್ಟಡ ಲೋಕಾರ್ಪಣೆ ಮತ್ತು ವಿವಿಧ ಕಾಮಗಾರಿಗಳ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದರು.

ವಿಬಿ-ಜಿ-ರಾಮ್ -ಜಿ ಕಾಯ್ದೆ ರದ್ದಾಗಿ ಮನರೇಗಾ ಮತ್ತೆ ಸ್ಥಾಪನೆಯಾಗುವವರೆಗೆ ನಮ್ಮ ಹೋರಾಟಕ್ಕೆ ಎಲ್ಲರೂ ಬೆಂಬಲಿಸಬೇಕು. ಜನರನ್ನು ತಪ್ಪು ದಾರಿ ಎಳೆಯಲು ರಾಮ್ ಜಿ ಸೇರಿಸಿದ್ದಾರೆ. ಇದನ್ನು ತೆಗೆದು ಹಾಕಲು ಎಲ್ಲರೂ ಚಳವಳಿಗೆ ಮುಂದಾಗಬೇಕು ಎಂದು ಸಿಎಂ ಕರೆ ನೀಡಿದರು.

2005ರಲ್ಲಿ ಕೇಂದ್ರ ಯುಪಿಎ ಸರಕಾರ ಮನರೇಗಾ ಜಾರಿಗೆ ತಂದಿತ್ತು ಆ ಮೂಲಕ ಎಲ್ಲರಿಗೂ ಕೆಲಸದ ಹಕ್ಕು ದೊರಕಿಸಿಕೊಡಲಾಗಿತ್ತು. ಮೋದಿ ಸರಕಾರ ಅದನ್ನು ಕಿತ್ತುಹಾಕುತ್ತಿದೆ. ಬಿಜೆಪಿಯವರು ಬಡವರಿಗೆ ಕೆಲಸ ಕೊಡಲು ಬಿಡುತ್ತಿಲ್ಲ. ಆದ್ದರಿಂದ ವಿಬಿ ಗ್ರಾಮ್ ಜಿ ರದ್ದಾಗಬೇಕು. ಜನರನ್ನು ತಪ್ಪು ದಾರಿ ಎಳೆಯಲು ರಾಮ್ ಜಿ ಸೇರಿಸಿದ್ದಾರೆ ಎಂದು ಕಿಡಿ ಕಾರಿದರು.

ಕುಪ್ಯಾ ಗ್ರಾಮದಲ್ಲಿ ಸುಮಾರು 323. 04 ಕೋಟಿ ರೂ.ಗಳ ಕಾಮಗಾರಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಆಗಿದೆ. ಈ ಬಾರಿ ಅಧಿಕಾರಕ್ಕೆ ಬಂದ ನಂತರ ಮೂರು ಬಾರಿ ವರುಣಾ ಕ್ಷೇತ್ರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಒಟ್ಟು 1,932 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. 1,500ಕ್ಕೂ ಹೆಚ್ಚು ಅಭಿವೃದ್ಧಿ ಕೆಲಸಗಳನ್ನು ಜಾರಿ ಮಾಡಲಾಗಿದೆ. ವಿರೋಧ ಪಕ್ಷದವರು ನಮ್ಮ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ. ಸರ್ಕಾರದಲ್ಲಿ ಅಭಿವೃದ್ಧಿಪಡಿಸಲು ಹಣವಿಲ್ಲ ಎನ್ನುತ್ತಾರೆ. ಎರಡುವರೆ ವರ್ಷಗಳಲ್ಲಿ ವರುಣಾದಲ್ಲಿ 1,932 ಕೋಟಿ ಹಣವನ್ನು ಅಭಿವೃದ್ಧಿಗಾಗಿಯೇ ವೆಚ್ಚ ಮಾಡಲಾಗಿದೆ. ಜಿಲ್ಲೆಯಲ್ಲಿ ಸುಮಾರು 10,000 ಕೋಟಿ ವೆಚ್ಚ ಮಾಡಲಾಗಿದೆ ಎಂದು ವಿರೋಧ ಪಕ್ಷದವರಿಗೆ ತಿರುಗೇಟು ನೀಡಿದರು.

ಸಂಗೊಳ್ಳಿ ರಾಯಣ್ಣ ಹುತಾತ್ಮನಾದ ನಂದಗಡದಲ್ಲಿ ಸುಮಾರು 100 ಎಕರೆ ಪ್ರದೇಶದಲ್ಲಿ ಸೈನಿಕ ಶಾಲೆಯನ್ನು ತೆರೆಯಲು ಹಾಗೂ ಪ್ರವಾಸಿ ತಾಣವಾಗಿಸಲು ಸಾವಿರಾರು ಕೋಟಿ ರುಗಳಿಂದ ಅಭಿವೃದ್ಧಿ ಮಾಡಲಾಗಿದೆ. ವಿರೋಧ ಪಕ್ಷದವರು ಇದನ್ನು ಅರ್ಥೈಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ. ವೈದ್ಯಕೀಯ ಸಚಿವ ಶರಣ ಪ್ರಕಾಶ್ ಪಾಟೀಲ್,ಉನ್ನತ ಶಿಕ್ಷಣ ಸಚಿವ ಕೆ. ಸುಧಾಕರ್ ,ಸಂಸದ ಸುನೀಲ್ ಬೋಸ್, ಶಾಸಕ ಡಿ.ರವಿಶಂಕರ್ ,ರಾಜ್ಯ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ,ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಕುಪ್ಯಾ ಗ್ರಾ.ಪಂ ಅಧ್ಯಕ್ಷೆ ನಂದಿನಿ ರಾಜೇಶ್, ಉಪಾಧ್ಯಕ್ಷೆ ಪದ್ಮ, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ,ಪುರಸಭೆ ಮಾಜಿ ಅಧ್ಯಕ್ಷ ಸೋಮು,ಮದನ್ ರಾಜ್, ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ,ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಕುಪ್ಯಾ ಜೈರಾಮ್, ಹುಣಸೂರು ಬಸವಣ್ಣ,ಕುಪ್ಯಾ ದಿನೇಶ್,ತುಂಬಲ ಗ್ರಾಪಂ ಅಧ್ಯಕ್ಷ ರಾಮ ನಂಜಯ್ಯ ,ಮಲೈ ಮಹದೇಶ್ವರ ಪ್ರಾಧಿಕಾರದ ನಿರ್ದೇಶಕಿ ಕುಪ್ಯಾ ಭಾಗ್ಯಮ್ಮ,ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ,ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ,ಜಿಪಂ ಸಿಇಓ ಯುಕೇಶ್ ಕುಮಾರ್ ,ಸಿ.ಟಿ.ಕುಮಾರ್,ಮಾಜಿ ಗ್ರಾಪಂ ಸದಸ್ಯ ಕೆ.ನಿಂಗರಾಜ್, ಕಾದಂಬರಾಜು,ಎಸ್ ಡಿ ಎಂ ಸಿ ಸದಸ್ಯ ಮಹದೇವ್ ಇದ್ದರು.



ಸಿ.ಎಂ.ಸಿದ್ದರಾಮಯ್ಯ ಕುಪ್ಯಾ ಗ್ರಾಮದಲ್ಲಿ ಬಾಬು ಜಗಜೀವನ್ ರಾಂ, ಡಾ.ಬಿ.ಆರ್.ಅಂಬೇಡ್ಕರ್ ,ಸಂಗೊಳ್ಳಿ ರಾಯಣ್ಣ ಪ್ರತಿಮೆಗಳನ್ನು ಹಾಗೂ ನೂತನ ಗ್ರಾಮ ಪಂಚಾಯತಿ ಕಟ್ಟಡ ಲೋಕಾರ್ಪಣೆ ಮತ್ತು ವಿವಿಧ ಕಾಮಗಾರಿಗಳ ಶಂಕು ಸ್ಥಾಪನೆ ನೆರವೇರಿಸಿದರು.

ಕಾಂಗ್ರೆಸ್ ಪಕ್ಷದಿಂದ ಕೇಂದ್ರಕ್ಕೆ ಒತ್ತಡ

ದಲಿತರಿಗೆ, ಹೆಣ್ಣುಮಕ್ಕಳಿಗೆ ಕೆಲಸ ಕೊಡುವ ನರಾಗಾವನ್ನು ಯಾವುದೇ ಕಾರಣಕ್ಕೂ ರದ್ದು ಮಾಡಬಾರದೆಂಬ ಒತ್ತಡವನ್ನು ನಮ್ಮ ಸರಕಾರದಿಂದ ಹಾಗೂ ನಮ್ಮ ಕಾಂಗ್ರೆಸ್ ಪಕ್ಷದಿಂದ ಕೇಂದ್ರಕ್ಕೆ ಹಾಕಲಾಗುತ್ತಿದೆ ಎಂದು ಸಿಎಂ ಹೇಳಿದರು.

ಶ್ರೀಗಳು ಸಮಾಜದ ಏಳ್ಗೆಗೆ ಶ್ರಮಿಸಿದ ಅಗ್ರಮಾನ್ಯರು

ನಾಗಮಂಗಲ: ಧಾರ್ಮಿಕ ಆಧ್ಯಾತ್ಮಿಕ ಗುರುವಾಗಿ ನಾಥ ಪರಂಪರೆಯ ಹರಿಕಾರರಾಗಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅತ್ಯಂತ ಕಡಿಮೆ ಅವಧಿಯಲ್ಲಿ ಸಮಾಜದ ಏಳಿಗೆಗಾಗಿ ಶ್ರಮಿಸಿ ಅಗ್ರಮಾನ್ಯರೆಸಿದ್ದಾರೆ ಎಂದು ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ಅಭಿಪ್ರಾಯ ಪಟ್ಟರು. ಆದಿಚುಂಚನಗಿರಿ ಕ್ಷೇತ್ರದ ಬಿಜಿಎಸ್ ಸಭಾ ಮಂಟಪದಲ್ಲಿ ನಡೆದ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ 81ನೇ ಜಯಂತ್ಯುತ್ಸವ ಮತ್ತು ಸಂತ ಭಕ್ತ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ಒಟ್ಟು ಒಂದು ಲಕ್ಷ ಎಪ್ಪತ್ತು ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳನ್ನು ತೆರೆದ ಶ್ರೀಮಠ ಅಗ್ರಪಂಕ್ತಿಯಲ್ಲಿದೆ. ಶ್ರೀ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಸುತ್ತಾ ಶ್ರೀಮಠದ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದ ನಿರ್ಮಲಾನಂದನಾಥ ಶ್ರೀಗಳು ಬಾಲಗಂಗಾಧರನಾಥರ ಹೆಸರನ್ನು ಮನೆಮನಗೆ ತಲುಪಿಸಿದ್ದಾರೆ ಎಂದರು.

ಇಡೀ ರಾಜ್ಯದಲ್ಲಿ ಸರಕಾರೇತರ ಕೃಷಿ ವಿಜ್ಞಾನ ಕಾಲೇಜು ಕರ್ನಾಟಕ ಸರ್ಕಾರದ ಸಹಕಾರದಿಂದ ಶ್ರೀಗಳ ಆಶೀರ್ವಾದದಿಂದ ಸಾಕಾರಗೊಂಡಿರುವುದು ಶ್ರೀ ಮಠದ ಹೆಗ್ಗಳಿಕೆಯಲ್ಲೊಂದು. ಮುಂದುವರಿದು ಪಶು ವೈದ್ಯಕೀಯ ಕಾಲೇಜನ್ನೂ ಸ್ಥಾಪಿಸುವ ಗುರುಗಳ ಉದ್ದೇಶ ಸದ್ಯದಲ್ಲೇ ಕೈಗೂಡಲಿದೆ ಎಂದು ಭರವಸೆ ನೀಡಿದರು.

ಮಾಜಿ ಸಚಿವರಾದ ಡಾ. ಸಿ ಎನ್ ಅಶ್ವಥ್ ನಾರಾಯಣ್ ಮಾತನಾಡಿ, ಅನ್ನ ಅಕ್ಷರ ಆರೋಗ್ಯ ತ್ರಿವಿಧ ದಾಸೋಹ ತತ್ವಗಳ ಮೂಲಕ ಇಡೀ ಜನ ಸಮುದಾಯಕ್ಕೆ ಶಕ್ತಿ ತುಂಬಿದವರು ಹಿರಿಯ ಸ್ವಾಮೀಜಿ. ನಿರ್ಮಲಾನಾಥನಂದರು ಮಹಾಗುರುವಿಗೆ ಪ್ರಬುದ್ಧ ಶಿಷ್ಯರು ಎಂಬುದನ್ನು ಸಾಬೀತುಪಡಿಸಿದ್ದಾರೆ. ಇವರಿಂದ ನಿರಂತರವಾಗಿ ಸಮಾಜೋದ್ದಾರದ ಕಾರ್ಯಗಳು ನಡೆಯುತ್ತಿರಲಿ ಎಂದು ಆಶಿಸಿದರು.

ಚಿತ್ರದುರ್ಗದ ಶ್ರೀ ಮಾದಾರ ಚೆನ್ನಯ್ಯ ಬಸವಮೂರ್ತಿ ಸ್ವಾಮೀಜಿ ಮಾತನಾಡಿ, ಶ್ರೀಗಳು ಮಠವನ್ನು ಕೇವಲ ಸಮುದಾಯಕ್ಕಾಗಿ ಕಟ್ಟಲಿಲ್ಲ, ಮನಸುಗಳನ್ನು ಕಟ್ಟುವ ಕೆಲಸ ಮಾಡಿದ್ದಾರೆ. 21ನೇ ಶತಮಾನದ ಸಂತರ ಸಾಲಿನಲ್ಲಿ ಪ್ರಥಮ ಸ್ಥಾನದಲ್ಲಿ ವಿರಾಜಮಾನರಾಗಿದ್ದಾರೆ. ಕೋನಾರ್ಕ್ ನ ಸೂರ್ಯ ದೇವಾಲಯವನ್ನು ಹೋಲುವಂತಹ ಶ್ರೀಗಳ ಐಕ್ಯ ಮಂಟಪವನ್ನು ಅದ್ಭುತವಾಗಿ ನಿರ್ಮಿಸಿರುವುದು ಎಂದರು. ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಧಾನ ಪರಿಷತ್ ಸದಸ್ಯ ಡಾ. ಕೆ ಗೋವಿಂದರಾಜು, ಮಾಗಡಿ ಶಾಸಕ ಬಾಲಕೃಷ್ಣ ಮಾತನಾಡಿದರು.

ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ್,ಹಿರಿಯ ಯತಿ ಪುರುಷೋತ್ತಮಾನಂದ ನಾಥ ಸ್ವಾಮೀಜಿ, ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ಕೆ ಆರ್‌ಪೇಟೆ ಮಾಜಿ ಶಾಸಕ ಕೆ ಬಿ ಚಂದ್ರಶೇಖರ್,ಮಾಹಿತಿ ಆಯೋಗದ ಆಯುಕ್ತ ರಾಜಶೇಖರ್,ತುಮಕೂರಿನ ಮಾಜಿ ಶಾಸಕ ಹೆಚ್ ನಿಂಗಪ್ಪ, ಚಿತ್ರದುರ್ಗ ಕಬೀರಾನಂದ ಆಶ್ರಮದ ಶಿವಲಿಂಗಾನಂದ ಸ್ವಾಮೀಜಿ. ಕುಂಬಳಗೋಡಿನ ಪ್ರಕಾಶನಾಥ ಸ್ವಾಮೀಜಿ, ಶಾಖಾ ಮಠಗಳ ಪೂಜ್ಯರು ಇದ್ದರು.

ಆದಿಚುಂಚನಗಿರಿ ಕ್ಷೇತ್ರದ ಬಿಜಿಎಸ್ ಸಭಾ ಮಂಟಪದಲ್ಲಿ ನಡೆದ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ 81ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ತ್ರಿವಿಧ ದಾಸೋಹದ ಅಪಾರ ಕೊಡುಗೆ

ಪೀಠಾಧ್ಯಕ್ಷರಾದ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಕಾರ್ಯ ಕಾಣಿಸಿದರೂ ಕಾರಣ ಕಾಣುವುದಿಲ್ಲ. ಕರ್ಮದ ಫಲ ಪ್ರಾರಂಭವಾದಾಗ ಬದುಕು ದುಸ್ತರವಾಗುತ್ತದೆ. ಗುರು ಸ್ಮರಣೆಯಿಂದ ಕೆಟ್ಟ ಕರ್ಮಫಲ ಅಳಿದು ಮುಕ್ತಿ ದೊರೆಯುತ್ತದೆ. ಜನ ಸಮುದಾಯದ ಭದ್ರತೆಗೆ ಭವ್ಯತೆಗೆ ತ್ರಿವಿಧ ದಾಸೋಹದ ಮೂಲಕ ಅಪಾರ ಕೊಡುಗೆ ನೀಡಿ ಉದ್ದರಿಸಿದ ಮಹಾಸಂತ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಎಂದು ಗುರುಸ್ಮರಣೆಯ ಮಹತ್ವವನ್ನು ತಿಳಿಸಿದರು.

ನೂತನ ಡಿಸಿಗೆ ಅಭಿನಂದನೆ

ಚಾಮರಾಜನಗರ: ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿಯ ಸದಸ್ಯರು ಭೇಟಿ ಮಾಡಿ ಅಭಿನಂದಿಸಿದರು.

ನಗರದ ಡಿಸಿ ಕಚೇರಿಗೆ ಸಮಿತಿಯ ಸದಸ್ಯರು ತೆರಳಿ ಜಿಲ್ಲಾಧಿಕಾರಿಗೆ ಶಾಲು ಹೊದಿಸಿ, ಹಾರ ಹಾಕಿ, ಪೇಟಾ ತೊಡಿಸಿ, ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ಯಾರಂಟಿ ಸಮಿತಿಯ ಸದಸ್ಯ ಮಲ್ಲಯ್ಯನಪುರ ಚಿನ್ನಸ್ವಾಮಿ, ಜಿಲ್ಲಾಧಿಕಾರಿಗಳಾಗಿ ನಮ್ಮ ಜಿಲ್ಲೆಗೆ ಆಗಮಿಸಿರುವುದು ಸಂತಸವಾಗಿದೆ. ಹಿಂದುಳಿದ ಗಡಿ ಜಿಲ್ಲೆಯ ಅಭಿವೃದ್ಧಿ ಹಾಗೂ ಹೊಸ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಚಾಮರಾಜನಗರ ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಮುಂದಾಗಬೇಕು. ತಮಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಸನ್ಮಾನ ಸ್ವೀಕರಿಸಿದ ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಪ್ರಗತಿ, ಉದ್ಯೋಗ ಸೃಷ್ಠಿ,ಸೇರಿದಂತೆ ಅನೇಕ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಬದ್ದವಾಗಿದ್ದು ಅಭಿವೃದ್ಧಿ ಹೊಂದಿದ ಜಿಲ್ಲೆಯ ಜೊತೆಗೆ ಕೊಂಡೊಯ್ಯುವುದು ನಮ್ಮೆಲ್ಲರ ಗುರಿಯಾಗಬೇಕು ಎಂದರು. ಈ ವೇಳೆ ಗ್ಯಾರಂಟಿ ಸಮಿತಿಯ ಸದಸ್ಯರಾದ ಕುಮಾರ್ ಮರಿಯಾಲ ಹುಂಡಿ ರಮೇಶ್ ಹೆಗ್ಗೋಠಾರ, ರಾಜೇಶ್, ಕುಮಾರ್‌ಮಾದಾಪುರ, ಶಿವಕುಮಾರ್, ಮಂಜುಳಾಚಾ.ನಗರ, ಅರಕಲವಾಡಿ ಮಲ್ಲಿಕಾರ್ಜುನ್ ಇದ್ದರು.



ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ಸಮಿತಿಯ ಸದಸ್ಯರು ಅಭಿನಂದಿಸಿದರು.

ಜಿಲ್ಲಾ ಮಟ್ಟದ ಕ್ರಿಕೆಟ್ ಏ.5ರಿಂದ

ಆಟೋ ಮಾಲೀಕರ– ಚಾಲಕರ ಸಂಘದ ಜಿಲ್ಲಾಧ್ಯಕ್ಷ ಡಿ.ಹೆಚ್. ಮೇದಪ್ಪ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ: ಆಟೋ ಮಾಲೀಕರ– ಚಾಲಕರ ಸಂಘದ ವತಿಯಿಂದ ಗಣರಾಜ್ಯೋತ್ಸವ ಪ್ರಯುಕ್ತ ಸಂಘದ ಸದಸ್ಯರಿಗೆ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿಯನ್ನು ಏ.5ರಿಂದ 7ರವರೆಗೆ ನಗರದಲ್ಲಿ ಆಯೋಜಿಸಲಾಗಿದ್ದು, ಏ.12ರಂದು ಸಾರ್ವಜನಿಕರಿಗೆ ಹಾಗೂ ಆಟೋ ಚಾಲಕರಿಗೆ ಆಟೋಟ ಸ್ಪರ್ಧೆ ಮತ್ತು ಡ್ಯಾನ್ಸ್ ಮೇಳವನ್ನು ಆಯೋಜಿಸಲಾಗಿದೆಯೆಂದು ಸಂಘದ ಜಿಲ್ಲಾಧ್ಯಕ್ಷ ಡಿ.ಹೆಚ್. ಮೇದಪ್ಪ ತಿಳಿಸಿದ್ದಾರೆ.

ಸುದ್ದಿ ಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲಾ ವ್ಯಾಪ್ತಿಯಲ್ಲಿ ಆಟೋ ಮಾಲೀಕ ಚಾಲಕರ ಸಂಘದ 37 ಸ್ಥಾನೀಯ ಸಮಿತಿಗಳಿವೆ. ಈ ಸಮಿತಿಗಳಲ್ಲಿ ಸದಸ್ಯರಾಗಿರುವ ಆಟೋ ಚಾಲಕರಿಗಾಗಿ ಏ.5ರಿಂದ ಮೂರು ದಿನಗಳ ಕಾಲ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆಯೆಂದು ತಿಳಿಸಿದರು.

ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ 25 ರಿಂದ 30 ತಂಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ತಂಡಗಳಿಗೆ 5 ಸಾವಿರ ರೂ. ಮೈದಾನ ಶುಲ್ಕವನ್ನು ನಿಗದಿಪಡಿಸಲಾಗಿದೆ. ಆಸಕ್ತ ತಂಡಗಳು ಮಾ.25ರ ಒಳಗಾಗಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಪಂದ್ಯಾವಳಿ ವಿಜೇತ ತಂಡಕ್ಕೆ 30 ಸಾವಿರ ರೂ. ನಗದು ಬಹುಮಾನ ಮತ್ತು ರನ್ನರ್ಸ್ ಅಪ್ ತಂಡಕ್ಕೆ 20 ಸಾವಿರ ನಗದು ಬಹುಮಾನವನ್ನು ನೀಡಲಾಗುತ್ತದೆಂದು ತಿಳಿಸಿದರು.

ಡ್ಯಾನ್ಸ್ ಮೇಳ–ಆಟೋಟ ಸ್ಪರ್ಧೆ– ಏ.12ರಂದು ನಗರದ ಗಾಂಧಿ ಮೈದಾನದಲ್ಲಿ ಮಹಿಳೆಯರು, ಮಕ್ಕಳು, ಸಾರ್ವಜನಿಕರು ಹಾಗೂ ಆಟೋ ಚಾಲಕರಿಗಾಗಿ ಆಯೋಜಿಸಲಾಗಿದೆ. ಇದರಲ್ಲಿ 5 ರಿಂದ 6 ಮಂದಿಯನ್ನು ಒಳಗೊಂಡ ತಂಡಗಳು ಇಲ್ಲವೆ ವೈಯಕ್ತಿಕವಾಗಿಯೂ ಪಾಲ್ಗೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.ಆಸಕ್ತರು ಏ.5ರ ಒಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಆಟೋ ಮಾಲೀಕ ಚಾಲಕರ ಸಂಘದ ಮಡಿಕೇರಿ ನಗರಾಧ್ಯಕ್ಷ ಎ.ಸಮ್ಮದ್, ನಗರ ಪ್ರಧಾನ ಕಾರ್ಯದರ್ಶಿ ದಿನೇಶ್ ಬಾರನ, ಖಜಾಂಚಿ ಹೆಚ್. ಎಸ್.ನಾಗರಾಜು, ಸಂಘಟನಾ ಕಾರ್ಯದರ್ಶಿಗಳಾದ ಪ್ರವೀಣ್ ಮುದ್ದಿಯನ ಮತ್ತು ಕೆ.ಕೆ.ಸುಕುಮಾರ್ ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಬಾಲ್-ಬ್ಯಾಡ್ಮಿಂಟನ್‌ಗೆ ಚಾಲನೆ

ಜಿಲ್ಲಾ ಕೇಂದ್ರಕ್ಕೆ ಸಿಎಂ ಈಜುಕೊಳ ಮಂಜೂರು | ಶಾಸಕ ಎ.ಆರ್.ಕೃಷ್ಣಮೂರ್ತಿ

ಚಾಮರಾಜನಗರ: ದೇಶದಲ್ಲಿ 2036ನೆ ಇಸವಿಗೆ ಒಲಂಪಿಕ್ ಕ್ರೀಡಾಕೂಟ ನಡೆಸಲು ಅವಕಾಶ ಮಾಡಿಕೊಡುವಂತೆ ಕೇಂದ್ರ ಸರಕಾರ ಒಲಂಪಿಕ್ ಸಂಸ್ಥೆಗೆ ಮನವಿ ಮಾಡಿಕೊಂಡಿದೆ. ರಾಜ್ಯ ಸರಕಾರ ಕೂಡ ಕ್ರೀಡೆಗೆ ಹೆಚ್ಚಿನ ಒತ್ತು ನೀಡಿದೆ ಎಂದು ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್‌ಕ್ರೀಡಾಂಗಣದಲ್ಲಿ ಚಾಮರಾಜನಗರ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ ಇವರ ಸಹಯೋಗದಲ್ಲಿ ಎರಡು ದಿನಗಳ ಕಾಲ ಅಯೋಜಿಸಿರುವ ಕರ್ನಾಟಕ ರಾಜ್ಯ ಮಟ್ಟದ ಜೂನಿಯರ್ಸ್ ಬಾಲಕ ಹಾಗೂ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ನಲ್ಲಿ ಜಿಲ್ಲಾ ಕೇಂದ್ರಕ್ಕೆ ಈಜುಕೊಳ ಮಂಜೂರು ಮಾಡಿದ್ದಾರೆ. ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾ ಸಚಿವರೇ ಆಗಿದ್ದು ನಿಮ್ಮ ಅಸೋಸಿಯೇಷನ್ ವತಿಯಿಂದ ಮನವಿ ಸಲ್ಲಿಸಿದರೆ ಕ್ರಿಯಾಯೋಜನೆಗೆ ಅವಕಾಶ ಆಗುತ್ತದೆ. ಇಲ್ಲಿ ಭಾಗವಹಿಸಿರುವ ರಾಜ್ಯ ಪ್ರತಿನಿಧಿಯಾಗಿ ಆಯ್ಕೆ ಆಗಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುವಾಗಿ.. ಹೊರ ಹೊಮ್ಮಬೇಕು ಎಂದು ಶುಭ ಕೋರಿದರು. ಜಿಲ್ಲೆಯಲ್ಲಿ ಮೂವರಿಗೆ ರಾಷ್ಟ್ರ ಮಟ್ಟದ ಏಕಲವ್ಯ ಪ್ರಶಸ್ತಿ ಲಭಿಸಿದೆ. ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಸಿದ್ದಯ್ಯನಪುರ ಚಂದನ್ ವಿಜೇತರಾಗಿ ಜಿಲ್ಲೆಗೆ ಕೀತಿ ತಂದಿದ್ದಾನೆ. ಕ್ರೀಡಾ ತರಬೇತಿ ಕೊಟ್ಟರೆ ಉತ್ತಮವಾಗಿ ಹೊರಹೊಮ್ಮುತ್ತಾರೆ ಎಂಬುವುದಕ್ಕೆ ಇವರು ಒಂದು ನಿದರ್ಶನ ಎಂದರು.

ಅಸೋಸಿಯೇಷನ್ ಉಪಾಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್‌ಕ್ರೀಡಾಂಗಣದಲ್ಲಿ ಶಾಶ್ವತವಾದ ಕ್ರೀಡಾ ಅಂಕಣ, ಕುಡಿಯುವ ನೀರಿನ ವ್ಯವಸ್ಥೆ, ಷಟಲ್ ಬ್ಯಾಡ್ಮಿಂಟನ್ ಸಿಂಥೆಟಿಕ್ ಮ್ಯಾಟ್ ಅಳವಡಿಸಿಕೊಡಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸುರೇಶ್ ,ಉದ್ಯಮಿ ಶ್ರೀನಿಧಿಕುದರ್‌ಮಾತನಾಡಿದರು.

ಖಜಾಂಚಿ ಮಹದೇವು, ಏಕಲವ್ಯ ಪ್ರಶಸ್ತಿ ಪುರಸ್ಕೃತ ಸುದರ್ಶನ, ನಿವೃತ್ತ ದೈಹಿಕ ಶಿಕ್ಷಕ ಎಂ.ಮಲ್ಲಪ್ಪ, ತಾಲೂಕು ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಚಿಕ್ಕಬಸವಯ್ಯ , ಕೆಇಬಿ ಲೆಕ್ಕಾಧಿಕಾರಿ ಎನ್.ಮಹೇಶ್, ಅಸೋಸಿಯೇಷನ್ ಅಧ್ಯಕ್ಷ ಎಂ.ವಿಮಲ್ ರಾಜ್, ಡಿ.ಮಲ್ಲೇಶ್, ಗಿರೀಶ್ ಪೊಲೀಸ್, ಹೇಮಂತ್, ರಾಜೀವ್, ಮಂಜುನಾಥ್ ಹರದನಹಳ್ಳಿ,ಮೈಕಲ್, ಯಶವಂತ, ಲೋಕೇಶ್, ನವೀನ್, ಮನೋಜ್ ಇದ್ದರು.

ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಚಾಮರಾಜನಗರದ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಜೂನಿಯರ್ಸ್ ಬಾಲಕ ಹಾಗೂ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಲೀಗ್ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ಚಾಲನೆ ನೀಡಿದರು.

ಪಿಎಲ್‌ಡಿಗೆ ನೂತನ ಅಧ್ಯಕ್ಷರ ಆಯ್ಕೆ

ಕೆ.ಆರ್.ಪೇಟೆ: ಭೂ ಅಭಿವೃದ್ಧಿ ಸಹಕಾರ ಗ್ರಾಮೀಣ (ಪಿ.ಎಲ್.ಡಿ) ಬ್ಯಾಂಕ್ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಅರಳಕುಪ್ಪೆ ಮೋಹನ್ ಅವರು ಅಧಿಕಾರ ಸ್ವೀಕರಿಸಿದರು.

ಹಿಂದಿನ ಅಧ್ಯಕ್ಷರಾಗಿದ್ದ ಕಬ್ಬಲಗೆರೆ ಪುಟ್ಟಸ್ವಾಮಿಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಎ ಸಿ ಮೋಹನ್ ಅರಳಕುಪ್ಪೆ ಅವರನ್ನು ಬಿಟ್ಟರೆ ಉಳಿದ ಯಾವ ಸದಸ್ಯರು ಉಮೇದುವಾರಿಕೆ ಸಲ್ಲಿಸದ ಕಾರಣ ಅವಿರೋಧ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಆನಂದ್ ಘೋಷಿಸಿದರು.

ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ ಮಾತನಾಡಿ, ನಮ್ಮ ಬ್ಯಾಂಕ್ ನ ನೂತನ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ನಂತರ ನಮ್ಮಲ್ಲಿ ಯಾವುದೇ ಪಕ್ಷ ಅಥವಾ ಗೊಂದಲವಿಲ್ಲ.ಎಲ್ಲರೂ ಬ್ಯಾಂಕ್ ಅಭಿವೃದ್ಧಿ ದೃಷ್ಟಿಯಿಂದ ಪ್ರತಿಯೊಬ್ಬ ನಿರ್ದೇಶಕರು ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದಾರೆ. ಮುಂದೆ ಯಾರೇ ಅಧ್ಯಕ್ಷರಾಗಲಿ ಅವರಿಗೆ ಕೈಜೋಡಿಸುತ್ತೇವೆ ಎಂದರು.

ನೂತನ ಅಧ್ಯಕ್ಷ ಪೇಟೆ ಅರಳಕುಪ್ಪೆ ಮೋಹನ್ ಮಾತನಾಡಿ, ನಾನು ಮೊದಲ ಬಾರಿಗೆ ಬ್ಯಾಂಕ್ ನಿರ್ದೇಶಕರಾಗಿ ಎಲ್ಲರ ಸಹಕಾರದಿಂದ ಅಧ್ಯಕ್ಷರನಾಗಿದ್ದೇನೆ. ನನಗೆ ಸಿಕ್ಕಿರುವ ಅಧಿಕಾರದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತೇನೆ. ಉಪ ಕಸುಬು ಕೈಗೊಳ್ಳಲು ಕುರಿ, ಕೋಳಿ, ಮೇಕೆ, ಫಾರಂ ಆರಂಭಿಸಲು ಸಾಲ ಸೌಲಭ್ಯ ನೀಡಲು ಕ್ರಮಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು. ನೂತನ ಅಧ್ಯಕ್ಷರಿಗೆ ಮುಖಂಡರು,ಅಭಿಮಾನಿಗಳು, ಹಿತೈಷಿಗಳು ಪಟಾಕಿ ಸಿಡಿಸಿ ಹಾರ ತುರಾಯಿ ಹಾಕಿ,ಸಿಹಿ ವಿತರಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಿ.ಎಲ್.ಡಿ ಉಪಾಧ್ಯಕ್ಷ ಮಾರ್ಗೋನಹಳ್ಳಿ ರಮೇಶ್, ಬ್ಯಾಂಕ್ ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ,

ನಿರ್ದೇಶಕರಾದ ಅಣ್ಣೆಚಾಕನಹಳ್ಳಿ ನಾಗರಾಜೇಗೌಡ, ರಾಜಾನಾಯಕ, ಮಾಳಗೂರು ಜಗದೀಶ್,ಬಣ್ಣೇನಹಳ್ಳಿ ಧನಂಜಯ, ಲಕ್ಷ್ಮೀಪುರ ಚಂದ್ರೇಗೌಡ,ಬಂಡಿಹೊಳೆ ನಾಗೇಶ್,ಶೀಳನೆರೆ ರಾಮೇಗೌಡ, ಮಂಜುಳಾ ಕೃಷ್ಣಗೌಡ,ಕವಿತ ಚಂದ್ರೇಗೌಡ,ಕೆ ಟಿ ಚಕ್ರಪಾಣಿ,ಅರೆನೊಪ್ಪನಹಳ್ಳಿ ಸುನಿಲ್, ಭಾರತೀಪುರ ಸುರೇಶ್, ಮುಖಂಡರಾದ ಸೋಮೇಗೌಡ, ರಾಜೇಶ್‌ದ್ದ ಇದ್ದರು.

ಕೆ.ಆರ್.ಪೇಟೆ ಪಿ.ಎಲ್.ಡಿ ಬ್ಯಾಂಕ್ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಅರಳಕುಪ್ಪೆ ಮೋಹನ್ ಅವರು ಅಧಿಕಾರ ಸ್ವೀಕರಿಸಿದರು.

ಮುಂದಿನ ಸಲವೂ ಜೆಡಿಎಸ್ ನಿಂದಲೇ ಸ್ಪರ್ಧೆ

ಮೈಸೂರು: ನಾನೀಗ ಜೆಡಿಎಸ್ ಶಾಸಕನಾ ಗಿದ್ದು, ಮುಂದಿನ ಚುನಾವಣೆಯಲ್ಲೂ ಜೆಡಿಎಸ್ ಅಭ್ಯರ್ಥಿಯಾಗಿಯೇ ಸ್ಪರ್ಧಿಸು ತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮಾಜಿ ಸಚಿವ ಸಾರಾ ಮಹೇಶ್ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವು ದಾಗಿ ಹೇಳಿಕೆ ನೀಡಿರುವ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದ ಅವರು, ನಾನು ಚಾಮುಂ ಡೇಶ್ವರಿ ಕ್ಷೇತ್ರದ ಜನರಿಗೆ ಯಾವುದೇ ರೀತಿಯ ದ್ರೋಹ ಮಾಡಿಲ್ಲ, ಹಲವಾರು ವರ್ಷಗಳ ಕಾಲ ಪಕ್ಷದಲ್ಲಿದ್ದುಕೊಂಡು ಪಕ್ಷ ಸಂಘಟನೆ ಮಾಡಿದ್ದೇನೆ. ನಾನು ಹೆಚ್ ಡಿ ದೇವೇಗೌಡ, ಹೆಚ್ ಡಿ ಕುಮಾರಸ್ವಾಮಿ ಜೊತೆಸಾಗಿ ಬಂದಿದ್ದೇನೆ ಎಂದರು.

ನಾನೇನು ಪಕ್ಷದ ಹಿರಿಯ ನಾಯಕರ ವಿರುದ್ಧ ಮಾತನಾಡಿಲ್ಲ. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಲ್ಲ. ನನ್ನ ಕ್ಷೇತ್ರ ಬಹಳ ದೊಡ್ಡದಿದೆ. ಹಾಗಾಗಿ ನನ್ನ ಕ್ಷೇತ್ರದಲ್ಲಿ ಓಡಾಡುತ್ತಿದ್ದೇನೆ. ನಾನು ಜೆಡಿಎಸ್ ನಲ್ಲೇ ಇದ್ದೇನೆ. ಜೆಡಿಎಸ್ ನಿಂದ ಒಂದು ಹೆಜ್ಜೆಯನ್ನು ಆಚೆಗೆ ಇಟ್ಟಿಲ್ಲ. ಪಕ್ಷದಲ್ಲಿ ನಡೆದ ಕೆಲ ಬೆಳವಣಿಗೆಗಳಿಂದ ವೈಯಕ್ತಿಕವಾಗಿ ನನಗೆ ನೋವಾಗಿದೆ. ನನ್ನ ನೋವನ್ನು ತೋಡಿಕೊಂ ಡಿದ್ದೇನೆ. ನಾನು ಜೆಡಿಎಸ್ ತೊರೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಜನತೆಗೆ, ಯಾವುದೇ ನಾಯಕರಿಗೂ ದ್ರೋಹ ಮಾಡೋ ಬುದ್ದಿ ನನಗಿಲ್ಲ. ನಾನು ನಾಯಕತ್ವ ನೋಡಿ ಬೆಂಬಲ ಕೊಡುವವನು. ಈ ಹಿಂದಿನಿಂದಲೂ ಎಲ್ಲಾ ಚುನಾವಣೆಗಳಲ್ಲೂ ಗೆದ್ದು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ ಕೆಲಸ ಮಾಡಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಕುಮಾರಪರ್ವ ಪ್ರಾರಂಭ ಮಾಡಿದ್ದು. ಯಡಿಯೂರಪ್ಪರ ಜೊತೆ ಮರಳಿ ಮನೆಗೆ ಕಾರ್ಯಕ್ರಮ ಮಾಡಿದೆ. ಸಿದ್ದರಾಮಯ್ಯ ಕಾಂಗ್ರೆಸ್ ಗೆ ಹೋದ ನಂತರ ಕುಮಾರಸ್ವಾಮಿ ಮೆರವಣಿಗೆ ಮಾಡಿ ಕರೆ ತಂದಿದ್ದು ನಾನೇ. ಕುಮಾರಸ್ವಾಮಿಯನ್ನು ದಲಿತರ ಮನೆಯಲ್ಲಿ ವಾಸ್ತವ್ಯ ಹೂಡಿಸಿದ್ದು ನಾನೇ. ಜೆಡಿಎಸ್ ನಲ್ಲಿ ಅನೇಕ ಜವಾಬ್ದಾರಿ ನಿಭಾಯಿಸಿದ್ದೇನೆ.

ದೇವೇಗೌಡರ ಆಶೀರ್ವಾದದಿಂದ ಕೆಲಸ ಮಾಡಿಕೊಂಡು ಬಂದಿದ್ದೇನೆ. ಈಗಲೂ ಅವರಿಗೆ ಬೆಂಬಲ ಕೊಟ್ಟು ಶಾಸಕನಾಗಿ ಕೆಲಸ ಮಾಡಿದ್ದೇನೆ. ಜೆಡಿಎಸ್ ಪಕ್ಷವನ್ನು ಕೂಡ ಕಟ್ಟಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದ ಜನತೆ ನನ್ನನ್ನು ತಮ್ಮ ಮನೆ ಮಗನ ರೀತಿ ನೋಡಿಕೊಂಡು ಬಂದಿದ್ದಾರೆ. ಈಗಲೂ ಜೆಡಿಎಸ್ ನಲ್ಲಿ ಇದ್ದೇನೆ. ಮುಂದೆಯೂ ಜೆಡಿಎಸ್ ನಲ್ಲೇ ಉಳಿಯುತ್ತೇನೆ ಎಂದು ತಿಳಿಸಿದರು.

ಯಾರ ವಿರುದ್ಧವೂ ನಾನು ಮಾತನಾಡಿಲ್ಲ.. .!

ನಾನು ಪಕ್ಷದಿಂದ ದೂರ ಉಳಿದಿದ್ದ ಮಾತ್ರಕ್ಕೆ ಯಾರ ವಿರುದ್ಧವೂ ಯಾವತ್ತು ಮಾತನಾಡಿಲ್ಲ. ಚಾಮುಂಡೇಶ್ವರಿ ಕ್ಷೇತ್ರ ದೊಡ್ಡ ಕ್ಷೇತ್ರ. ಈ ಕ್ಷೇತ್ರದ ಸೇವೆ ಸಲ್ಲಿಸಿ ದಣಿದಿದ್ದೇನೆ. ನನ್ನ ಕೈ ಹಿಡಿದವರ ಸೇವೆ ಮಾಡಬೇಕು. ಈ ಕಾರಣಕ್ಕಾಗಿ ಕ್ಷೇತ್ರದಲ್ಲಿ ಹೆಚ್ಚು ಓಡಾಟ ಮಾಡ್ತಿದ್ದೇನೆ. ಚುನಾವಣೆಗೆ ಇನ್ನು ಎರಡು ವರ್ಷ ನಾಲ್ಕು ತಿಂಗಳು ಇದೆ. ಕ್ಷೇತ್ರದ ಅಭಿವೃದ್ಧಿಗೋಸ್ಕರ ಬೊಮ್ಮಾಯಿ, ಸಿದ್ದರಾಮಯ್ಯ ಹತ್ತಿರಕ್ಕೆ ಹೋಗಿದ್ದೇನೆ. ಇದನ್ನು ಬಿಟ್ಟರೆ ಬೇರೇನೂ ಇಲ್ಲ ಎಂದರು.

ಸಮಾಚಾರ ಸಣ್ಣದಲ್ಲಿ

ಕನಕಪುರ: ವಾಹನ ಡಿಕ್ಕಿ ಹೊಡೆದು ಚಿರತೆ ಸಾವು

ಕನಕಪುರ: ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಚಿರತೆ ಮೃತಪಟ್ಟಿರುವ ಘಟನೆ ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 209ರ ಮಹಾರಾಜರಕಟ್ಟೆ ರಸ್ತೆ ಬಳಿ ನಡೆದಿದೆ. ಅರಣ್ಯ ಇಲಾಖೆ ಅಧಿಕಾರಿಗಳಾದ ಉಪ ವಲಯ ಅರಣ್ಯಾಧಿಕಾರಿ ರವಿ, ಅರಣ್ಯಾಧಿಕಾರಿ ಶಿವಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ವನ್ಯಜೀವಿ ಸಂರಕ್ಷಣೆ ಕಾಯ್ದೆಯಡಿ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಚಿರತೆಗೆ ಗುದ್ದಿ ಪರಾರಿ ಆಗಿರುವ ಚಾಲಕನ ಬಂಧನಕ್ಕೆ ಕ್ರಮ ವಹಿಸಲಾಗಿದೆ ಎಂದು ಉಪ ವಲಯ ಅರಣ್ಯಾಧಿಕಾರಿ ರವಿ ತಿಳಿಸಿದ್ದಾರೆ.

ನನ್ನೊಂದಿಗೆ ಸಿಎಂ ಸೇರಿ ಎಲ್ಲ ಶಾಸಕರಿದ್ದಾರೆ: ಡಿಕೆಶಿ

ಸಿಎಂ, ನಾನು ಏನು ಮಾತನಾಡಿದ್ದೇವೆ ಎಂದು ನಮಗೆ ಗೊತ್ತು | ನಾಯಕರ ಜತೆ ಮಾತಾಡಿದ್ದನ್ನು ಬಹಿರಂಗ ಮಾಡಲಾಗದು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕಿದ್ದಾರೆ. ನಮ್ಮ ನಡುವೆ ಏನು ಚರ್ಚೆಯಾಗಿದೆ ಎಂದು ನಮಗೆ ಗೊತ್ತು, ಇದನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ದೆಹಲಿಯಿಂದ ವಾಪಸಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 140 ಶಾಸಕರು ಕೂಡ ನನ್ನ ಬೆಂಬಲಿಗರೇ. ಸಿಎಂ ಸಿದ್ದರಾಮಯ್ಯ ಅವರು ಕೂಡ ನನಗೆ ಬೆಂಬಲವಾಗಿದ್ದಾರೆ. ನಾನು ಹಾಗೂ ಸಿಎಂ ಅವರು ಏನು ಮಾತನಾಡಿದ್ದೇವೆ ಎಂದು ನಿಮಗೆ ಗೊತ್ತಿದೆಯಾ? ರಾಹುಲ್ ಗಾಂಧಿ ಸಮ್ಮುಖದಲ್ಲಿ ನಾವು ಏನು ಮಾತನಾಡಿಕೊಂಡಿದ್ದೇವೆ, ಹೈಕಮಾಂಡ್ ಸಮ್ಮುಖದಲ್ಲಿ ಏನು ಮಾತನಾಡಿದ್ದೇವೆ, ಎಲ್ಲ ಕೂತು ಏನು ತೀರ್ಮಾನ ಮಾಡಿದ್ದೇವೆ ಎಂದು ನಮಗೆ ಗೊತ್ತಿದೆ. ಈ ವಿಚಾರವನ್ನು ನಿಮ್ಮ ಮುಂದೆ ಬಹಿರಂಗವಾಗಿ ಚರ್ಚೆ ಮಾಡಲು ಸಾಧ್ಯವೇ? ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದರು.

ದೆಹಲಿ ಭೇಟಿ ಬಗ್ಗೆ ಕೇಳಿದಾಗ, ನಾವು ದೆಹಲಿಗೆ ಹೋಗುವುದೇ ರಾಜಕೀಯ, ಪಕ್ಷ ಹಾಗೂ ಸರಕಾರದ ಕೆಲಸಗಳಿಗೆ. ನಾನು ನಮ್ಮ ಪಕ್ಷದ ನಾಯಕರೊಂದಿಗೆ ಕರ್ನಾಟಕ ಹಾಗೂ ಅಸ್ಸಾಂ ರಾಜ್ಯಗಳು ಸೇರಿದಂತೆ ಅನೇಕ ರಾಜಕೀಯದ ಬಗ್ಗೆ ಚರ್ಚೆ ಮಾಡಿದೆ. ಮಾಧ್ಯಮಗಳು ಅನಗತ್ಯವಾಗಿ ರಾಹುಲ್ ಗಾಂಧಿ ಭೇಟಿಯಾಗಿಲ್ಲ ಎಂದು ಬರೆದಿದ್ದೀರಿ. ಒಂದು ದಿನ ನಾವು ಜತೆಯಲ್ಲಿ ಕೂತು ಚರ್ಚೆ ಮಾಡಿರುವ ಫೋಟೋ ವರದಿ ಮಾಡಿದ್ದೀರಿ, ಮರುದಿನ ಭೇಟಿಯೇ ಆಗಿಲ್ಲ ಎಂದು ಹೇಳುತ್ತಿದ್ದೀರಿ. ಈ ವಿಚಾರದಲ್ಲಿ ಕಾಲ ಉತ್ತರ ನೀಡಲಿದೆ ಎಂದು ಹೇಳಿದ್ದೇನೆ. ಇದರ ಹೊರತಾಗಿ ನಾನು ಬೇರೆ ವಿಚಾರ ಚರ್ಚೆ ಮಾಡುವುದಿಲ್ಲ ಎಂದು ತಿಳಿಸಿದರು.

ನಾಯಕತ್ವ ವಿಚಾರದಲ್ಲಿ ಯಾವುದೇ ಗೊಂದಲಗಳಿಲ್ಲ. ನೀವುಗಳು (ಮಾಧ್ಯಮ) ಗೊಂದಲ ಸೃಷ್ಟಿಸುತ್ತಿದ್ದೀರಿ. ನಾವು ಈ ವಿಚಾರವಾಗಿ ಚರ್ಚೆ ಮಾಡಿದ್ದು, ಹೈಕಮಾಂಡ್ ಅಂತಿಮ ತೀರ್ಮಾನ ಮಾಡಲಿದೆ.

ನಾವೆಲ್ಲರೂ ಆ ತೀರ್ಮಾನಕ್ಕೆ ಬದ್ಧರಾಗಿದ್ದೇವೆ. ಈ ಬಗ್ಗೆ ನಾನು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅನೇಕ ಬಾರಿ ಸ್ಪಷ್ಟಪಡಿಸಿದ್ದೇವೆ. ಹೀಗಾಗಿ ಈ ವಿಚಾರದಲ್ಲಿ ಗೊಂದಲ ಸೃಷ್ಟಿಸುವುದು ಬೇಡ. ಕಾಂಗ್ರೆಸ್ ಒಗ್ಗಟ್ಟಾಗಿದೆ. ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳಲಿದೆ. ಸಿದ್ದರಾಮಯ್ಯ ಅವರು ಕೂಡ ಪಕ್ಷದ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ನಾನೂ ಅದನ್ನೇ ಹೇಳಿದ್ದೇನೆ. ನಮ್ಮ ರಾಜ್ಯದವರೇ ಆದ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿದ್ದು, ಅವರು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರ ನಿರ್ದೇಶನದಂತೆ ನಾವು ಸಾಗುತ್ತೇವೆ ಎಂದರು.

ಡಿಸಿಎಂ ಹೇಳಿದ್ದೇನು?

- ನನ್ನ ಬೆಂಬಲಕ್ಕೆ ಕಾಂಗ್ರೆಸ್‌ನ 140 ಶಾಸಕರಿದ್ದಾರೆ
- ದೆಹಲಿಗೆ ಹೋಗುವುದು ಪಕ್ಷದ ಕೆಲಸಗಳಿಗಾಗಿ
- ನಾಯಕತ್ವ ವಿಚಾರದಲ್ಲಿ ಯಾವುದೇ ಗೊಂದಲಗಳಿಲ್ಲ
- ಪಕ್ಷದ ವರಿಷ್ಠರ ನಿರ್ದೇಶನದಂತೆ ಸಾಗುತ್ತೇವೆ

ನಾನೊಬ್ಬನೇ ಪಕ್ಷಕ್ಕಾಗಿ ಕಷ್ಟಪಟ್ಟಿಲ್ಲ. ಎಲ್ಲರೂ ಕಷ್ಟಪಟ್ಟಿದ್ದಾರೆ. 224 ಕ್ಷೇತ್ರಗಳಲ್ಲಿ ಕಾರ್ಯಕರ್ತರು ಹಗಲು ರಾತ್ರಿ ದುಡಿದಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಕಾರ್ಯಕರ್ತರು ದುಡಿದಿರುವುದನ್ನು ನಾವು ಸದಾ ಸ್ಮರಿಸಬೇಕು. ಅದನ್ನು ನೆನೆಸಿಕೊಂಡರೆ ಭಯವಾಗುತ್ತದೆ. ಅವರು ನಮಗೆ ಪ್ರೀತಿ ತೋರಿಸಿದ್ದಾರೆ. ಶಕ್ತಿ ತುಂಬಿದ್ದಾರೆ. ನನ್ನ ಪರವಾಗಿ ಜನ, ಮಾಧ್ಯಮಗಳು, ಬಿಜೆಪಿ, ದಳದವರು ಪ್ರಾರ್ಥಿಸಿ, ಒಳ್ಳೆಯದನ್ನು ಬಯಸುತ್ತಿದ್ದಾರೆ. ಕೆಲವರು ಟೀಕೆ ಮಾಡುತ್ತಿದ್ದಾರೆ.

-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಏಪ್ರಿಲ್‌ನಲ್ಲಿ ಸಿಹಿ ಸುದ್ದಿ

ಹೈಕಮಾಂಡ್ ಒಳ್ಳೆಯ ಸುದ್ದಿ ನೀಡಲಿದೆ ಎನ್ನುವ ಡಿ.ಕೆ. ಸುರೇಶ್ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ನನ್ನ ತಮ್ಮ, ನಮ್ಮ ಕಾರ್ಯಕರ್ತರು, ಮಾಧ್ಯಮಗಳು ಕೂಡ ಹೇಳುತ್ತಿವೆ. ಜತೆ ಸೇರುವುದು ಒಳ್ಳೆಯ ಸುದ್ದಿ, ಜತೆ ಸೇರಿ ಚರ್ಚೆ ಮಾಡುವುದು ಒಳ್ಳೆಯ ಸುದ್ದಿ. ಏಪ್ರಿಲ್ ತಿಂಗಳಲ್ಲಿ ಒಳ್ಳೆಯ ಸುದ್ದಿ ಬರಲಿದೆ ಎನ್ನುವ ಬಗ್ಗೆ ಈಗಲೇ ಏಕೆ ಆ ಮಾತು? ಎಂದರು. ನನ್ನ ವಿಚಾರದಲ್ಲಿ ಪಕ್ಷ ಏನು ಹೇಳುತ್ತದೆಯೋ ಅದನ್ನು ಕೇಳುತ್ತೇವೆ ಎಂದು ನಾನು ಹಾಗೂ ಸಿಎಂ ಒಮ್ಮತದ ತೀರ್ಮಾನಕ್ಕೆ ಬಂದಿದ್ದೇವೆ. ಶಾಸಕರಿಗೆ ಆಸೆ ಇರುತ್ತದೆ. ಅದರಲ್ಲಿ ತಪ್ಪೇನಿರುತ್ತದೆ. ಅದನ್ನು ಸರಿಯಲ್ಲ ಎಂದು ಹೇಳಲು ಸಾಧ್ಯವೇ? ನಾವು ಅವರ ಕಿವಿಯಲ್ಲಿ ಏನೋ ಹೇಳಿರುತ್ತೇವೆ. ಅವರು ಖುಷಿಯಿಂದ ಕಾಯುತ್ತಿರುತ್ತಾರೆ ಎಂದು ಡಿಸಿಎಂ ಡಿಕೆಶಿ ತಿಳಿಸಿದರು.

ನನ್ನ ತೇಜೋವಧೆ ಮಾಡುವ ಕೆಲಸ: ಆರ್.ಬಿ.ತಿಮ್ಮಾಪುರ

ಬಾಗಲಕೋಟೆ: ನಾನು ಏನು ತಪ್ಪು ಮಾಡಿದ್ದೇನೆ. ನಾನು ದುಡ್ಡು ಕೇಳಿದ್ದೇನಾ? ನನ್ನ ವಿರುದ್ಧ ದೊಡ್ಡ ಕುತಂತ್ರ ನಡೆಯುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದ್ದಾರೆ.

ಅಬಕಾರಿ ಇಲಾಖೆಯಲ್ಲಿ ಸಿಎಲ್ 7 ಲೈಸೆನ್ಸ್ ನೀಡಲು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹಾಗೂ ಅವರ ಪುತ್ರ, ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂಬ ಆಡಿಯೋ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನನ್ನ ಮಗ ಇದರಲ್ಲಿ ಯಾಕೆ ಬರುತ್ತಾನೆ? ಆಡಿಯೋದಲ್ಲಿ ಯಾರ್‍ಯಾರ ಹೆಸರನ್ನು ಹೇಳುತ್ತಾರೆ. ನನಗೆ ಸಾಕಾಗಿದ್ದು, ನಾನು ಕಾನೂನು ಹೋರಾಟ ನಡೆಸುತ್ತೇನ ಎಂದರು. ನನ್ನ ತೇಜೋವಧೆ ಮಾಡುವ ಕೆಲಸ ನಡೆದಿದೆ. ಕಾನೂನು ಕ್ರಮ ಕೈಗೊಳ್ಳಲು ಅವಕಾಶ ಕೊಡಿ ಎಂದು ಸಿಎಂ ಅವರಿಗೆ ಕೇಳುತ್ತೇನೆ. ಈ ಪ್ರಕರಣದಲ್ಲಿ ನನ್ನದು ಯಾವುದೇ ರೀತಿಯ ತಪ್ಪಿಲ್ಲ. ಕಾನೂನು ಸಲಹೆಗಾರರ ಸಲಹೆ ಪಡೆದು ಕಾನೂನು ಹೋರಾಟ ಮಾಡುತ್ತೇನೆ. ಇಲ್ಲಿಯವರೆಗೆ ಮುಖ್ಯಮಂತ್ರಿಗಳು ನನಗೆ ಏನನ್ನೂ ಕೇಳಿಲ್ಲ. ಕೇಳುವ ತಪ್ಪನ್ನು ತಿಮ್ಮಾಪುರ್ ಮಾಡಿಲ್ಲ. ತಿಮ್ಮಾಪುರ್ ತಪ್ಪು ಮಾಡಿಲ್ಲ ಅಂತಾನೇ ಅವರು ನನ್ನನ್ನು ಕೇಳಿಲ್ಲ ಎಂದರು.

ಚಾಲುಕ್ಯ ಉತ್ಸವಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ

ಬಾದಾಮಿ ಅಭಿವೃದ್ಧಿಗೆ 200 ಕೋಟಿ ಅನುದಾನ ನೀಡಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇವೆ

ಬಾಗಲಕೋಟೆ: ರಾಜ್ಯಕ್ಕೆ ಕೇಂದ್ರ ಸರಕಾರದಿಂದ ನ್ಯಾಯಯುತವಾಗಿ ಬರಬೇಕಿರುವ ಪಾಲನ್ನು ಕೊಡಿಸುವ ನಿಟ್ಟಿನಲ್ಲಿ ಬಿಜೆಪಿ ನಾಯಕರು ಹೊಣೆಹೊರಬೇಕೆಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬಾದಾಮಿಯ ಇಮ್ಮಡಿ ಪುಲಕೇಶಿ ವೇದಿಕೆಯಲ್ಲಿ ಹಮ್ಮಿಕೊಂಡಿದ್ದ ಚಾಲುಕ್ಯ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಾದಾಮಿ ಕ್ಷೇತ್ರಕ್ಕೆ ನೀಡಿರುವ ಅನುದಾನವನ್ನು ವಿವರಿಸುತ್ತ ವೇದಿಕೆಯಲ್ಲಿದ್ದ ತೇರದಾಳದ ಬಿಜೆಪಿ ಶಾಸಕ ಸಿದ್ದು ಸವದಿ ಅವರನ್ನು ಉದ್ದೇಶಿಸಿ ಕೇವಲ ಬಾದಾಮಿಗಲ್ಲ ನಿಮ್ಮ ತೇರದಾಳಕ್ಕೂ ಅನುದಾನ ನೀಡುತ್ತೇವೆ. ಆದರೆ ನೀವುಗಳು ಕೇಂದ್ರ ಸರಕಾರದಿಂದ ರಾಜ್ಯಕ್ಕೆ ಬರಬೇಕಿರುವ ನ್ಯಾಯಯುತ ಮೊತ್ತವನ್ನು ತರುವಲ್ಲಿ ಶ್ರಮವಹಿಸಬೇಕೆಂದು ತಿವಿದರು.

ಬಾದಾಮಿ ಅಭಿವೃದ್ಧಿ ವಿಷಯವಾಗಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ ನಿಶ್ಚಿತವಾಗಿಯೂ 200 ಕೋಟಿ ರು. ಅನುದಾನ ಒದಗಿಸುವುದಾಗಿ ಕಾರ್ಯಕ್ರಮ ದಲ್ಲಿ ತಿಳಿಸಿದ ಸಂಸದ ಪಿ.ಸಿ.ಗದ್ದಿಗೌಡರ ಅವರನ್ನು ಉದ್ದೇಶಿಸಿ ಮಾತನಾಡಿದ ಸಿಎಂ, ನಾಳೆನೇ ಪ್ರಸ್ತಾವನೆ ಸಲ್ಲಿಸುತ್ತೇನೆ. ಕೇಂದ್ರ ಸರಕಾರ ನಮ್ಮ ಮನವಿಗಳನ್ನು ಪುರಸ್ಕರಿಸುತ್ತಿಲ್ಲ ಎಂಬ ಕಾರಣಕ್ಕಾಗಿಯೇ ಕೇಳುವುದನ್ನು ಬಿಟ್ಟಿದ್ದೇವೆ. ಈಗ ಸಂಸದರು ಅನುದಾನ ತರುವುದಾಗಿ ಹೇಳುತ್ತಿರುವುದರಿಂದ ಮಂಗಳವಾರವೇ ಪ್ರಸ್ತಾವನೆ ಸಿದ್ಧಗೊಂಡು ಕೇಂದ್ರಕ್ಕೆ ಸಲ್ಲಿಕೆಯಾಗಿದೆ. ಕುರುಡನಿಗೆ ಬೇಕಿರುವುದು ಎರಡು ಕಣ್ಣು ಮಾತ್ರ.

ಡೊಳ್ಳು ಬಾರಿಸುವ ಮೂಲಕ ಬಾದಾಮಿಯಲ್ಲಿ ಹಮ್ಮಿಕೊಂಡಿದ್ದ ಚಾಲುಕ್ಯ ಉತ್ಸವಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಮಾತು ಕೊಟ್ಟಿರುವ ಸಂಸದರು ಅನುದಾನ ತರುವ ಹೊಣೆ ಹೊರಬೇಕೆಂದು ಹೇಳಿದರು.

ಬಾದಾಮಿ ಅಭಿವೃದ್ಧಿಗೆ 2 ಸಾವಿರ ಕೋಟಿ: ಬಾದಾಮಿ ಕ್ಷೇತ್ರದ ಅಭಿವೃದ್ಧಿಗೆ ಈ ಅವಧಿಯಲ್ಲೇ 2 ಸಾವಿರ ಕೋಟಿ ರು. ಅನುದಾನವನ್ನು ರಾಜ್ಯ ಸರಕಾರ ಒದಗಿಸಿದೆ. ಕೆರೂರು ಏತನೀರಾವರಿ ಯೋಜನೆಗಾಗಿ 1400 ಕೋಟಿ ರು. ಒದಗಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಬಾದಾಮಿ, ಕೆರೂರ ಸೇರಿ 28 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ರಸ್ತೆಗಳ ಅಭಿವೃದ್ಧಿಗೆ ಸೇರಿ 540ಕ್ಕೂ ಅಧಿಕ ಕೋಟಿ ರು. ಒದಗಿಸಲಾಗಿದೆ. ಬಾದಾಮಿ ಮಾತ್ರವಲ್ಲದೇ ಇತರೆ ಕ್ಷೇತ್ರಗಳ ಅಭಿವೃದ್ಧಿಗೂ ಅನುದಾನ ಒದಗಿಸಲಾಗುತ್ತದೆ ಎಂದು ಸಿಎಂ ಹೇಳಿದರು.

ಸಚಿವ ಬೈರತಿ ಸುರೇಶ, ಸಚಿವ ಶಿವರಾಜ ತಂಗಡಗಿ, ಸಂಸದರಾದ ಪಿ.ಸಿ.ಗದ್ದಿಗೌಡರ, ನಾರಾಯಣಸಾ ಭಾಂಡಗೆ, ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಬೀಳಗಿ ಶಾಸಕ ಜೆ.ಟಿ.ಪಾಟೀಲ, ಹುನಗುಂದ ಶಾಸಕ ವಿಜಯನಂದ ಕಾಶಪ್ಪನವರ, ವಿಧಾನ ಪರಿಷತ್ ಸದಸ್ಯರಾದ ಉಮಾಶ್ರೀ, ಪಿ.ಎಚ್.ಪೂಜಾರ, ಹಣಮಂತ ನಿರಾಣಿ, ಇತರರು ಇದ್ದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಫೋನ್: 8050770004 ಇ–ಮೇಲ್ : bcwd.training@gmail.com
ಸಂಖ್ಯೆ: BCWD/Training-1/PET/CR-08/2025-26 ದಿನಾಂಕ:17.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಬ್ಯಾಂಕಿಂಗ್ ಪಿ.ಓ ಪರೀಕ್ಷಾ ಪೂರ್ವ ತರಬೇತಿ ನೀಡಲು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಕ್ಕೆ ಪ್ರತ್ಯೇಕವಾಗಿ ಎರಡು ಅಲ್ಪಾವಧಿ ಟೆಂಡರ್ ಗಳನ್ನು ಅರ್ಹ ತರಬೇತಿ ಸಂಸ್ಥೆಗಳಿಂದ ಆಹ್ವಾನಿಸಿದೆ.
ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ನೋಡಬಹುದಾಗಿದೆ.
ಅಲ್ಪಾವಧಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:28.01.2026ರ ಅಪರಾಹ್ನ 3.00 ಗಂಟೆಯವರೆಗೆ.

ಸಹಿ/–
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ಉಪ ನಿರ್ದೇಶಕರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
ವಾಸಾಸಂಇ/ವಾಪ್ರ/ಜಿಎ/5114/2025–26

ಚಾರ್ಮಾಡಿ ಘಾಟ್‌ನಲ್ಲಿ ಬೆಂಕಿ: ಅರಣ್ಯ ಆಹುತಿ

ಚಿಕ್ಕಮಗಳೂರು: ಆಕಸ್ಮಿಕ ಬೆಂಕಿ ಬಿದ್ದು ನೂರಾರು ಹತ್ತಾರು ಎಕರೆ ಅರಣ್ಯ ಪ್ರದೇಶ ಹೊತ್ತಿ ಉರಿದಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕೊಟ್ಟಿಗೆ ಹಾರ ಸಮೀಪದ ಮಲಯ ಮಾರುತ ಬಳಿ ನಡೆದಿದೆ. ಅತ್ಯಮೂಲ್ಯ ಗಿಡ ಮೂಲಿಕೆ ಸಸ್ಯಗಳು ಕೂಡ ಬೆಂಕಿಯಲ್ಲಿ ಬೆಂದು ಹೋಗಿವೆ. ನೂರಾರು ಪ್ರಾಣಿ–ಪಕ್ಷಿಗಳು ಸಾವನ್ನಪ್ಪಿವೆ. ನಿರಂತರ ಗಾಳಿಯಿಂದ ಬೆಂಕಿಯ ಕೆನ್ನಾಲಿಗೆ ಹೆಚ್ಚಾಗುತ್ತಿದೆ. ಕಾಡ್ಗಿಚ್ಚಿಗೆ ಹತ್ತಾರು ಎಕರೆ ಅರಣ್ಯ ಪ್ರದೇಶ ಹೊತ್ತಿ ಉರಿಯುತ್ತಿದ್ದು, ಆತಂಕ ಉಂಟುಮಾಡಿದೆ. ಸ್ಥಳೀಯರ ಸಹಾಯದಿಂದ ಬೆಂಕಿ ನಂದಿಸಲು ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಹರಸಾಹಸಪಡುತ್ತಿದ್ದಾರೆ. ಕ್ಷಣದಿಂದ ಕ್ಷಣಕ್ಕೆ ಬೆಂಕಿಯ ಕೆನ್ನಾಲಿಗೆ ಹಬ್ಬುತ್ತಲೇ ಇದೆ. ಗುಡ್ಡದಲ್ಲಿ ಬೀಸುತ್ತಿರುವ ಭಾರೀ ಗಾಳಿಯಿಂದ ಬೆಂಕಿ ನಂದಿಸುವ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಅರಣ್ಯ ಪ್ರದೇಶದಲ್ಲಿ ಬೆಂಕಿ ಹೊತ್ತಲು ನಿಖರವಾದ ಕಾರಣ ತಿಳಿದು ಬಂದಿಲ್ಲ ಎಂದು ಅರಣ್ಯ ಅಧಿಕಾರಿಗಳು ಹೇಳಿದ್ದಾರೆ.

ಧಾರ್ಮಿಕ ಭಾವನೆಗೆ ಧಕ್ಕೆ: 7 ಮಂದಿ ವಿರುದ್ಧ ಕೇಸ್

ಬೆಳಗಾವಿ: ಅಖಂಡ ಹಿಂದೂ ಸಮ್ಮೇಳನದ ಅಂಗವಾಗಿ ಬೆಳಗಾವಿ ಬಳಿಯ ಮಚ್ಚೆ ಗ್ರಾಮದಲ್ಲಿ ಭಾನುವಾರ ನಡೆದ ಶೋಭಾ ಯಾತ್ರೆ ವೇಳೆ ಅನ್ಯಕೋಮಿನ ಧಾರ್ಮಿಕ ಭಾವನೆಗೆ ಧಕ್ಕೆ ತಂದ ಆರೋಪದಡಿ ಮಹಾರಾಷ್ಟ್ರದ ಹಿಂದೂ ನಾಯಕಿ ಹರ್ಷಿತಾ ಠಾಕೂರ ಸೇರಿ ಏಳು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಮಚ್ಚೆ ಗ್ರಾಮದಲ್ಲಿ ಭಾನುವಾರ ನಡೆದ ಹಿಂದೂ ಸಮ್ಮೇಳನಕ್ಕೂ ಮುನ್ನ ಶೋಭಾ ಯಾತ್ರೆ ಮಾಡಲಾಯಿತು. ವಾಹನದ ಮೇಲೆ ನಿಂತ ಹರ್ಷಿತಾ ಅವರು ಅನ್ಸಾರಿ ದರ್ಗಾದ ಬಳಿ ಬಂದಾಗ ವಾಹನ ನಿಲ್ಲಿಸಿ ದರ್ಗಾದ ಕಡೆಗೆ ಬಾಣ ಬಿಟ್ಟಂತೆ ಕೈ ಮಾಡಿ ತೋರಿಸುವ ಮೂಲಕ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದಾರೆ. ಅಲ್ಲದೇ, ಸಮಾವೇಶದಲ್ಲಿಯೂ ಧಾರ್ಮಿಕ ಭಾವನೆ ಕೆರಳಿಸುವ ಭಾಷಣ ಮಾಡಿದ್ದಾರೆ ಎಂದು ಅಬ್ದುಲ್ ಖಾದರ್ ಮುಜಾವರ ಎನ್ನುವವರು ದೂರು ದಾಖಲಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಮಚ್ಚೆ ಗ್ರಾಮದಲ್ಲಿ ನಡೆದ ಹಿಂದೂ ಶೋಭಾ ಯಾತ್ರೆ ವೇಳೆ ದರ್ಗಾಗೆ ಬಾಣ ಬಿಟ್ಟಂತೆ ಸನ್ನೆ ಮಾಡಿರುವುದು.

ಸಮಾವೇಶದ ಆಯೋಜಕರಾದ ಬೆಳಗಾವಿಯ ಸುಪ್ರೀತ್ ಸಿಂಪಿ, ಶ್ರೀಕಾಂತ ಕಾಂಬಳೆ, ಬೆಟ್ಟಪ್ಪ ತಾರಿಹಾಳ, ಶಿವಾಜಿ ಶಹಾಪೂರಕರ, ಗಂಗಾರಾಮ ತಾರಿಹಾಳ, ಕಲ್ಲಪ್ಪ ಅವರ ಮೇಲೂ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಶ್ರೀದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ–563103, E-mail: bnuregevl@karnataka.gov.in,
Web: www.bnu.karnataka.gov.in
ದಿನಾಂಕ: 17.01.2026

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.ಇಲ್ಲಿಗೆ ಮುಖ್ಯ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡುವ ಬಗ್ಗೆ. ಟೆಂಡರ್ ನಂ:BNU/2025-26/IND0063. ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು ದಿನಾಂಕ: 17.01.2026 ರಿಂದ http://kppp.karnataka.gov.in ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಕುಲಸಚಿವರು(ಮೌ),
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಟಮಕ, ಕೋಲಾರ–563 103
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:452/ಕೆಎಸ್‌ಎಂಸಿಎ/2025–26

ನಕಲಿ ಗನ್ ತೋರಿಸಿ ಧಮ್ಕಿ: ಮೂವರ ಬಂಧನ

ರಾಮನಗರ: ಹೆದ್ದಾರಿಯಲ್ಲಿ ಲಾರಿ ಸೈಡ್ ಕೊಡಲಿಲ್ಲ ಎಂಬ ಕಾರಣಕ್ಕೆ ನಕಲಿ ಗನ್ ತೋರಿಸಿ ಬೆದರಿಕೆ ಹಾಕಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಈ ಸಂಬಂಧ ತನಿಖೆ ನಡೆಸಿದ ಪೊಲೀಸರು ಮೂವರು ಆರೋಪಿಗಳನ್ನ ವಶಕ್ಕೆ ಪಡೆದಿದ್ದಾರೆ. ಮಾಗಡಿ ತಾಲೂಕಿನ ಕುದೂರು ಪೊಲೀಸ್ ಠಾಣಾ ವ್ಯಾಪ್ತಿಯ ಬೆಂಗಳೂರು–ಕುಣಿಗಲ್ ಮುಖ್ಯ ರಸ್ತೆಯಲ್ಲಿ ಕಾರ್‌ನಲ್ಲಿದ್ದ ಮೂವರು ಯುವಕರು ಲಾರಿ ಸೈಡ್ ನೀಡಲಿಲ್ಲ ಎಂಬ ಕಾರಣಕ್ಕೆ ಲಾರಿ ಚಾಲಕನಿಗೆ ನಕಲಿ ಗನ್ ತೋರಿಸಿ ಬೆದರಿಕೆ ಹಾಕಿದ್ದಾರೆ. ಇದನ್ನ ಮೊಬೈಲ್‌ನಲ್ಲಿ ವಿಡಿಯೊ ಮಾಡಿಕೊಂಡಿದ್ದ ಲಾರಿ ಡ್ರೈವರ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದ್ದು, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಕಾರನ್ನು ವಶಕ್ಕೆ ಪಡೆದು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತನಿಂದ ನಕಲಿ ಗನ್ ಕೂಡಾ ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಕುದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸವರ್ಣೀಯರು–ದಲಿತರ ಗಲಾಟೆ

ಚಿಕ್ಕಬಳ್ಳಾಪುರ: ಗ್ರಾಮದೇವತೆ ಮೆರವಣಿಗೆ ಸಂದರ್ಭದಲ್ಲಿ ಸವರ್ಣೀಯರು ಮತ್ತು ದಲಿತರ ನಡುವೆ ನಡೆದ ಮಾತಿನ ಚಕಮಕಿ ಘರ್ಷಣೆಯ ಸ್ವರೂಪ ಪಡೆದ ಘಟನೆ ಆನೆಮೊಡುಗು ಕೊತ್ತೂರು ಗ್ರಾಮದಲ್ಲಿ ನಡೆದಿದೆ. ಜಾತಿನಿಂದನೆ ನಡೆದಿದೆ ಎಂದು ದಲಿತರು ಆರೋಪಿಸಿ ಪ್ರತಿಭಟನೆ ನಡೆಸಿದ್ದರಿಂದ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಘಟನೆ ಮಾಹಿತಿ ಪಡೆದ ಕೂಡಲೇ ತಹಸೀಲ್ದಾರ್ ರಶ್ಮಿ,ಇಒ ಮಂಜುನಾಥ್ ಎಎಸ್ಪಿ ಜಗನ್ನಾಥರೈ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಘಟನೆಯ ಸಂಪೂರ್ಣ ಮಾಹಿತಿ ಪಡೆದಿದ್ದು ಶಾಂತಿ ಸಭೆ ಏರ್ಪಡಿಸಿ ಕಲಹ ತಿಳಿಯಾಗುವಂತೆ ಮಾಡಿದ್ದಾರೆ.

ಡಿಜಿಪಿ ರಾವ್ ವಿರುದ್ಧ ಕ್ರಮಕ್ಕೆ ಸಿಎಂ ಸೂಚನೆ

← ಮೊದಲಪುಟದಿಂದ

ವಿಡಿಯೊ ವೈರಲ್ ಆಗುತ್ತಿದ್ದಂತೆಯೇ ಗೃಹ ಸಚಿವ ಪರಮೇಶ್ವರ್ ನಿವಾಸಕ್ಕೆ ರಾಮಚಂದ್ರರಾವ್ ದೌಡಾಯಿಸಿದ್ದಾರೆ. ಆದರೆ, ಗೃಹ ಸಚಿವ ಪರಮೇಶ್ವರ್ ಅವರು ಭೇಟಿಗೆ ನಿರಾಕರಿಸಿ ಮನೆಯ ಗೇಟಿನಿಂದಲೇ ವಾಪಸ್ ಕಳುಹಿಸಿದ್ದಾರೆ. ಈ ವೇಳೆ ರಾಮಚಂದ್ರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ಎಂಟು ವರ್ಷಗಳ ಹಿಂದೆ ನಾನು ಬೆಳಗಾವಿಯಲ್ಲಿದ್ದೆ. ಇದರ ಬಗ್ಗೆ ನಾನು ವಕೀಲರ ಜತೆಗೆ ಮಾತನಾಡುತ್ತೇನೆ. ಇದರ ಬಗ್ಗೆ ತನಿಖೆ ಆಗಬೇಕು. ಗೃಹ ಸಚಿವರಿಗೆ ಮಾಹಿತಿ ನೀಡಲು ಬಂದಿದ್ದೇನೆ ಎಂದರು.

ಮತ್ತೊಂದೆಡೆ ಈ ವಿಡಿಯೊ ಬಗ್ಗೆ ಸ್ವತಃ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ರಾಜ್ಯ ಸರಕಾರ ಅಧಿಕಾರಿಯ ಅಮಾನತಿಗೆ ಆದೇಶಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ವಿಡಿಯೊ ವೈರಲ್ ಬೆನ್ನಲ್ಲೇ 10 ದಿನ ರಜೆ ಹಾಕಿ ಅಜ್ಞಾತ ಸ್ಥಳಕ್ಕೆ ತೆರಳಿರುವ ಡಿಜಿಪಿ ಡಾ. ರಾಮಚಂದ್ರ ರಾವ್ ಕಾನೂನು ಹೋರಾಟದ ಕುರಿತು ರಹಸ್ಯ ಸ್ಥಳದಲ್ಲಿ ವಕೀಲರ ತಂಡದ ಜೊತೆ ಚರ್ಚೆ ನಡೆಸಿದ್ದಾರೆ.

ಸರಕಾರಕ್ಕೆ ಮುಜುಗರ: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ರಾಮಚಂದ್ರ ರಾವ್ ಅವರು ಕಚೇರಿಯಲ್ಲೇ ಮಹಿಳೆಯರೊಂದಿಗೆ ರಾಸಲೀಲೆ ನಡೆಸಿದ ವಿಡಿಯೊ ವೈರಲ್ ಆಗಿದ್ದು, ಈ ಬಗ್ಗೆ ವರದಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಗೃಹ ಇಲಾಖೆಗೆ ಸೂಚನೆ ನೀಡಿದ್ದಾರೆ. ಈ ಹಿಂದೆ ತಮ್ಮ ಮಲಮಗಳು, ನಟಿ ರನ್ಯಾ ರಾವ್ ಅವರ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ರಾಮಚಂದ್ರ ರಾವ್ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿತ್ತು. ನಂತರ ಅವರನ್ನು ರಾಜ್ಯ ಸರಕಾರ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಮರುನೇಮಕ ಮಾಡಿತ್ತು. ರನ್ಯಾ ರಾವ್ ಚಿನ್ನ ಕಳ್ಳ ಸಾಗಾಣೆ ಪ್ರಕರಣದಲ್ಲೂ ರಾಮಚಂದ್ರರಾವ್ ಭಾಗಿಯಾಗಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದರಿಂದ ಸರಕಾರಕ್ಕೆ ಮುಜುಗರ ಆಗಿತ್ತು.

ಕಠಿಣ ಕ್ರಮಕ್ಕೆ ಸುರೇಶ್‌ಕುಮಾರ್ ಸಲಹೆ

ಪೊಲೀಸ್ ಅಧಿಕಾರಿ ರಾಮಚಂದ್ರ ರಾವ್ ಇಡೀ ಪೊಲೀಸ್ ಇಲಾಖೆಗೆ ಕಳಂಕ ಹಚ್ಚುವ ಕೆಲಸ ಮಾಡಿದ್ದಾರೆ. ಹಿಂದೆ ತಮ್ಮ ಹೆಸರು ಮತ್ತು ಸ್ಥಾನದ ದುರುಪಯೋಗ ಮಾಡಿಕೊಂಡು ಭಾರಿ ಪ್ರಮಾಣದ ಚಿನ್ನದ ಸ್ಮಗ್ಲಿಂಗ್ ನಡೆಸಿದ್ದಾಗ ಈ ಅಧಿಕಾರಿಯನ್ನು ಕಡ್ಡಾಯ ರಜೆಯ ಮೇಲೆ ಕಳಿಸಿ ಸರಕಾರ ಕೈ ತೊಳೆದುಕೊಂಡಿತ್ತು. ಇದೀಗ ಪ್ರಕಟವಾಗಿರುವ ಈ ಪೊಲೀಸ್ ಅಧಿಕಾರಿಯ ಘನಂಧಾರಿ ಕಾರ್ಯವನ್ನು ಸರಕಾರ ಗಂಭೀರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಶಾಸಕ ಸುರೇಶ್ ಕುಮಾರ್ ಸರಕಾರಕ್ಕೆ ಸಲಹೆ ನೀಡಿದ್ದಾರೆ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:khsdrp.divmys@gmail.com)
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–1&2/ಟೆಂಡರ್–4,9,10,14–2,3ನೇ ಕರೆ ಮತ್ತು ಟೆಂಡರ್–24/AAM–2025–26 ದಿ:14.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುವ ಮೈಸೂರು, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟಾರೆ 55 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಕನಿಷ್ಠ ಅಂದಾಜು ಮೊತ್ತ ರೂ.53.02 ರಿಂದ ಗರಿಷ್ಠ ಅಂದಾಜು ಮೊತ್ತ ರೂ.54.72 ಲಕ್ಷಗಳಾಗಿರುತ್ತವೆ. **ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:** 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 27.01.2026 ರಂದು 16.00 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 28.01.2026 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ಸೂಚನೆ:** 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/DDMYS/1527/KSMCA/861/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–342/3749/2025–26 ದಿನಾಂಕ: 17.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	BIAAPA ಮಹಾಯೋಜನೆ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎಂ.ತಮ್ಮೇಗೌಡ ಬಿನ್ ಬಿ.ಸಿ. ಮುನಿಯಪ್ಪ	ಯಲಹಂಕ	ಜಾಲ	ಬಾಗಲೂರು	30/3	0–10	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಿಎಂ ಸಮಕ್ಷಮದಲ್ಲಿ ಮಾತಿನ ಚಕಮಕಿ



ವೇದಿಕೆ ಮೇಲೆ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣಗಿತ್ತು.

ಖಾನಾಪುರ: ಕಾಂಗ್ರೆಸ್ ಕಾರ್ಯಕರ್ತರನ್ನು ವೇದಿಕೆ ಮೇಲೆ ಕರೆತರುವ ವಿಚಾರವಾಗಿ ಮಾಜಿ ಶಾಸಕಿ ಅಂಜಲಿ ನಿಂಬಾಳಕರ್ ಹಾಗೂ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ನಡುವೆ ಮಾತಿನ ಚಕಮಕಿ ನಡೆಯಿತು.

ನಂದಗಡದಲ್ಲಿ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಭಾವಹಿಸಿದ್ದರು.

ಈ ಸಂದರ್ಭದಲ್ಲಿ ವೇದಿಕೆ ಮೇಲೆ ಕಾಂಗ್ರೆಸ್ ಯುವ ಘಟಕದ ತಾಲೂಕಾಧ್ಯಕ್ಷ ಇರ್ಫಾನ್ ತಾಳಿಕೋಟಿ ಅವರನ್ನು ವೇದಿಕೆ ಮೇಲೆ ಕರೆತಂದಿದ್ದಕ್ಕೆ ಅಂಜಲಿ ನಿಂಬಾಳಕರ್, ಚನ್ನರಾಜ ಹಟ್ಟಿಹೊಳಿ ಜತೆ ಮಾತಿನ ಚಕಮಕಿ ನಡೆಸಿದರು.

ಈ ಸಂದರ್ಭದಲ್ಲಿ ಇಬ್ಬರನ್ನು ಶಾಸಕರು ಸಮಾಧಾನಪಡಿಸಿದರು.

ಸಮಾಚಾರ ಸಣ್ಣದಲ್ಲ

ಖಾಸಗಿ ಲಾಡ್ಜ್‌ನಲ್ಲಿ ಆರ್‌ಎಫ್‌ಒ ಶವ ಪತ್ತೆ

ಮೈಸೂರು: ಜಿಲ್ಲೆಯ ಟಿ.ನರಸೀಪುರ ಸಾಮಾಜಿಕ ಅರಣ್ಯ ವಲಯದ ರೇಂಜ್ ಫಾರೆಸ್ಟ್ ಅಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಿದ್ದ ಕಾಂತರಾಜ್ ಚೌಹಾಣ್ ಅವರ ಮೃತದೇಹ ಇಂದು ಖಾಸಗಿ ಹೋಟೆಲ್‌ನಲ್ಲಿ ಪತ್ತೆಯಾಗಿದೆ. ಸೋಮವಾರ ಬೆಳಗ್ಗೆ ಸಬ್ ಅರ್ಬನ್ ಬಸ್ ನಿಲ್ದಾಣ ಸಮೀಪದ ಯುವರಾಜ್ ಗೆಲಾಕ್ಸಿ ಲಾಡ್ಜ್ ರೂಮಿನಲ್ಲಿ ಶವ ಪತ್ತೆಯಾಗಿದೆ. ವಿಜಯಪುರ ಮೂಲದ ಕಾಂತರಾಜ್ 15 ದಿನಗಳ ಹಿಂದಷ್ಟೇ ಟಿ.ನರಸೀಪುರಕ್ಕೆ ವರ್ಗಾವಣೆಯಾಗಿದ್ದರು. ಭಾನುವಾರ (ಜ.18) ಮಧ್ಯಾಹ್ನ ಸ್ನೇಹಿತ ಮಲ್ಲನಗೌಡ ಪಾಟೀಲ್ ಜತೆಗೆ ಯುವರಾಜ್ ಗೆಲಾಕ್ಸಿ ಲಾಡ್ಜ್‌ನಲ್ಲಿ ರೂಮ್ ಬುಕ್ ಮಾಡಿದ್ದರು. ಅದೇ ಲಾಡ್ಜ್‌ನ ಕುಮರನ್ ಜುವೆಲರ್ಸ್ ಹಿಂಭಾಗದ ಕಾರಿಡಾರ್‌ನಲ್ಲಿ ಶವ ಪತ್ತೆಯಾಗಿದೆ. ಶವ ಪತ್ತೆಯಾದ ಬೆನ್ನಲ್ಲೇ ಜತೆಗಿದ್ದ ಗಂಗಾವತಿ ಮೂಲದ ಮಲ್ಲನಗೌಡ ಪಾಟೀಲ್ ಸ್ಥಳದಿಂದ ಎಸ್ಕೇಪ್ ಆಗಿದ್ದಾರೆ. ಸ್ನೇಹಿತನ ನಡೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಮಾಹಿತಿ ಪಡೆದ ಲಕ್ಷರ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಲೋಲಾಕ್ಷಿ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

3 ಸಾವಿರ ಮನೆಗಳ ಹಸ್ತಾಂತರಕ್ಕೆ ಸಿದ್ಧತೆ

ಧಾರವಾಡ: ಹುಬ್ಬಳ್ಳಿಯಲ್ಲಿ ಜ.24ರಂದು ವಸತಿ ಇಲಾಖೆಯಿಂದ 3000 ಮನೆಗಳಿಗೆ ಹಕ್ಕು ಪತ್ರ ವಿತರಣೆ ಹಾಗೂ 1800 ಮನೆಗಳ ಹಸ್ತಾಂತರ ಕಾರ್ಯಕ್ರಮ ನಡೆಯಲಿದ್ದು, ಈ ವಿಷಯವಾಗಿ ವಸತಿ ಸಚಿವ ಜಮೀರ್ ಅಹ್ಮದ್ ಅವರು ಧಾರವಾಡ ಜಿಲ್ಲಾ ಹಂತದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರೊಂದಿಗೆ ಧಾರವಾಡ ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ ಜಂಟಿ ಸಭೆ ನಡೆಸಿದ ಜಮೀರ್, ಹುಬ್ಬಳ್ಳಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳ ಸುಮಾರು 4,600 ಜನರಿಗೆ ಹಕ್ಕು ಪತ್ರ ನೀಡಲಾಗುವುದು. ಈ ಕಾರ್ಯಕ್ರಮಕ್ಕೆ ಅಧಿಕಾರಿಗಳ ವ್ಯವಸ್ಥಿತ ರೂಪುರೇಷೆ ಸಿದ್ಧಪಡಿಸಬೇಕು. ಜಿಲ್ಲೆಯ ಎಲ್ಲ ಅಧಿಕಾರಿಗಳೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಮಲ್ಲಿಕಾರ್ಜುನ ಖರ್ಗೆ, ಸಿಎಂ, ಡಿಸಿಎಂ ಈ ಕಾರ್ಯಕ್ರಮಕ್ಕೆ ಬರಲಿದ್ದಾರೆ. ಸುಮಾರು 2 ಲಕ್ಷ ಜನ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಒಟ್ಟು 42,000 ಮನೆಗಳ ಪೈಕಿ 1,008 ಮನೆಗಳನ್ನು ಹುಬ್ಬಳ್ಳಿಯಲ್ಲಿ ಕೊಡುತ್ತಿದ್ದೇವೆ. ತುಮಕೂರಿನಲ್ಲಿ 1,000, ಬಳ್ಳಾರಿಯಲ್ಲಿ 2,500 ಯಾದಗಿರಿಯಲ್ಲಿ 1,000ಮನೆಗಳಿವೆ. ಆಯಾ ಜಿಲ್ಲೆಗಳಲ್ಲಿ ಜ.24 ರಂದು ಮನೆಗಳ ಹಸ್ತಾಂತರ ನಡೆಯಲಿದೆ ಎಂದರು.

ಜೆಡಿಎಸ್‌ನಿಂದಲೇ ಸ್ಪರ್ಧಿಸುವೆ: ಜಿಟಿಡಿ

ಮೈಸೂರು: ನಾನು ಜೆಡಿಎಸ್‌ನಲ್ಲಿಯೇ ಇದ್ದೇನೆ. ಎಲ್ಲಿಗೂ ಹೋಗುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನಿಂದಲೇ ಸ್ಪರ್ಧೆ ಮಾಡುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದರು. ಮುಂದಿನ ಬಾರಿ ಚಾಮುಂಡೇಶ್ವರಿ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್ ಬೇರೆಯವರಿಗೆ ಸಿಗುತ್ತದೆಯಾ ಎಂಬ ಪ್ರಶ್ನೆಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ನಾನು ಜೆಡಿಎಸ್ ಕಟ್ಟಿರುವ ವಿಚಾರ ಎಚ್.ಡಿ.ದೇವೇಗೌಡರು ಹಾಗೂ ಎಚ್.ಡಿ.ಕುಮಾರಸ್ವಾಮಿಗೂ ಗೊತ್ತಿದೆ. 3 ಬಾರಿ ಚಾಮುಂಡೇಶ್ವರಿ ಕ್ಷೇತ್ರದಿಂದ ಗೆದ್ದಿದ್ದೇನೆ. ಮುಂದೆಯೂ ಜೆಡಿಎಸ್‌ನಲ್ಲಿಯೇ ಇರುತ್ತೇನೆ. ಜೆಡಿಎಸ್‌ನಿಂದಲೇ ಸ್ಪರ್ಧಿಸುತ್ತೇನೆ. ಯಾರೂ ಆತಂಕಪಡುವ ಆವಶ್ಯಕತೆ ಇಲ್ಲ, ನನಗೂ ಆತಂಕವಿಲ್ಲ, ಕಾರ್ಯಕರ್ತರಿಗೂ ಇಲ್ಲ. ನಾನು ಎಲ್ಲೂ ಹೋಗಲ್ಲ, ನನ್ನ ಚಾಮುಂಡೇಶ್ವರಿ ಕ್ಷೇತ್ರವು ದೊಡ್ಡ ಕ್ಷೇತ್ರ. ಇಲ್ಲಿನ ಅಭಿವೃದ್ಧಿ ಕಾರ್ಯಗಳಿಗಾಗಿ ಕ್ಷೇತ್ರದಲ್ಲೇ ಕೆಲಸ ಮಾಡುತ್ತಿದ್ದೇನೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
20.01.2026
ಮಂಗಳವಾರದ ಅತಿಥಿ

ಶ್ರೀಮತಿ ಮಂಗಳಾರವಿ / ರವಿ ಕೃಷ್ಣಮೂರ್ತಿ
ವಿಷಯ
ಸಿ. ಅಶ್ವತ್ ನೆನಪುಗಳು
vishwavani.news

ದಿನ ವಿಶೇಷ

20 ಜನವರಿ 2026 ಮಂಗಳವಾರ

» ಸೂರ್ಯೋದಯ	: 06-47
» ಸೂರ್ಯಾಸ್ತ	: 06-15
» ತಿಥಿ	: ದ್ವಿತೀಯಾ
» ನಕ್ಷತ್ರ	: ಶ್ರವಣ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಮಾಘ
» ಪಕ್ಷ	: ಶುಕ್ಲಪಕ್ಷ

ರಾಯಣ್ಣನ ಜತೆಗೆ ಗಲ್ಲಿಗೇರಿದ ಎಲ್ಲ ವೀರರ ಸಮಾಧಿ ಅಭಿವೃದ್ಧಿ: ಸಿದ್ದರಾಮಯ್ಯ | ನಂದಗಡದಲ್ಲಿ ರಾಯಣ್ಣನ ವೀರಭೂಮಿ ವಸ್ತು ಸಂಗ್ರಹಾಲಯ ಉದ್ಘಾಟನೆ

ಇತಿಹಾಸದ ಪ್ರಜ್ಞೆ ಇದ್ದವರಿಂದ ಮಾತ್ರ ಇತಿಹಾಸ ನಿರ್ಮಾಣ

ಬೆಳಗಾವಿ: ಸಂಗೊಳ್ಳಿ ರಾಯಣ್ಣನ ಜತೆಗೆ ಯಾರು ಯಾರು ಗಲ್ಲಿಗೇರಿದ್ದಾರೋ ಅವರೆಲ್ಲರ ಸಮಾಧಿಗಳ ಅಭಿವೃದ್ಧಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಖಾನಾಪುರ ತಾಲೂಕಿನ ನಂದಗಡದಲ್ಲಿ ಸೋಮವಾರ ರಾಯಣ್ಣನ ವಸ್ತು ಸಂಗ್ರಹಾಲಯ 'ವೀರಭೂಮಿ'ಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ರಾಣಿ ಚನ್ನಮ್ಮ ಸೆರೆಯಾದ ನಂತರ ಸ್ವಾತಂತ್ರ್ಯ ಹೋರಾಟವನ್ನು ಸಂಗೊಳ್ಳಿ ರಾಯಣ್ಣ ಹಾಗೂ ಅವರ ಸಹಚರರು ಮುಂದುವರಿಸಿದರು. ಅವರೆಲ್ಲರೂ ಸ್ವಾತಂತ್ರ್ಯ ಹೋರಾಟಗಾರರೇ ಆಗಿದ್ದಾರೆ. ಎಲ್ಲರ ವಂಶಸ್ಥರನ್ನು ಪತ್ತೆ ಮಾಡಿ, ವೀರರ ಸಮಾಧಿಗಳನ್ನು ಗುರುತಿಸಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಬೆಳಗಾವಿ ಜಿಲ್ಲೆಯ ಸಂಗೊಳ್ಳಿ ಹಾಗೂ ನಂದಗಡ ಎರಡೂ ಸ್ಥಳಗಳು ಅಂತಾರಾಷ್ಟ್ರೀಯ ಪ್ರವಾಸಿ ತಾಣಗಳಾಗಬೇಕು ಎಂಬುದು ನನ್ನ ಉದ್ದೇಶ. ಅದಕ್ಕೆ ಬೇಕಾದ ಕೆಲಸಗಳನ್ನು ಮಾಡಲಾಗುತ್ತಿದೆ. ಮುಂದೆಯೂ ಇಲ್ಲಿಗೆ ಬಂದು ವಸತಿ ಉಳಿದು ಇನ್ನಷ್ಟು ಕೆಲಸ ಮಾಡುತ್ತೇನೆ. ಇತಿಹಾಸದ ಪ್ರಜ್ಞೆ ಇದ್ದವರು ಮಾತ್ರ ಇತಿಹಾಸ ನಿರ್ಮಿಸಲು ಸಾಧ್ಯ. ಆ ಪ್ರಜ್ಞೆಯಿಂದ ಈ ವೀರಭೂಮಿ, ಸಂಗೊಳ್ಳಿಯಲ್ಲಿ ಸೈನಿಕ ಶಾಲೆ, ಶೌರ್ಯವನ ಮುಂತಾದ ಕೆಲಸಗಳನ್ನು ಮಾಡಿದ್ದೇವೆ ಎಂದರು.

ಕರ್ನಾಟಕದಲ್ಲಿ ಇರುವ ಎಲ್ಲರೂ ಕನ್ನಡ ಕಲಿಯಿರಿ: ಇದೇ ವೇಳೆ ಮರಾಠಿಯಲ್ಲಿ ಭಾಷಣ ಮಾಡಿದ ಖಾನಾಪುರ ಶಾಸಕ ವಿಠ್ಠಲ ಹಲಗೇಕರಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೇದಿಕೆಯಲ್ಲೇ ಕನ್ನಡ ಪಾಠ ಮಾಡಿದರು. ಅಲ್ಲದೆ, ಕರ್ನಾಟಕದಲ್ಲಿ ಇರುವ ಎಲ್ಲರೂ ಕನ್ನಡ ಕಲಿಯಲೇಬೇಕು ಎಂದು ಹೇಳುವ ಮೂಲಕ ಕನ್ನಡ ವಿರೋಧಿ ಎಂಇಎಸ್ ನಾಯಕರಿಗೆ ಎಚ್ಚರಿಕೆ ನೀಡಿದರು.

ಕರ್ನಾಟಕದಲ್ಲಿರುವ ಎಲ್ಲರೂ ಕನ್ನಡ ಕಲಿಯುವಂಥ ವಾತಾವರಣ ನಿರ್ಮಾಣ ಮಾಡಬೇಕು. ಯಾರು ಎಲ್ಲಿಂದಲೇ ಬಂದಿರಲಿ, ಎಲ್ಲೇ ಹೋಗಲಿ ಕನ್ನಡ ನೆಲದ ಹೆಸರು ಹೇಳುವ ಮುನ್ನ ಕನ್ನಡ ಕಲಿಯತಕ್ಕದ್ದು. ಅದನ್ನು ನಾವು ಅನಿವಾರ್ಯ ಮಾಡಬೇಕು. ಆಗ ಮಾತ್ರ ಕರ್ನಾಟಕ ಏಕೀಕರಣ ಮಾಡಿದ್ದಕ್ಕೆ ಸಾರ್ಥಕ ಆಗುತ್ತದೆ ಎಂದರು.

ನಂದಗಡದಲ್ಲಿ ನೂತನವಾಗಿ ನಿರ್ಮಾಣವಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ, ರಾಯಣ್ಣನ ವಸ್ತು ಸಂಗ್ರಹಾಲಯ 'ವೀರಭೂಮಿ'ಯನ್ನು ಸಿಎಂ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು. ಈ ವೇಳೆ ಸಚಿವರಾದ ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಬೈರತಿ ಸುರೇಶ್ ಸೇರಿ ಹಲವರಿದ್ದರು.

ರಾಷ್ಟ್ರಮಟ್ಟದಲ್ಲಿ ಪ್ರಭಾವ ಬೀರುವ ಕಾರ್ಯ: ತಂಗಡಗಿ

ನಂದಗಡದಲ್ಲಿ ಐತಿಹಾಸಿಕ ದಿನವಾಗಿದೆ. ಸಂಗೊಳ್ಳಿ ರಾಯಣ್ಣ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ರಣಕಹಳೆ ಮೊಳಗಿಸಿದ ಮಹಾನ್ ಸೇನಾನಿ. ಇವರ ಇತಿಹಾಸವನ್ನು ಮೆಲುಕು ಹಾಕುವ ಉದ್ದೇಶದೊಂದಿಗೆ ಸಂಗೊಳ್ಳಿ ಹಾಗೂ ನಂದಗಡ ಗ್ರಾಮಗಳಲ್ಲಿ ವಸ್ತು ಸಂಗ್ರಾಹಲಯಗಳನ್ನು ಸ್ಥಾಪಿಸುವ ಕಾರ್ಯ ನಮ್ಮ ಸರಕಾರದಿಂದ ಆಗಿದೆ. ಮುಂದಿನ ದಿನಮಾನಗಳಲ್ಲಿ ಕಿತ್ತೂರ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನ ಇತಿಹಾಸ ತಿಳಿದುಕೊಳ್ಳುವ ಕಾರ್ಯ ರಾಜ್ಯ ಸೇರಿದಂತೆ ರಾಷ್ಟ್ರಮಟ್ಟದಲ್ಲಿ ಪ್ರಭಾವ ಬೀರಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಅಧ್ಯಕ್ಷೀಯ ಭಾಷಣಕ್ಕೆ ನಿಂತ ಖಾನಾಪುರ ಶಾಸಕ ವಿಠ್ಠಲ ಹಲಗೇಕರ ಮರಾಠಿಯಲ್ಲಿ ಮಾತು ಆರಂಭಿಸಿದರು. ಆಗ ಜನಸ್ತೋಮದಿಂದ ಕೂಗಾಟ, ಚೀರಾಟ ಆರಂಭವಾಯಿತು. 'ಕನ್ನಡ ಕನ್ನಡ' ಎಂದು ಜನ ಕೂಗಿದರು. 'ನನಗೆ ಕನ್ನಡ ಬರುವುದಿಲ್ಲ ಎಂಬುದು ನಿಮಗೆ ಗೊತ್ತು. ಸಿದ್ದರಾಮಯ್ಯ ಅವರಿಗೆ ಮರಾಠಿ ಅರ್ಥವಾಗುವುದಿಲ್ಲ ಎಂಬುದು ನನಗೂ ಗೊತ್ತು. ನನ್ನ ಬೇಡಿಕೆಗಳನ್ನು ಕನ್ನಡದಲ್ಲೇ ಬರೆಸಿ ತಂದಿದ್ದೇನೆ. ಖಾನಾಪುರದಲ್ಲಿ ಕನ್ನಡ-ಮರಾಠಿ ಎಂಬ ಭೇದವಿಲ್ಲ. ಎಲ್ಲರೂ ಚೆನ್ನಾಗಿದ್ದೇವೆ' ಎಂದು ಮರಾಠಿಯಲ್ಲೇ ಟಾಂಗ್ ನೀಡಿದರು. ಗಲಾಟೆ ಜೋರಾದಾಗ ಅವರು ಕನ್ನಡದಲ್ಲಿ ಮನವಿ ಓದಿದರು. ಬಳಿಕ ಉದ್ಘಾಟನಾ ಭಾಷಣ ಮಾಡಿದ ಸಿದ್ದರಾಮಯ್ಯ, 'ಏನಯ್ಯ ವಿಠ್ಠಲ ಕನ್ನಡ ಅರ್ಥವಾಗುತ್ತದೆಯೇ?' ಎಂದು ಕೇಳಿದರು. 'ಅರ್ಥವಾಗುತ್ತದೆ ಸರ್' ಎಂದು ಶಾಸಕ ಪ್ರತಿಕ್ರಿಯಿಸಿದರು. 'ಇಲ್ಲಿರುವವರು ಮಾತ್ರವಲ್ಲ, ನೀವು ಯಾರು ಎಲ್ಲೇ ಇರಿ, ಕನ್ನಡದ ಅನ್ನ ಉಂಡ ಮೇಲೆ ಕನ್ನಡ ಕಲಿಯಿರಿ' ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಾಯಕರಿಗೂ ತಾಕೀತು ಮಾಡಿದರು.

ಇದಕ್ಕೂ ಮುನ್ನ ನಂದಗಡದ ಐತಿಹಾಸಿಕ ಕೆರೆಯ ಮಧ್ಯೆ ನಿರ್ಮಿಸಿದ ರಾಯಣ್ಣನ ಪ್ರತಿಮೆಯನ್ನೂ ಅವರು ಉದ್ಘಾಟನೆ ಮಾಡಿದರು. ಕೆರೆ ಅಭಿವೃದ್ಧಿ ಹಾಗೂ ವಿವಿಧ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳಿಗೂ ಚಾಲನೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ನಗರಾಭಿವೃದ್ಧಿ ಸಚಿವರಾದ ಭೈರತಿ ಎಸ್.ಸುರೇಶ, ಖಾನಾಪುರ ಶಾಸಕ ವಿಠ್ಠಲ ಹಲಗೇಕರ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಮತ್ತಿತರರು ಭಾಗವಹಿಸಿದ್ದರು.

ಲೂಟಿ ಮಾಡಿಯೇ ಅವರು ಜೈಲಿಗೆ ಹೋಗಿದ್ದರಲ್ಲ

ಸಿಎಂ ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ ಎಂಬ ಜನಾರ್ದನ ರೆಡ್ಡಿ ಆರೋಪಕ್ಕೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಲೂಟಿ ಮಾಡಿಯೇ ಅವರು ಜೈಲಿಗೆ ಹೋಗಿದ್ದರಲ್ಲ. ಅವರಿಗೆ ಏನು ನೈತಿಕತೆ ಇದೆ. ಮತ್ತೆ ಬಳ್ಳಾರಿಗೆ ಬರಬೇಡಿ ಅಂತಾ ಅವರಿಗೆ ಏಕೆ ನಿರ್ಬಂಧ ವಿಧಿಸಲಾಗಿತ್ತು. ಈಗಲೂ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ಇದೆ. ವಿರೋಧ ಪಕ್ಷಗಳಿಗೆ ಸುಳ್ಳು ಹೇಳುವುದು ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ. ಸುಳ್ಳು ಆರೋಪ ಮಾಡುತ್ತಾರೆ. ಆ ಮೂಲಕ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಾರೆ. ಈಗ ಅಧಿವೇಶನ ಶುರು ಆಗುತ್ತದೆ. ಆಗ ಮಾತನಾಡಲಿ ನೋಡೋಣ ಎಂದು ಸವಾಲು ಹಾಕಿದರು. ಜ.21ರಂದು ಗಡಿ ವಿವಾದದ ವ್ಯಾಜ್ಯ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಒಳ್ಳೆಯ ವಕೀಲರನ್ನು ನೇಮಿಸುತ್ತೇವೆ. ಗಡಿ ವಿಚಾರದಲ್ಲಿ ಕರ್ನಾಟಕ ವಿರುದ್ಧ ಪ್ರಕರಣ ಹಾಕಲು ಮಹಾರಾಷ್ಟ್ರದವರಿಗೆ ಅವಕಾಶವೇ ಇಲ್ಲ. ನಾವು ನ್ಯಾಯಾಂಗ ಮಾರ್ಗದಲ್ಲಿ ಸಾಗುತ್ತೇವೆ. ಗಡಿ ವಿಚಾರ ನ್ಯಾಯಾಂಗದಲ್ಲಿ ಬರಬೇಕೋ, ಬರಬಾರದೋ ಎನ್ನುವ ಮೊದಲು ತೀರ್ಮಾನ ಆಗಬೇಕಿದೆ. ಆ ಮೇಲೆ ನೋಡೋಣ ಎಂದರು.

> ನಾವು ಗುಲಾಮಗಿರಿ ರೂಢಿಸಿಕೊಳ್ಳಬಾರದು. ಶಿಕ್ಷಣ, ಜ್ಞಾನ, ಸ್ವಾಭಿಮಾನ ನಮ್ಮ ಗುರಿಯಾಗಬೇಕು. ಸಂಗೊಳ್ಳಿ ರಾಯಣ್ಣ ಅವರ ಆದರ್ಶ, ಸ್ವಾಭಿಮಾನಗಳು ಎಲ್ಲರಿಗೂ ದಾರಿದೀಪವಾಗಬೇಕು.
> -ಸಿದ್ದರಾಮಯ್ಯ ಸಿಎಂ

ಗಿಲ್ಲಿ ಗೆಲುವಿಗೆ ಅಮೆರಿಕದಲ್ಲಿ ಸಂಭ್ರಮ

ಬೆಂಗಳೂರು: ಬಿಗ್‌ಬಾಸ್ ವಿನ್ನರ್ ಗಿಲ್ಲಿ ನಟ ಗೆಲುವಿಗೆ ಕರ್ನಾಟಕ ಮಾತ್ರವಲ್ಲದೇ ಅಮೆರಿಕದಲ್ಲಿಯೂ ಸಂಭ್ರಮಾಚರಣೆ ನಡೆಸಲಾಗಿದೆ.

ಅಮೆರಿಕದ ನ್ಯೂಯಾರ್ಕ್ ರಾಜಧಾನಿ ಅಲ್ಬನಿಯಲ್ಲಿ ಬಿಗ್ ಬಾಸ್ 12ನೇ ಆವೃತ್ತಿಯನ್ನು ದಾಖಲೆಯ ಅಂತರದಲ್ಲಿ ಗೆಲುವು ಸಾಧಿಸಿದ ಗಿಲ್ಲಿಯ ಗೆಲುವನ್ನು ಸಂಭ್ರಮಿಸಿದರು. ಈ ಬಗ್ಗೆ ಮಾತನಾಡಿರುವ ಅಮೆರಿಕ ನಿವಾಸಿ ಬೆಂಕಿ ಬಸಣ್ಣ, ಕನ್ನಡದ ಅತಿದೊಡ್ಡ ರಿಯಾಲಿಟಿ ಶೋ ಬಿಗ್‌ಬಾಸ್ 12 ಮುಕ್ತಾಯಗೊಂಡಿದ್ದು, ಸಕಲಕಲಾವಲ್ಲಭ, ಹಳ್ಳಿ ಹುಡುಗ ಗಿಲ್ಲಿಗೆ ಭಾರತದಲ್ಲಿ ಮಾತ್ರವಲ್ಲ ಅಮೆರಿಕದಲ್ಲಿಯೂ ಸಹ ಬಹಳಷ್ಟು ಅಭಿಮಾನಿಗಳ ವರ್ಗವಿದೆ, ಫ್ಯಾನ್ ಬೇಸ್ ಇದೆ. ಬಿಗ್ ಬಾಸ್ ಸೀಸನ್12 ಕ್ರೇಜ್ ಅಮೆರಿಕದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ತುಂಬಾ ಜಾಸ್ತಿ ಇತ್ತು. ಇದಕ್ಕೆ ಮುಖ್ಯ ಕಾರಣ ಗಿಲ್ಲಿ. ಪ್ರತಿಬಾರಿ ಬಿಗ್‌ಬಾಸ್‌ನಿಂದಾಗಿ ಸ್ಪರ್ಧಿಗಳು ಪ್ರಸಿದ್ಧಿಯಾಗುತ್ತಿದ್ದರು. ಆದರೆ ಈ ಬಾರಿ ಗಿಲ್ಲಿಯಿಂದ ಬಿಗ್ ಬಾಸ್ ಶೋ ಗೆಲುವು ಸಾಧಿಸಿದೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮನು, ನಮ್ಮ ಮಕ್ಕಳಾದ ದಿಯಾ ಮತ್ತು ವಿಹಾನ್‌ಗೆ ಗಿಲ್ಲಿ ಕಂಡರೆ ಬಹಳ ಇಷ್ಟ. ಅವನ ಡೈಲಾಗ್‌ಗಳನ್ನು ಹೇಳುತ್ತಾರೆ. ಅವನ ಡಾನ್ಸ್ ಮಾಡುತ್ತಾರೆ ಎಂದು ಸಂತೋಷ ವ್ಯಕ್ತಪಡಿಸಿದರು. ಅಭಿಷೇಕ್ ಮಾತನಾಡಿ, ಎರಡನೇ ಸ್ಥಾನವನ್ನು ಮುಗ್ಧ ಮನಸ್ಸಿನ, ಒಳ್ಳೆ ಹೃದಯದ, ಸಾಮಾನ್ಯ ಕುಟುಂಬದ ಹುಡುಗಿ ರಕ್ಷಿತಾ ಗೆದ್ದದ್ದು ತುಂಬಾ ಖುಷಿಯಾಗಿದೆ. ಗಿಲ್ಲಿ ಮತ್ತು ರಕ್ಷಿತಾ ಇಬ್ಬರೂ ಹಳ್ಳಿ ಮೂಲದಿಂದ ಬಂದು ತಮ್ಮ ಸ್ವಪ್ರತಿಭೆಯಿಂದ ಇಷ್ಟು ದೊಡ್ಡ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಇದಕ್ಕೆ ನಮ್ಮ ಕನ್ನಡ ಜನತೆಯ ಬೆಂಬಲವೇ ಕಾರಣ ಎಂದರು. ಈ ಸಂಭ್ರಮಾಚರಣೆಯನ್ನು ಆಲ್ಬನಿ ಕನ್ನಡ ಸಂಘದಲ್ಲಿ ಭಾನುವಾರ ಕರೋಕೆ ನೈಟ್ ಆಯೋಜಿಸಿ, ಎಲ್ಲಾ ಸದಸ್ಯರು ಹಾಡಿ ಕುಣಿದು ಕುಪ್ಪಳಿಸಿದರು.



ಅಮೆರಿಕ ದೇಶದ ನ್ಯೂಯಾರ್ಕ್ ರಾಜಧಾನಿ ಅಲ್ಬನಿಯಲ್ಲಿ ಕನ್ನಡಿಗರು ಬಿಗ್ ಬಾಸ್ ಸೀಸನ್ 12ನಲ್ಲಿ ಗೆದ್ದ ಗಿಲ್ಲಿಯ ವಿಜಯವನ್ನು ಸಂಭ್ರಮಿಸಿದರು.

ಹುಣಸೂರಿನ ಚಿನ್ನದಂಗಡಿ ದರೋಡೆ | ಬಿಹಾರದಲ್ಲಿ ಇಬ್ಬರ ಸೆರೆ

8 ಕೆಜಿ ಚಿನ್ನ ದರೋಡೆ ಆರೋಪಿಗಳ ಬಂಧನ

ಮೈಸೂರು: ಹುಣಸೂರಿನ ಚಿನ್ನದಂಗಡಿ ದರೋಡೆ ಪ್ರಕರ ಸಂಬಂಧ ಮೈಸೂರು ಪೊಲೀಸರು ಬಿಹಾರದಲ್ಲಿ ಇಬ್ಬರ ಹೆಡೆಮುರಿ ಕಟ್ಟಿದ್ದಾರೆ. ಮಾತ್ರವಲ್ಲ, ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಇನ್ನೂ ಹತ್ತಕ್ಕೂ ಹೆಚ್ಚಕ್ಕೂ ಮಂದಿಯ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಮೈಸೂರು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿ.28ರಂದು ಹುಣಸೂರಿನ 5 ಮಂದಿ ಮುಸುಕುಧಾರಿಗಳು ಮಾರಕಾಸ್ತ್ರಗಳನ್ನು ಹಿಡಿದು ಬಂದು 8 ಕೆಜಿ ತೂಕದ 10 ಕೋಟಿ ಮೌಲ್ಯದ ಚಿನ್ನಾಭರಣ ದೋಚಿದ್ದು, ದರೋಡೆ ಪ್ರಕರಣ ದಾಖಲಾಗಿತ್ತು.

ಯಾರೂ ಮೊಬೈಲ್ ಬಳಸದ ಹಿನ್ನೆಲೆಯಲ್ಲಿ ದರೋಡೆ ಪ್ರಕರಣ ಬೇಧಿಸಲು ಕಷ್ಟವಾಗಿತ್ತು. ಬಿಹಾರ ಸೇರಿ ಇತರೆ ರಾಜ್ಯಗಳಲ್ಲಿ ಎರಡು ವಾರದಿಂದ ಶೋಧ ಕಾರ್ಯ ನಡೆಸಿದ್ದೆವು. ಈ ವೇಳೆ ಅಲ್ಲಿಯ ಪೊಲೀಸರ ಸಹಾಯದಿಂದ ಇಬ್ಬರು ಆರೋಪಿಗಳನ್ನು ಬಂಧಿಸಿದ್ದೇವೆ. ದೆಹಲಿ ಜೇತ್ ಪುರ್ ಜಿಲ್ಲೆಯ ಹರಿನಗರ ಬಡಾವಣೆಯ ರಿಷಿಕೇಶ್ ಕುಮಾರ್ ಸಿಂಗ್(ವಿಜಯಕುಮಾರ್ ಸಿಂಗ್) ಹಾಗೂ ಬಿಹಾರದ ಬಾಗಲ್ ಪುರ ಜಿಲ್ಲೆಯ ಪಂಕಜ್ ಕುಮಾರ್ (ರಾಮನಾಥ್ ಪ್ರಸಾದ್ ಸಿಂಗ್) ಎಂಬುವವರನ್ನು ವಶಕ್ಕೆ ಪಡೆದಿದ್ದೇವೆ ಎಂದರು. ಬಂಧಿತರಿಂದ 92 ಸಾವಿರ ನಗದು ಹಾಗೂ 12.5 ಗ್ರಾಂ ಚಿನ್ನ, ಒಂದು ಬುಲೆಟ್ ಬೈಕ್ ವಶ ಪಡಿಸಿಕೊಂಡಿದ್ದೇವೆ ಎಂದು ಹೇಳಿದರು.

ಕೊಲೆ ಪ್ರಕರಣಗಳಲ್ಲಿ ಪಂಕಜ್ ಆರೋಪಿ

ಬಂಧಿತರಲ್ಲಿ ಪಂಕಜ್ ಸಿಂಗ್ ಹಿಂದೆಯೂ 27 ಕೊಲೆ, ಕಳವು ಪ್ರಕರಣಗಳಲ್ಲಿ ಭಾಗಯಾಗಿದ್ದನು. ಚೋಟು ಸಿಂಗ್ 4 ಪ್ರಕರಣದಲ್ಲಿ ಆರೋಪಿಯಾಗಿದ್ದಾನೆ. ಇವರೂ ಕಳ್ಳತನವನ್ನೇ ಗುರಿಯಾಗಿಸಿಕೊಂಡಿದ್ದು, ಕಳವಿಗೆ ಸೂಕ್ತ ಜಾಗ ನೋಡುತ್ತಾರೆ. ಈ ಘಟನೆಗೂ ಮುನ್ನ ಹಾಸನ, ತುಮಕೂರು, ಕೊಡಗಿನಲ್ಲಿಯೂ ಹೊಂಚು ಹಾಕಿದ್ದರು. ಅಂತಿಮವಾಗಿ ಹುಣಸೂರು ಅಂಗಡಿ ಆಯ್ಕೆ ಮಾಡಿಕೊಂಡರು. ಯಾವ ಕಾರಣಕ್ಕೆ ಆ ಅಂಗಡಿ ಆಯ್ಕೆ ಮಾಡಿಕೊಂಡರು ಎಂಬಿತ್ಯಾದಿ ಅಂಶ ಪೂರ್ಣ ತನಿಖೆಯಿಂದಷ್ಟೇ ಹೊರಬರಬೇಕಿದೆ ಎಂದು ಎಸ್‌ಪಿ ಹೇಳಿದರು.

ಶಾಸಕ ಹರೀಶ್ ವಿರುದ್ಧದ ಕೇಸ್ ರದ್ದತಿಗೆ ಆಗ್ರಹ

ದಾವಣಗೆರೆ: ಹರಿಹರ ಬಿಜೆಪಿ ಶಾಸಕ ಬಿ.ಪಿ. ಹರೀಶ್ ವಿರುದ್ಧ ಸುಳ್ಳು ಜಾತಿ ನಿಂದನೆ ಪ್ರಕರಣ ದಾಖಲಿಸಲಾಗಿದೆ ಎಂದು ಆರೋಪಿಸಿ ಸೋಮವಾರ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಗ್ರಾಮಾಂತರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಪ್ರಕರಣವನ್ನು ಕೂಡಲೇ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ನಗರದ ಕೆಇಬಿ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಮೆರವಣಿಗೆ ಹೊರಟರು. ಹದಡಿ ರಸ್ತೆ, ವಿದ್ಯಾರ್ಥಿ ಭವನ ವೃತ್ತದ ಮೂಲಕ ಗ್ರಾಮಾಂತರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದರು. ಠಾಣೆಗೆ ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ತಡೆದರು.

ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ ನೇತೃತ್ವದಲ್ಲಿ ಠಾಣೆಗೆ ತೆರಳಿದ ಬಿಜೆಪಿ ನಿಯೋಗ ಪ್ರಕರಣ ರದ್ದುಪಡಿಸಲು ಒತ್ತಾಯಿಸಿತು. ಶಾಸಕರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಲು ಸಾಕ್ಷ್ಯ ಏನಿದೆ ಎಂದು ಮುಖಂಡರು ಪ್ರಶ್ನಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಸ್ಥಳಕ್ಕೆ ಬರಬೇಕು ಎಂದು ಆಗ್ರಹಿಸಿದರು.

ಆಸ್ಪತ್ರೆಗೆ ಮಂಜೂರಾಗಿದ್ದ ಜಾಗ ಒತ್ತುವರಿ ತೆರವು

ಮೈಸೂರು: ಸಿಎಂ ಸ್ವಕ್ಷೇತ್ರದಲ್ಲಿ ಮಹಿಳಾ ಅಧಿಕಾರಿಗೆ ವ್ಯಕ್ತಿಯೊಬ್ಬ ಧಮ್ಕಿ ಹಾಕಿದ್ದ ಪ್ರಕರಣದಲ್ಲಿ ಸ್ಥಳಕ್ಕೆ ಮೈಸೂರು ತಾಲೂಕು ತಹಸೀಲ್ದಾರ್ ಮಹೇಶ್ ಭೇಟಿ ನೀಡಿ ಪರಿಶೀಲಿಸಿದ್ದು, ಒತ್ತುವರಿಯಾಗಿದ್ದ 20 ಎಕರೆ ಸರಕಾರಿ ಜಾಗವನ್ನು ವಶಕ್ಕೆ ಪಡೆದಿದ್ದಾರೆ. ಇದೇ ಜಾಗದಲ್ಲಿ ಸಿಎಂ ಕನಸಿನ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣವಾಗಲಿದೆ. 2025ರ ಡಿ.31 ರಂದು ಗುಡಮಾದನ ಹಳ್ಳಿಯಲ್ಲಿರುವ ಒತ್ತುವರಿ ಜಾಗ ವೀಕ್ಷಣೆಗೆ ಗ್ರಾಮ ಆಡಳಿತ ಮಹಿಳಾ ಅಧಿಕಾರಿ ಜಿ.ಭವ್ಯ ಹಾಗೂ ಗ್ರಾಮ ಸಹಾಯಕ ನವೀನ್ ತೆರಳಿದ್ದರು. ಈ ವೇಳೆ ಜಿ.ಎಂ ಪುಟ್ಟಸ್ವಾಮಿ ಎಂಬ ವ್ಯಕ್ತಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಧಮ್ಕಿ ಹಾಕಿದ್ದ.

ಚಿಕ್ಕಬಳ್ಳಾಪುರ ಅಭಿವೃದ್ಧಿಗೆ ಒತ್ತು | ಹತ್ತಾರು ಸುಧಾರಣೆಗಳನ್ನು ತಂದು ಮಾದರಿ | ನಮಸ್ತೆ ಚಿಕ್ಕಬಳ್ಳಾಪುರ ಯಶಸ್ವಿ

ಆಡಳಿತದಲ್ಲಿ ಪ್ರದೀಪ್ ಈಶ್ವರ್ ಪರಿಣಾಮಕಾರಿ ಹೆಜ್ಜೆ

ಚಿಕ್ಕಬಳ್ಳಾಪುರ: ಯುವ ಶಾಸಕ ಪ್ರದೀಪ್ ಈಶ್ವರ್ ಅವರು ಶಾಸಕರಾದ ಮೊದಲ ದಿನದಿಂದಲೇ ಚಿಕ್ಕಬಳ್ಳಾಪುರ ಕ್ಷೇತ್ರದ ಅಭಿವೃದ್ಧಿ, ಪಕ್ಷ ಸಂಘಟನೆಗೆ ಒತ್ತು ನೀಡಿದ್ದಾರೆ. ಮನೆ ಮನೆಗೆ ತೆರಳಿ ಜನರ ಸಮಸ್ಯೆಯನ್ನು ಕೇಳುವ ಮೂಲಕ ಪರಿಣಾಮಕಾರಿ ಆಡಳಿತಕ್ಕೆ ಮುನ್ನುಡಿ ಬರೆದಿದ್ದಾರೆ. ಪಾರದರ್ಶಕ ಮತ್ತು ಜನಪರ ಆಡಳಿತದತ್ತ ದೃಢ ಹೆಜ್ಜೆಯನಿಟ್ಟಿರುವ ಪ್ರದೀಪ್ ಈಶ್ವರ್ ಅವರು ಚಿಕ್ಕಬಳ್ಳಾಪುರ ಅಭಿವೃದ್ಧಿಯತ್ತ ಸಾಗಲು ಶ್ರಮಿಸುತ್ತಿದ್ದಾರೆ.

ಸ್ಮಶಾನ ಘೋಷಣೆ: ಸ್ವಾತಂತ್ರ್ಯ ಬಂದಾಗಿನಿಂದಲೂ ತಮ್ಮ ಹುಟ್ಟೂರಿನ ದಲಿತರಿಗೆ ಸ್ಮಶಾನಕ್ಕೆ ಭೂಮಿಯೇ ಇರಲಿಲ್ಲ. ಇದನ್ನು ಮನಗಂಡಿದ್ದ ಪ್ರದೀಪ್ ಪೆರೇಸಂದ್ರ ಗ್ರಾಮದ ದಲಿತರ ಸ್ಮಶಾನಕ್ಕೆ ಭೂಮಿ ಮಂಜೂರು ಮಾಡಿಸಿ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ.

30 ಶೌಚಾಲಯ ನಿರ್ಮಾಣ: ಮಂಡಿಕಲ್ ಹೋಬಳಿ ಗುಂಡ್ಲುಮಡಿಕಲ್ ದಲಿತ ಕಾಲೋನಿಗೆ ಭೇಟಿ ನೀಡಿದ್ದ ವೇಳೆ ಗ್ರಾಮಸ್ಥರು ಬಯಲು ಶೌಚಾಲಯಕ್ಕೆ ಹೋಗುತ್ತಿರುವುದು ಮನಗಂಡು ಮಮ್ಮಲ ಮರುಗಿದ್ದ ಶಾಸಕರು ಕೂಡಲೇ ಇಒ ಮತ್ತು ಪಿಡಿಒ ಗಮನಕ್ಕೆ ತಂದು ಶೌಚಾಲಯ ನಿರ್ಮಾಣಕ್ಕೆ ಸ್ಥಳದಲ್ಲಿಯೇ ಕಾರ್ಯಾದೇಶ ನೀಡಿದ್ದರು. ಬಂಡೆಗಳ ಮೇಲೆ ಬೃಹತ್ ಕಟ್ಟಡ, ಬಂಗಲೆ ನಿರ್ಮಿಸುವ ಕಾಲದಲ್ಲಿ ಶೌಚಾಲಯ ನಿರ್ಮಾಣ ಯಾಕೆ ಸಾಧ್ಯವಿಲ್ಲ, ಇದನ್ನು ಕೂಡಲೇ ಮಾಡಬೇಕು ಎಂದು ಗುಡುಗಿದರು. ಪರಿಣಾಮ ಬಂಡೆಮೇಲೆ ಸುಮಾರು 30 ಶೌಚಾಲಯ ನಿರ್ಮಾಣ ಮಾಡಲಾಗಿದ್ದು, ಶೀಘ್ರದಲ್ಲಿಯೇ ಉದ್ಘಾಟನೆ ನೆರವೇರಲಿದೆ.

ಹಲವು ಗ್ರಾಮಗಳಿಗೆ ರಸ್ತೆ: 2 ದಶಕಗಳಿಗೆ ಹೆಚ್ಚುಕಾಲದಿಂದ ಅಭಿವೃದ್ಧಿ ಕಾಣದಿದ್ದ ಮುಷ್ಟೂರು ರಸ್ತೆಯ ಕಾಮಗಾರಿಗೆ ಮುಕ್ತಿಕಾಣಿಸಿದ ಶ್ರೇಯ ಶಾಸಕರಿಗೆ ಸಲ್ಲುತ್ತದೆ. ಕಾಮಗಾರಿ ಪ್ರಾರಂಭವಾಗಿ ಶೇ.70ರಷ್ಟು ಕೆಲಸ ಮುಗಿದಿದ್ದು, ಶೀಘ್ರದಲ್ಲಿಯೇ ಲೋಕಾರ್ಪಣೆ ಆಗಲಿದೆ.

15 ವರ್ಷಗಳಿಂದ ಅವ್ಯವಸ್ಥೆಯಿಂದ ಕೂಡಿದ್ದ ಜಡಲತಿಮ್ಮನಹಳ್ಳಿ ರಸ್ತೆಯನ್ನು ಅಂತಾರಾಷ್ಟ್ರೀಯ ಗುಣಮಟ್ಟದ ಸಿಸಿ ರಸ್ತೆಯನ್ನಾಗಿ ಪರಿವರ್ತಿಸಿ ಲೋಕಾರ್ಪಣೆ ಮಾಡಿ ಜನತೆಯ ಮೆಚ್ಚಿಗೆಗೆ ಪಾತ್ರವಾದರು. ಹಾಳಾಗಿದ್ದ ದಿನ್ನೆ ಹೊಸಹಳ್ಳಿ ರಸ್ತೆಯು ಈಶಾಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳಲ್ಲಿ ಒಂದಾಗಿತ್ತು. ಆಳುದ್ದದ ಹಳ್ಳ ಗುಂಡಿಗಳಿಂದ ಹಾಳಾಗಿದ್ದ ಈ ರಸ್ತೆಯಲ್ಲಿ ಸಂಚರಿಸುವ ಸ್ಥಳೀಯರು ಮತ್ತು ಪ್ರವಾಸಿಗರು ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕಿಕೊಂಡೇ ಹೋಗುತ್ತಿದ್ದರು. ಇಂತಹ ರಸ್ತೆಗೆ ಕಾಯಕಲ್ಪ ನೀಡಿ ಅತ್ಯಾಧುನಿಕ ಮತ್ತು ಗುಣಮಟ್ಟದ ಸಿಸಿ ರಸ್ತೆ ನಿರ್ಮಾಣ ಮಾಡಿ ಲೋಕಾರ್ಪಣೆ ಮಾಡಿ ನುಡಿದಂತೆ ನಡೆದ ಶಾಸಕ ಎಂಬ ಮೆಚ್ಚುಗೆ ಗಳಿಸಿದ್ದಾರೆ.

ಕಮಿಷನ್ ದಂಧೆಗೆ ಕಡಿವಾಣ: ಚಿಕ್ಕಬಳ್ಳಾಪುರದ ಹೆಸರನ್ನು ಪುಷ್ಪ ಕೃಷಿಯ ಮೂಲಕ ವಿಶ್ವವಿಖ್ಯಾತಗೊಳಿಸಿರುವ ಪುಷ್ಪ ಕೃಷಿಕರಿಗೆ ನೆರವಾಗಲು ಹೈಟೆಕ್ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೆ ಸರಕಾರದಿಂದ ಭೂಮಿ ಮತ್ತು ಅನುದಾನ ಮಂಜೂರು ಮಾಡಿಸಿರುವ ಶಾಸಕರು ಮಾರುಕಟ್ಟೆಯಲ್ಲಿ ಕಮಿಷನ್ ದಂಧೆಗೆ ಅಂತ್ಯ ಹಾಡಲು ಮುಂದಾಗಿರುವುದು ರೈತರ ಆನಂದಕ್ಕೆ ಕಾರಣವಾಗಿದೆ.

ಪುಷ್ಪ ಕೃಷಿಕರಿಗೆ ಅಭಯ: ನೂರಕ್ಕೆ 10 ರುಪಾಯಿ ಕಮಿಷನ್ ಪಡೆಯುವ ಹೂವಿನ ಮಾರುಕಟ್ಟೆಯ ವೆಂಡರ್‌ದಾರರು, ವ್ಯಾಪಾರಿಗಳು, ರೈತರು ತರುವ ಹೂವಿನ ತೂಕದಲ್ಲಿ ಮೋಸ ಮಾಡುತ್ತಾರೆ. ರೈತರಿಗೆ ಸಾಲ ನೀಡಿ ಅವರನ್ನು ಋಣಮುಕ್ತರಾಗದಂತೆ ನೋಡಿಕೊಂಡು ನಿತ್ಯವೂ ಶೋಷಣೆ ಮಾಡುತ್ತಿದ್ದಾರೆ ಎಂದು ಕೆಲ ರೈತರು ಶಾಸಕರಿಗೆ ದೂರು ನೀಡಿದ್ದಾರೆ ಎನ್ನಲಾಗಿದೆ.

ಇದಕ್ಕೆ ಪ್ರತಿಕ್ರಯಿಸಿರುವ ಶಾಸಕರು, ರೈತರ ಶೋಷಣೆ ಮಾಡುವ ವೆಂಡರ್‌ದಾರರಿಗೆ ಎಚ್ಚರಿಕೆ ನೀಡಿದ್ದು ಶೋಷಣೆ ನಿಲ್ಲಿಸಬೇಕು. ಇಲ್ಲವಾ ದಲ್ಲಿ ನಿಮ್ಮ ವೆಂಡರ್ ಲೈಸೆನ್ಸ್ ವಜಾಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗುವುದು ಎಂದು ಎಚ್ಚರಿಸಿದ್ದಾರೆ.

ಪೆರೇಸಂದ್ರವೆಂಬ ಹಳ್ಳಿಯ ಮಧ್ಯಮವರ್ಗದ ಹಿನ್ನೆಲೆ ಹುಡುಗನೊಬ್ಬ ಕಡುಕಷ್ಟದಲ್ಲಿ ಬೆಳೆದರೂ, ಊರ ಜಂಜಾಟಗಳಲ್ಲೇ ಕಳೆದುಹೋಗಲಿಲ್ಲ. ಬದಲಿಗೆ ಬೆಂಗಳೂರಿಗೆ ಹೋಗಿ ಅಲ್ಲಿ ಉದ್ಯಮ ಸ್ಥಾಪಿಸಿ ಯಶಸ್ವಿಯಾದಂತೆ, 2023ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಆಶ್ಚರ್ಯಕರ ಫಲಿತಾಂಶ ಪಡೆದು ಅಚ್ಚರಿಗೆ ಕಾರಣವಾಗಿದ್ದು ಇಂದಿಗೆ ಇತಿಹಾಸ. ಇದೇ ರೀತಿ ತಮ್ಮದೇ ಆದ ಹೊಸ ರೀತಿಯ ಆಡಳಿತದ ಮೂಲಕ ಪಾರದರ್ಶಕ ಆಡಳಿತಕ್ಕೆ ಹೊಸ ಭಾಷ್ಯ ಬರೆಯುತ್ತಿರುವುದನ್ನು ಜನತೆ ಸಂತೋಷದಿಂದ ಸ್ವಾಗತಿಸಿದ್ದಾರೆ.

ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಲು ಕ್ರಮ

ಎರಡು ದಶಕಗಳಿಗೂ ಹೆಚ್ಚುಕಾಲದಿಂದ ಸರಕಾರಿ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಹಕ್ಕುಪತ್ರಕ್ಕಾಗಿ ಕಾದಿದ್ದ ಸಾಗುವಳಿದಾರ ಪಾಲಿಗೆ ಶಾಸಕ ಪ್ರದೀಪ್ ಈಶ್ವರ್ ಭೂಮಿಯ ಸಂಕಷ್ಟ ಈಡೇರಿಸಿದ ಆಧುನಿಕ ದೇವರಾಜ ಅರಸರಂತೆ ಕಂಡರು ಅತಿಶಯೋಕ್ತಿಯಲ್ಲ. ಇದೇ ಮೊದಲ ಬಾರಿಗೆ ತಾಲೂಕು ಕಚೇರಿಯಲ್ಲಿ ಬಗರ್‌ಹುಕುಂ ಸಾಗುವಳಿ ಸಮಸ್ಯೆ ಪರಿಹರಿಸಲು ಇತ್ತೀಚಿಗೆ ಚಿಕ್ಕಬಳ್ಳಾಪುರ ಮತ್ತು ಮಂಚೇನಹಳ್ಳಿ ತಾಲೂಕು ಕಂದಾಯ ಅಧಿಕಾರಿಗಳ ಸಭೆ ನಡೆಸಿ, ಫಾರಂ 50, 53, 57 ಅರ್ಜಿ ಸಲ್ಲಿಸಿ ಅನುಭವದಲ್ಲಿರುವ ಅರ್ಹ ಫಲಾನುಭವಿಗಳಿಗೆ ಭೂಮಿ ಮಂಜೂರು ಮಾಡ ಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಇದರಂತೆ ಕಸಬಾ ಹೋಬಳಿ-634, ನಂದಿ ಹೋಬಳಿ-1048, ಮಂಡಿಕಲ್-598, ಮಂಚೇನಹಳ್ಳಿ-512 ಮಂದಿ ಫಾರಂ 23ರಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಹಾಗೆ 57ರಲ್ಲಿ ಕಸಬಾ-2909, ನಂದಿ- 3786, ಮಡಿಕಲ್-4819, ಮಂಚೇನಹಳ್ಳಿಯಲ್ಲಿ 2456 ಅರ್ಜಿಗಳು ಸಲ್ಲಿಕೆಯಾಗಿದ್ದು, ಪರಿಶೀಲನೆ ನಡೆಸಿ ಬೇಗ ಇತ್ಯರ್ಥಪಡಿಸಲು ಕಂದಾಯ ಇಲಾಖೆಗೆ ಸೂಚನೆ ನೀಡಿದ್ದಾರೆ.

ನಮಸ್ತೆ ಚಿಕ್ಕಬಳ್ಳಾಪುರ ಗಾಂಧಿ ಕನಸಿಗೆ ಜೀವ

ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮಗಳ ಮೂಲಕ ಈವರೆಗೆ 250 ಕ್ಕೂ ಹೆಚ್ಚು ಹಳ್ಳಿಗಳ ಸಂಚಾರ ಮಾಡಿರುವ ಶಾಸಕ ಪ್ರದೀಪ್ ಈಶ್ವರ್ ಗ್ರಾಮಗಳ ಅಭಿವೃದ್ಧಿಯೇ ಭಾರತದ ನಿಜವಾದ ಅಭಿವೃದ್ಧಿ ಎಂಬ ಮಹಾತ್ಮಾಗಾಂಧಿ ಮಾತಿಗೆ ಜೀವತುಂಬುವಲ್ಲಿ ಸಫಲರಾಗಿದ್ದಾರೆ. ಸೂರ್ಯ ಮೂಡುವ ಮೊದಲೇ ಅಬ್ಬರ ಆಡಂಬರವಿಲ್ಲದೆ ಗ್ರಾಮಗಳ ಅಶ್ವತ್ಥಕಟ್ಟೆ, ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂಗಟ್ಟೆ, ಕೊನೆಗೆ ದೇವಾಲಯದ ಮುಂಭಾಗದ ಜಾಗದಲ್ಲಿ ಚಾಪೆಯ ಮೇಲೆ ಇಡೀ ತಾಲೂಕು ಆಡಳಿತದ ಎಲ್ಲಾ ಅಧಿಕಾರಿಗಳನ್ನು ಕೂರಿಸಿಕೊಂಡು ಗ್ರಾಮದ ಜನರ ಎದುರೇ ಅವರ ಕಷ್ಟಗಳಿಗೆ ಪರಿಹಾರ ಕಲ್ಪಿಸುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ನಮಸ್ತೆ ಚಿಕ್ಕಬಳ್ಳಾಪುರದ ಮೂಲಕ ನಗರ ಪ್ರದೇಶದಲ್ಲಿ ಇದೇ ಮಾದರಿ ಪ್ರಯೋಗಿಸಿ ನಗರವಾಸಿಗಳ ಸಮಸ್ಯೆಗಳಿಗೂ ಸ್ಥಳದಲ್ಲಿಯೇ ಪರಿಹಾರ ದೊರಕಿಸಿಕೊಟ್ಟು ಮಾದರಿಯಾಗಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಚೇಳಿಗೆ ಪಾರುಪತ್ಯ ಕೊಟ್ಟರೆ...!

ವಿಶ್ವದಲ್ಲೇ ಬೃಹತ್ ದ್ವೀಪ ಎನಿಸಿಕೊಂಡಿರುವ 'ಗ್ರೀನ್‌ಲ್ಯಾಂಡ್' ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಣ್ಣು ಹಾಕಿದ್ದಾರೆ. ಸಾಂಸ್ಕೃತಿಕವಾಗಿ ಈ ದ್ವೀಪವು ಡೆನ್ಮಾರ್ಕ್‌ನ ಅಧಿಕಾರ ವ್ಯಾಪ್ತಿಯಲ್ಲಿದ್ದರೂ, ಭೌಗೋಳಿಕವಾಗಿ ಅಮೆರಿಕಕ್ಕೆ ಸನಿಹದಲ್ಲಿರುವುದರಿಂದ, ಭದ್ರತಾ ಹಿತಾಸಕ್ತಿಯ ಕಾರಣದಿಂದ ಅದನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದರಲ್ಲೇ ಶ್ರೇಯವಿದೆ ಎಂದು ಟ್ರಂಪ್ ಭಾವಿಸಿದಂತಿದೆ. ಜತೆಗೆ, ಗ್ರೀನ್‌ಲ್ಯಾಂಡ್‌ನಲ್ಲಿ ವ್ಯಾಪಿಸಿರುವ ಅಪರೂಪದ ಖನಿಜಗಳ ನಿಕ್ಷೇಪವೂ ಟ್ರಂಪ್ ಮಹಾಶಯರ ಕಣ್ಣುಕುಕ್ಕಿದ್ದು, ಅದನ್ನು ತೆಗೆದು ಮಾರಿ ಗಂಟುಮಾಡಿಕೊಳ್ಳುವ ಹುನ್ನಾರವೂ ಈ ಹಪಾಹಪಿಯ ಹಿಂದಿದೆ ಎನ್ನುತ್ತಾರೆ ಬಲ್ಲವರು. ಈ ಗುಪ್ತಸಂಚಿಗೆ ಐರೋಪ್ಯ ಒಕ್ಕೂಟದ ರಾಷ್ಟ್ರಗಳ ಸಹಮತವಿಲ್ಲದ ಕಾರಣ, 'ತಮಗಾಗದ ದೇಶದ ಮೇಲಿನ ಸುಂಕವನ್ನು ಏರಿಸುವ' ಚಾಳಿಗೆ ಟ್ರಂಪ್ ಮತ್ತೊಮ್ಮೆ ಮಣೆ ಹಾಕಿದ್ದಾರೆ ಹಾಗೂ ಈ ಒಕ್ಕೂಟದ 8 ರಾಷ್ಟ್ರಗಳ ಮೇಲೆ ಫೆಬ್ರವರಿ 1ರಿಂದ ಅನ್ವಯವಾಗುವಂತೆ ಈ ಭಾರವನ್ನು ಹೇರಿದ್ದಾರೆ. ಇಷ್ಟು ಸಾಲದೆಂಬಂತೆ, ಇರಾನಿನ ಮೂಲಕ ರಷ್ಯಾ, ಯುರೋಪ್‌ಗೆ ತಲುಪುವ ಭಾರತದ ಚಬಹಾರ್ ಬಂದರು ಯೋಜನೆಗೂ ಅಡ್ಡಿಮಾಡಲು ಹೊರಟಿದೆ ಅಮೆರಿಕ. ಟ್ರಂಪ್‌ರ ಈ ಧೋರಣೆಗಳನ್ನೆಲ್ಲ ನೋಡಿದಾಗ, 'ಚೇಳಿಗೆ ಪಾರುಪತ್ಯ ಕೊಟ್ಟರೆ ಜಾವಕ್ಕೆ ನಾಕು ಸಲ ಕುಟುಕುತ್ತೆ' ಎಂಬ ಮಾತು ನೆನಪಾದರೆ ಅಚ್ಚರಿಯೇನಿಲ್ಲ. ಯಾವುದೇ ರಾಷ್ಟ್ರದ ಮುಖ್ಯಸ್ಥರು ತಂತಮ್ಮ ತಾಯ್ನೆಲದ ರಕ್ಷಣೆಗೆ ಅಗತ್ಯ ಕ್ರಮಗಳಿಗೆ ಮುಂದಾಗುವುದನ್ನು ತಪ್ಪೆನ್ನಲಾಗದು. ಆದರೆ 'ಅಮೆರಿಕದ ಹಿತರಕ್ಷಣೆ' ಎಂಬ ಹಣೆಪಟ್ಟಿಯಡಿ ವಿಶ್ವದ ಮಿಕ್ಕ ರಾಷ್ಟ್ರಗಳನ್ನು ಹುರಿದು ಮುಕ್ಕಲು ಮುಂದಾಗಿರುವ ಟ್ರಂಪ್‌ರ ನಡೆ ಸ್ವೀಕಾರಾರ್ಹವಲ್ಲ. ಅಮೆರಿಕದ ಕಿರುಕುಳಕ್ಕೆ ಒಳಗಾಗಿರುವ ರಾಷ್ಟ್ರಗಳು ಈ ದಬ್ಬಾಳಿಕೆಯನ್ನು ವಿರೋಧಿಸಬೇಕಿದೆ.

ಸೊಂಪಾದಕೀಯ

ಹುಂಜಕ್ಕೆ ನೀಡಿದರು ಮಾಂಜ

ಇದು ಒಂದು ವರ್ಷ ಹಿಂದಿನ ವಿಷಯ. 'ಮೈನೆ ಪ್ಯಾರ್ ಕಿಯಾ' ಚಿತ್ರದ ಹಿಟ್ ಹಾಡು 'ಕಬೂತರ್ ಜಾ ಜಾ..' ಸಿನಿರಸಿಕರಿಗೆ ಇಷ್ಟವೇನೋ ಸರಿ. ಆದರೆ ವೃದ್ಧರೊಬ್ಬರು ವೃದ್ಧರು ಪಾರಿವಾಳದ ಬದಲು 'ಹುಂಜ ಜಾ..ಜಾ..' ಎಂದ ಕಥೆಯಿದು. ಪಾಪ ಹೇಳಿ ಕೇಳಿ ಬೆಳಗ್ಗೆದ್ದು ಕೂಗೋದು, ಜನರನ್ನು ಎಚ್ಚರಿಸೋದು ಹುಂಜದ ಕೆಲಸ. ಆದರೆ ಅದನ್ನು ನಿಯತ್ತಾಗಿ ಮಾಡಿದ್ದಕ್ಕೆ

ವಿಷಯ ಹುಂಜದ ಕುತ್ತಿಗೆಗೆ ಬರುವಂತಾಯಿತು. 'ಲೋಕದ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ' ಎನ್ನುವಂತೆ, ಎಲ್ಲರನ್ನೂ ಎಚ್ಚರಿಸೋದು ಬ್ಯಾಡ, ನಿನ್ ಕೆಲಸ ನೀನು ನೋಡ್ಕೋ ಅಂತ ಹುಂಜದ ಮೇಲೆ ಗರಂ ಆದರು ಈ ಸೀನಿಯರ್ ಸಿಟಿಜನ್. ಪಾಪ, ಈ ಪಾಪದ ಹುಂಜದ ಮೇಲೆ ನಿದ್ದೆಗೆಡಿಸುತ್ತಿರುವ ಆಪಾದನೆ ಹಾಕಿದರು ಅವರು. ಆದರೆ ಈ ಹುಂಜದ್ದೂ ಸ್ವಲ್ಪ ತಪ್ಪಿತ್ತು. ಬೆಳಗಿನ ಜಾವದಲ್ಲಿ ಕೂಗಿ ಎಲ್ಲರನ್ನೂ ಎಚ್ಚರಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲವೇನೋ. ಆದರೆ ತೀರಾ ಮೂರು ಗಂಟೆಯ ನಸುಕಿನಲ್ಲೇ ಎದ್ದು ಕೂಗಿದರೆ ಪಾಪ ಡಿಸ್ಟರ್ಬ್ ಆಗದೇ ಇರುತ್ತದೆಯೇ? ಈ ಹುಂಜ ಪ್ರತಿದಿನ 3ಕ್ಕೆ ಎದ್ದು ವರಾತ ತೆಗೆಯುತ್ತದೆ. ಇದು ಅಷ್ಟು ಬೆಳಗ್ಗೆ ಎದ್ದು ಕೂಗೋದ್ರಿಂದ ನನಗೆ ನಿದ್ದೆ ಬರುತ್ತಿಲ್ಲ, ಅದರ ವಿರುದ್ಧ ಕ್ರಮ ಕೈಗೊಳ್ಳಿ ಅಂತ ಕೇರಳದ ಪತ್ತನಂತಿಟ್ಟ ಜಿಲ್ಲೆಯ ಪಳ್ಳಿಕಲ್ ಗ್ರಾಮದ ವೃದ್ಧರು ದೂರು ದಾಖಲಿಸಿದ್ದರಂತೆ. ಈ ಹುಂಜ 3 ಗಂಟೆಗೆ ಒಂದೇ ಸಮನೆ ಕೂಗಲು ಆರಂಭಿಸುತ್ತದೆ. ಇದರಿಂದ ನೆಮ್ಮದಿಯ ನಿದ್ದೆ ಅನ್ನೋದು ದುಸ್ತರವಾಗಿದೆ, ಮನಸ್ಸಿಗೆ ಕಿರಿಕಿರಿ ಆಗುತ್ತಿದೆ ಎಂದು 'ಹುಂಜ-ಕಿರಿಕಿರಿ ಸಂತ್ರಸ್ತ' ರಾಧಾಕೃಷ್ಣ ಕುರುಪ್ ಅವರು ಅಡೂರು ಕಂದಾಯ ವಿಭಾಗೀಯ ಕಚೇರಿಯಲ್ಲಿ ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳಲು ಆಗ್ರಹಿಸಿದ್ದರಂತೆ. ಆಗ ಅಧಿಕಾರಿಗಳು, ನೆರೆಮನೆಯ ನಿವಾಸಿ ಅನಿಲ್ ಕುಮಾರ್ ಎಂಬುವವರಿಗೆ, ಹುಂಜವನ್ನು ಹದ್ದುಬಸ್ತಿನಲ್ಲಿಡಲು ಆದೇಶ ಮಾಡಿದರಂತೆ. ಅದು ಆಗದಿದ್ದರೆ ಅವರ ಪೌಲ್ಟ್ರಿ ಫಾರ್ಮ್ ಅನ್ನು ಬೇರೆ ಕಡೆ ಸ್ಥಳಾಂತರ ಮಾಡುವಂತೆಯೂ ಸೂಚಿಸಿದರಂತೆ! ಒಟ್ಟಿನಲ್ಲಿ ಲೋಕದ ಜನರನ್ನು ಎಚ್ಚರಿಸುವ ಕೆಲಸ ಮಾಡಿದರೆ ನಿಮಗೆ ಕುತ್ತು ಬಂದು ಅದು ನಿಮ್ಮ ಕುತ್ತಿಗೆಗೇ ಬರುತ್ತದೆ ಅನ್ನೋ ಮಾತು ಈ ಘಟನೆಯಿಂದ ಮತ್ತೆ ಪ್ರೂವ್ ಆದಂತಾಯಿತು..!

ಸಂಪಾದಕರ ಸದ್ಯಶೋಧನೆ

ಆಸ್ಟ್ರೇಲಿಯಾದಲ್ಲಿ ಅರೇಬಿಕ್ ಭಾಷೆ

ಆಸ್ಟ್ರೇಲಿಯಾ ಇಂದು ವಿಶ್ವದ ಅತ್ಯಂತ ವೈವಿಧ್ಯಮಯ ದೇಶಗಳಲ್ಲಿ ಒಂದಾಗಿದೆ. ಇಂಗ್ಲಿಷ್ ಪ್ರಾಬಲ್ಯದ ಈ ನಾಡಿನಲ್ಲಿ ಅರೇಬಿಕ್ ಭಾಷೆ ಮೂರನೇ ಅತಿ ಹೆಚ್ಚು ಮಾತನಾಡುವ ಭಾಷೆಯಾಗಿ ಹೊರಹೊಮ್ಮಿದೆ ಅಂದರೆ ಅನೇಕರಿಗೆ ಅಚ್ಚರಿಯಾಗಬಹುದು. ಆಸ್ಟ್ರೇಲಿಯಾಕ್ಕೆ ಅರೇಬಿಕ್ ಭಾಷಿಕರ ಆಗಮನವು 19ನೇ ಶತಮಾನದ ಅಂತ್ಯದಲ್ಲೇ ಆರಂಭವಾಯಿತು. ಆಗ ಪ್ರಮುಖವಾಗಿ ಸಿರಿಯಾ ಮತ್ತು ಲೆಬನಾನ್‌ನಿಂದ ಜನರು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದಿದ್ದರು. ಇವರನ್ನು 'ಒಟ್ಟೋಮನ್' ಪ್ರಜೆಗಳು ಎಂದು ಕರೆಯಲಾಗುತ್ತಿತ್ತು. ಆದರೆ, 1940ರ ನಂತರ ಈ ಹರಿವು ವೇಗವಾಯಿತು. ಎರಡನೇ ಮಹಾಯುದ್ಧದ ನಂತರ ಆಸ್ಟ್ರೇಲಿಯಾಕ್ಕೆ ಹೆಚ್ಚಿನ ಕಾರ್ಮಿಕರ ಅಗತ್ಯವಿದ್ದಾಗ, ಮಧ್ಯಪ್ರಾಚ್ಯದ ದೇಶಗಳಿಂದ ಅನೇಕರು ಅಲ್ಲಿಗೆ ತೆರಳಿ ನೆಲೆಸಿದರು. ಅರೇಬಿಕ್ ಭಾಷಿಕರ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡಿದ್ದು 1975-1990ರ ಅವಧಿಯಲ್ಲಿ. ಲೆಬನಾನ್‌ನಲ್ಲಿ ಭೀಕರ ಅಂತರ್ಯುದ್ಧ ನಡೆದಾಗ, ಆಸ್ಟ್ರೇಲಿಯಾ ಸರಕಾರವು ಲೆಬನಾನಿನ ನಿರಾಶ್ರಿತರಿಗೆ ವಿಶೇಷ ವಲಸೆ ಸೌಲಭ್ಯಗಳನ್ನು ನೀಡಿತು. ಸಾವಿರಾರು ಕುಟುಂಬಗಳು ಯುದ್ಧ ಪೀಡಿತ ಪ್ರದೇಶಗಳಿಂದ ತಪ್ಪಿಸಿಕೊಂಡು ಸಿಡ್ನಿ ಮತ್ತು ಮೆಲ್ಬೋರ್ನ್ ನಗರಗಳಲ್ಲಿ ನೆಲೆಸಿದವು. ಇಂದು ಆಸ್ಟ್ರೇಲಿಯಾದಲ್ಲಿರುವ ಅರೇಬಿಕ್ ಭಾಷಿಕರಲ್ಲಿ ದೊಡ್ಡ ಪಾಲು ಈ ಲೆಬನಾನಿನ ಹಿನ್ನೆಲೆಯನ್ನು ಹೊಂದಿರುವವರದ್ದಾಗಿದೆ. 2017ರ ಸುಮಾರಿಗೆ ಅರೇಬಿಕ್ ಭಾಷಿಕರ ಸಂಖ್ಯೆ ಶೇ. 1.4ಕ್ಕೆ ಏರಲು ಇತ್ತೀಚಿನ ಮಧ್ಯಪ್ರಾಚ್ಯದ ಬಿಕ್ಕಟ್ಟುಗಳೇ ಕಾರಣ. 2003ರ ನಂತರ ಇರಾಕ್‌ನಲ್ಲಿ ಉಂಟಾದ ಅಸ್ಥಿರತೆಯಿಂದಾಗಿ ಸಾವಿರಾರು ಮಂದಿ ಆಸ್ಟ್ರೇಲಿಯಾಕ್ಕೆ ವಲಸೆ ಬಂದರು. 2015ರಲ್ಲಿ ಸಿರಿಯಾದಲ್ಲಿ ಉಂಟಾದ ಮಾನವೀಯ ಬಿಕ್ಕಟ್ಟಿಗೆ ಸ್ಪಂದಿಸಿದ ಆಸ್ಟ್ರೇಲಿಯಾ, ಹೆಚ್ಚುವರಿಯಾಗಿ 12,000 ಸಿರಿಯನ್ ನಿರಾಶ್ರಿತರಿಗೆ ಆಶ್ರಯ ನೀಡಿತು. ಈ ನಿರಾಶ್ರಿತರು ಹೆಚ್ಚಾಗಿ ಅರೇಬಿಕ್ ಮಾತನಾಡುವವರಾಗಿದ್ದರಿಂದ ಸಹಜವಾಗಿ ಭಾಷಾ ಹರಡುವಿಕೆ ಹೆಚ್ಚಾಯಿತು. ಅರೇಬಿಕ್ ಭಾಷಿಕರು ಆಸ್ಟ್ರೇಲಿಯಾದ್ಯಂತ ಸಮಾನವಾಗಿ ಹರಡಿಲ್ಲ. ಅವರು ಹೆಚ್ಚಾಗಿ ದೊಡ್ಡ ನಗರಗಳಾದ ಸಿಡ್ನಿ (ವಿಶೇಷವಾಗಿ ಬ್ಯಾಂಕ್ಸ್‌ಟೌನ್ ಮತ್ತು ಕೆಂಟರ್ಬರಿ ಪ್ರದೇಶಗಳು) ಮತ್ತು ಮೆಲ್ಬೋರ್ನ್‌ನಲ್ಲಿ ಕೇಂದ್ರೀಕೃತರಾಗಿದ್ದಾರೆ. ಈ ನಗರಗಳಲ್ಲಿ ಅರೇಬಿಕ್ ಭಾಷೆಯ ಪತ್ರಿಕೆಗಳು, ರೇಡಿಯೋ ಕೇಂದ್ರಗಳು ಮತ್ತು ಟಿವಿ ಚಾನೆಲ್‌ಗಳಿವೆ. ಇಂಥ ಸಮುದಾಯದ ಒಳಗಿನ ವ್ಯವಸ್ಥೆಯು ಅರೇಬಿಕ್ ಭಾಷೆಯು ಮುಂದಿನ ಪೀಳಿಗೆಗೂ ಹರಿಯುವಂತೆ ಮಾಡಿದೆ. ಅರೇಬಿಕ್ ಇಲ್ಲಿ ಕೇವಲ ವಲಸಿಗರ ಭಾಷೆಯಾಗಿ ಉಳಿಯದೇ, ವಾಣಿಜ್ಯ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಭಾಗವಾಗಿದೆ. ಕೇವಲ ಯುದ್ಧ ಅಥವಾ ಸಂಘರ್ಷದಿಂದ ಮಾತ್ರವಲ್ಲದೇ, ಆರ್ಥಿಕ ಕಾರಣಗಳಿಗಾಗಿಯೂ ಅರೇಬಿಕ್ ಭಾಷಿಕರು ಬರುತ್ತಿದ್ದಾರೆ. ಈಜಿಪ್ಟ್, ಜೋರ್ಡಾನ್ ಮತ್ತು ಯುಎಇನಂಥ ದೇಶಗಳಿಂದ ವೈದ್ಯರು, ಎಂಜಿನಿಯರ್‌ಗಳು ಮತ್ತು ತಂತ್ರಜ್ಞರು ಆಸ್ಟ್ರೇಲಿಯಾಕ್ಕೆ ವಲಸೆ ಹೋಗುತ್ತಿದ್ದಾರೆ. ಅಲ್ಲದೇ, ಗಲ್ಫ್ ರಾಷ್ಟ್ರಗಳ ಶ್ರೀಮಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಆಸ್ಟ್ರೇಲಿಯಾದ ವಿಶ್ವವಿದ್ಯಾಲಯಗಳನ್ನು ಆರಿಸಿಕೊಳ್ಳುತ್ತಿದ್ದಾರೆ. ಇದು ಅರೇಬಿಕ್ ಭಾಷೆಗೆ ಒಂದು ವೃತ್ತಿಪರ ಆಯಾಮವನ್ನೂ ನೀಡಿದೆ. ಭಾಷಾ ನಕ್ಷೆಗಳು ಸಾಮಾನ್ಯವಾಗಿ ಇಂಗ್ಲಿಷ್ ಅನ್ನು ಮೊದಲ ಸ್ಥಾನದಲ್ಲಿ ತೋರಿಸುತ್ತವೆ. ಆದರೆ ಎರಡನೇ ಮತ್ತು ಮೂರನೇ ಸ್ಥಾನಗಳನ್ನು ಗಮನಿಸಿದಾಗ ಮಾತ್ರ ದೇಶದ ನಿಜವಾದ ಮುಖ ಕಾಣಿಸುತ್ತದೆ. ಮ್ಯಾಂಡರಿನ್ ಚೈನೀಸ್ ಎರಡನೇ ಸ್ಥಾನದಲ್ಲಿದೆ. ಅರೇಬಿಕ್ ಮೂರನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾದ ಜನಗಣತಿ ವರದಿಗಳ ಪ್ರಕಾರ, ಮನೆಯಲ್ಲಿ ಇಂಗ್ಲಿಷ್ ಹೊರತುಪಡಿಸಿ ಬೇರೆ ಭಾಷೆ ಮಾತನಾಡುವವರ ಪ್ರಮಾಣ ಶೇ.20ಕ್ಕಿಂತ ಹೆಚ್ಚಿದೆ. ಇದರಲ್ಲಿ ಅರೇಬಿಕ್ ಪ್ರಮುಖ ಪಾತ್ರ ವಹಿಸುತ್ತಿದೆ. ಯಾವುದೇ ದೇಶದಲ್ಲಿ ಒಂದು ಹೊಸ ಭಾಷೆ ಬೆಳೆದಾಗ ಅಲ್ಲಿ ಸಾಂಸ್ಕೃತಿಕ ಬದಲಾವಣೆಗಳಾಗುತ್ತವೆ. ಆಸ್ಟ್ರೇಲಿಯಾದ ಆಹಾರ ಪದ್ಧತಿ (ಉದಾಹರಣೆಗೆ ಹಮ್ಮಸ್, ಫಲಾಫೆಲ್ ಜನಪ್ರಿಯತೆ), ಸಂಗೀತ ಮತ್ತು ಕಲೆಯ ಮೇಲೆ ಅರೇಬಿಕ್ ಸಂಸ್ಕೃತಿಯು ಪ್ರಭಾವ ಬೀರಿದೆ. ಆದರೆ, ಇದು ಸಾಮಾಜಿಕ ಸವಾಲುಗಳನ್ನೂ ತಂದಿದೆ. ಭಾಷಾ ಅಂತರದಿಂದಾಗಿ ಉದ್ಯೋಗ ಮಾರುಕಟ್ಟೆಯಲ್ಲಿ ನಿರಾಶ್ರಿತರು ಎದುರಿಸುವ ಸಮಸ್ಯೆಗಳನ್ನು ನಿವಾರಿಸಲು ಸರಕಾರವು ಈಗ ಅರೇಬಿಕ್ ಭಾಷಾಂತರಕಾರರನ್ನು ಮತ್ತು ವಿಶೇಷ ಶಿಕ್ಷಣ ಯೋಜನೆಗಳನ್ನು ಹಮ್ಮಿಕೊಂಡಿದೆ. ಭಾರತದಲ್ಲಿ ಇಂಗ್ಲಿಷ್ ಅಧಿಕೃತ ಭಾಷೆಯಾಗಿದ್ದರೂ, ಅದನ್ನು ಮಾತೃಭಾಷೆಯಾಗಿ ಪಟ್ಟಿ ಮಾಡದಿರುವುದು ಅದರ ವ್ಯಾಪ್ತಿಯನ್ನು ಕಡಿಮೆ ಅಂದಾಜಿಸಿದಂತೆ.

ರಾಗಾ ಅಂತರದ ಹಿಂದಿರುವ ಲೆಕ್ಕಾಚಾರವೇನು?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ಯಾವುದೇ ಸರಕಾರವು ಸುಭದ್ರ ಎನಿಸಿಕೊಳ್ಳಬೇಕೆಂದರೆ ಶಾಸಕರ ಸಂಖ್ಯಾಬಲವೆಷ್ಟು ಮುಖ್ಯವೋ, ಪಕ್ಷದೊಳಗಿನ ವಾತಾವರಣವೂ ಅಷ್ಟೇ ಮುಖ್ಯವಾಗುತ್ತದೆ. ಆಂತರಿಕ ಕಿತ್ತಾಟ ಶುರುವಾದರೆ ಸುಭದ್ರ ಸರಕಾರ ಅಥವಾ ಜನಪರ ಸರಕಾರವಾಗಿ ಹೊರಹೊಮ್ಮುವುದು ತೀರಾ ಕಷ್ಟ. ಭಾರಿ ಬಹುಮತಕ್ಕಿಂತ ಸರಳ ಬಹುಮತವಿದ್ದರೂ, ಪಕ್ಷದೊಳಗೆ ಎಲ್ಲವೂ 'ಸರಿಯಾಗಿದ್ದರೆ' ಸುಗಮ ಸರಕಾರ ಸಾಧ್ಯ ಎನ್ನುವುದಕ್ಕೆ ಹತ್ತಾರು ಉದಾಹರಣೆಗಳಿವೆ.

ಉದಾಹರಣೆಗೆ 2013-18ರವರೆಗೆ ಕರ್ನಾಟಕದಲ್ಲಿದ್ದ ಕಾಂಗ್ರೆಸ್ ಸರಕಾರದಲ್ಲಿ ಈಗಿರುವಷ್ಟು ಶಾಸಕರ ಸಂಖ್ಯಾಬಲವಿರಲಿಲ್ಲ. ಆದರೆ ಅಂದು ಪಕ್ಷದಲ್ಲಿ ಯಾವುದೇ ಆಂತರಿಕ ಸಂಘರ್ಷವಿಲ್ಲದಿದ್ದುದರಿಂದ ಐದು ವರ್ಷಗಳ ಕಾಲ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸುವುದಷ್ಟೇ ಅಲ್ಲದೇ, ಹತ್ತಾರು ಜನಪರ ಯೋಜನೆಗಳನ್ನು ನೀಡಿದರು. ಆದರೆ ಅದಾದ ಬಳಿಕ ಬಂದ ಸಮ್ಮಿಶ್ರ ಸರಕಾರ, ಆಪರೇಷನ್ ಕಮಲದ ಮೂಲಕ ಅಧಿಕಾರದ ಗದ್ದುಗೆ ಏರಿದ ಬಿಜೆಪಿ ಸರಕಾರ ತಮ್ಮ ಆಡಳಿತಾವಧಿಯಲ್ಲಿ ಅಭಿವೃದ್ಧಿ ಯೋಜನೆ, ಸರಕಾರದ ಘೋಷಣೆಗಳಿಗಿಂತ ರಾಜಕೀಯ ಕಾರಣಕ್ಕೆ ಹೆಚ್ಚು ಸದ್ದು ಮಾಡಿದ್ದವು ಎನ್ನುವುದು ವಾಸ್ತವ.

ಸಮ್ಮಿಶ್ರ ಸರಕಾರ ಹಾಗೂ ಬಿಜೆಪಿ ಸರಕಾರದಲ್ಲಿದ್ದ ಗೊಂದಲಗಳಿಗೆ ರೋಸಿಯೇ, 2023ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭರ್ಜರಿ ಬಹುಮತ ನೀಡಿದ್ದರು ಮತದಾರರು. ಆದರೆ ಸರಕಾರವು ಎರಡೂವರೆ ವರ್ಷ ಪೂರೈಸಿದ ದಿನದಿಂದ ಕರ್ನಾಟಕ ಕಾಂಗ್ರೆಸ್‌ನಲ್ಲಿ ಶುರುವಾಗಿರುವ ನಾಯಕತ್ವ ಗೊಂದಲಕ್ಕೆ ಈಗಲೂ ಕೊನೆಯಿಲ್ಲವಾಗಿದ್ದು ಅದು 'ನಾಳೆ ಬಾ' ಕಥೆಯಾಗಿದೆ. ಈ ಗೊಂದಲ ಶುರುವಾದ ಆರಂಭದಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಪಕ್ಷದ ಹೈಕಮಾಂಡ್‌ನ ತೀರ್ಮಾನಕ್ಕೆ ಬದ್ಧ' ಎನ್ನುವ ಸ್ಪಷ್ಟನೆ ನೀಡಿದ್ದರೂ, ಗೊಂದಲ ಮುಂದುವರಿಯಲು ಹೈಕಮಾಂಡ್‌ನ ವಿಳಂಬ ಧೋರಣೆಯೇ ಕಾರಣ ಎಂದರೆ ತಪ್ಪಾಗುವುದಿಲ್ಲ.

2023ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಶ್ರಮಿಸಿದ್ದ ಡಿಕೆಶಿ ಹಾಗೂ ಸಿದ್ದರಾಮಯ್ಯ ಇಬ್ಬರೂ ತಮ್ಮ ತಮ್ಮ ವಾದವನ್ನು ಈಗಾಗಲೇ ಮಂಡಿಸಿ ಆಗಿದೆ. ಸಿದ್ದರಾಮಯ್ಯ ಅವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ, 'ಹೈಕಮಾಂಡ್ ಹೇಳುವ ತನಕ ನಾನೇ ಮುಖ್ಯಮಂತ್ರಿ' ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಇಬ್ಬರ ವಾದ, ಇತರೆ ನಾಯಕರಿಂದ ವರದಿ ಪಡೆದುಕೊಂಡಿರುವ ಪಕ್ಷದ ಹೈಕಮಾಂಡ್ ಈ ವಿಷಯದಲ್ಲಿ ವಹಿಸಿರುವ ದಿವ್ಯಮೌನವೇ ಪಕ್ಷದೊಳಗಿನ ಗೊಂದಲವು ದಿನದಿಂದ ದಿನಕ್ಕೆ ದೊಡ್ಡದಾಗಲು ಕಾರಣವಾಗುತ್ತಿದೆ.

ಒಂದೆಡೆ ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಎದುರುಹಾಕಿಕೊಳ್ಳಲಾಗದೇ, ಡಿ.ಕೆ.ಶಿವಕುಮಾರ್ ಅವರನ್ನು ಒಪ್ಪಿಸಲಾಗದೇ ಅಡಕತ್ತರಿಯಲ್ಲಿ ಸಿಲುಕಿರುವ ಹೈಕಮಾಂಡ್ ನಾಯಕರು ಇದೀಗ ಇಡೀ ಪ್ರಹಸನವನ್ನು ರಾಹುಲ್ ಗಾಂಧಿ ಅವರ ತಲೆಮೇಲೆ ಹಾಕಿ ಕೈತೊಳೆದುಕೊಂಡಿದ್ದಾರೆ. ಈ ಹಿಂದೆ ನಾಯಕತ್ವ ಬದಲಾವಣೆಗೆ ಕೈಹಾಕಿ ಹಲವು ರಾಜ್ಯದಲ್ಲಿ ಕೈಸುಟ್ಟುಕೊಂಡಿರುವುದರಿಂದ ಕರ್ನಾಟಕದಲ್ಲಿಯೂ ಅಂಥದೇ ರಿಸ್ಕ್ ತೆಗೆದುಕೊಳ್ಳಲು ರಾಹುಲ್ ಹಿಂದೇಟು ಹಾಕುತ್ತಿದ್ದಾರೆ. ಇನ್ನುಳಿದ ಆರು ತಿಂಗಳಲ್ಲಿ ನೆರೆರಾಜ್ಯ ಕೇರಳ ಸೇರಿ ಪಂಚರಾಜ್ಯದಲ್ಲಿ ಚುನಾವಣೆ ನಡೆಯುತ್ತಿದೆ. ಜತೆಗೆ ಕರ್ನಾಟಕದಲ್ಲಿಯೂ ಸ್ಥಳೀಯ ಸಂಸ್ಥೆ ಚುನಾವಣೆಯಿದೆ. ಹೀಗಿರುವಾಗ, ಅಹಿಂದ ನಾಯಕ ಸಿದ್ದರಾಮಯ್ಯ ಅವರಿಂದ ಸಿಎಂ ಸ್ಥಾನ ಹಿಂಪಡೆದರೆ, ಈ ಐದು ರಾಜ್ಯಗಳ ಚುನಾವಣೆ ಮೇಲೆ ಹೊಡೆತ ಬೀಳುತ್ತದೆ ಎನ್ನುವ ಆತಂಕದಲ್ಲಿದ್ದಾರೆ. ಹಾಗೆಂದು ಡಿ.ಕೆ.ಶಿವಕುಮಾರ್ ಅವರಿಗೆ 'ಸದ್ಯಕ್ಕೆ ನಾಯಕತ್ವ ಬದಲಾವಣೆಯಿಲ್ಲ' ಎನ್ನುವ ಸ್ಪಷ್ಟನೆ ನೀಡಿದರೆ, ಡಿಕೆಶಿ 'ಪರ್ಯಾಯ' ಆಲೋಚನೆ ಮಾಡಬಹುದು ಎನ್ನುವ ಆತಂಕ ರಾಹುಲ್ ಗಾಂಧಿಯವರಿಗಿದೆ. ಆ ಕಾರಣಕ್ಕೆ, ಕರ್ನಾಟಕದ ರಾಜಕೀಯ ವಿಷಯವು ಮುನ್ನೆಲೆಗೆ ಬಂದಾಗಲೆಲ್ಲ ಅವರು 'ಅಂತರ' ಕಾಯ್ದುಕೊಳ್ಳುತ್ತಿದ್ದಾರೆ.

ತಮಿಳುನಾಡಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದ ಡಿ.ಕೆ.ಶಿವಕುಮಾರ್ ನಾಯಕತ್ವ ಬದಲಾವಣೆ ಬಗ್ಗೆ ಸ್ಪಷ್ಟನೆ ಕೇಳಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಪುನಾರಚನೆಗೆ ಮನವಿ ಮಾಡಿದ್ದರು. ಇಬ್ಬರ ಮನವಿಯನ್ನೂ ತಳ್ಳಿಹಾಕಲು ಸಾಧ್ಯವಾಗದೇ 'ಶೀಘ್ರವಾಗಿ ದೆಹಲಿಯಲ್ಲಿ ಭೇಟಿಯಾಗೋಣ' ಎಂದು ಹೇಳಿ ಬೀಸುವ ದೊಣ್ಣೆಯಿಂದ ಪಾರಾಗಿದ್ದರು ರಾಹುಲ್. ಆದರೆ ಡಿಕೆಶಿ ಅಸ್ಸಾಂ ಚುನಾವಣಾ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದ ವೇಳೆ, ಕರ್ನಾಟಕದ ವಿಷಯ ಪ್ರಸ್ತಾಪಿಸಲು ಸಜ್ಜಾಗಿದ್ದರು. ಈ ಕಾರಣಕ್ಕಾಗಿಯೇ ರಾಹುಲ್ ಗಾಂಧಿ ಅವರು ಅಸ್ಸಾಂ ಚುನಾವಣಾ ಸಭೆಯಿಂದಲೂ ಅರ್ಧಕ್ಕೆ ನಿರ್ಗಮಿಸಿದ್ದಾರೆ ಎನ್ನುವ ಮಾತುಗಳೂ ಇವೆ.

ಡಿ.ಕೆ. ಶಿವಕುಮಾರ್ ಈ ತಿಂಗಳಲ್ಲಿಯೇ ಎಲ್ಲವೂ ಇತ್ಯರ್ಥವಾಗಬೇಕು ಎನ್ನುವುದಕ್ಕೆ ಕಾರಣವಿದೆ. ಒಂದು ವೇಳೆ ಸಿದ್ದರಾಮಯ್ಯ ಅವರು ಬಜೆಟ್-ಪೂರ್ವ ಸಭೆಗಳನ್ನು ಆರಂಭಿಸಿದರೆ ಅಲ್ಲಿಗೆ ನಾಯಕತ್ವ ಬದಲಾವಣೆಯ ಮಾತಿಗೆ ಪೂರ್ಣವಿರಾಮ ಬೀಳಲಿದೆ. ಇನ್ನು ಬಜೆಟ್ ಮುಗಿದ ಬಳಿಕ ಕೇರಳ ಚುನಾವಣೆ, ಅದಾದ ಬಳಿಕ ಸ್ಥಳೀಯ ಸಂಸ್ಥೆ ಚುನಾವಣೆ, ನವೆಂಬರ್‌ನಲ್ಲಿ ವಿಧಾನಪರಿಷತ್ ಚುನಾವಣೆಯ ಕಾರಣಕ್ಕೆ ಯಾವುದೇ ಬದಲಾವಣೆ ಮಾಡಲಾಗುವುದಿಲ್ಲ. ಆದ್ದರಿಂದ ಆಗುವುದೇನಿದ್ದರೂ ಈಗಲೇ ಆಗಬೇಕು. ಇಲ್ಲದಿದ್ದರೆ ಇನ್ನೊಂದು ವರ್ಷ ಸಾಧ್ಯವಿಲ್ಲ ಎನ್ನುವುದು ಖಚಿತವಾಗಿದೆ.

ಹಾಗೆ ನೋಡಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರಾಗಲಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಾಗಲೀ ತಮ್ಮ ತಮ್ಮ ರಾಜಕೀಯ ಹಿತಾಸಕ್ತಿಗೆ ತಮ್ಮದೇ ಆದ ತಂತ್ರಗಾರಿಕೆ ಮಾಡುತ್ತಿದ್ದಾರೆ. ಆದರೆ ಇಬ್ಬರು ಬಲಿಷ್ಠ ನಾಯಕರ ನಡುವೆ ನಡೆಯುತ್ತಿರುವ ಈ ಹಗ್ಗಜಗ್ಗಾಟ ಬಹಿರಂಗಗೊಂಡು ತಿಂಗಳು ಕಳೆದರೂ, 'ನೋಡೋಣ, ಮಾಡೋಣ' ಎನ್ನುವ ಮನಸ್ಥಿತಿಗೆ ಹೈಕಮಾಂಡ್ ಜಾರಿರುವುದು ಹಲವು ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗುತ್ತಿದೆ. ಮೊದಲೇ ಹೇಳಿದಂತೆ, ಇಬ್ಬರಲ್ಲಿ ಯಾರಿಗೆ ನೋವಾದರೂ ಅದರ ಹೊಡೆತ ಸುಭದ್ರವಾಗಿರುವ ಸರಕಾರದ ಮೇಲೆ ಬೀಳಲಿದೆ ಎನ್ನುವ ಆತಂಕ ಒಂದೆಡೆಯಾದರೆ, ಕರ್ನಾಟಕದ ಮುಖ್ಯಮಂತ್ರಿ ಹುದ್ದೆಯಲ್ಲಿ ಯಾರಿರಬೇಕೆಂಬ ವಿಷಯದಲ್ಲಿ ಸ್ವತಃ ಹೈಕಮಾಂಡ್ ನಾಯಕರಲ್ಲಿಯೇ ಭಿನ್ನರಾಗವಿದೆ. ಈ ಭಿನ್ನತೆ ಸರಿಹೋಗುವ ತನಕ ಯಾವುದೇ ತೀರ್ಮಾನ ಕೈಗೊಂಡರೂ ಅದು ಅಪಾಯದ ಕೂಪವಾಗಿ ಪರಿಣಮಿಸುವುದು ನಿಶ್ಚಿತ ಎನ್ನುವ ಅರಿವು ರಾಹುಲ್ ಗಾಂಧಿ ಅವರಿಗೆ ಇದೆ. ಇದರೊಂದಿಗೆ ಕಾಂಗ್ರೆಸ್ ಪಾಲಿಗೆ ಉಳಿದಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕ ಪ್ರಮುಖ ರಾಜ್ಯವಾಗಿರುವುದರಿಂದ ಇಲ್ಲಿಯೂ ಅದನ್ನು ಹಾಳುಮಾಡಿಕೊಳ್ಳುವುದು ಬೇಡ ಎನ್ನುವ ಆಲೋಚನೆ ರಾಹುಲ್ ಗಾಂಧಿ ಅವರಿಗೆ ಇದೆ.

ಇದಿಷ್ಟೇ ಅಲ್ಲದೆ, ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ಹುದ್ದೆಯಿಂದ ಕೆಳಗಿಳಿಸಿದರೆ ಆಗಬಹುದಾದ ಅನಾಹುತ, ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬೀಳುವ ಹೊಡೆತ ಹಾಗೂ 2028ರ ವಿಧಾನಸಭಾ ಚುನಾವಣೆಯಲ್ಲಿ ಬದಲಾಗಬಹುದಾದ ರಾಜಕೀಯ ಲೆಕ್ಕಾಚಾರಗಳನ್ನು ಗಮನದಲ್ಲಿರಿಸಿಕೊಂಡೇ ಎಚ್ಚರಿಕೆಯ ಹೆಜ್ಜೆಯಿಡುವ ತೀರ್ಮಾನಕ್ಕೆ ರಾಹುಲ್ ಗಾಂಧಿ ಬಂದಿದ್ದಾರೆ. ಹಾಗೆಂದ ಮಾತ್ರಕ್ಕೆ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ನೀಡಲೇಬಾರದು ಎನ್ನುವ ತೀರ್ಮಾನ ರಾಹುಲ್ ಮನಸ್ಸಿನಲ್ಲಿಲ್ಲ. ಆದರೆ ಸಿದ್ದರಾಮಯ್ಯ ಬಳಿಯಿರುವ ಈ ಹುದ್ದೆಯನ್ನು ಅವರ ವಿರೋಧ ಕಟ್ಟಿಕೊಂಡು ವರ್ಗಾಯಿಸುವ ಪರಿಸ್ಥಿತಿಯಲ್ಲಿ ಹೈಕಮಾಂಡ್ ಇಲ್ಲ. ಈ ಮಾತನ್ನು 'ಕಡ್ಡಿ ಮುರಿದಂತೆ' ಡಿ.ಕೆ.ಶಿವಕುಮಾರ್ ಅವರಿಗೆ ಹೇಳಲು ಸಾಧ್ಯವಾಗದಂಥ ಇಕ್ಕಟ್ಟಿಗೆ ಕಾಂಗ್ರೆಸ್ ಹೈಕಮಾಂಡ್ ಸಿಲುಕಿದೆ. ಈ ಕಾರಣಕ್ಕಾಗಿಯೇ, ಕರ್ನಾಟಕದ ನಾಯಕತ್ವದ ಗೊಂದಲ ಮುನ್ನೆಲೆಗೆ ಬಂದಾಗಲೆಲ್ಲ, ಒಂದಿಲ್ಲೊಂದು ಕಾರಣ ನೀಡಿ ಸಮಯವನ್ನು ಪಡೆಯುವ 'ಸೇಫ್ ಗೇಮ್' ಅನ್ನು ಹೈಕಮಾಂಡ್ ಆಡುತ್ತಿದೆ.

ಇನ್ನು ಮುಖ್ಯಮಂತ್ರಿ ಗಾದಿ ಸಿಗುವುದೋ ಇಲ್ಲವೋ ಎನ್ನುವ ಬಗ್ಗೆ ರಾಹುಲ್ ಗಾಂಧಿ ಅವರೊಂದಿಗೆ ಮಾತನಾಡಿ 'ಸ್ಪಷ್ಟನೆ' ಪಡೆದು ಮುಂದಿನ ಆಲೋಚನೆ ಮಾಡಲು ಡಿ.ಕೆ.ಶಿವಕುಮಾರ್ ಕಳೆದ ನಾಲ್ಕು ತಿಂಗಳಿನಿಂದ ಪ್ರಯತ್ನಿಸುತ್ತಿದ್ದರೂ, ಎಐಸಿಸಿ ಪ್ರಧಾನ ಕಾರ್ಯದರ್ಶಿ, ರಾಹುಲ್ ನಂಬಿಕಸ್ಥ ಕೆ.ಸಿ. ವೇಣುಗೋಪಾಲ್ ಅವರು ಅದಕ್ಕೆ ಪ್ರತಿಬಾರಿಯೂ ಅವಕಾಶ ನೀಡುತ್ತಿಲ್ಲ. ಈ ಕಾರಣಕ್ಕಾಗಿಯೇ ಮೊನ್ನೆ ಮೈಸೂರಿಗೆ ರಾಹುಲ್ ಗಾಂಧಿ ಆಗಮಿಸಿದಾಗ, ಹೆಲಿಕಾಪ್ಟರ್‌ನಿಂದ ವಿಶೇಷ ವಿಮಾನ ಹತ್ತುವ ಸಮಯದಲ್ಲಿ ರನ್‌ವೇನಲ್ಲಿಯೇ ನಿಂತು ಪರಿಹಾರಕ್ಕಾಗಿ 'ಡಿಕೆ' ಅರ್ಜಿ ಸಲ್ಲಿಸಿದ್ದಾರೆ. ಆ ಕ್ಷಣಕ್ಕೆ ಏನು ಹೇಳಬೇಕೆಂದು ತೋಚದೆ 'ವಿಲ್ ಕಾಲ್ ಯೂ ಸೂನ್' ಎಂದು ಹೇಳಿ ವಿಮಾನ ಹತ್ತಿದ್ದಾರೆ ರಾಹುಲ್. ಶೀಘ್ರದಲ್ಲಿಯೇ ದೆಹಲಿಗೆ ಕರೆಸಿಕೊಳ್ಳುವ ಮಾತು ಕೇಳಿದ್ದ ಡಿ.ಕೆ.ಶಿವಕುಮಾರ್ ಹಾಗೂ ಅವರ ಆಪ್ತರಿಗೆ ಇದರಿಂದ ಕೊಂಚ ಮಟ್ಟಿಗೆ ಸಮಾಧಾನವಾಗಿದ್ದರೂ, ಶೀಘ್ರ ಎನ್ನುವುದು ಯಾವಾಗ ಬರಲಿದೆ ಎನ್ನುವ ಸ್ಪಷ್ಟನೆ ಬೇಕಿದೆ. ಈ ಕಾರಣಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ದೆಹಲಿಯಲ್ಲಿನ 'ಆಪ್ತ'ರ ಮೂಲಕ ರಾಹುಲ್ ಗಾಂಧಿ ಭೇಟಿಗೆ ಡಿಕೆಶಿ ಪ್ರಯತ್ನಿಸಿದ್ದಾರೆ. ಯಾವಾಗ ಭೇಟಿಗೆ ಅವಕಾಶ ಸಿಗುವುದಿಲ್ಲ ಎನ್ನುವುದು ಖಚಿತವಾಯಿತೋ, ಆಗ ಮಲ್ಲಿಕಾರ್ಜುನ ಖರ್ಗೆ ಅವರ ಮುಂದೆಯೇ ಹೇಳಬೇಕಾದ ವಿಷಯವನ್ನೆಲ್ಲ ಹೇಳಿ ಸ್ಪಷ್ಟನೆ ಕೊಡಿಸುವಂತೆ ಕೇಳಿದ್ದಾರೆ ಎನ್ನುವುದು ದೆಹಲಿ ಮೂಲಗಳ ಮಾತು. ಡಿ.ಕೆ.ಶಿವಕುಮಾರ್ ಅವರ ಈ ಎಲ್ಲ ಮಾತುಗಳನ್ನು ಸಾವಧಾನವಾಗಿಯೇ ಕೇಳಿಸಿಕೊಂಡ ಖರ್ಗೆಯವರು 'ನಿಮ್ಮೆಲ್ಲ ಮಾತನ್ನು ಗಾಂಧಿ ಕುಟುಂಬಕ್ಕೆ ಮುಟ್ಟಿಸಿ, ಅಲ್ಲಿಂದ ಸಿಗುವ ಉತ್ತರವನ್ನು ನಿಮಗೆ ರವಾನಿಸುವೆ' ಎಂದು ಹೇಳಿ ಕೈತೊಳೆದುಕೊಂಡಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ನಡೆಯುತ್ತಿರುವ ಈ ಕಿತ್ತಾಟದಲ್ಲಿ ಮಧ್ಯಪ್ರವೇಶಿಸಲು ಹೈಕಮಾಂಡ್‌ಗೆ ಇಷ್ಟವಿಲ್ಲ. ಹಾಗೆಂದು, ಈ ಸಮಸ್ಯೆಯನ್ನು ಇಬ್ಬರೂ ಕೂತು ಬಗೆಹರಿಸಿಕೊಳ್ಳುವ ಮನಸ್ಥಿತಿಯೂ ಉಳಿದಿಲ್ಲ. ಆದರೆ ನಾಯಕತ್ವ ವಿಷಯದಲ್ಲಿ ಈ ಗೊಂದಲದಿಂದಾಗಿ, ಕಳೆದ ನಾಲ್ಕು ತಿಂಗಳಿನಿಂದ ರಾಜ್ಯದಲ್ಲಿ 'ನಾಯಕತ್ವ ಗೊಂದಲ' ಹೊರತಾಗಿ ಅಭಿವೃದ್ಧಿ ಪರ ಚರ್ಚೆಗಳು ಬಹುತೇಕ ನಿಂತುಹೋಗಿವೆ. ಪ್ರತಿಪಕ್ಷ ಬಿಜೆಪಿಯ ಪರಿಸ್ಥಿತಿಯೂ ಭಿನ್ನವಾಗಿರದ ಕಾರಣ ರಾಜಕೀಯವಾಗಿ ಈ ಗೊಂದಲ ಸವಾಲಾಗಿ ಕಾಣುತ್ತಿಲ್ಲ. ಆದರೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರೇ ಹೇಳಿದಂತೆ, ಮುಂದಿನ ಆರು ತಿಂಗಳಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸೇರಿದಂತೆ ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆ ಚುನಾವಣೆಗಳು ಎದುರಾಗಲಿವೆ. ಅವುಗಳನ್ನು ಗಮನದಲ್ಲಿರಿಸಿಕೊಂಡು, ಮುಖ್ಯಮಂತ್ರಿ ಬದಲಾವಣೆಯ ವಿಷಯದಲ್ಲಿ ಎದ್ದಿರುವ ಗೊಂದಲದ ಬಗ್ಗೆ 'ಹೌದು' ಅಥವಾ 'ಇಲ್ಲ' ಎನ್ನುವ ಸ್ಪಷ್ಟನೆ ನೀಡುವ ಕೆಲಸವನ್ನು ಹೈಕಮಾಂಡ್ ಮಾಡದೇಹೋದರೆ, ಈ ವಿಷಯವೇ ಚುನಾವಣಾ ಸಮಯದಲ್ಲಿ ಪಕ್ಷವನ್ನು ಪೆಡಂಭೂತವಾಗಿ ಕಾಡುವುದರಲ್ಲಿ ಅನುಮಾನವಿಲ್ಲ. ರಾಹುಲ್ ಗಾಂಧಿ ಇನ್ನಾದರೂ ತಮ್ಮ 'ಬ್ಯುಸಿ' ಸಮಯದಲ್ಲಿ ರಾಜ್ಯ ನಾಯಕರನ್ನು ಕರೆಸಿಕೊಂಡು ಅವರು ಕೇಳುತ್ತಿರುವ ಸ್ಪಷ್ಟನೆಯನ್ನು ಕೊಡಬೇಕಿದೆ. ಇಲ್ಲದೇ ಹೋದರೆ, ಇತರೆ ರಾಜ್ಯಗಳಲ್ಲಿ 'ಟ್ರೇನ್ ಹೋದ ಮೇಲೆ ಟಿಕೆಟ್' ತೆಗೆದುಕೊಂಡಿದ್ದಕ್ಕೆ ಆದ ಪರಿಣಾಮವನ್ನು ಕರ್ನಾಟಕದಲ್ಲಿಯೂ ಅನುಭವಿಸಬೇಕಾದ ಅಪಾಯವಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿಶ್ವದ ವಾಣಿಯಾಗಲಿ

ಹನ್ನೊಂದು ಸಂವತ್ಸರಗಳನ್ನು ದಾಟಿ ಹನ್ನೆರಡನೇ ಸಂವತ್ಸರಕ್ಕೆ ಕಾಲಿಟ್ಟಿರುವ, ವಿಶ್ವೇಶ್ವರ ಭಟ್ಟರ ಸಾರಥ್ಯದ 'ವಿಶ್ವವಾಣಿ' ಪತ್ರಿಕೆಯು ವಿಶೇಷತೆಯನ್ನು ಮೈಗೂಡಿಸಿಕೊಂಡು ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯ. ವಿನೂತನ ಶೈಲಿಯ ಬರಹಗಳು, ರಾಜ್ಯ-ರಾಷ್ಟ್ರ-ಅಂತಾರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ವೈವಿಧ್ಯಮಯ ಲೇಖನಗಳು ಪತ್ರಿಕೆಯ ಓದುಗರನ್ನು ಇನ್ನಿಲ್ಲದಂತೆ ಸೆಳೆಯುತ್ತವೆ. ಹೀಗೆ ಮೌಲ್ಯಯುತ ಬರಹಗಳಿಗೆ ಆದ್ಯತೆ ನೀಡುವ 'ವಿಶ್ವವಾಣಿ' ತನ್ನ ಗಟ್ಟಿತನವನ್ನು ಉಳಿಸಿಕೊಂಡು 'ವಿಶ್ವದ ವಾಣಿ' ಆಗಲಿ ಎಂಬುದು ನಮ್ಮ ಹಾರೈಕೆ.

- ವಿ.ಜಿ.ಇನಾಮದಾರ, ಸಾರವಾಡ

ಹೀಗೊಂದು ಜಾಣನಡೆ

ಸುಮಾರು ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ನಡೆದಿತ್ತು ಎನ್ನಲಾದ ಪ್ರಸಂಗ ನೆನಪಾಗುತ್ತದೆ: ಕೂಗುಮಾರಿಯೊಂದು ರಾತ್ರಿ ಹೊತ್ತಲ್ಲಿ ಬಂದು, 'ಬಾಗಿಲು ತೆರೆಯಿರಿ' ಎಂದು ಬಾಗಿಲು ಬಡಿಯುತ್ತಿತ್ತಂತೆ. ಯಾರೋ ಬಂದಿದ್ದಾರೆ ಅಂದುಕೊಂಡು ಬಾಗಿಲು ತೆರೆದರೆ ಯಾರೂ ಇರುತ್ತಿರಲಿಲ್ಲ. ಆದರೆ, ಹಾಗೆ ಬಾಗಿಲು ತೆರೆದವರು ಒಂದೆರಡು ದಿನದಲ್ಲಿ ಖಲಾಸ್! ಈ ಕಾಟದಿಂದ ಪಾರಾಗಲು ಪ್ರತಿ ಮನೆಯ ಹೊರಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆಯುತ್ತಿದ್ದರಂತೆ. ಇದನ್ನು ಓದುತ್ತಿದ್ದ ದೆವ್ವ ಮತ್ತೆ ಮರುದಿನ ಬರುತ್ತಿತ್ತಂತೆ ಮತ್ತು ಅದೇ ಬರಹವನ್ನು ಓದಿ ಹಿಂದಿರುಗುತ್ತಿತ್ತಂತೆ. ಈ ಉಪಾಯದಿಂದಾಗಿ ಜನರು ದೆವ್ವದ ಕಾಟದಿಂದ ಪಾರಾಗಿದ್ದರಂತೆ! ಈಗ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ 'ಕುರ್ಚಿ ರಾಜಕೀಯ'ವನ್ನು ಗಮನಿಸಿದರೆ, ದಿಲ್ಲಿ ಹೈಕಮಾಂಡ್ ಮೆರೆಯುತ್ತಿರುವ ತಂತ್ರವು, ಅಂದು ದೆವ್ವದ ಕಾಟದಿಂದ ಪಾರಾಗಲು ಹಳ್ಳಿಯ ಜನರು ಅನುಸರಿಸಿ ದರೆನ್ನಲಾದ ಉಪಾಯವನ್ನು ನೆನಪಿಸುತ್ತದೆ! ಹೈಕಮಾಂಡ್ ಈಗೇನಾದರೂ ಒಂದು ನಿರ್ಧಾರವನ್ನು ಕೈಗೊಂಡರೆ ಸಂಕಟ ತಪ್ಪಿದ್ದಲ್ಲ- ಒಂದು ಬಣವು ಹೊಸಪಕ್ಷವನ್ನು ಕಟ್ಟಬಹುದು, ಇಲ್ಲವೇ ಇನ್ನೊಂದು ಬಣವು ಪಕ್ಷವನ್ನು ಒಡೆಯಬಹುದು. ಎರಡೂ ಪಕ್ಷಕ್ಕೆ ಮಾರಕವೇ. ಇವುಗಳಿಂದ ಪಾರಾಗಲು ಎರಡು ವರ್ಷ ಮುಂದೂಡುವ 'ನಾಳೆ ಬಾ' ತಂತ್ರವನ್ನು ಹೈಕಮಾಂಡ್ ಅನುಸರಿಸುತ್ತಿರಬಹುದೇ? ಇದನ್ನು 'ಹಾವೂ ಸಾಯಬಾರದು, ಕೋಲೂ ಮುರಿಯಬಾರದು' ಎಂಬ ಜಾಣನಡೆ ಎನ್ನಬಹುದೇ?

- ಸತ್ಯಬೋಧ, ಬೆಂಗಳೂರು

ಚೆನ್ನಾಗಿ ಬರುತ್ತಿದೆ

ಶಿಶಿರ್ ಹೆಗಡೆ ಅವರ 'ಶಿಶಿರಕಾಲ' ಅಂಕಣದಲ್ಲಿ 'ತಾಳು ಮನವೇ' ಮನೋವೈಜ್ಞಾನಿಕ ಸರಣಿಬರಹವು ಬಹಳ ಚೆನ್ನಾಗಿ ಮೂಡಿಬರುತ್ತಿದ್ದು, ಮುಂದಿನ ಸಂಚಿಕೆಗಾಗಿ ಕಾಯುವಂತೆ ಮಾಡುತ್ತಿದೆ.

ಬುದ್ಧಿವಂತರೇ ಡಿಪ್ರೆಶನ್‌ನ ಬಲಿಪಶುಗಳಾಗುತ್ತಿರುವುದು ದುರಂತ. ಇತ್ತೀಚೆಗೆ ಎಲ್ಲಿ ನೋಡಿದರೂ ಯುವಜನರಿಗೆ ಶ್ರದ್ಧಾಂಜಲಿ ಅರ್ಪಿಸುವ ಫ್ಲೆಕ್ಸ್ ಚಿತ್ರಗಳು ಹೆಚ್ಚಾಗಿ ಕಾಣಿಸುತ್ತಿವೆ. ಹೆದರಿಕೆಯು 'ಆಂಕ್ಸೈಟಿ'ಯಾಗಿ ಬದಲಾಗುವ ಬಗೆಯನ್ನು ಅಂಕಣಕಾರರು ಉದಾಹರಣೆಯ ಸಮೇತ ಹೇಳಿ, ಅದಕ್ಕೆ ಪರಿಹಾರವಾಗಿ ಯೋಗ, ಧ್ಯಾನ, ಆಧ್ಯಾತ್ಮಿಕ ಚಟುವಟಿಕೆಗಳನ್ನು ಸೂಚಿಸಿರುವುದು ಸೂಕ್ತವಾಗಿದೆ. ಮೂರ‍್ನಾಲ್ಕು ತಲೆಮಾರುಗಳ ನಂತರ ನಾವೆಲ್ಲರೂ ಅಪ್ರಸ್ತುತ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕಿದೆ. ವರ್ಷಕ್ಕೊಮ್ಮೆ ಮಾನಸಿಕ ಆರೋಗ್ಯದ ತಪಾಸಣೆಗೆ ಒಳಪಡುವುದು ಇಂದಿನ ಅನಿವಾರ್ಯತೆ. ಏಕೆ ಬದುಕಬೇಕು? ಎನ್ನುವ ಎಲ್ಲರ ಪ್ರಶ್ನೆಗೆ ಸುಲಭದ ಶಾರ್ಟ್‌ಕಟ್ ಏನಿದೆ ಎಂಬುದು ಕುತೂಹಲ ಮೂಡಿಸಿದೆ.

- ವೆಂಕಟೇಶ್ ಎಂ.ಕೆ., ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಪ್ಲೀಸ್ ಗೆಟ್ ವೆಲ್ ಸೂನ್ ರೆಹಮಾನ್

ಪದಸಾಗರ

ನವೀನ್ ಸಾಗರ್

vveditoped@gmail.com

ಈಗೊಂದು ತಿಂಗಳ ಹಿಂದೆ ರೆಹಮಾನ್ ಸಂಗೀತದ ಹಾಡುಗಳ ಪ್ಲೇಲಿಸ್ಟ್ ರೆಡಿ ಮಾಡಿಕೊಳ್ಳುತ್ತಿದ್ದೆ. ರೋಜಾದಿಂದ ಶುರುವಾಗಿ ಹಾಡುಗಳನ್ನು ಪಟ್ಟಿಗೆ ಸೇರಿಸುತ್ತಾ ಹೊರಟು ವಿನ್ನೈತಾಂಡಿ ವರುವಾಯವರೆಗೆ ಬರುವ ಹೊತ್ತಿಗೆ ರೆಹಮಾನ್ ಹಾಡುಗಳು ಮುಗಿದೇ ಹೋದವು ಅನಿಸಿದವು. ರೋಜಾ, ಬಾಂಬೆ, ತಿರುಡಾ ತಿರುಡಾ, ರಂಗೀಲಾ, ಕಾದಲ್ ದೇಸಂ, ಬಾಯ್ಸ್, ದೌಡ್, ಮಿನ್ಸಾರ ಕನವು, ಡ್ಯುಯೆಟ್, ಜಂಟಲ್ಮನ್, ಕಾದಲನ್, ದಿಲ್ ಸೆ, ತಾಲ್, ಇಂಡಿಯನ್, ಮುದಲ್ವನ್, ಲಗಾನ್.. ಹೀಗೆ ಮೊದಲ ಎರಡು ದಶಕಗಳ ರೆಹಮಾನ್ ಸಂಗೀತದ ಆಲ್ಬಮ್‌ಗಳಲ್ಲಿ, ಯಾವ ಗೀತೆಯನ್ನೂ ಬಿಡುವಂತೆಯೇ ಇಲ್ಲ. ಇಡೀ ಆಲ್ಬಮ್ಮಿಗೆ ಆಲ್ಬಮ್ಮೇ ಪ್ಲೇಲಿಸ್ಟಿಗೆ ಸೇರುವಂಥದ್ದು. ಆದರೆ ಬರುಬರುತ್ತಾ, ಇಡೀ ಚಿತ್ರದಲ್ಲಿ ಒಂದು ಹಾಡು ಮಾತ್ರ ನೆನಪಲ್ಲುಳಿಯುವ, ಗುನುಗುವ, ಕುಣಿಯುವ ಹಾಡು.. ಮಿಕ್ಕಿದ್ದೆಲ್ಲ ಜೊಳ್ಳು ಎಂಬಂತಾದವು. 2010ರ ನಂತರ ರೆಹಮಾನ್ ಮ್ಯಾಜಿಕ್ ಚೂರುಚೂರೇ ಮಾಸುತ್ತಾ ಬಂದು, ಇಂದಿಗೆ ರೆಹಮಾನ್ ಸಂಗೀತ ಎಂಬುದು ಯಾವ ರೋಮಾಂಚನವನ್ನೂ ಹುಟ್ಟಿಸದಷ್ಟು ಪೇಲವವಾಗಿ ಹೋಗಿದೆ. ಸಂಗೀತದಿಂದಲೇ ಸಿನಿಮಾವನ್ನು ಗೆಲ್ಲಿಸುವ ತಾಕತ್ ಹೊಂದಿದ್ದ ರೆಹಮಾನ್ ಈಗ ಮುಗಿದ ಅಧ್ಯಾಯ ಎಂಬಂತಾಗಿದ್ದಾನೆ.

ಈ ಕಾಲಘಟ್ಟದಲ್ಲಿ ರೆಹಮಾನ್ ಬಾಯಿಂದ ಬರಬಾರದ ಮಾತೊಂದು ಬಂದಿದೆ. ವಿವಾದಕ್ಕೂ ಕಾರಣವಾಗಿದೆ. ಆನಂತರ ರೆಹಮಾನ್ ತಾನು ಆಡಿದ ಮಾತಿಗೆ ತೇಪೆ ಹಚ್ಚುವ ಪ್ರಯತ್ನ ಮಾಡಿದ್ದಾನಾದರೂ ಕೆಲವು ಗಾಯಗಳು ಅಷ್ಟು ಸುಲಭವಾಗಿ ಮಾಯುವುದಿಲ್ಲ. ಅದು ಮಾಡಬೇಕಿರೋ ಡ್ಯಾಮೇಜ್ ಮಾಡಿಯೇ ತೀರುತ್ತದೆ.

ರೆಹಮಾನ್ ಇಂಥ ಬರಹಗಳಲ್ಲಿ ಬರಕೂಡದು. ಆತನ ಹಾಡುಗಳ ಬಗ್ಗೆ ಮಾತ್ರವೇ ನಮ್ಮ ಬರಹಗಳಿರಬೇಕು. ಆದರೆ ಹಂಸಲೇಖ, ಪ್ರಕಾಶ್ ರೈ, ರೆಹಮಾನ್ ಥರದವರು ಅದ್ಯಾಕೆ ನಮಗೆ ಈ ಥರದ ವಿಷಯಗಳಿಗೆ ಆಹಾರವಾಗುತ್ತಾರೋ. ನಿಜಕ್ಕೂ ಬೇಸರವಾಗುತ್ತದೆ.

ರೆಹಮಾನ್ ಬಗ್ಗೆ ಕನ್ನಡಿಗರಿಗೆ ವಿಶೇಷ ಅಭಿಮಾನ. ಕಾರಣ ಆತನ ಜರ್ನಿ ಶುರುವಾಗಿದ್ದು ಕನ್ನಡ ಚಿತ್ರದಿಂದ ಅಂತ. ರೋಜಾ ನಂತರ ರೆಹಮಾನ್ ಏಕಾಏಕಿ ಸ್ಟಾರ್ ವ್ಯಾಲ್ಯೂ ಗಳಿಸಿದಾಗ, ಅವನ ಹೆಸರು ದಿಲೀಪ್ ಅಂತ. ಅವ್ನು 'ಡ್ಯಾನ್ಸ್ ರಾಜಾ ಡ್ಯಾನ್ಸ್' ಚಿತ್ರದಿಂದ ಇಂಡಸ್ಟ್ರಿಗೆ ಬಂದವನು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೆವು. ಹೌದು, ವಿಜಯಾನಂದ್ ಅವರ ಸಂಗೀತ ನಿರ್ದೇಶನವಿದ್ದ ಡ್ಯಾನ್ಸ್ ರಾಜಾ ಡ್ಯಾನ್ಸ್ ಚಿತ್ರದಲ್ಲಿ, ದಿಲೀಪ್ ಅಂದಿಗೆ ಕೀಬೋರ್ಡ್ ನುಡಿಸುತ್ತಿದ್ದನಂತೆ. ಶೇಖರ್ ಮತ್ತು ಕಸ್ತೂರಿ ದಂಪತಿಯ ಮಗ ದಿಲೀಪ್, ಅಲ್ಲಾ ರಖಾ ರೆಹಮಾನ್ ಆಗಿ ಬದಲಾಗಿದ್ದು ಯಾಕೆ? ಯಾವಾಗ ಇತ್ಯಾದಿ ವಿವರಗಳು ನಾನು ಬರೆದು ನಿಮಗೆ ತಿಳಿಯಬೇಕಿಲ್ಲ. ಗೊತ್ತಿರೋ ವಿಷಯವೇ. ಆದರೆ ಭಾರತದ ಸಿನಿಪ್ರೇಮಿಗಳು, ಚಿತ್ರಕರ್ಮಿಗಳು, ಸರಕಾರ ಯಾರೂ ರೆಹಮಾನ್‌ನ ಮತಾಂತರವನ್ನು ಪ್ರಶ್ನಿಸಲಿಲ್ಲ, ಅವನನ್ನು ತಿರಸ್ಕರಿಸಲಿಲ್ಲ, ಅವನ ಪ್ರತಿಭೆಗೆ ಮಣೆ ಹಾಕಿದರು. ಮೂರು ದಶಕಗಳ ಕಾಲ ಇಂಡಿಯನ್ ಸಿನಿಮಾವನ್ನು ಅಕ್ಷರಶಃ ಆಳಿದ ಸಂಗೀತ ಮಾಂತ್ರಿಕ ರೆಹಮಾನ್. ಯುವಜನತೆಯ ಫೇವರಿಟ್ ಸಂಗೀತ ನಿರ್ದೇಶಕನಾಗಿ ಬೆಳೆದ ರೆಹಮಾನ್ ತಾಂತ್ರಿಕವಾಗಿ ಹಾಗೂ ವಿಭಿನ್ನತೆಯಲ್ಲಿ ಆ ಕಾಲಘಟ್ಟದ ಎಲ್ಲರಿಗಿಂತ ಬಹಳ ಮುಂದಿದ್ದ. ಮಣಿರತ್ನಮ್, ಬಾಲಚಂದರ್‌ರಂಥ ನಿರ್ದೇಶಕರು ಇಳಯರಾಜಾರನ್ನು ಬದಿಗಿರಿಸಿ ರೆಹಮಾನ್‌ನನ್ನು ಆಯ್ಕೆ ಮಾಡಿಕೊಂಡರು ಅಂದರೆ ಆ ಕ್ರೇಜ್ ಒಮ್ಮೆ ನೆನಪಿಸಿಕೊಳ್ಳಿ.

ರೆಹಮಾನ್ ಸಂಗೀತದ ಕಾರಣಕ್ಕೇ ದಕ್ಷಿಣದ ಚಿತ್ರಗಳು ಬಾಲಿವುಡ್‌ಗೆ ಡಬ್ ಆದವು, ಅದೇ ಸಂಗೀತ ಇಟ್ಟುಕೊಂಡು ರೀಮೇಕ್ ಆದವು. ಇದರಿಂದ ರೆಹಮಾನ್‌ಗೆ ಬಾಲಿವುಡ್ ಪ್ರವೇಶ ಸಿಕ್ಕಿತು. ಬಾಲಿವುಡ್‌ನ ಹಲವಾರು ಸಂಗೀತ ನಿರ್ದೇಶಕರು ರೆಹಮಾನ್‌ಗೆ ಜಾಗ ಬಿಟ್ಟುಕೊಡುವಂತಾಯಿತು. ರೆಹಮಾನ್ ತನಗೆ ಸಿಕ್ಕಿದ ಪ್ರತಿ ಅವಕಾಶದಲ್ಲೂ ಸಿಕ್ಸರ್ ಹೊಡೆದ. ಏರ್‌ಟೆಲ್ ರಿಂಗ್ ಟೋನ್‌ನಿಂದ ವಂದೇಮಾತರಂ ತನಕ ಎಲ್ಲೆಲ್ಲೂ ರೆಹಮಾನ್. ಕೊನೆಗೆ ಆಸ್ಕರ್ ಪ್ರಶಸ್ತಿ ತರಲೂ ರೆಹಮಾನ್‌ನ 'ಜೈ ಹೋ' ಗೀತೆ ಬೇಕಾಯ್ತು.

ಆದರೆ ಪ್ರತಿಯೊಬ್ಬನಿಗೂ ಒಂದು ನಿಲ್ದಾಣವಿರುತ್ತದೆ. ಅದು ಬಂದಾಗ ಮರ್ಯಾದೆಯಿಂದ ಇಳಿದುಹೋಗಬೇಕಾಗುತ್ತದೆ. ಪ್ರತಿಯೊಬ್ಬರಿಗೂ ಒಂದು ಸ್ಯಾಚುರೇಶನ್ ಪಾಯಿಂಟ್ ಅಂತ ಇರುತ್ತದೆ. ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಜಗತ್ತಿನ ಪ್ರತಿಯೊಂದು ಹೊಸತನಕ್ಕೂ ನಾವು ಅಪ್‌ಡೇಟ್ ಆಗಿ ಸ್ಪರ್ಧೆಯಲ್ಲಿರುತ್ತೇವೆ ಎಂಬ ಆತ್ಮವಿಶ್ವಾಸ ಇರಬೇಕು. ಆದರೆ ಕೆಲವು ಕಠೋರ ವಾಸ್ತವಗಳನ್ನು ಒಪ್ಪಿಕೊಳ್ಳುವುದೂ ಅಗತ್ಯ. ರವಿಚಂದ್ರನ್‌ರಂತೆ ಇವತ್ತಿಗೂ ಪ್ರೇಮಲೋಕ, ಏಕಾಂಗಿ ಅಂತ ಮಾತನಾಡುತ್ತಾ ಅಂದಿನ ಹ್ಯಾಂಗೋವರ್‌ನಲ್ಲಿ ಇಂದೂ ಇದ್ದರೆ, ಹಾಸ್ಯಕ್ಕೆ ವಸ್ತುವಾಗುತ್ತಾರೆ. ಬದಲಾದ ಜಗತ್ತಿನಲ್ಲಿ, ನಮಗಿಂತ ಉತ್ತಮರು ಬಂದಾಗ ಅವರ ಕೆಲಸಗಳನ್ನು ನೋಡಿ ಖುಷಿಪಡಬೇಕು. ಆದರೆ ಒಂದು ವೇಳೆ ಸ್ಪರ್ಧೆಗೆ ಇಳಿದದ್ದೇ ಆದರೆ ನೆಪ ಹೇಳಕೂಡದು.

ರೆಹಮಾನ್ ಮಾಡ್ತಾ ಇರೋದು ಈಗ ಇದನ್ನೇ. ಬದಲಾದ ಟ್ರೆಂಡ್, ತಂತ್ರಜ್ಞಾನ, ಹೊಸ ಪ್ರತಿಭೆಗಳ ಮಧ್ಯೆ ಆತನಿಗೆ ಗೆಲ್ಲಲಾಗುತ್ತಿಲ್ಲ, ಎಷ್ಟೇ ಕಷ್ಟ ಪಟ್ಟರೂ ಅಂದಿನಂತೆ ಹಿಟ್ ಆಲ್ಬಮ್ ಕೊಡಲು ಸಾಧ್ಯವಾಗುತ್ತಿಲ್ಲ, ಇಡೀ ಆಲ್ಬಮ್‌ನಲ್ಲಿ ಒಂದು ಹಾಡು ಕೂಡ ಚಾರ್ಟ್ ಬಸ್ಟರ್ ಆಗುತ್ತಿಲ್ಲ. ಹೀಗಿದ್ದಾಗ ಸಹಜವಾಗಿ ಆತ ಸಿನಿಮಾ ಮೇಕರ್‌ಗಳ ಆದ್ಯತೆ ಆಗಿ ಉಳಿಯುವುದಿಲ್ಲ. ಆ ಸತ್ಯವನ್ನು ಒಪ್ಪಿಕೊಳ್ಳುವುದರ ಬದಲು ತನ್ನನ್ನು ಮುಸ್ಲಿಂ ಎಂದು ಕಡೆಗಣಿಸುತ್ತಿದ್ದಾರೆ, ಮೋದಿ ಸರಕಾರ ಅಧಿಕಾರಕ್ಕೆ ಬಂದಮೇಲೆ ತನಗೆ ಅವಕಾಶ ಕಡಿಮೆಯಾಗಿದೆ ಎಂಬ ಹತಾಶ ಮಾತುಗಳನ್ನು ಆಡುತ್ತಿದ್ದಾನೆ ರೆಹಮಾನ್. ಹಾಗಾದರೆ ಮೋದಿ ಅವಧಿಗೆ ಮುನ್ನ ಈತನಿಗೆ ಅವಕಾಶ ಸಿಗುತ್ತಿದ್ದುದು ಮುಸ್ಲಿಂ ಎಂಬ ಕಾರಣಕ್ಕಾ? ಈತನ ಲಾಜಿಕ್ ಪ್ರಕಾರ ಹಾಗೆಯೇ ಆಗಬೇಕಲ್ಲವೇ?

ಮುಸಲ್ಮಾನರು ಅದರಲ್ಲೂ ಕನ್ವರ್ಟೆಡ್ ಮುಸಲ್ಮಾನರು ಯಾಕೆ ಈ ರೀತಿಯ ವಿಕ್ಟಿಮ್ ಕಾರ್ಡ್ ಪ್ಲೇ ಮಾಡುತ್ತಾರೆ ಅಂತಲೇ ಅರ್ಥವಾಗುವುದಿಲ್ಲ. ಕಳೆದ ಮೂವತ್ತು ವರ್ಷಗಳಲ್ಲಿ ರೆಹಮಾನ್‌ಗೆ ಕೆಲಸ ಕೊಟ್ಟವರು ಮುಸ್ಲಿಮರಲ್ಲ, ಹಿಂದೂಗಳೇ. ಬಾಲಿವುಡ್‌ನಲ್ಲಿ ಆಮೀರ್ ಖಾನ್, ಸಲ್ಮಾನ್, ಶಾರೂಖ್ ಸಿನಿಮಾಗಳಿಗೆ ರೆಹಮಾನ್ ಸಂಗೀತ ಕೊಟ್ಟದ್ದು ಹೌದಾದರೂ ನಿರ್ಮಿಸಿದ್ದು ಹಿಂದೂಗಳೇ. ರೆಹಮಾನ್‌ನನ್ನು ಮುಸಲ್ಮಾನ ಎಂಬ ಕಾರಣಕ್ಕೆ ದೂರ ಇಡಲಿಲ್ಲ. ರೆಹಮಾನ್ ಹಲುಬುವುದಕ್ಕೆ ಕಾರಣಗಳೇ ಇಲ್ಲ. ಆತನ ಕೈಲಿ ಇವತ್ತಿಗೂ ಹಿಂದಿಯ ಹಲವು ಚಿತ್ರಗಳಿವೆ. ಬಹುಕೋಟಿ ವೆಚ್ಚದ ರಾಮಾಯಣಕ್ಕೂ ರೆಹಮಾನ್‌ದೇ ಸಂಗೀತ. ಹೀಗಿದ್ದೂ ಇಂಥ ಆರೋಪ ಮಾಡಲು ಮನಸು ಹೇಗೆ ಬರುತ್ತದೆ ರೆಹಮಾನ್‌ಗೆ? ಇಂಥ ಹೇಳಿಕೆಗಳು ಯಾವ ಸಂದೇಶ ನೀಡುತ್ತವೆಂಬ ಪರಿಜ್ಞಾನ ಬೇಡವೇ?

ಇದೇ ಸಲ್ಮಾನ್ ಖಾನ್, ಗಾಯಕ ಅರಿಜಿತ್ ಸಿಂಗ್‌ನನ್ನು ತನ್ನ ಚಿತ್ರದಿಂದ ಕಿತ್ತೆಸೆದ. ಆ ಜಾಗಕ್ಕೆ, ಆತಿಫ್, ರಾಹತ್ ಫತೇಹ್ ಅಲಿ ಖಾನ್ ಎಂಬ ಪಾಕಿ ಗಾಯಕರನ್ನು ತಂದು ಹಾಡಿಸಿದ. ಅರಿಜಿತ್ ಎಂದಾದರೂ ಇದಕ್ಕೆ ಕೋಮುವಾದದ ಬಣ್ಣ ಹಚ್ಚಿದನಾ? ಹೊಸ ಗಾಯಕರ ಆಗಮನದಿಂದ ಸೋನು ನಿಗಮ್‌ಗೆ ಇದ್ದ ಆಫರ್‌ಗಳು ಕಡಿಮೆಯಾದವು. ಎಂದಾದರೂ ಸೋನು ಅದಕ್ಕೆ ಕೋಮುವಾದದ ಲೇಪನ ಮಾಡಿದನಾ? ಆದರೆ ಸಲ್ಮಾನ್ ಖಾನ್ ಕೃಷ್ಣಮೃಗ ಬೇಟೆ ಕೇಸ್‌ನಲ್ಲಿ ಬಂಧನವಾಗ್ತಾ ಇದ್ದ ಹಾಗೇ ಮುಸಲ್ಮಾನ ಟೋಪಿ ಧರಿಸಿ, ನನ್ನನ್ನು ಮುಸಲ್ಮಾನ ಎಂಬ ಕಾರಣಕ್ಕೆ ಟಾರ್ಗೆಟ್ ಮಾಡ್ತಿದಾರೆ ಎಂಬ ಹೇಳಿಕೆ ಕೊಟ್ಟ. ಮ್ಯಾಚ್ ಫಿಕ್ಸಿಂಗ್‌ನಲ್ಲಿ ಸಿಕ್ಕಿಕೊಂಡ ಅಜರುದ್ದೀನ್ ಕೂಡ ತನ್ನ ಮುಸ್ಲಿಂ ಧರ್ಮವನ್ನು ಮುನ್ನೆಲೆಗೆ ತಂದು ಕನಿಕರ ಪಡೆಯೋಕೆ ಬಯಸಿದ್ದ. ಈತನನ್ನು ಭಾರತದ ನಾಯಕನನ್ನಾಗಿ ಮಾಡಿದ್ದು, ಇದೇ ದೇಶ. ಸಲ್ಮಾನ್‌ನನ್ನು ಸೂಪರ್ ಸ್ಟಾರ್ ಮಾಡಿದ್ದು ಇದೇ ಭಾರತದ ಸಿನಿಪ್ರೇಮಿಗಳು ಎಂಬುದು ಇವರಿಗೆ ಗೌಣವಾಗಿ ಹೋಯ್ತು! ರೆಹಮಾನ್ ಕೂಡ ಅದನ್ನೇ ಮಾಡ್ತಿದ್ದಾನೆ.

ರೆಹಮಾನ್‌ಗೆ ಮೋದಿ ಅವಧಿಯಲ್ಲಿ ಎರಡು ಬಾರಿ ರಾಷ್ಟ್ರಪ್ರಶಸ್ತಿ ಬಂದದ್ದು ಮರೆತೇಹೋಯ್ತಾ? ರೆಹಮಾನ್ ಸಂಗೀತದ ವಂದೇಮಾತರಂ ಮತ್ತು ಜೈ ಹೋ ಹಾಡುಗಳು ಇವತ್ತಿಗೂ ಮೊಳಗುತ್ತಿವೆ. ಯಾರಾದರೂ ಅದರ ಮೇಲೆ ನಿಷೇಧ ಹೇರಿದ್ದಾರಾ? ಇಂಥ ಹೇಳಿಕೆಗಳಿಂದ ರೆಹಮಾನ್ ತನ್ನನ್ನು ತಾವೇ ಚಿಕ್ಕವನಾಗಿಸಿಕೊಳ್ಳುತ್ತಿದ್ದಾನೆ.

ರೆಹಮಾನ್ ಸಂಗೀತದ ಜಾದೂ ಕಮ್ಮಿ ಆದಾಗಲೂ ನಾವಂದುಕೊಂಡದ್ದು, ರೆಹಮಾನ್ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾನೆ ಅಂತಲೇ ಹೊರತು, ಆತ ಖಾಲಿಯಾದ ಎಂದು ಷರಾ ಬರೆದಿರಲಿಲ್ಲ. ಇಂದಿಗೂ ರೆಹಮಾನ್ ಬಗೆಗಿನ ನಿರೀಕ್ಷೆ ಕಡಿಮೆಯೇನಾಗಿಲ್ಲ. ಆದರೆ ರೆಹಮಾನ್ ತನ್ನ ಹಳೆಯ ಮಟ್ಟಕ್ಕೂ ತಲುಪಲಾಗುತ್ತಿಲ್ಲ ಎಂಬುದು ಕಟುವಾಸ್ತವ. ಛಾವಾದಂಥ ಸೂಪರ್‌ಹಿಟ್ ಚಿತ್ರದಲ್ಲಿ ಸಂಗೀತದ ಬಗ್ಗೆ ಮಾತೇ ಬರಲಿಲ್ಲ ಅಂದರೆ ಅದು ರೆಹಮಾನ್ ಸೋಲು. ಧುರಂಧರ್ ಚಿತ್ರದಲ್ಲಿ ಸಿನಿಮಾದ ಜತೆಗೆ ಪ್ರತಿಯೊಬ್ಬರೂ ಅದರ ಸಂಗೀತದ ಬಗ್ಗೆ ಮಾತನಾಡುತ್ತಿದ್ದಾರೆ. ರೆಹಮಾನ್ ತನ್ನನ್ನು ಆತ್ಮವಿಮರ್ಶೆಗೆ ಒಳಪಡಿಸಿಕೊಳ್ಳುವ ಅಗತ್ಯ ಇದೆ. ರೆಹಮಾನ್ ತನಗೆ ಅವಕಾಶ ಸಿಗದ ಕಾರಣಕ್ಕೆ ಹತಾಶನಾಗಿ ವಿಕ್ಟಿಮ್ ಕಾರ್ಡ್ ಪ್ಲೇ ಮಾಡುತ್ತಿದ್ದಾನೆ ಎಂದರೂ, ಹೋಗ್ಲಿ ಬಿಡು ಪಾಪ ಅಂತ ಸುಮ್ಮನಿದ್ದುಬಿಡಬಹುದಿತ್ತೇನೋ. ಆದರೆ ರೆಹಮಾನ್ ಬೇರೆಯೇ ದಿಕ್ಕಿನಲ್ಲಿ ಯೋಚಿಸುತ್ತಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿ ಸಿಗುವುದು ಆತನ ಇನ್ನೊಂದು ಹೇಳಿಕೆ. ಛಾವಾ ಸಿನಿಮಾದ ಸಾಂಬಾಜಿಯ ಕಥನ ದೇಶ ಒಡೆಯುವ ನರೇಟಿವ್ ಬಿತ್ತುತ್ತಿದೆಯಂತೆ. ಜನರನ್ನು ಮರುಳುಮಾಡಲು ಸಾಧ್ಯವಿಲ್ಲವಂತೆ. ಇದೇ ರೆಹಮಾನ್ ಮತ್ತು ಆತನ ಕನ್ವರ್ಟೆಡ್ ತಾಯಿ ಹಿಂದೂ ಸಾಹಿತಿಯೊಬ್ಬರನ್ನು ವಿಭೂತಿ ನಾಮ ಧರಿಸಿದ್ದರೆಂಬ ಕಾರಣಕ್ಕೆ ಮನೆಗೆ ಸೇರಿಸಿರಲಿಲ್ಲ. ಅದನ್ನು ಅಳಿಸಿ ಮನೆ ಒಳಗೆ ಬಾ ಅಂದಿದ್ದರು. ಇವರಿಗೆ ಕೋಮುಸಾಮರಸ್ಯದ ಬಗ್ಗೆ ಮಾತನಾಡುವ ಹಕ್ಕಿದೆಯಾ?

ರೆಹಮಾನ್‌ನ ಒಂದೋ ಎರಡೋ ಹೇಳಿಕೆಗಳಿಂದ ನಾನು ಆತನನ್ನು ದೇಶದ್ರೋಹಿ ಅನ್ನುವುದಿಲ್ಲ. ನಗರ ನಕ್ಸಲ್ ಅಂತಲೋ ಮೋದಿ ವಿರೋಧಿ ಅಂತಲೋ ಬ್ರ್ಯಾಂಡ್ ಮಾಡಿ ದ್ವೇಷಿಸುವುದಿಲ್ಲ. ಆದರೆ ಖಂಡಿತವಾಗ್ಯೂ ಆತನನ್ನು ಕೃತಘ್ನ ಎನ್ನುತ್ತೇನೆ. ಈತನ ಮತಾಂತರವನ್ನು ಒಪ್ಪಿಕೊಂಡಿದೆ ಈ ದೇಶ. ಮುಸಲ್ಮಾನನೆಂದು ನೋಡದೇ ಈತನ ಸಂಗೀತವನ್ನು ಕೇಳಿದೆ. ಈತನ ಹಾಡುಗಳನ್ನು ಗುನುಗಿದೆ. ಈತನಿಗೆ ಪದ್ಮಭೂಷಣದ ತನಕ ಸಕಲ ಅವಾರ್ಡ್ ಕೊಟ್ಟಿದೆ. ಕೋಟಿಗಟ್ಟಲೆ ಹಣ ಕೊಟ್ಟಿದೆ. ತನ್ನ ಸರಕು ಖಾಲಿ ಮಾಡಿಕೊಂಡು, ಗುಣಮಟ್ಟ ಕಾಯ್ದುಕೊಳ್ಳಲಾಗದೇ ಸೋತು, ಈಗ ಅದಕ್ಕೆ ಕೋಮುವಾದವನ್ನು ಟ್ಯಾಗ್ ಮಾಡಿ ದೇಶದ ಬಗ್ಗೆಯೇ ನೆಗೆಟಿವ್ ಒಪಿನಿಯನ್ ಸೃಷ್ಟಿಸುತ್ತಿರುವುದಕ್ಕೆ ರೆಹಮಾನ್‌ಗೆ ನಾಚಿಕೆ ಆಗಬೇಕು. ಕಳೆದ ಹತ್ತು ವರ್ಷಗಳಲ್ಲಿ ರೆಹಮಾನ್‌ನ ಯಾವ ಗೀತೆ ಹುಚ್ಚೆಬ್ಬಿಸಿದೆ ಅಂತ ಹುಡುಕಿದ್ರೆ, ಒಂದೂ ಇಲ್ಲ. ರೆಹಮಾನ್ ಕಾಲದಲ್ಲೇ ಇದ್ದ ಅನು ಮಲಿಕ್, ಆನಂದ್ ಮಿಲಿಂದ್, ಪ್ರೀತಂ, ನದೀಂ ಶ್ರವಣ್, ಜತಿನ್ ಲಲಿತ್ ಹೀಗೆ ಎಷ್ಟೋ ಸಂಗೀತ ನಿರ್ದೇಶಕರು ನೇಪಥ್ಯಕ್ಕೆ ಸರಿದಿದ್ದಾಗಿದೆ. ಕನ್ನಡ, ತಮಿಳು, ತೆಲುಗು ಎಲ್ಲೆಡೆ ಹೊಸ ನೀರು ಬಂದಿದೆ. ನಿರಂತರ ಮೂವತ್ತೈದು ವರ್ಷಗಳಿಂದ ರೆಹಮಾನ್‌ಗೆ ಆಫರ್‌ಗಳು ಸಿಗುತ್ತಲೇ ಇವೆ. ಸಂಗೀತ ಕ್ಲಿಕ್ ಆಗದಿದ್ದರೂ ಅವಕಾಶಗಳು ಶೂನ್ಯವಾಗಿಲ್ಲ. ಅದಕ್ಕೆ ತೃಪ್ತಿಪಡಬೇಕೇ ಹೊರತು ಪವರ್ ಶಿಫ್ಟ್, ಕೋಮುವಾದ ಅಂತ ನೆಪ ಹೇಳುವುದಲ್ಲ. ರೆಹಮಾನ್ ಮತ್ತೊಂದು ಹಿಟ್ ಆಲ್ಬಮ್ ಕೊಡದಿದ್ದರೂ ನಮ್ಮನ್ಯಾರಿಗೂ ಆತನ ಮೇಲೆ ಗೌರವ, ಪ್ರೀತಿ ಕಡಿಮೆ ಆಗುತ್ತಿರಲಿಲ್ಲ. ಯಾಕಂದರೆ ಆತ ಇದುವರೆಗೆ ಕೊಟ್ಟ ನೂರಾರು ಹಾಡುಗಳ ಋಣ ನಮ್ಮ ಮೇಲಿದೆ. ಆದರೆ ಇಂಥ ಮಾತುಗಳಿಂದ ಆತ ತನ್ನ ವ್ಯಕ್ತಿತ್ವ ಹಾಳುಮಾಡಿಕೊಂಡರೆ ಆತನ ಹಾಡುಗಳನ್ನು ಕೇಳುವಾಗಲೂ ಇವೆಲ್ಲ ನೆನಪಾಗಿ ಕಿರಿಕಿರಿ ಅನಿಸುತ್ತದೆ. ಪ್ಲೀಸ್ ಗೆಟ್ ವೆಲ್ ಸೂನ್ ರೆಹಮಾನ್...

ಭಟ್ಟರ್ ಸ್ಕಾಚ್

- **ರವಿ, (ಇಮೇಲ್ ಮೂಲಕ)**
ಭಟ್ರೇ, ಬೆಂಗಳೂರು ಟ್ರಾಫಿಕ್‌ನಲ್ಲಿ ಸಿಲುಕಿದಾಗ ಜೀವನದ ದೊಡ್ಡ ಸತ್ಯ ಏನು ಗೊತ್ತಾಗುತ್ತೆ?
– **'ನಾವು ಎಷ್ಟೇ ಬೆಳೆದ್ರೂ, ಫಸ್ಟ್ ಗೇರ್ ಬಿಟ್ಟು ಮುಂದೆ ಹೋಗೋಕೆ ಆಗಲ್ಲ' ಅನ್ನೋ ಸತ್ಯ!**

- **ಸಣ್ಣಕೇರಿ ರಾಜು, (ಇಮೇಲ್ ಮೂಲಕ)**
ಭಟ್ರೇ, ಭ್ರಷ್ಟಾಚಾರಿಗಳಿಗೆ 'ಮೇಜಿನ ಕೆಳಗಿನ ವ್ಯವಹಾರ' ಅಂದ್ರೆ ಯಾಕೆ ಅಷ್ಟು ಇಷ್ಟ?
– **ಮೇಜಿನ ಮೇಲೆ ಫೈಲ್ ಓಡೋಕೆ ಅವರಿಗೆ ಕನ್ನಡಕ ಬೇಕು, ಕೆಳಗೆ ಕೈ ಹಾಕೋಕೆ ಚಾಕಚಕ್ಯತೆ ಇದ್ರೆ ಸಾಕು!**

- **ಶಾಮಲಾ ನಾಗರಾಜ, ಕೆಂಗೇರಿ**
ಭಟ್ರೇ, ಮೇಕಪ್ ಮತ್ತು ರಾಜಕಾರಣದ ಭರವಸೆಗಳ ನಡುವೆ ಇರೋ ಸಾಮ್ಯತೆ ಏನು?
– **ಎರಡು ನೋಡೋಕೆ ಸಕತ್ ಅನ್ನುತ್ತೆ, ಆದ್ರೆ ಒಂದು ಸಲ ಮಳೆ ಬಂದ್ರೆ ಸಾಕು ಅಸಲಿ ಮುಖ ಬಯಲಾಗುತ್ತೆ!**

- **ರಾಜೇಶ್ ಶೆಟ್ಟಿ, ಬೆಂಗಳೂರು**
ಭಟ್ರೇ, ಆರ್‌ಸಿಬಿ ಅಭಿಮಾನಿಗಳಿಗೆ ಲೋ ಬಿಪಿ ಸಮಸ್ಯೆ ಯಾಕೆ ಇರಲ್ಲ?
– **ಯಾಕಂದ್ರೆ ಪ್ರತಿ ಮ್ಯಾಚ್‌ನಲ್ಲೂ ಹಾರ್ಟ್ ಬೀಟ್ ಜಾಸ್ತಿ ಮಾಡಿ ಬಿಪಿ ನಾರ್ಮಲ್ ಆಗಿ ಇರೋ ತರ ಆ ಟೀಮ್ ನೋಡ್ಕೊಳ್ಳುತ್ತೆ!**

- **ನಾಗೇಶ ಪಾಳ್ಯ, ಮೈಸೂರು**
ಭಟ್ರೇ, ಬೆಂಗಳೂರಿನಲ್ಲಿ ಕಾರ್ ಇರೋನಿಗಿಂತ ಸೈಕಲ್ ಇರೋನೇ ಯಾಕೆ ಶ್ರೀಮಂತ?
– **ಯಾಕಂದ್ರೆ ಕಾರ್ ಇರೋನು ಟ್ರಾಫಿಕ್‌ನಲ್ಲಿ 'ಟ್ಯಾಕ್ಸ್' ಕಟ್ಟುತ್ತಾ ಇರ್ತಾನೆ, ಸೈಕಲ್ ಇರೋನು ಮನೆ ಸೇರಿ ಆರಾಮಾಗಿ 'ರಿಲ್ಯಾಕ್ಸ್' ಮಾಡ್ತಿರ್ತಾನೆ!**

- **ಪ್ರವೀಣ ರಾಜು, (ಇಮೇಲ್ ಮೂಲಕ)**
ಭಟ್ರೇ, ಬ್ರೇಕಿಂಗ್ ನ್ಯೂಸ್ ಅಂದ್ರೆ ಏನು?
– **ಒಂದು ಸಣ್ಣ ವಿಷಯನ ದೊಡ್ಡದು ಮಾಡಿ, ವೀಕ್ಷಕರ ತಲೆ 'ಬ್ರೇಕ್' ಆಗೋವರೆಗೂ ಅದನ್ನೇ ತೋರಿಸೋದು!**

- **ವಿನಾಯಕ ಬಡಿಗೇರ, ಹಾವೇರಿ**
ಭಟ್ರೇ, ರಾಜಕಾರಣದಲ್ಲಿ 'ಪಕ್ಷಾಂತರ' ಅಂದ್ರೆ ಏನು?
– **ಅದು ಹಳೆಯ ಚಪ್ಪಲಿ ಬಿಟ್ಟು ಹೊಸ ಶೂ ಹಾಕಿಕೊಂಡ ಹಾಗೆ; ಆದರೆ ನಡಿಗೆ ಅದೇ ಇರುತ್ತೆ!**

ಬದುಕು ಸ್ಯಾಕರಿನ್‌ನಂತೆ, ಸಿಹಿಯುಂಟು ಶಕ್ತಿಯಿಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಇನ್ನೊಂದು ಸಂಕ್ರಾಂತಿ ಹಬ್ಬವನ್ನು ಕೂಡ ಮುಗಿಸಿ ಮತ್ತೆ ಅದೇ ನಿತ್ಯದ ಬದುಕಿಗೆ ಹೊಂದಿಕೊಳ್ಳುತ್ತಿದ್ದೇವೆ. ಇವತ್ತಿಗೆ ಹಬ್ಬಗಳು ಎಂದರೆ, 'ಹಿರಿಯರು ಆಚರಿಸಿಕೊಂಡು ಬಂದ ಕಾರಣ ಅದನ್ನು ನಡೆಸಿಕೊಂಡು ಹೋಗಬೇಕು' ಎನ್ನುವಂತಾಗಿದೆ. ಈ ಮಾತನ್ನು ಒಪ್ಪುವುದು, ಬಿಡುವುದು ನಿಮಗೆ ಬಿಟ್ಟಿದ್ದು. ಏಕೆಂದರೆ ಇವತ್ತಿನ ದಿನದಲ್ಲೂ ಹಿಂದಿನ ದಿನಗಳಲ್ಲಿದ್ದ ಸಡಗರವನ್ನು ಸಂಭ್ರಮಿಸುವ ಒಂದಷ್ಟು ಜನ ಇರಬಹುದು! ಆದರೆ ಬಾಲ್ಯದಲ್ಲಿ ಹಬ್ಬ ಎಂದರೆ ಅದೆಂಥದೋ ಸಡಗರ. ಸಂಕ್ರಾಂತಿ ಹಬ್ಬವು ಹೆಣ್ಣು ಮಕ್ಕಳಿಗೆ ಸೇರಿದ್ದು ಎನ್ನುವ ಒಂದು ಮಾತಿದೆ. ಎಳ್ಳು-ಬೆಲ್ಲ ಬೀರಲು ಶೃಂಗಾರ ಮಾಡಿಕೊಂಡು ಸಡಗರದಿಂದ ಓಡಾಡುತ್ತಾರೆ, ಜರತಾರಿ ಸೀರೆ ಉಡುತ್ತಾರೆ. ಒಟ್ಟಿನಲ್ಲಿ ಹಬ್ಬಕ್ಕೆ ಒಂದು ಸಂತೋಷ, ಸಡಗರದ ಫೀಲ್ ಕೊಡುತ್ತಾರೆ. ಆದರೇನು ಮಾಡುವುದು ನಮ್ಮ ಮನೆಯಲ್ಲಿ ನಾವು ಮೂವರು ಹುಡುಗರು. ಹೌದು, ಹೆಣ್ಣು ಮಕ್ಕಳಂತೆ ಸಡಗರ-ಸಂಭ್ರಮಕ್ಕೆ ಹುಡುಗರು ಎಂದಿಗೂ ಸಾಟಿಯಾಗಲಾರರು. ಹಾಗೆಂದು ಸಂಕ್ರಾಂತಿ ಮಜಾ ಎಂದೂ ನಮ್ಮ ಮನೆಯಲ್ಲಿ ಕಡಿಮೆಯಾಗಿರಲಿಲ್ಲ.

ಅಲ್ಲ ಕಣ್ರೀ, ಎಳ್ಳು-ಬೆಲ್ಲ ಮುಕ್ಕಲು ಅದ್ಯಾವ ಲಿಂಗಭೇದ ಅಲ್ಲವೇ? ಜತೆಗೆ ಗೆಣಸು, ಉಪ್ಪು ಹಾಕಿ ಬೇಯಿಸಿದ ಕಡಲೇಕಾಯಿ, ಅವರೇಕಾಳು, ಸಕ್ಕರೆ ಅಚ್ಚನ್ನು ಸವಿಯುವ ಸಂಭ್ರಮ. ಎಲ್ಲಕ್ಕೂ ಮಿಗಿಲಾಗಿ ಹುಡುಗರ ಗುಂಪು ಸೇರಿ, ಕಪ್ಪಗೆ ದಪ್ಪಗಿದ್ದು ಹಲ್ಲು ಮತ್ತು ವಸಡುಗಳಿಗೆ ಚಾಲೆಂಜ್ ಹಾಕುತ್ತಿದ್ದ ಕಬ್ಬನ್ನ ದವಡೆಯಲ್ಲಿ ಸಿಗಿದು, ಅಗಿದು, ಜಗಿದು ರಸ ಕುಡಿಯಲು ಸ್ಪರ್ಧೆ ಏರ್ಪಡುತ್ತಿತ್ತು. ಒಂದು ಜಲ್ಲೆಯನ್ನ ಯಾರು ಬೇಗ ತಿಂದು ಮುಗಿಸುತ್ತಾರೆ ಎನ್ನುವುದೇ ಒಂದು ದೊಡ್ಡ ಸ್ಪರ್ಧೆ. ಗೆದ್ದವ ದೊಡ್ಡ ಸಾಧನೆ ಮಾಡಿದಂತೆ ಬೀಗುತ್ತಿದ್ದ, ಸೋತವರ ಮುಖ ಸಣ್ಣಗಾಗುತ್ತಿತ್ತು. ಪುರೋಹಿತರ ಮಗ ಚಂದ್ರಮೌಳಿ ಹುಟ್ಟಾ ಮಾತುಗಾರ, ಆದರೆ ಯಾವ ಸ್ಪರ್ಧೆಯಲ್ಲೂ ಗೆಲ್ಲುತ್ತಿರಲಿಲ್ಲ. ಬಟ್, ಅವನ ಸ್ಪಿರಿಟ್ ಇಂದಿಗೂ ಕಣ್ಣ ಮುಂದಿದೆ. ''ನೋಡು, ನಾನು ಗೆಲ್ಲಬೇಕು ಅಂತಾನೇ ಇದ್ದೆ, ಆದರೆ ಅವನಿಗೆ (ಗೆದ್ದವನನ್ನು ತೋರಿಸುತ್ತ) ಅಂತ ಬಿಟ್ಟುಕೊಟ್ಟೆ'' ಎಂದು ದೇಶಾವರಿ ನಗೆ ಬೀರುತ್ತಿದ್ದ. ಸೋತ ಬೇಸರವನ್ನ ಅವನ ಮುಖದಲ್ಲಿ ಎಂದೂ ಕಾಣಲಿಲ್ಲ. ಬಹಳ ಜೋವಿಯಲ್ ಮನುಷ್ಯ. ಅವರಪ್ಪ ಮಾತ್ರ ಅಷ್ಟೇ ಸಿಡುಕರಾಗಿದ್ದರು. ಒಮ್ಮೆ ಚಂದ್ರಮೌಳಿ ''ನಾನು ನಿನ್ನೆ ಕೋಲಾರ ಗೋಲ್ಡ್ ಫೀಲ್ಡ್‌ಗೆ ಹೋಗಿ ಒಂದೈದು ಕೆಜಿ ಚಿನ್ನ ತರೋಣ ಅಂತಿದ್ದೆ, ಆದರೇನು ಮಾಡುವುದು ಈ ನಮ್ಮಪ್ಪ ಬಿಡುತ್ತಿಲ್ಲ'' ಎಂದ. ಅಲ್ಲೇ ಇದ್ದ ಅವರಪ್ಪ ವಿಶ್ವನಾಥಪ್ಪ ಚಂದ್ರಮೌಳಿಗೆ ಹಿಗ್ಗಾಮುಗ್ಗಾ ಥಳಿಸಿದ್ದರು. ಬಡತನದ ಜೀವನ, ಅಂದು ಆತನಿಗೇನು ವ್ಯಥೆಯಿತ್ತೋ? ಬಲ್ಲವರಾರು? ಆದರೆ ಅಂದಿಗೆ ಆತ ನನ್ನ ಕಣ್ಣಿಗೆ ಬಹಳ ಕೆಟ್ಟವರಾಗಿ ಕಂಡಿದ್ದರು. ಇವತ್ತಿಗೆ ಮನಸ್ಸು ಆತನ ಸ್ಥಾನದಲ್ಲಿ ಕುಳಿತು ಯೋಚಿಸುತ್ತದೆ, ಆತನಿಗಾಗಿ ಮರುಗುತ್ತದೆ, ಇರಲಿ ಸ್ಪರ್ಧೆಯಲ್ಲಿ ಸರಿಯಾಗಿ ಆಸ್ವಾದಿಸಿ ತಿನ್ನಲು ಆಗುವುದಿಲ್ಲ, ಅಲ್ಲೇನಿದ್ದರೂ ಗೆಲ್ಲುವ ತವಕ. ಹೀಗಾಗಿ ನಾನು ಸ್ಪರ್ಧೆಯಿಂದ ಗಾವುದ ದೂರ ಇರುತ್ತಿದ್ದೆ. ಆಮೇಲೆ ನಿಧಾನವಾಗಿ ಕುಳಿತು ಇಡೀ ಜಲ್ಲೆಯನ್ನ ಹಲ್ಲಿನಿಂದ ಸಿಗಿದು, ಅಗಿದು ರಸ ಕುಡಿಯುತ್ತಿದ್ದೆ. ನನ್ನ ತಮ್ಮನಿಗೆ ಅದು ಆಗುತ್ತಿರಲಿಲ್ಲ, ''ರಂಗ ಸಿಪ್ಪೆ ಸುಲಿದು ಕೊಡು'' ಎಂದು ಬರುತ್ತಿದ್ದ. ಬಾಲ್ಯದಲ್ಲಿ ಅವನು ಸದಾ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದ. ಹೀಗಾಗಿ ಅವನ ಮೇಲೆ ಎಲ್ಲರಿಗೂ ವಿಶೇಷ ಅಕ್ಕರೆ. ಅವನನ್ನ ಅತ್ಯಂತ ಪ್ರೀತಿಯಿಂದ ಸಾಕುತ್ತಿದ್ದವು.

ಬನ್ನಿ, ಮತ್ತೆ ಹಬ್ಬದ ಬಗ್ಗೆ ಮಾತಾಡೋಣ. ಹಾಗೆ ನೋಡಲು ಹೋದರೆ ಹಬ್ಬಕ್ಕೆ ಒಂದು ವಾರ ಅಥವಾ ಹದಿನೈದು ದಿನ ಮುಂಚೆಯೇ ಸಡಗರ ಶುರುವಾಗುತ್ತಿತ್ತು. ಅದರಲ್ಲೂ ಸಂಕ್ರಾಂತಿಗೆ ಚೂರು ಜಾಸ್ತಿ ಸಿದ್ಧತೆ ಬೇಕಾಗುತ್ತಿತ್ತು. ಸಕ್ಕರೆ ಅಚ್ಚು ಮಾಡುವುದು, ಬೆಲ್ಲವನ್ನ, ಕೊಬ್ಬರಿಯನ್ನ ಸಣ್ಣಗೆ ಹೆಚ್ಚಿಕೊಳ್ಳುವುದು, ಅವುಗಳನ್ನೆಲ್ಲಾ ಮಿಶ್ರಣ ಮಾಡಿ, ಸಣ್ಣ ಪ್ಯಾಕೆಟ್‌ಗಳನ್ನಾಗಿಸಿ ಇಡುವುದು, ಕಬ್ಬನ್ನ ತಂದು ಶೇಖರಿಸುವುದು- ಹೋಹ್ ಅದೆಂಥ ಸಡಗರ. ಹಬ್ಬದ ದಿನವಂತೂ ಮೂವರಿಗೂ ಮೈಗೆ ಎಣ್ಣೆ ಹಚ್ಚಿ ಸ್ವಲ್ಪ ಬಿಸಿಲು ಕಾಯಿಸಲು ನಿಲ್ಲಿಸುತ್ತಿದ್ದರು. ಹುಟ್ಟುಬಟ್ಟೆಯಲ್ಲಿ ಹಜಾರದಲ್ಲಿ ಕುಣಿದಾಡಿದ್ದೇ ಕುಣಿದಾಡಿದ್ದು! ಎಣ್ಣೆಯ ಅಂಡನ್ನ ಗೋಡೆಗೆ ಒತ್ತಿ, ಕಳೆದ ವರ್ಷದ ಗುರುತಿನ ಜತೆಗೆ ಹೋಲಿಕೆ ಮಾಡಿ ನಗುತ್ತಿದ್ದವು, ಬಾಲ್ಯದಲ್ಲಿ ಎಷ್ಟು ಸಣ್ಣ ವಿಷಯದಿಂದ ಭೂಮ್ಯವನ್ನ ಪಡೆಯುತ್ತಿದ್ದವು ಅಲ್ಲವೇ? ಬೇರೆ ಮನೆಯಿಂದ ಬಂದ ಪ್ರತಿ ಎಳ್ಳನ್ನೂ ತಿಂದು ರುಚಿ ನೋಡುವ ಕ್ರಿಯೆಯಲ್ಲಿ ಬೈಗುಳ ಕೂಡ ತಿನ್ನುತ್ತಿದ್ದವು. ಪೂರ್ತಿ ತಿನ್ನದೇ ಉಳಿಸುವುದು ಅಜ್ಜಿಗೆ ಇಷ್ಟವಾಗುತ್ತಿರಲಿಲ್ಲ. ಇವತ್ತಿಗೆ ಈ ಕ್ರಿಯೆಗಳನ್ನೆಲ್ಲಾ ನೆನಪಿಸಿಕೊಂಡಾಗ, ನಾವು ನಿಜವಾಗಿಯೂ ಹಬ್ಬ ಮಾಡುತ್ತಿದ್ದೇವೆಯೇ ಎನ್ನಿಸುತ್ತದೆ! ನಮ್ಮ ಮಕ್ಕಳಿಗೆ ನಮಗೆ ಸಿಕ್ಕ ಅನುಭವದ ನೂರನೇ ಒಂದಂಶ ಕೂಡ ಸಿಗುತ್ತಿಲ್ಲವಲ್ಲ ಎಂದು ಮನಸ್ಸು ರೋದಿಸುತ್ತದೆ. ಸಮಾಜ ಬೆಳೆಯುತ್ತ ಹೋದಂತೆ, ಮಾಯವಾದ ಈ ಪುಟಾಣಿ ಸಂತೋಷಗಳಿಗೆ, ಈ ಕ್ರಿಯೆಗೆ ನಾಗರಿಕತೆ, ಅಭಿವೃದ್ಧಿ ಎನ್ನುವ ಹೆಸರು ಬೇರೆ ಇಟ್ಟುಬಿಟ್ಟಿದ್ದೇವೆ.

ತಿನ್ನುವುದು, ತಿನ್ನುವುದು ಮತ್ತು ತಿನ್ನುವುದು ಜತೆಗೆ ಕುಣಿತ, ಆಟ ಮತ್ತು ಆಟ ಅಷ್ಟೇ. ದಿನ ಮುಗಿದುಹೋಗುತ್ತಿತ್ತು. ನಿನ್ನೆಯ ನೆನಪುಗಳು ಅದೆಷ್ಟು ಮಧುರ. ಅವತ್ತಿಗೆ ಹೇಳಿಕೊಳ್ಳುವ ಯಾವ ಭೌತಿಕ ಒಡೆತನ ಇರಲಿಲ್ಲ, ಆದರೆ ಜಗತ್ತಿನಲ್ಲಿರುವ ಸಕಲ ಖುಷಿ ಕಾಲ ಬಳಿಯೇ ಬಿದ್ದಿರುತ್ತಿತ್ತು. ಇಂದು ಬದಲಾಗಿಹೋಗಿದೆ. ಇವತ್ತು ನಮ್ಮನೆ ಅಂತಲ್ಲ, ಬಹುತೇಕ ಮನೆಗಳ ಕಥೆ ಸೇಮ್. ಯಾರೋ ಸಿದ್ಧಪಡಿಸಿದ ಎಳ್ಳು-ಬೆಲ್ಲ, ಸಕ್ಕರೆ ಅಚ್ಚು ಕೊಂಡು ತರುತ್ತೇವೆ. ಎಲ್ಲವೂ ಸಿದ್ಧವಾಗಿರುತ್ತದೆ, ಕೊನೆಗೆ ಮನೆಗೆ ಕಟ್ಟುವ ತೋರಣ ಕೂಡ ರೆಡಿಮೇಡ್ ಸಿಗುತ್ತೆ! ಅದೇ ಕಣ್ರೀ, ಸದಾ ಹಸಿರಾಗಿರುವ ಪ್ಲಾಸ್ಟಿಕ್ ತೋರಣ! ಇವತ್ತಿಗೆ ಎಲ್ಲಾ ಮನೆಗಳಿಗೂ ಅದೇ ಭೂಷಣವಾಗಿದೆ. ಹೀಗೆ ಕೊಂಡು ತಂದ ಎಳ್ಳನ್ನು ತೋರಿಕೆಗೆ ನಾಲ್ಕು ಮನೆಗೆ ಕೊಟ್ಟು ಬಂದರೆ ಅಲ್ಲಿಗೆ ಹಬ್ಬ ಮುಕ್ತಾಯ. ಅಷ್ಟಕ್ಕೇ ಸಾಯಂಕಾಲಕ್ಕೆ 'ಉಸ್ಸಪ್ಪ' ಎನ್ನುವ ಉದ್ಗಾರ ಬೇರೆ. ಮಾನಸಿಕವಾಗಿ ಹಬ್ಬದ ತಯಾರಿ ಮಾಡಿಕೊಳ್ಳಲು ನಮಗೆ ಸಮಯವಿಲ್ಲ. ಹತ್ತಾರು ಮನೆಗೆ ಹೋಗಿ ಎಳ್ಳು ಬೀರಲು ದೈಹಿಕ ಕ್ಷಮತೆಯಿಲ್ಲ, ಅದು ಇದ್ದವರಿಗೂ ಟ್ರಾಫಿಕ್ ಎನ್ನುವ ಭೂತಪ್ಪ ಅಡ್ಡಗಾಲು ಹಾಕದೆ ಬಿಡುವುದಿಲ್ಲ. ಮಜಾ ನೋಡಿ- ಹೀಗೆ ನಾವು ಹಬ್ಬಕ್ಕೆ ಎಲ್ಲವನ್ನೂ ಕೊಂಡು ತರಬೇಕು. ಇಲ್ಲದಿದ್ದರೆ ಅದು ಜಿಡಿಪಿ ಲೆಕ್ಕಾಚಾರದಲ್ಲಿ ಬರುವುದಿಲ್ಲ. ಜನರು ಮನೆಯಲ್ಲಿ ತಯಾರಿ ಮಾಡಿಕೊಳ್ಳಲು ಶುರುಮಾಡಿದರೆ, ಸಮಾಜದ ಒಂದು ವರ್ಗದವರು, 'ಇದನ್ನು ಮಾರುತ್ತಿದವರು ಜೀವನ ನಡೆಸುವುದು ಹೇಗೆ?' ಎನ್ನುವ ಮಾತುಗಳನ್ನು ಆಡಲು ಶುರುಮಾಡುತ್ತಾರೆ. ಇವೆಲ್ಲವೂ ನಾವು ಅಭಿವೃದ್ಧಿ ಹೆಸರಿನಲ್ಲಿ ಕಟ್ಟಿಕೊಂಡಿರುವ ಹೊಸ ಬದುಕು. ಅದರಲ್ಲೆಷ್ಟು ತ್ರಾಣವಿದೆ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳುವುದಿಲ್ಲ ಎಂಬುದು ನಮ್ಮ ಜಾಣಕಿವುಡು ಎನ್ನಲಡ್ಡಿಯಿಲ್ಲ.

ಇನ್ನು ಕಬ್ಬಿನ ಜಲ್ಲೆಯನ್ನ ಹಲ್ಲಿನಲ್ಲಿ ಸೀಳಿ ತಿನ್ನುವ ಮಂದಿ ಎಷ್ಟಿದ್ದಾರು? ಹಬ್ಬದ ದಿನ ಎರಡು ಕಬ್ಬಿನ ಜಲ್ಲೆ ತಂದಿದ್ದೆ, ಅದನ್ನು ಹಲ್ಲಿನಿಂದ ಸಿಗಿದು ತಿನ್ನೋಣ ಎನ್ನಿಸಿತು. ಹಾಗೆ ಮಾಡಿದೆ, ಅದೆಷ್ಟೋ ವರ್ಷದ ನಂತರ ಹೀಗೆ ಮಾಡಿದ್ದು, ಶಕ್ತಿಯಿಲ್ಲದ ವಸಡಿನಿಂದ ರಕ್ತ ಬಂದಿತ್ತು. 'ನಾನು ಕೂಡ ಸಿಗಿದು ತಿನ್ನುತ್ತೇನೆ' ಎಂದಿದ್ದ ಮಗಳು ನನ್ನನ್ನು ನೋಡಿ ಸುಮ್ಮನಾದಳು. ಆದರೇನು ಬಾಲ್ಯದ ಒಂದಷ್ಟು ಕ್ಷಣ ಜೀವಿಸಿದ ಖುಷಿ ನನ್ನದು. ಮಗಳಿಗೆ ಅವರಜ್ಜಿ ಚಾಕುವಿನಿಂದ ಸಿಪ್ಪೆ ತೆಗೆದು, ಸಣ್ಣ ಹೋಳುಗಳಾಗಿ ಕತ್ತರಿಸಿಕೊಟ್ಟರು ಎನ್ನುವುದು ಬೇರೆಯ ಕಥೆ. ಇದು ಇವತ್ತಿನ ಬಹುತೇಕ ಮಕ್ಕಳ ಕಥೆ, ಮನೆಮನೆಯ ಕಥೆ.

ಇವತ್ತಿನ ದಿನ ನಾವು ನಮ್ಮ ಮಕ್ಕಳನ್ನು ಅದೆಷ್ಟು ನಾಜೂಕಾಗಿ ಸಾಕಿಬಿಟ್ಟಿದ್ದೇವೆ ಎನ್ನಿಸುತ್ತದೆ. ಗಂಡುಮಕ್ಕಳಿಗೆ ತೋರಣ ಕಟ್ಟುವುದು ಬರುವುದಿಲ್ಲ, ಹೆಣ್ಣುಮಕ್ಕಳಿಗೆ ರಂಗೋಲಿ ಇಡಲು ಬರುವುದಿಲ್ಲ, ಅಕ್ಕಿ ಬೇಯಿಸಿ ಅನ್ನ ಮಾಡಲು ಬರುವುದಿಲ್ಲ. ಇನ್ನು ಕಾರಿನ ಟೈರು ಪಂಕ್ಚರ್ ಆದರೆ ಅದನ್ನು ಹಾಕುವುದು ಹೇಗೆ ಬಂದೀತು? ನಮ್ಮ ಬಾಲ್ಯದಲ್ಲಿ ಸಹಜವಾಗಿರುತ್ತಿದ್ದ ಈಜು ಇಂದಿಗೆ ಕೆಲವೇ ಮಕ್ಕಳಿಗೆ ಸೀಮಿತವಾಗಿದೆ. ಇನ್ನು ಮರ ಹತ್ತುವುದು, ಲಗೋರಿ, ಕುಂಟೆಬಿಲ್ಲೆ ಇವೆಲ್ಲವೂ ಶಾಶ್ವತವಾಗಿ ಮಾಯವಾಗಿಬಿಟ್ಟಿವೆ. ಒಟ್ಟಾರೆ ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ ಬದುಕಲು ಬೇಕಾದ 'ಜೀವನ ಕೌಶಲ' ಅಥವಾ 'ಲೈಫ್ ಸ್ಕಿಲ್ಸ್' ನಮ್ಮ ಮಕ್ಕಳ ಬಳಿ ಇಲ್ಲವೇ ಇಲ್ಲ. ಎಲ್ಲರ ಮನೆಯ ಮಕ್ಕಳೂ ತೊಂಬತ್ತು ಪ್ರತಿಶತ ಅಂಕ ಗಳಿಸುವುದರಲ್ಲಿ ಮಗ್ನರು. ಇದು ನಾವೇ ಕಟ್ಟಿಕೊಂಡ ಸ್ಪರ್ಧೆ. ಬದುಕಲು ಅವಶ್ಯಕವಾಗಿ ಬೇಕಾದ ಅಂಶಗಳನ್ನು ನಮ್ಮ ಬಾಲ್ಯದಲ್ಲಿ ಯಾರೂ ಹೇಳಿಕೊಡುತ್ತಿರಲಿಲ್ಲ, ಅದು ಸಹಜ ಬದುಕಿನ ರೀತಿಯಾಗಿತ್ತು. ಸೈಕಲ್ ಹೊಡೆಯುವುದು, ಮರ ಹತ್ತುವುದು, ನೀರು ಸೇದುವುದು, ಈಜುವುದು ಎಲ್ಲವೂ ಸಹಜವಾಗಿತ್ತು. ಆದರೆ ಇಂದು ಇವುಗಳನ್ನು ಕಲಿಯಲು ಕೂಡ ಹಣ ಕೊಡಬೇಕು. ಹಣವನ್ನೇನೋ ಪೋಷಕರು ಕೊಟ್ಟಾರು, ಆದರೆ ಸಮಯ? ಮಕ್ಕಳಿಗೆ ಸಮಯವೆಲ್ಲಿದೆ?

ಯಶಸ್ಸು ಎಂದರೇನು? ಅದು ಹಣ ಮಾಡುವುದಾ, ಸಂಪತ್ತನ್ನು ಸೃಷ್ಟಿಸಿಕೊಳ್ಳುವುದಾ? ಅದೇಕೆ ನಮ್ಮ ಸಮಾಜವು 'ಸಿರಿವಂತರಾದರೆ ಮಾತ್ರ ಅಂಥವರು ಯಶಸ್ವಿ' ಎನ್ನುವಂತೆ ನೋಡುತ್ತದೆ? ಸೋತವರಲ್ಲೂ ಅದೇ ಆತ್ಮ ವಾಸಿಸುತ್ತಿರುತ್ತದೆ ಅಲ್ವಾ? ಪಟ್ಟ ಪರಿಶ್ರಮಕ್ಕೆ ಅದ್ಯಾಕೆ ನಾವು ಮತ್ತು ನಮ್ಮ ಸಮಾಜ ಬೆಲೆ ನೀಡುವುದಿಲ್ಲ? ಪ್ರಯತ್ನ, ಪರಿಶ್ರಮ ಎಲ್ಲವೂ ಇದ್ದೂ ಕೆಲವೊಮ್ಮೆ ನಾವು ಬಯಸಿದ ಫಲಿತಾಂಶ ಸಿಗದೇ ಹೋಗಬಹುದು. ಅಂಥ ನೂರಾರು, ಸಾವಿರಾರು ಜನರನ್ನು ನಮ್ಮ ನಡುವೆ ಕಾಣಬಹುದು. ಆದರೆ ಅದು ಕೇವಲ ನಮ್ಮ ಕಣ್ಣಿಗೆ ಕಾಣಿಸುತ್ತದೆ, ಮನಸ್ಸಿಗೆ ನಾಟುವುದಿಲ್ಲ. ಹೀಗಾಗಿ ಮತ್ತದೇ ವಿಷವರ್ತುಲಕ್ಕೆ ನಮ್ಮ ಮಕ್ಕಳನ್ನು ದೂಡುತ್ತೇವೆ. ಬದುಕೆಂದರೇನು? ಅದರಿಂದ ನಾವು ಬಯಸುವುದೇನು? ಎನ್ನುವ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳುವುದಿಲ್ಲ, ನಮ್ಮ ಮಕ್ಕಳಿಗೂ ಕೇಳಿಕೊಳ್ಳಲು ಕಲಿಸುವುದಿಲ್ಲ. ಅತ್ಯಂತ ವೇಗವಾಗಿ ಓಡುವ ಸಮಾಜದಲ್ಲಿ ನಾವೆಲ್ಲರೂ ಸ್ಪರ್ಧಿಗಳು. ಯಾರನ್ನಾದರೂ 'ಏಕೆ ಹೀಗೆ ಓಡುತ್ತಿದ್ದೀರಿ? ಎಲ್ಲಿಗೆ ನಿಮ್ಮ ಓಟ? ಕಾರಣವೇನು?' ಎನ್ನುವ ಪ್ರಶ್ನೆ ಕೇಳಿದರೆ ಉತ್ತರ ಮಾತ್ರ ಯಾರಿಗೂ ಗೊತ್ತಿರುವುದಿಲ್ಲ. ಕೊನೆಗೆ, ಓಡುತ್ತಿರುವ ದಿಕ್ಕಿನ ಅರಿವು ಕೂಡ ಇರುವುದಿಲ್ಲ. 'ಎಲ್ಲರೂ ಓಡುತ್ತಿದ್ದಾರೆ, ನಾನೂ ಓಡುತ್ತಿದ್ದೇನೆ' ಎನ್ನುವುದು ಬಹುತೇಕರ ಉತ್ತರ. ಇದೊಂದು ಪ್ಯಾಟ್ರನ್ ಆಗಿ ಬದಲಾಗಿದೆ. ಇದನ್ನು ಮುರಿಯದೆ ಹೊಸ ಬದುಕು ಕಟ್ಟಿಕೊಳ್ಳುವುದು ಅಸಾಧ್ಯ.

ಹೀಗಾಗಿ ಇವತ್ತು ನಮ್ಮ ಬದುಕು, ಅದರಲ್ಲೂ ನಗರ ಪ್ರದೇಶದಲ್ಲಿ ಬದುಕುವ ಜನರ ಬದುಕು ಥೇಟ್ ಸ್ಯಾಕರಿನ್‌ನ ಹಾಗಾಗಿದೆ- ಅದರಲ್ಲಿ ಸಿಹಿಯುಂಟು, ಆದರೆ ಶಕ್ತಿಯಿಲ್ಲ...!

ಕಳಕಳಿ
ಪ್ರೊ.ಆರ್.ಜಿ. ಹೆಗಡೆ

ನದಿ ನೀರು ತಿರುವಿನ ಯೋಜನೆಗಳು ಸಲ್ಲ

ಉತ್ತರ ಕನ್ನಡ ಜಿಲ್ಲೆಯ ಗೋಳು ಮುಗಿಯುವಂತಿಲ್ಲ! ಬರಬೇಕಾಗಿದ್ದ ಮತ್ತು ಬಂದೇಬಿಟ್ಟಿತು ಎಂದು ನಾವೆಲ್ಲ ಅಂದು ಕೊಂಡಿದ್ದ ವಿಶ್ವವಿದ್ಯಾಲಯ, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು ಬರಲೇ ಇಲ್ಲ. ಹುಬ್ಬಳ್ಳಿ ಅಂಕೋಲಾ, ತಾಳಗುಪ್ಪಾ, ಖಾನಾಪುರ ರೈಲ್ವೆ ಕಥೆ, ವಿಮಾನ ನಿಲ್ದಾಣ ಏನಾಯಿತು ಅರ್ಥವಾಗುತ್ತಿಲ್ಲ.

ಹೀಗೆ ಬರಬೇಕಾದ ಯೋಜನೆಗಳು ಬಾರದೆ ಮೌನವಾಗಿ ಮುಸುಕು ಹಾಕಿಕೊಂಡು ಕುಳಿತಿವೆ. ವ್ಯಂಗ್ಯವೆಂದರೆ ಬೇಡವಾಗಿದ್ದ, ಮುಖ್ಯವಾಗಿ ಇಲ್ಲಿಯ ನದಿ ನೀರಿನ ಕುರಿತಾದ ಯೋಜನೆಗಳು ಯಥೇಚ್ಛವಾಗಿ, ಒಂದರ ಹಿಂದೊಂದು ಬರಲಾರಂಭಿಸಿವೆ. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ಬೇಡ್ತಿ ಮತ್ತು ವರದಾ ನದಿಗಳನ್ನು ತಿರುಗಿಸುವ ಯೋಜನೆ, ಅಘನಾಶಿನಿಗೊಂದು ಅಣೆಕಟ್ಟು ಕಟ್ಟಿ ಅದರ ನೀರನ್ನು ಪೂರ್ವಕ್ಕೆ ತಿರುಗಿಸುವ ಯೋಜನೆ ಇತ್ಯಾದಿಗಳು ಗಡಿಬಿಡಿಯಲ್ಲಿ ಬಂದು ಬಂದು ನಿಂತಂತಿವೆ. ಅವು ಯಾವ ಹಂತದಲ್ಲಿವೆ? ಅವುಗಳ ಯೋಜನಾ ವಿವರ ವೇನು? ಇತ್ಯಾದಿ ಪೂರ್ತಿ ವಿವರಗಳು ಬಹಿರಂಗದಲ್ಲಿ ಇಲ್ಲ ಎನಿಸುತ್ತದೆ. ಕೆಲವು ಪತ್ರಿಕಾ ವರದಿಗಳ ಪ್ರಕಾರ ಬೇಡ್ತಿ, ವರದಾ ಮತ್ತು ಅಘನಾಶಿನಿ ತಿರುವಿನ ಯೋಜನೆ 10,000 ಕೋಟಿ ರುಪಾಯಿ ಅಂದಾಜು ಖರ್ಚಿನದು ಮತ್ತು ಅದರಲ್ಲಿ 9,000 ಕೋಟಿ ರುಪಾಯಿಗಳನ್ನು ಕೇಂದ್ರ ಸರಕಾರ ಅನುದಾನವಾಗಿ ನೀಡಲಿದೆ. ಮಿಕ್ಕ ಪಾಲು ರಾಜ್ಯದ್ದು. ಈ ನದಿಗಳ ನೀರನ್ನು ತಿರುಗಿಸಿ ಬಯಲುಸೀಮೆಯ ಕೆಲವು ಜಿಲ್ಲೆಗಳ ಕಡೆಗೆ ಮತ್ತು ಬೆಂಗಳೂರಿಗೆ ಒಯ್ಯಲಾಗುತ್ತದೆ. ಈ ಯೋಜನೆಗಳನ್ನು ವಿರೋಧಿಸಿ ಜಿಲ್ಲೆಯಲ್ಲಿ ಪ್ರತಿಭಟನೆ ನಡೆಯುತ್ತಿದೆ.

ಯಾಕೆ ವಿರೋಧಿಸಬೇಕು?: ಇಲ್ಲಿ ಕುತೂಹಲದ ಕೆಲವು ವಿಷಯಗಳಿವೆ. ಒಂದನೆಯದು, ಉತ್ತರ ಕನ್ನಡ ಜಿಲ್ಲೆಯ ನದಿಗಳಲ್ಲಿ ಇಲ್ಲಿ ಸಾಕುಸಾಕಾಗಿ ಹೋಗಿ ಬೇರೆಡೆ ತಿರುಗಿಸಿ ಒಯ್ಯಬಹುದಾದಷ್ಟು ಯಥೇಚ್ಛ ಪ್ರಮಾಣದ ನೀರಿನ ಶಾಶ್ವತ ಹರಿವಿದೆಯೆಂದು ಯಾರು, ಯಾರಿಗೆ, ಯಾವ ಅಂಕಿ-ಅಂಶ ಆಧರಿಸಿ ಹೇಳಿದರು ಎನ್ನುವುದು ಅರ್ಥವಾಗುತ್ತಿಲ್ಲ. ಜಿಲ್ಲೆಯಲ್ಲಿ ಸಾಧಾರಣವಾಗಿ ಒಳ್ಳೆಯ ಮಳೆಯಾಗುವುದು ನಿಜ. ಕೆಲ ವರ್ಷ ಭಾರಿ ಮಳೆ ಅಂದರೆ ಐದಾರು ತಿಂಗಳು ಮಳೆಯಾಗುವುದೂ ನಿಜ. ಅಂಥ ವೇಳೆ ನದಿಗಳು ತುಂಬಿ ಹರಿದು ಎಲ್ಲೆಲ್ಲೂ ನೀರು ಕಾಣಿಸುವುದು ನಿಜ. ನದಿ ತಿರುವಿನ ಯೋಜನೆಗಳನ್ನು ನಿರ್ಮಿಸಿದ 'ಬುದ್ಧಿವಂತರು' ಬಹುಶಃ ಇಂಥ ಸಮಯದಲ್ಲಿ ಜಿಲ್ಲೆಯನ್ನು ನೋಡಿ, ಉತ್ತರ ಕನ್ನಡದಲ್ಲಿ ಹೇರಳವಾಗಿ ನೀರಿದೆ ಎಂದು ಭಾವಿಸಿದಂತಿದೆ, ನೀರು ವ್ಯರ್ಥವಾಗಿ ಹರಿದುಹೋಗುತ್ತಿದೆ ಎಂದು ಅವರಿಗೆ ಆಗ ಅನಿಸಿದ್ದಲ್ಲಿ ತಪ್ಪೇನಿಲ್ಲ. ಹಾಗೆಯೇ ಅಂಥ ಬುದ್ಧಿವಂತರಲ್ಲಿ ಕೆಲವರು ಜಿಲ್ಲೆಯ ಅಂಚಿನಲ್ಲಿ ಕಾಣುವ ಸಮುದ್ರದ ನೀರನ್ನೂ 'ನದಿನೀರು' ಎಂದೇ ಲೆಕ್ಕಹಾಕಿದಂತಿದೆ, ಅದೇ ಲೆಕ್ಕಾಚಾರದಲ್ಲೇ ಯೋಜನೆಗಳನ್ನು ನಿರ್ಮಿಸಿದಂತಿದೆ. ವಾಸ್ತವವೆಂದರೆ, ಉತ್ತರ ಕನ್ನಡದ ತಲೆಯ ಮೇಲಿರುವ ಅಣೆಕಟ್ಟುಗಳು (ಉದಾಹರಣೆಗೆ ಕಾಳಿ, ಶರಾವತಿ) ಪ್ರತಿವರ್ಷ ತುಂಬುವುದಿಲ್ಲ ಅಥವಾ ಅಣೆಕಟ್ಟು ಇಲ್ಲದ ಅಘನಾಶಿನಿ, ಗಂಗಾವಳಿ ನದಿಗಳಿಗೆ ಪ್ರತಿವರ್ಷವೂ 'ಭಾರಿ ನೆರೆ' ಬರುವುದಿಲ್ಲ. ಬರೀ ಕೆಂಪುನೀರು ಬಂದುಹೋಗುವ ವರ್ಷಗಳೂ ಇವೆ. ಅಂದರೆ ಇವು ಮಳೆಯಾಧಾರಿತ ಹರಿವಿನ ನದಿಗಳೇ ವಿನಾ, ಹಿಮಾಲಯದ ನದಿಗಳಂತೆ ಸಾರ್ವಕಾಲಿಕ ಹರಿವಿನವು ಅಲ್ಲ. ಹಾಗಾಗಿ ಕಾಗದದ ಮೇಲೆ ಮಾಡುವ 'ಸರಾಸರಿ ಹರಿವಿನ ಲೆಕ್ಕ' ಇಲ್ಲಿ ಕೆಲಸಕ್ಕೆ ಬರುವುದಿಲ್ಲ. ಹಾಗೆ ಲೆಕ್ಕಿಸಿ, 'ಇಂತಿಷ್ಟು ನೀರನ್ನು ತಿರುಗಿಸಬಹುದು' ಅಂತ ಯಾವ 'ಬುದ್ಧಿವಂತರು' ಲೆಕ್ಕಮಾಡಿದರೋ ಗೊತ್ತಿಲ್ಲ.

ಜಿಲ್ಲೆಗೆ ಕುಡಿಯುವ ನೀರು, ಕೃಷಿ ನೀರಿನ ಅಗತ್ಯತೆಯನ್ನು ಪೂರೈಸುವ ಯೋಜನೆಗಳು ಈಗಾಗಲೇ ಜಾರಿಯಾಗಿದ್ದಿದ್ದರೆ ಹೆಚ್ಚಿನ ನೀರನ್ನು ಬೇಕಾದಲ್ಲಿಗೆ ಕೊಂಡೊಯ್ಯಲು ಯಾರದೇನೂ ತಕರಾರು ಇರುತ್ತಿರಲಿಲ್ಲ. ಏಕೆಂದರೆ ಕುಡಿಯುವ ನೀರಿನ ವಿಷಯದಲ್ಲಿ ಹಾಗೆ ತಕರಾರು ಕೂಡದು. ಆದರೆ ಸಮಸ್ಯೆಯೆಂದರೆ, 6 ತಿಂಗಳು ಮಳೆ ಸುರಿದರೂ ಜಿಲ್ಲೆಯ ದೊಡ್ಡ ಭಾಗದಲ್ಲಿ ಮುಂದಿನ 6 ತಿಂಗಳು ಬಾವಿಯಲ್ಲಿ ಕೊಡ ಕಂತುವುದಿಲ್ಲ. ಅಂದರೆ ಕನಿಷ್ಠ ಪ್ರಮಾಣದಲ್ಲಿ ಕೂಡ ನೀರಿನ ಪೂರೈಕೆ ಇರುವುದಿಲ್ಲ. ಉದಾಹರಣೆಗೆ ಶಿರಸಿ, ಯಲ್ಲಾಪುರ, ಅಂಕೋಲಾ, ಕುಮಟಾ, ಹೊನ್ನಾವರ, ಕಾರವಾರ, ಭಟ್ಕಳ ನಗರಗಳಲ್ಲಿ ಬಾವಿಗಳಲ್ಲಿ ಸಾಕಷ್ಟು ನೀರುರುವುದಿಲ್ಲ, ಇಲ್ಲೆಲ್ಲಾ ಬೇಸಗೆಯಲ್ಲಿ ಆಗಾಗ ಖಾಲಿ ಕೊಡದ ಪ್ರದರ್ಶನಗಳಾಗುವುದುಂಟು. ಹಾಗೆಯೇ ಕಾರವಾರದಿಂದ ಭಟ್ಕಳದ ತನಕದ ಸಮುದ್ರ ತಟದ ನೂರಾರು ಹಳ್ಳಿಗಳಲ್ಲಿ ನೀರಿನ ತೀವ್ರ ತುಟಾಗ್ರತೆಯಾಗುತ್ತದೆ. ಎದುರಿಗೆ ಭೋರ್ಗರೆವ ಸಮುದ್ರವಿದ್ದರೂ ಕುಡಿಯಲು ನೀರಿಲ್ಲ! ಕೃಷಿಗೆ ನೀರಿನ ಪೂರೈಕೆಯನ್ನಂತೂ ಕೇಳುವುದೇ ಬೇಡ! ಹೆಚ್ಚು ಕಡಿಮೆ ಶಿವರಾತ್ರಿ ನಂತರ ಇಡೀ ಘಟ್ಟದ ಕೆಳಗಿನ ಭಾಗ ಹಾಗೂ ಮುಂಡಗೋಡ, ಹಳಿಯಾಳ, ಜೋಯಿಡಾ ತಾಲೂಕಿನ ಹಲವು ಭಾಗಗಳಲ್ಲಿ ನೀರಿನ ಸಮಸ್ಯೆ ತಲೆದೋರುತ್ತದೆ. ಘಟ್ಟದ ಕೆಳಗಿನ ದೊಡ್ಡ ಬೆಲ್ಟ್ ಅದ ಬಡಾಳದಿಂದ ಹಿಡಿದು ಹೊನ್ನಾವರ ಮುಖವಾಗಿ ಹೊರಟರೆ ಸಿಗುವ ದಿವಳ್ಳಿ, ಕಡ್ನೀರು, ಮೂರೂರು, ಹಟ್ಟೀಕೇರಿ ಹೊಸಾಡ, ವಡಗರೆ, ತಲಗೆರೆ, ಚಂದಾವರ, ಕೋನಳ್ಳಿ ಊರುಕೇರಿ ಹಿಡಿದು ಹೊನ್ನಾವರ ಹಾಗೆಯೇ ಮುಂದುವರಿದು ಭಟ್ಕಳದವರೆಗಿನ ರಾಷ್ಟ್ರೀಯ ಹೆದ್ದಾರಿಯ ಎಡ ಭಾಗದ ಪ್ರದೇಶಗಳು ನೀರಿಲ್ಲದೆ ಒಣಗುತ್ತವೆ. ಬಲಭಾಗದಲ್ಲಿಯಂತೂ ಸಮುದ್ರ ಬಂದುಬಿಡುತ್ತದೆ. ಅಲ್ಲಿ ಉಪ್ಪುನೀರು ಮಾತ್ರ. ಬಹುಶಃ ಹಳಿಯಾಳ ತಾಲೂಕಿನ ಕೆಲ ಭಾಗಗಳನ್ನು ಬಿಟ್ಟರೆ ಕೃಷಿಗಾಗಿ ಕಾಲುವೆ, ಬಾಂದಾರ, ಕಿರು ಅಣೆಕಟ್ಟೆ ಅಥವಾ ಬೃಹತ್ ಪೈಪ್‌ಗಳ ಮೂಲಕ ನೀರಾವರಿಗೆ ಅನುವುಮಾಡಿಕೊಡುವ ಯಾವುದೇ ಸರಕಾರಿ ಯೋಜನೆ ನೆನಪಾಗುತ್ತಿಲ್ಲ. ಹೆಚ್ಚು ಕಡಿಮೆ ಉತ್ತರ ಕನ್ನಡದ ಕೃಷಿ ಮಳೆ ಆಧಾರಿತವಾದದ್ದು. ಇಲ್ಲವಾದರೆ ರೈತರೇ ಸಣ್ಣ ಸಣ್ಣ ಹಳ್ಳ, ಹೊಳೆ, ಬಾವಿ ಅಥವಾ ಬೋರ್‌ವೆಲ್‌ಗಳಿಂದ ಪಡೆದುಕೊಂಡ ನೀರು (ಕೆಲವೊಮ್ಮೆ ನೀರಿನ ತುಟಾಗ್ರತೆ ಯಾವ ಮಟ್ಟಕ್ಕೆ ಹೋಗುತ್ತದೆಂದರೆ, ಇಂಥ ಪಂಪ್‌ಗಳ ಬಳಕೆಯನ್ನು ನಿಷೇಧಿಸಲಾಗುತ್ತದೆ). ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗ ಲಭ್ಯವಿರುವ ನೀರನ್ನು ಹೊರಗೆ ತೆಗೆದುಕೊಂಡು ಹೋಗುವ ಮೊದಲು, ಇಲ್ಲಿನ ಕೃಷಿ ಅಗತ್ಯಗಳಿಗೆ ಬೇಕಾದ ನೀರನ್ನು ಮೊದಲು ಗುರುತಿಸಿಕೊಳ್ಳಬೇಕು; ಹಾಗೆ ಮಾಡದೆ ಹೊರಗೆ ತೆಗೆದುಕೊಂಡು ಹೋಗುವುದು ಯಾವ ರೀತಿಯಲ್ಲಿ ನ್ಯಾಯದ ಯೋಜನೆಯಾಗುತ್ತದೆ? ಜಿಲ್ಲೆಯ ಕೃಷಿಗೆ ನೀರೊದಗಿಸುವ ಜವಾಬ್ದಾರಿ ಸರಕಾರಗಳಿಗೆ ಇಲ್ಲವೇ? ಜಿಲ್ಲೆಯ ಕೃಷಿಕರು ಎದ್ದೇಳಬೇಕು.

ಜಿಲ್ಲೆಗೆ ಒಂದು, ಸಮಗ್ರ ಕೃಷಿ ಮತ್ತು ಕುಡಿಯುವ ನೀರಿನ ಸಮಗ್ರ ಯೋಜನೆಯ ಅಗತ್ಯವಿದೆ. ಮೇಲ್ಗಡೆ ಎತ್ತರದಲ್ಲಿರುವ ಕಾಳಿ ಅಥವಾ ಲಿಂಗನಮಕ್ಕಿ ಅಣೆಕಟ್ಟಿನಿಂದ ಜಿಲ್ಲೆಗೆ ನೀರು ಹರಿಸಿ ಇಂಥ ಯೋಜನೆಯನ್ನು ಜಾರಿಗೆ ತರಬೇಕೆಂಬ ಜನರ ಬೇಡಿಕೆ ಇನ್ನೂ ಈಡೇರಿಲ್ಲ. ಹೀಗಿರುವಾಗ, ಇಲ್ಲಿನ ನದಿಗಳ ನೀರು ತಿರುಗಿಸಿ ಬೇರೆಡೆ ಒಯ್ಯುವ ಯೋಜನೆ ಹೇಗೆ ತಾರ್ಕಿಕವಾಗುತ್ತದೆ? ಇಲ್ಲಿನ ಕಥೆ ಏನು? ಪ್ರಸ್ತುತದ ಯೋಜನಾ ವರದಿ ಸಿದ್ಧಪಡಿಸಿದ ವ್ಯಕ್ತಿಗಳು ಮುಂದೆ ಬಂದು ಈ ವಿವರಗಳನ್ನು ನೀಡಬೇಕು. ನಮ್ಮ ಬೇಡಿಕೆ ಸರಳವಾದುದು- ಮೊದಲು ಜಿಲ್ಲೆಯ ನೀರಿನ ಅಗತ್ಯತೆಗಳನ್ನು ಪೂರೈಸುವ ಯೋಜನೆಗಳು ಬರಲಿ; ಮುಂದಿನ ವಿಷಯ ಮುಂದೆ ನೋಡೋಣ.

ಉತ್ತರ ಕನ್ನಡವನ್ನು ಬಲ್ಲವರಿಗೆ ಇವೆಲ್ಲ ವಿಷಯಗಳು ತಿಳಿದಿವೆ; ಆದರೆ ಹೊರಗಿನ ಬುದ್ಧಿವಂತರ ಅವಗಾಹನೆಗಾಗಿ ಹೇಳುತ್ತಿದ್ದೇನೆ- ಸಮುದ್ರವನ್ನು ಸೇರುವ ಮೊದಲು ಇಲ್ಲಿನ ನದಿಗಳು ಸುಮಾರು 50 ಕಿ.ಮೀ.ನಷ್ಟು ದೂರವನ್ನು ಸಮುದ್ರದ ಪಾತಳಿಯಲ್ಲಿ ಅಥವಾ ತುಸುವೇ ಇಳಿಜಾರಿನಲ್ಲಿ ಕ್ರಮಿಸುತ್ತವೆ. ಹೀಗೆ ಕೆಳಮುಖವಾಗಿ ಹರಿಯುವ ನೀರಿನ ಒತ್ತಡವು ಸಮುದ್ರದ ನೀರನ್ನು ಒಳಗೆ ಬಾರದಂತೆ ತಡೆಯುತ್ತದೆ. ಹೀಗೆ ಒಂದು ಪ್ರಮಾಣದ ಕನಿಷ್ಠ ಒತ್ತಡದಲ್ಲಿ ನದಿಗಳು ಹರಿದು ಸಮುದ್ರ ಸೇರಲೇಬೇಕು; ಇಲ್ಲವಾದರೆ ಸಮುದ್ರ ಒತ್ತಿಕೊಂಡು ಮೇಲೆ ಮೇಲೆ ಬಂದುಬಿಡುತ್ತದೆ. ಮೇಲೆ ಬಂದಂತೆ, ಅದು ಎಷ್ಟು ಮೇಲೆ ಬರುತ್ತದೆಯೋ ಅಷ್ಟು ದೂರದ ತನಕ ಬಾವಿ, ಕೆರೆ ಇತ್ಯಾದಿ ಸಿಹಿನೀರಿನ ಮೂಲಗಳಲ್ಲಿ ಉಪ್ಪುನೀರು ತುಂಬಿಕೊಳ್ಳುತ್ತದೆ. ಕ್ರಮೇಣ ಆ ಭಾಗವನ್ನೆಲ್ಲ ಉಪ್ಪಿನಂಶ ತುಂಬಿಕೊಂಡು ಭೂಮಿ ಬರಡಾಗುತ್ತದೆ. ಅಲ್ಲಿ ಏನನ್ನೂ ಬೆಳೆಯಲಾಗುವುದಿಲ್ಲ. ಮನೆ/ಕಟ್ಟಡಗಳು ಕೂಡ ಅಲ್ಲಿ ಜಡವಾಗಿ ಹೋಗುತ್ತವೆ. ವಿವರಿಸಿ ಹೇಳಬೇಕೆಂದರೆ, ಒಮ್ಮೆ ಮೇಲಿನಿಂದ ಹರಿಯುವ ನೀರಿನ ಒತ್ತಡ ಕಡಿಮೆಯಾದರೆ ಬಹುತೇಕ ಕರಾವಳಿ ಬಂಜರಾಗುತ್ತದೆ. ಇವೆಲ್ಲ ಬಹಳ ಸರಳ ವಿಷಯಗಳು. ಇನ್ನು ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ, ವನ್ಯಜೀವಿ, ಪಕ್ಷಿಸಂಕುಲ ಇಂಥವುಗಳ ಮೇಲೆ ಸಂಭವಿಸಬಹುದಾದ ಪ್ರಭಾವಗಳ ಕುರಿತು ವಿಜ್ಞಾನಿಗಳು ಹೇಳಬೇಕು. ಯೋಜನಾ ವರದಿ ಸಿದ್ಧಪಡಿಸಿದ ವ್ಯಕ್ತಿಗಳು ಈ ಕುರಿತು ಏನು ಹೇಳುತ್ತಾರೆ ಎನ್ನುವುದನ್ನು ಬಹಿರಂಗವಾಗಲಿ. ಅಲ್ಲಿಯ ತನಕ ಯೋಜನೆ ಮುಂದುವರಿಯುವಂತಿಲ್ಲ.

(ಲೇಖಕರು ಸಂವಹನಾ ಸಮಾಲೋಚಕರು)

ಜೋಶಿಯವರಿಗೆ ಕೆರೆತವಾದರೆ, ಉಳಿದವರು ಮುಲಾಮು ಹಚ್ಚಿಕೊಂಡಿದ್ದೇಕೆ?

ತಾಳ-ಮೇಳ
ಲೀನಾ ಜೋಶಿ
vveditoped@gmail.com

ಕಳೆದ ಒಂದು ತಿಂಗಳಿನಿಂದ 'ವಿಶ್ವವಾಣಿ' ಪತ್ರಿಕೆಯಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ತಾಳಮದ್ದಳೆ ಕುರಿತ ಚರ್ಚೆ, ಸಂವಾದವನ್ನು ಅತ್ಯಂತ ಕುತೂಹಲದಿಂದ ಓದುತ್ತಿದ್ದೇನೆ, ಗಮನಿಸುತ್ತಿದ್ದೇನೆ. ಈ ವಿವಾದ ಅಥವಾ ಚರ್ಚೆ ಎಲ್ಲಿಂದ ಆರಂಭವಾಯಿತು ಎಂಬುದನ್ನು ನೋಡಿದಾಗ ತಾಳಮದ್ದಳೆ ಅರ್ಥಧಾರಿಗಳ ಮುಖವಾಡ ಕಳಚಿ ಬೀಳುವುದು ನಿಶ್ಚಿತ. ಅರ್ಥಧಾರಿಗಳು ಎನಿಸಿಕೊಂಡವರು ಇಷ್ಟು ಬಾಲಿಶವಾಗಿ ಆಲೋಚಿಸುತ್ತಾರಾ, ನಾವು ಇವರ ಅರ್ಥಧಾರಿಕೆಯನ್ನೇ ಇಷ್ಟು ವರ್ಷ ಕೇಳುತ್ತಾ ಬಂದಿದ್ದಾ ಎಂಬ ಬೇಸರ, ವ್ಯಥೆಯೂ ಆಗುತ್ತಿದೆ.

'ವಿಶ್ವವಾಣಿ' ಪತ್ರಿಕೆ ಮತ್ತು ತಾಳಮದ್ದಳೆ ಅರ್ಥಧಾರಿಗಳ ನಡುವಿನ ಈ ಸಂಘರ್ಷದ ಮೂಲವನ್ನು ಕೆದಕಿದಾಗ, ನಿಜಕ್ಕೂ ಅರ್ಥಧಾರಿಗಳು ಎನಿಸಿಕೊಂಡವರು ತೋರಿದ ವರ್ತನೆ 'ಅಪ್ರಬುದ್ಧ' ಮತ್ತು 'ಬಾಲಿಶ' ಎಂದು ಎನಿಸದೇ ಇರದು.

ಈ ಇಡೀ ರಂಪಾಟಕ್ಕೆ ಕಾರಣವಾಗಿದ್ದು ವಿಶ್ವೇಶ್ವರ ಭಟ್ ಅವರ ಜನಪ್ರಿಯ ಅಂಕಣ 'ಭಟ್ಟರ್ ಸ್ಕಾಚ್'ನಲ್ಲಿ ಪ್ರಕಟವಾದ ಒಂದು ಪುಟ್ಟ ಪ್ರಶ್ನೋತ್ತರ. ಮೈಸೂರಿನ ಶೀಲಾ ಒಂಟಿಕೊಪ್ಪಲು ಎಂಬುವವರು, 'ಭಟ್ರೇ, ಮನುಷ್ಯನಿಗೆ ಬುದ್ಧಿವಂತಿಕೆಯಿದ್ದೂ ಅದು ಭೂಷಣ ಎನಿಸಿಕೊಳ್ಳದಿದ್ದರೆ?' ಎಂಬ ಪ್ರಶ್ನೆಗೆ ಭಟ್ಟರು, 'ಅಂಥವರಿಗೆ ಪ್ರಭಾಕರ ಜೋಶಿ ಅಂತಾರೆ!' ಎಂದು ಉತ್ತರಿಸಿದ್ದರು. ಪ್ರಭಾಕರ ಜೋಶಿ ಅಂದ್ರೆ ಯಾರು ಎಂಬುದನ್ನು ಭಟ್ಟರು ಹೇಳಿರಲಿಲ್ಲ. ಆದರೆ ತಾಳಮದ್ದಳೆ ಅರ್ಥಧಾರಿಗಳಾದ ಡಾ.ಎಂ.ಪ್ರಭಾಕರ ಜೋಶಿಯವರು ಇದು ತಮ್ಮ ಕುರಿತೇ ಹೇಳಿದ್ದು ಎಂದು ಭಾವಿಸಿಬಿಟ್ಟರು. ಜಗತ್ತಿನಲ್ಲಿ ಪ್ರಭಾಕರ ಜೋಶಿ ಎಂಬುವವರು ಒಬ್ಬರೇ ಇದ್ದಾರಾ? ಅದು ಇವರೇನಾ? 'ಕುಂಬಳಕಾಯಿ ಕಳ್ಳ ಅಂದ್ರೆ, ಹೆಗಲು ಮುಟ್ಟಿಕೊಂಡ' ಎಂಬ ಗಾದೆಮಾತಿನಂತೆ, ಪ್ರಭಾಕರ ಜೋಶಿ ಅವರು ದಾರಿಯ ಮೇಲೆ ಹೋಗುವ ಮಾರಿಯನ್ನು ಅದರ ಪಾಡಿಗೆ ಹೋಗಗೊಡದೇ ಮನೆಯೊಳಗೇ ಬಿಟ್ಟುಕೊಂಡುಬಿಟ್ಟರು.

ಸಮಸ್ಯೆ ಶುರುವಾಗಿದ್ದೇ ಆಗ. ಪ್ರಭಾಕರ ಜೋಶಿ ಅವರು ತಮ್ಮ ಪಾಡಿಗೆ ತಾವಿದ್ದಿದ್ದರೆ, ಅದು ಸಮಸ್ಯೆಯೇ ಆಗುತ್ತಿರಲಿಲ್ಲ. ಅಷ್ಟಕ್ಕೂ 'ಭಟ್ಟರ್ ಸ್ಕಾಚ್' ಎಂಬುದು ತಿಳಿಹಾಸ್ಯದ, ಕಾಲೆಳೆಯುವ ಮನೋಭಾವದ, ಲಘುಹಾಸ್ಯದ, ಓದಿ ಉಪೇಕ್ಷಿಸಬಹುದಾದ ಒಂದು ಅಂಕಣ. ನಾನೂ ಈ ಅಂಕಣವನ್ನು ಹತ್ತಾರು ವರ್ಷಗಳಿಂದ ಓದುತ್ತಾ ಬಂದಿದ್ದೇನೆ. ಈ ಅಂಕಣದಲ್ಲಿ ಭಟ್ಟರು ತಮ್ಮನ್ನು ಕೂಡ ಗೇಲಿ ಮಾಡಿಕೊಳ್ಳುತ್ತಾರೆ. ಈ ಅಂಶವೇ 'ಭಟ್ಟರ್ ಸ್ಕಾಚ್' ಅಂಕಣದ ಸ್ವಾರಸ್ಯ ಮತ್ತು ಮಹತ್ವವನ್ನು ಎತ್ತಿಹಿಡಿದಿದೆ. ಪ್ರಭಾಕರ ಜೋಶಿಯವರನ್ನು ಹಳಿಯಬೇಕು, ನಿಂದಿಸಬೇಕು ಎಂದಿದ್ದರೆ, ಭಟ್ಟರಿಗೆ ಅವರದ್ದೇ ಪತ್ರಿಕೆಯಿದೆಯಲ್ಲವೇ? ಅವರೇ ಮಾಲೀಕರು, ಅವರೇ ಸಂಪಾದಕರು. ಅದಕ್ಕಾಗಿ 'ಭಟ್ಟರ್ ಸ್ಕಾಚ್' ಅಂಕಣಕ್ಕಿಂತ ಮುಖಪುಟವೇ ಇತ್ತಲ್ಲ? ಜೋಶಿಯವರನ್ನು ಟೀಕಿಸಲು ಇಡೀ ಪತ್ರಿಕೆಯೇ ಇತ್ತಲ್ಲ? ಆದರೆ ನಾನು ಬಲ್ಲಂತೆ, ತಮ್ಮದೇ ಪತ್ರಿಕೆಯಿದ್ದರೂ ಭಟ್ಟರು ಇಲ್ಲಿ ತನಕ ಪತ್ರಿಕೆಯನ್ನು ಸ್ವಾರ್ಥಕ್ಕೆ, ಸ್ವಂತಕ್ಕೆ ಬಳಸಿಕೊಂಡ ನಿದರ್ಶನಗಳಿಲ್ಲ.

ಒಂದು ವೇಳೆ ಪ್ರಭಾಕರ ಜೋಶಿಯವರಿಗೆ ಅನುಮಾನ ಇದ್ದಿದ್ದರೆ, ಭಟ್ಟರನ್ನೇ ನೇರವಾಗಿ ಸಂಪರ್ಕಿಸಿ, 'ನೀವು ಬರೆದಿದ್ದು ಯಾರ ಕುರಿತು?' ಎಂದು ಸ್ಪಷ್ಟನೆ ಬಯಸಬೇಕಿತ್ತು. ಅದು ಸಮರ್ಪಕವಾದ ನಡೆಯೂ ಆಗುತ್ತಿತ್ತು. ಅದರ ಬದಲು ಜೋಶಿಯವರು ಏಕಾಏಕಿ ಭಟ್ಟರು ತಮ್ಮ ವಿರುದ್ಧವೇ ಬರೆದಿದ್ದಾರೆ ಎಂದು 'ಹೆಗಲು ಮುಟ್ಟಿಕೊಂಡು'ಬಿಟ್ಟರು. ಪ್ರಭಾಕರ ಜೋಶಿ ಎಂಬ ಹೆಸರಿನವರು ತಾವೊಬ್ಬರೇ ಎಂದು ಅವರು ಯಾಕೆ ಭಾವಿಸಿದರೋ? ಅಷ್ಟಕ್ಕೂ ಭಟ್ಟರು, 'ಡಾ. ಎಂ.ಪ್ರಭಾಕರ ಜೋಶಿ ಎಂದಾಗಲಿ, ತಾಳಮದ್ದಳೆ ಅರ್ಥಧಾರಿಗಳಾದ ಪ್ರಭಾಕರ ಜೋಶಿ ಎಂದಾಗಲಿ' ಹೇಳಿರಲಿಲ್ಲ. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ, ಅದೊಂದು ನಿರ್ಲಕ್ಷಿಸಬಹುದಾದ 'ವೈಡ್ ಬಾಲ್'! ಜೋಶಿಯವರು ವೈಡ್ ಬಾಲನ್ನು ಬೆನ್ನಟ್ಟಿಕೊಂಡು ಹೊಡೆಯಲು ಹೋದದ್ದು, ಇಡೀ ವಿವಾದಕ್ಕೆ ಕಾರಣವಾಯಿತು. ಎಂಬತ್ತು ವರ್ಷ ವಯಸ್ಸಿನ ಜ್ಞಾನವೃದ್ಧರಾದ ಜೋಶಿಯವರಿಗೆ ಇಂಥ ಸಣ್ಣ ವಿಷಯ ಹೊಳೆಯದಿದ್ದುದು ಆಶ್ಚರ್ಯವೇ ಸರಿ!

ಒಂದು ವೇಳೆ ಭಟ್ಟರು, ಪ್ರಭಾಕರ ಜೋಶಿಯವರನ್ನೇ ಕುರಿತು ಬರೆದಿದ್ದಾರೆ ಎಂದಿಟ್ಟುಕೊಂಡರೂ, ನಾಲ್ಕು ಪದಗಳ ಆ ಒಂದು ಸಾಲಿನ ಆ ಉತ್ತರವನ್ನು ಜೋಶಿಯವರು ಅಷ್ಟು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವೇ ಇರಲಿಲ್ಲ. ಜೋಶಿಯವರು ತಾಳಮದ್ದಳೆ ಅರ್ಥ ಹೇಳುವಾಗ, ತಮಾಷೆ, ಗೇಲಿ, ಹಾಸ್ಯ, ಅಪಹಾಸ್ಯವನ್ನು ಮಾಡಿಯೇ ಇಲ್ಲವೇ? ನಾನೇ ಅನೇಕ ಸಲ ಅವರು ಬೇರೆ ಕಲಾವಿದರಿಗೆ ನಾಟುವಂತೆ ಕಟುಟೀಕೆ ಮಾಡಿದ್ದನ್ನು, ಕಾಲೆಳೆದಿದ್ದನ್ನು ಕೇಳಿದ್ದೇನೆ. ಜೋಶಿಯವರು ಎಲ್ಲರನ್ನೂ ಹಿಂದಗಡೆಯಿಂದ ಕೆಟ್ಟದಾಗಿ ಟೀಕಿಸುತ್ತಾರೆ ಹಾಗೂ ಎಲ್ಲರ ಬಗ್ಗೆಯೂ ಲಘುವಾಗಿ ಮಾತಾಡುತ್ತಾರೆ ಎಂಬುದು ಅವರನ್ನು ಹತ್ತಿರದಿಂದ ಬಲ್ಲ ಎಲ್ಲರಿಗೂ ಗೊತ್ತಿರುವ ವಿಚಾರವೇ. ತಮ್ಮ ಬಗ್ಗೆ ಬರೆದ ಒಂದು ಸಾಲಿನ ಸಣ್ಣ ಟೀಕೆಯನ್ನೂ ಜೋಶಿಯವರು ಸಹಿಸಿಕೊಳ್ಳದವರಾದರಾ? ನಿಜಕ್ಕೂ ಆಶ್ಚರ್ಯವಾಗುತ್ತದೆ. ಯಾರು ಸ್ವಮರ್ಶೆಗೆ ಒಳಗಾಗಲು ಬಯಸುವುದಿಲ್ಲವೋ, ತಮ್ಮ ಬಗೆಗಿನ ತಿಳಿಹಾಸ್ಯವನ್ನೂ ಒಪ್ಪಿಕೊಳ್ಳುವುದಿಲ್ಲವೋ, ಅವರು ಕಲಾವಿದರಾಗಲು ಲಾಯಕ್ಕೇ ಅಲ್ಲ. ವಿನಯ, ಸೌಜನ್ಯವೇ ಒಬ್ಬ ಕಲಾವಿದನಿಗೆ ಭೂಷಣ. ಆ ಸಂದರ್ಭದಲ್ಲಿ ಜೋಶಿಯವರು ವಿನಯವಂತಿಕೆಯನ್ನು ಮೆರೆಯಬೇಕಿತ್ತು. ಆದರೆ ಅವರು false victim card play ಮಾಡಿದರು. ಇದರ ಅಗತ್ಯವೇ ಇರಲಿಲ್ಲ.



ಭಟ್ಟರು ನಿತ್ಯವೂ 'ಭಟ್ಟರ್ ಸ್ಕಾಚ್'ನಲ್ಲಿ ಕೆಲವರದ್ದಾದರೂ ಕಾಲೆಳೆಯುತ್ತಾರೆ. ಅವರಾರೂ ಇಲ್ಲಿ ತನಕ ಅವರ ಜತೆ ಕಾಲುಕೆರೆದು ಜಗಳ ತೆಗೆದಿಲ್ಲ. ಜೋಶಿಯವರು ಹಾಗಾದರೆ ತಾಳಮದ್ದಳೆಯಲ್ಲಿ ಯಾರನ್ನೂ ಟೀಕಿಸಿಯೇ ಇಲ್ಲವೇ? ಇವರು ಆಡಿದ ನಂಜುಮಾತುಗಳನ್ನು ಅನೇಕರು ಸಹಿಸಿಕೊಂಡಿಲ್ಲವೇ? ಆದರೆ ತಮ್ಮ ಬಗ್ಗೆ ಬಂದ ನಾಲ್ಕು ಪದಗಳನ್ನು ಒಳಗೊಂಡ ಒಂದು ಚಿಕ್ಕ ಸಾಲಿನ ಟೀಕೆಯನ್ನೂ ಜೋಶಿಯವರು ಸಹಿಸಿಕೊಳ್ಳದವರಾದರಾ? ನನಗೆ ಬಹಳ ಆಶ್ಚರ್ಯ ಮತ್ತು ಅವರ ಬಗ್ಗೆ ಅನುಕಂಪ ಆಗುತ್ತಿರುವುದು ಈ ಕಾರಣಕ್ಕೆ.

ಅದಕ್ಕಿಂತ ಹೆಚ್ಚಾಗಿ, ನನಗೆ ಮುಖ್ಯವಾಗಿ ಕಾಣುವುದು 'ಭಟ್ಟರ್ ಸ್ಕಾಚ್'ನಲ್ಲಿ ಬಂದ ನಂತರ ಅವರು ವರ್ತಿಸಿದ ರೀತಿ. ಅವರು ತಮ್ಮ ಆಪ್ತ ಸ್ನೇಹಿತರಿಗೆ, ತಾಳಮದ್ದಳೆ ಸಹ-ಅರ್ಥಧಾರಿಗಳಿಗೆ, ಫೋನ್ ಮಾಡಿ ಗೋಳು ತೋಡಿಕೊಂಡು, ಭಟ್ಟರ ವಿರುದ್ಧ ಸಮರ ಸಾರುವಂತೆ ಕರೆಕೊಟ್ಟಿದ್ದು ಮಾತ್ರ ಅತ್ಯಂತ ಬಾಲಿಶ ಮತ್ತು ಹತಾಶ ನಡೆಯಾಗಿತ್ತು. ಭಟ್ಟರ ಆ ಟೀಕೆಯನ್ನು 'ತಾಳಮದ್ದಳೆ ಮೇಲೆ ಆಕ್ರಮಣ ಮತ್ತು ಅರ್ಥಧಾರಿಗಳ ಅವಹೇಳನ' ಎಂಬ ರೀತಿಯಲ್ಲಿ ಬಿಂಬಿಸಲು ಯತ್ನಿಸಿದರು. ತಮಗೆ ಆಪ್ತರಾದ ಅರ್ಥಧಾರಿಗಳ ಮುಂದೆ ಅಳಲನ್ನು ತೋಡಿಕೊಂಡರು. ಭಟ್ಟರ ಹೇಳಿಕೆಯನ್ನು ಖಂಡಿಸುವಂತೆ ದುಂಬಾಲು ಬಿದ್ದರು.

ಇಡೀ ವಿಷಯದ ವಾಸ್ತವವನ್ನು ಹೇಳದೇ ಎಲ್ಲರ ನೆರವನ್ನು ಬಯಸಿದರು. ಜೋಶಿಯವರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು, ಖ್ಯಾತ ಅರ್ಥಧಾರಿಗಳಾದ ಕೆರೆಕ್ಕೈ ಉಮಾಕಾಂತ ಭಟ್ಟ ಮತ್ತು ಉಜಿರೆ ಅಶೋಕ ಭಟ್ಟರು, ಖಂಡನಾ ಹೇಳಿಕೆಯನ್ನು ಹೊಸೆದುಬಿಟ್ಟರು. ಅಸಲಿಗೆ ಅವರಿಬ್ಬರಿಗೂ ವಿವಾದದ ನಿಜವಾದ ಮುಖ ಗೊತ್ತೇ ಇರಲಿಲ್ಲ. ಗೊತ್ತಿದ್ದಿದ್ದರೆ ಪ್ರಾಜ್ಞರಾದ ಅವರಿಬ್ಬರೂ ಖಂಡನಾ ಹೇಳಿಕೆ ಕೊಡುತ್ತಿರಲಿಲ್ಲ. ಅಷ್ಟೂ ಸಾಲದು ಎಂಬಂತೆ ಜೋಶಿಯವರು ಜಾತಿ ಕಾರ್ಡ್ ಪ್ಲೇ ಮಾಡಿದರು. ತಮ್ಮ ಸಮುದಾಯವಾದ ಚಿತ್ಪಾವನ ಬ್ರಾಹ್ಮಣ ಬಂಧುಗಳಿಗೆ ಫೋನ್ ಮಾಡಿ, 'ಭಟ್ಟರ್ ಸ್ಕಾಚ್' ಟೀಕೆಯನ್ನು ವಿರೋಧಿಸುವಂತೆ ದುಂಬಾಲು ಬಿದ್ದರು. ಅವರೆಲ್ಲರೂ ಸಾಮಾಜಿಕ ಜಾಲತಾಣಗಳಲ್ಲಿ ಜೋಶಿಯವರ ಪರವಾಗಿ ಪೋಸ್ಟ್ ಹಾಕಿದರು.

ತಾಳಮದ್ದಳೆ ಅಭಿಮಾನಿಗಳನ್ನು, ಅರ್ಥಧಾರಿ ಸ್ನೇಹಿತರನ್ನು ಭಟ್ಟರ ವಿರುದ್ಧ ಎತ್ತಿಕಟ್ಟುವುದನ್ನೇ ಮತ್ತು ಅವರನ್ನು ತಪ್ಪುದಾರಿಗೆ ಎಳೆಯುವುದನ್ನೇ ಜೋಶಿಯವರು ಕಾಯಕ ಮಾಡಿಕೊಂಡರು. ತಾಳಮದ್ದಳೆ ಮೇಲೆ ಭಟ್ಟರು ಆಕ್ರಮಣ ಮಾಡುತ್ತಿದ್ದಾರೆ ಎಂಬ ರೀತಿಯಲ್ಲಿ ಎಲ್ಲೆಡೆ ಬೊಬ್ಬೆ ಹೊಡೆಯಲಾರಂಭಿಸಿದರು. 'ಭಟ್ಟರಿಗೆ ತಾಳಮದ್ದಳೆಯ ಬಗ್ಗೆ ಏನು ಗೊತ್ತು?' ಎಂದು ಅಸಂಬದ್ಧ ಮತ್ತು ಧಾರ್ಷ್ಟ್ಯದ ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಅದಕ್ಕೆ ಪ್ರತಿಕ್ರಿಯೆಯಾಗಿ ಭಟ್ಟರು, 'ಇದು ಐಟಮ್‌ಸಾಂಗ್ ಡಾನ್ಸರ್‌ಗಳಂತಿರುವ ಕೆಲವು ತಾಳಮದ್ದಳೆ ಅರ್ಥಧಾರಿಗಳನ್ನು ತಿರಸ್ಕರಿಸುವ ಕಾಲ' ಎಂಬ ಲೇಖನ ಬರೆದರು. ಅದರಲ್ಲಿ ಭಟ್ಟರು ತಾಳಮದ್ದಳೆ ಕಲೆಯ ಶ್ರೇಷ್ಠತೆಯನ್ನು ಅದ್ಭುತವಾಗಿ ಕಟ್ಟಿಕೊಟ್ಟರು. ಅಂತಾರಾಷ್ಟ್ರೀಯ ರಾಜತಾಂತ್ರಿಕ ಮಾತುಕತೆಗಿಂತ ತಾಳಮದ್ದಳೆ ಶ್ರೇಷ್ಠವಾದುದು ಎಂದು ಬರೆದರು. ಆ ಲೇಖನದಲ್ಲಿ ಶೇ. 99ರಷ್ಟು ಭಾಗ ತಾಳಮದ್ದಳೆಯ ಉತ್ತಮ ಸಂಗತಿಗಳ ಬಗ್ಗೆ ಇತ್ತು. ತಾಳಮದ್ದಳೆ ಕಲಾಪ್ರಕಾರಕ್ಕೆ ಭೂಷಣಪ್ರಾಯರಾದ ಹದಿನೈದು ಮಂದಿಯ ಹೆಸರನ್ನು ಆ ಲೇಖನದಲ್ಲಿ ಪ್ರಸ್ತಾಪಿಸುತ್ತಾ ಭಟ್ಟರು, ಪ್ರಭಾಕರ ಜೋಶಿಯವರ ಹೆಸರನ್ನೂ ಬರೆದರು ಮತ್ತು ಆ ಲೇಖನದಲ್ಲಿ ಪ್ರಭಾಕರ ಜೋಶಿಯವರ ಫೋಟೋವನ್ನೂ ಹಾಕಿದರು. ಜೋಶಿಯವರ ಬಗ್ಗೆ ದ್ವೇಷವಿದ್ದಿದ್ದರೆ ಭಟ್ಟರು, ಅವರ (ಜೋಶಿ) ಹೆಸರನ್ನು ಮತ್ತು ಫೋಟೋವನ್ನು ಪ್ರಕಟಿಸುತ್ತಿರಲಿಲ್ಲ. ಆದರೆ ಜೋಶಿ ಮತ್ತು ಅವರ ಸಂಗಡಿಗರಿಗೆ ಅದ್ಯಾವ ಉತ್ತಮ ಅಂಶಗಳೂ ಕಾಣಲಿಲ್ಲ. ಕೇವಲ 'ಐಟಮ್‌ಸಾಂಗ್ ಡಾನ್ಸರ್' ಎಂಬುದಷ್ಟೇ ಕಂಡಿತು. ಹಾಗೆಂದು ಭಟ್ಟರು 'ಐಟಮ್‌ಸಾಂಗ್ ಡಾನ್ಸರ್' ಎಂದು ಯಾರನ್ನೂ ಹೆಸರಿಸಿರಲಿಲ್ಲ. ಆಗಲೂ ಕೆಲ ಅರ್ಥಧಾರಿಗಳು ಹೆಗಲು ಮುಟ್ಟಿಕೊಂಡರು!

ಅದಾದ ಬಳಿಕ ಭಟ್ಟರು ತಮ್ಮ ಪತ್ರಿಕೆಯಲ್ಲಿ ತಾಳಮದ್ದಳೆ ಕಲೆಯ ಕುರಿತು ಮುಕ್ತ ಸಂವಾದಕ್ಕೆ ತಮ್ಮ ಪತ್ರಿಕೆಯ ಪುಟಗಳನ್ನು ತೆರೆದಿಟ್ಟರು. ಪರ-ವಿರೋಧದ ಲೇಖನಗಳಿಗೆ ಸ್ವಾಗತ ಎಂದು ಹೇಳಿದರು. ಯಾರು ಬೇಕಾದರೂ ಬರೆಯಬಹುದು ಎಂದು ದಿನವೂ ಪ್ರಕಟಣೆ ನೀಡಿದರು. ಹದಿನೈದಕ್ಕೂ ಹೆಚ್ಚು ಜನ ತಮ್ಮ ಅಭಿಪ್ರಾಯಗಳನ್ನು ಬರೆದರು. ಜೋಶಿಯವರು ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಬಹುದಿತ್ತು. 'ಐಟಮ್‌ಸಾಂಗ್ ಡಾನ್ಸರ್' ಲೇಖನಕ್ಕೆ ಪ್ರತಿಕ್ರಿಯಿಸಬೇಕಿತ್ತು. ತಾಳಮದ್ದಳೆಯನ್ನು ಸರಿಯಾದ perspectiveನಲ್ಲಿ ಹೇಗೆ ಗ್ರಹಿಸಬೇಕು ಎಂಬ ಬಗ್ಗೆ ತಮ್ಮ ವಿದ್ವತ್‌ಪೂರ್ಣ ಲೇಖನವನ್ನು ಬರೆಯಬಹುದಿತ್ತು. ಅವರಂತೆಯೇ, ಉಮಾಕಾಂತ ಭಟ್ಟ, ಉಜಿರೆ ಅಶೋಕ ಭಟ್ಟ, ವಾಸುದೇವ ರಂಗ ಭಟ್ಟ ಸೇರಿದಂತೆ ವಿಷಯ ಪರಿಣತರು ಆ ಚರ್ಚೆಯಲ್ಲಿ ಭಾಗವಹಿಸಬಹುದಾಗಿತ್ತು. ಅದು ಸರಿಯಾದ ಮಾರ್ಗವೂ ಆಗಿತ್ತು. ಆದರೆ ಅವರೆಲ್ಲರೂ ಪಲಾಯನವಾದಕ್ಕೆ ಶರಣಾದರು. ಯಾರೂ ಚರ್ಚೆಗೆ ಬರಲೇ ಇಲ್ಲ.

ಅದಕ್ಕೆ ವ್ಯತಿರಿಕ್ತವಾಗಿ ಅವರೆಲ್ಲ ಪತ್ರಿಕಾಗೋಷ್ಠಿ ಕರೆದುಬಿಟ್ಟರು. ಮತ್ತೊಮ್ಮೆ ಅರ್ಥಧಾರಿಗಳೆಲ್ಲ ಜೋಶಿಯವರು ತೋಡಿದ ಖೆಡ್ಡಾಕ್ಕೆ ಬಿದ್ದುಬಿಟ್ಟರು. ಜೋಶಿಯವರ ಬಗ್ಗೆ ಬರೆದ ಒಂದು ಸಾಲಿನ ಭಟ್ಟರ ಸ್ಕಾಚ್ ಉತ್ತರಕ್ಕೂ, ತಾಳಮದ್ದಳೆ ಕಲೆಗೂ, ಅರ್ಥಧಾರಿಗಳಿಗೂ, ಸಂಬಂಧವೇ ಇರಲಿಲ್ಲ. ಅದು ಉಳಿದ ಅರ್ಥಧಾರಿಗಳಿಗೆ ಅನ್ವಯಿಸದ ವಿಷಯವಾಗಿತ್ತು. ಆದರೆ ಅವರೆಲ್ಲರನ್ನೂ ಜೋಶಿಯವರು ತಮ್ಮ ಪರವಾಗಿ ಕವಚವಾಗಿ ಬಳಸಿಕೊಂಡುಬಿಟ್ಟರು. ತಮ್ಮ ಮೇಲಿನ ಟೀಕೆಯನ್ನು ಅವರು ತಾಳಮದ್ದಳೆಯ ವಿರುದ್ಧದ ಆಕ್ರಮಣ ಎಂದು ಸಹವರ್ತಿಗಳ ಮುಂದೆ ಬಿಂಬಿಸಿಬಿಟ್ಟರು. ತಮಾಷೆ ಅಂದ್ರೆ, ಈ ಅರ್ಥಧಾರಿಗಳೆಲ್ಲ 'ಹನಿಟ್ರ್ಯಾಪ್' ಆಗಿಬಿಟ್ಟರು.

ಒಂದು ಪದ, ಒಂದು ನಡೆ, ಒಂದು ಘಟನೆ ಬಗ್ಗೆ ತಾಳಮದ್ದಳೆ ಪ್ರಸಂಗದಲ್ಲಿ ತಾಸುಗಟ್ಟಲೆ ವ್ಯಾಖ್ಯಾನಿಸುವ ಅರ್ಥಧಾರಿಗಳಿಗೆ ತಾವು ಟ್ರ್ಯಾಪ್ ಆಗುತ್ತಿದ್ದೇವೆ ಎಂಬುದು ಗೊತ್ತಾಗದೇ ಹೋದುದು ಮಾತ್ರ ಆಶ್ಚರ್ಯವೇ ಸರಿ. ತಮಗೂ, ಭಟ್ಟರಿಗೂ, ಅವರ ಭಟ್ಟರ ಸ್ಕಾಚ್ ಉತ್ತರಕ್ಕೂ, ತಾಳಮದ್ದಳೆಗೂ, ಒಂದಕ್ಕೊಂದು ಸಂಬಂಧವೇ ಇಲ್ಲ ಎಂಬುದು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ ಆ ಹದಿನಾಲ್ಕು ಮಂದಿ ಅರ್ಥಧಾರಿಗಳಿಗೆ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು. ಜೋಶಿಯವರು ಅವರೆಲ್ಲರನ್ನೂ ಹೊಂಡಕ್ಕೆ ಕೆಡವಿದ್ದಲ್ಲದೇ, ಅವರ ವಿಶ್ವಾಸಕ್ಕೆ ದ್ರೋಹ ಎಸಗಿದ್ದರು.

''ನೀವು ಕ್ಷಮೆ ಕೇಳಬೇಕು, ಇಲ್ಲದಿದ್ದರೆ ಕೋರ್ಟಿಗೆ ಹೋಗುತ್ತೇವೆ'' ಎಂದು ವಿಶ್ವೇಶ್ವರ ಭಟ್ಟರಿಗೆ ಧಮಕಿ ಹಾಕುವ ರೀತಿಯಲ್ಲಿ ಆ ಎಲ್ಲ ಹದಿನಾಲ್ಕು ಮಂದಿ ಪತ್ರಿಕಾಗೋಷ್ಠಿಯಲ್ಲಿ ಹೂಂಕರಿಸಿಬಿಟ್ಟರು.

ಭಟ್ಟರು ಇವೆಲ್ಲ ಘಟನೆಗಳು ನಡೆಯುವಾಗ ಮಜಾ ತೆಗೆದುಕೊಳ್ಳುತ್ತಿದ್ದಿರಬಹುದು. 'ಭಟ್ಟರ್ ಸ್ಕಾಚ್' ಅಂಕಣದಲ್ಲಿ ತಾಳಮದ್ದಳೆಯ ಅಬ್ಬರ ಮಾತ್ರ ದಿನವೂ ಮುಂದುವರಿಯುತ್ತಿತ್ತು. ಅಷ್ಟಕ್ಕೂ 'ಭಟ್ಟರ್ ಸ್ಕಾಚ್' ಅಂಕಣದಲ್ಲಿ ಭಟ್ಟರು ಜೋಶಿ, ಅಶೋಕ ಭಟ್ಟ ಮತ್ತು ಉಮಾಕಾಂತ ಭಟ್ಟರ (ಎರಡು-ಮೂರನೆಯವರು ಅವರ ಹೇಳಿಕೆಯನ್ನು ಖಂಡಿಸಿದ್ದಕ್ಕಾಗಿ) ಹೊರತಾಗಿ ಬೇರೆ ಯಾರನ್ನೂ ಟೀಕಿಸಿರಲಿಲ್ಲ. ಆದರೂ ಆ ಹದಿನಾಲ್ಕು ಮಂದಿ ಉಡುಪಿಯ 'ಯಕ್ಷಗಾನ ಕಲಾರಂಗ'ದಲ್ಲಿ 'ಸತಿಯೊಡನೆ ಸಹಗಮನ'ಕ್ಕೆ ಯಾಕೆ ಮುಂದಾದರೋ?! ಇದೊಂದು avoidabale issue ಆಗಿತ್ತು. ಕೆರೆತವಾಗಿದ್ದು ಜೋಶಿಯವರಿಗೆ, ಆದರೆ ಮುಲಾಮು ಮೆತ್ತಿಕೊಂಡಿದ್ದು ಆ ಹದಿನಾಲ್ಕು ಮಂದಿ! ಅಲ್ಲಿಗೆ ಜೋಶಿಯವರು ಇವರೆಲ್ಲರನ್ನೂ ದಾರಿತಪ್ಪಿಸಿದ್ದು ದಿಟವಾಗಿತ್ತು.

ಈ ಮಧ್ಯೆ ಭಟ್ಟರು, 'ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ. ಯಾಕಂದರೆ ನಾನು ಯಾವ ತಪ್ಪನ್ನೂ ಮಾಡಿಲ್ಲ. ಬೇಕಾದರೆ ಕೋರ್ಟಿಗೆ ಹೋಗಿ, ಅದಕ್ಕೂ ಮುನ್ನ ಬಹಿರಂಗ ಚರ್ಚೆಗೆ ಬನ್ನಿ' ಎಂದು ಹೇಳಿಬಿಟ್ಟರು. ಅರ್ಥಧಾರಿಗಳಿಗೆ ಈಗ ಉಭಯಸಂಕಟ. ಜೋಶಿಯವರ ಗೇಮ್‌ಪ್ಲಾನ್ ಏನು ಎಂಬುದು ಅವರಿಗೆಲ್ಲ ಈಗ ತಡವಾಗಿಯಾದರೂ ಗೊತ್ತಾಗಿದೆ. ಅವರೆಲ್ಲ ಈಗ ಪ್ರಸಂಗ ಮುಗಿದ ಬಳಿಕ ಕಣ್ಣುಜ್ಜಿಕೊಳ್ಳುವಂತೆ ಎಚ್ಚರಗೊಂಡಂತಿದೆ. ಒಬ್ಬ ನಿಜವಾದ ವಿದ್ವಾಂಸ ಅಥವಾ ಕಲಾವಿದ ಟೀಕೆಗಳಿಗೆ ಉತ್ತರಿಸಬೇಕಾದದ್ದು ತನ್ನ ಕಲೆಯ ಮೂಲಕವೇ ಹೊರತು, ಪತ್ರಿಕಾಗೋಷ್ಠಿ ನಡೆಸಿ ಜಗಳಾಡುವುದರ ಮೂಲಕವಲ್ಲ. 'ಮಾತಿನ ಮಲ್ಲರು' ಎಂದು ಕರೆಸಿಕೊಳ್ಳುವ ಅರ್ಥಧಾರಿಗಳು, ಒಂದು ಸಣ್ಣ ಪ್ರಶ್ನೋತ್ತರದ ಏಟಿಗೆ ಈ ಪರಿ ತತ್ತರಿಸಿಹೋದದ್ದು, ಬಹಿರಂಗವಾಗಿ ಬೆತ್ತಲಾದದ್ದು, ಅವರ ವ್ಯಕ್ತಿತ್ವದ ಟೊಳ್ಳುತನವನ್ನು ಮತ್ತು ಬಾಲಿಶತನವನ್ನು ಜಗಜ್ಜಾಹೀರು ಮಾಡಿದೆ.

ಇಷ್ಟಾಗಿಯೂ ಕಟ್ಟಕಡೆಯದಾಗಿ ನಮಗೆಲ್ಲ ಕಾಡುವ ಪ್ರಶ್ನೆ ಅಂದ್ರೆ– 'ಅಂಥವರಿಗೆ ಪ್ರಭಾಕರ ಜೋಶಿ ಅಂತಾರೆ!' ಎಂದು ಭಟ್ಟರು 'ಭಟ್ಟರ್ ಸ್ಕಾಚ್'ನಲ್ಲಿ ಬರೆದಿದ್ದು ಯಾಕೆ? ಇದನ್ನು ಭಟ್ಟರೇ ಹೇಳಬೇಕು. ಆಗ ಅಸಲಿ ಸಂಗತಿ ಗೊತ್ತಾಗುತ್ತದೆ. ಪಿಕ್ಚರ್ ಅಭಿ ಬಾಕಿ ಹೈ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:06

ಸಮಾಚಾರ ಸಣ್ಣದಲ್ಲ

ಸಸ್ಯಗಳ ಉಸಿರಾಟ ನೇರ ನೋಡುವ ಅಪೂರ್ವ ಸಾಧನ ಸಿದ್ಧ

ದೆಹಲಿ: ಸಸ್ಯಗಳು ಉಸಿರಾಡುತ್ತವೆ ಎನ್ನುವುದನ್ನು ವಿಶ್ವಕ್ಕೆ ತಿಳಿಸಿದ್ದು ಭಾರತೀಯ ವಿಜ್ಞಾನಿ ಜಗದೀಶ್ ವಿಜ್ಞಾನಿ ಜಗದೀಶ್ ಚಂದ್ರಬೋಸ್. ಅವು ಹೇಗೆ ಉಸಿರಾಡುತ್ತವೆ ಎಂದು ನೇರವಾಗಿ ನೋಡುವ ಸಾಧನವನ್ನು ಅಮೆರಿಕದ ಇಲಿನಾಯ್ಸ್ ಅರ್ಬಾನಾ ಶಾಂಪೇನ್ ವಿವಿ ಕಂಡುಹಿಡಿದಿದೆ. ಇದಕ್ಕೆ ಸ್ಟೊಮಾಟಾ ಇನ್‌ಸೈಟ್ ಎಂದು ಹೆಸರಿಡಲಾಗಿದೆ. ಸಸ್ಯಗಳ ಎಲೆಗಳಲ್ಲಿ ಅತಿಸೂಕ್ಷ್ಮವಾಗಿ ರಂಧ್ರವಿರುತ್ತದೆ. ಇದರ ಮೂಲಕ ಸಸ್ಯಗಳು ಉಸಿರಾಡುತ್ತವೆ. ಅದನ್ನು ನೇರವಾಗಿ ನೋಡುವಂತಹ ಸಾಧನ ಇದೀಗ ಸಿದ್ಧವಾಗಿದೆ. ವಿಶ್ವದಲ್ಲೇ ಮೊದಲ ಬಾರಿ ಇಂತಹದ್ದೊಂದು ಅಪೂರ್ವ ಸಂಶೋಧನೆ ನಡೆದಿದೆ. ಸಸ್ಯಗಳು ಇಂಗಾಲವನ್ನು ಒಳಗೆಳೆದುಕೊಂಡು ಆಮ್ಲಜನಕವನ್ನು ಹೊರಬಿಡುತ್ತವೆ. ನೀರನ್ನು ಒಳಕ್ಕೆಳೆದುಕೊಳ್ಳಲು ಅವಕ್ಕಿರುವ ಕಿರುರಂಧ್ರಗಳನ್ನು ಈ ಸಾಧನದ ಮೂಲಕ ನಾವು ನೋಡಬಹುದು.

ಕರೂರು ಕಾಲ್ತುಳಿತ: 6 ಗಂಟೆ ವಿಜಯ್ ತನಿಖೆ

ನವದೆಹಲಿ: ಕರೂರು ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಸುತ್ತಿನ ವಿಚಾರಣೆಗೆ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಇಂದು (ಸೋಮವಾರ) ಭಾಗಿಯಾಗಿದ್ದು, ಸತತ 6 ಗಂಟೆಗಳ ಕಾಲ ಸಿಬಿಐ ವಿಚಾರಣೆಗೆ ಒಳಗಾಗಿದ್ದಾರೆ. ಜನವರಿ 12ರಂದು ವಿಚಾರಣೆಗೆ ಹಾಜರಾಗಿದ್ದ ವಿಜಯ್ ಅವರಿಗೆ ಮರು ದಿನವೂ (ಜ.13ರಂದು) ವಿಚಾರಣೆಗೆ ಬರುವಂತೆ ಸಿಬಿಐ ನಿರ್ದೇಶನ ನೀಡಿತ್ತು. ಆದರೆ ಪೊಂಗಲ್ ಕಾರಣ ನೀಡಿ ಬೇರೆ ದಿನ ಹಾಜರಾಗಲು ನಟ ಮನವಿ ಮಾಡಿದ್ದರು. ರ್‍ಯಾಲಿಗೆ ಸಂಬಂಧಿಸಿದ ಪ್ರಶ್ನೆಗಳು, ಸಭೆ ವಿಳಂಬಕ್ಕೆ ಕಾರಣಗಳು, ಕಾಲ್ತುಳಿತ ಸಂಭವಿಸಿದ್ದರೂ ಭಾಷಣ ಮುಂದುವರಿಸಿದ್ದು ಏಕೆ? ಎಂಬುದೂ ಸೇರಿದಂತೆ ಅನೇಕ ಪ್ರಶ್ನೆಗಳನ್ನು ವಿಜಯ್ ಅವರಿಗೆ ಕೇಳಲಾಗಿದೆ ಎಂದು ಟಿವಿಕೆ ಪಕ್ಷದ ನಾಯಕ ಸಿ.ಟಿ.ನಿರ್ಮಲ್ ಕುಮಾರ್ ತಿಳಿಸಿದ್ದಾರೆ.

ಪತ್ನಿಗೆ ವಿಚ್ಛೇದನ: ಮುಲಾಯಂ ಪುತ್ರ

ಲಕ್ನೋ: ಬಿಹಾರ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಕುಟುಂಬದಲ್ಲಿ ಭಾರೀ ಬಿರುಕು ಮೂಡಿದೆ. ಇದೀಗ ಉತ್ತರಪ್ರದೇಶ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್



ಯಾದವ್ ಅವರ ಸರದಿ. ಮುಲಾಯಂ ಕಿರಿಯ ಪುತ್ರ, ಅಖಿಲೇಶ್ ಯಾದವ್‌ರ ತಮ್ಮ ಪ್ರತೀಕ್ ಯಾದವ್, ಪತ್ನಿ ಅಪರ್ಣಾ ಯಾದವ್‌ಗೆ ವಿಚ್ಛೇದನ ನೀಡುವುದಾಗಿ ಘೋಷಿಸಿದ್ದಾರೆ. ಉತ್ತರ ಪ್ರದೇಶದ ರಾಜ್ಯ ಮಹಿಳಾ ಆಯೋಗದ ಉಪಾಧ್ಯಕ್ಷೆ ಅಪರ್ಣಾ ಯಾದವ್ ಅವರ ಪತಿ ಪ್ರತೀಕ್ ಪೋಸ್ಟೊಂದನ್ನು ಮಾಡಿದ್ದಾರೆ. ನಾನು ಈ ಸ್ವಾರ್ಥಿ ಮಹಿಳೆಗೆ ಆದಷ್ಟು ಬೇಗ ವಿಚ್ಛೇದನ ಕೊಡಲಿದ್ದೇನೆ. ಆಕೆಗೆ ತಾನು ಜನಪ್ರಿಯಳಾಗ ಬೇಕು, ಪ್ರಭಾವಶಾಲಿ ಆಗಬೇಕು ಅಂತ ನನ್ನ ಕುಟುಂಬ ಸಂಬಂಧಗಳನ್ನು ಹಾಳು ಮಾಡಿದ್ದಾಳೆ. ಈಗ ನನ್ನ ಮಾನಸಿಕ ಸ್ಥಿತಿ ತುಂಬಾ ಕೆಟ್ಟಿದೆ. ಆದಾಗ್ಯೂ ಅದರ ಬಗ್ಗೆ ಅವಳು ಚಿಂತಿಸಲ್ಲ ಎಂದಿದ್ದಾರೆ.

ಸಾಹಿತ್ಯ ಅಕಾಡೆಮಿಗೆ ತಮಿಳುನಾಡು ಸಡ್ಡು

ಚೆನ್ನೈ: ಸಾಹಿತ್ಯ ಮತ್ತು ಕಲೆಗಳ ವಿಚಾರದಲ್ಲಿಯೂ ಕೇಂದ್ರ ಸರಕಾರ ರಾಜಕೀಯ ಹಸ್ತಕ್ಷೇಪ ನಡೆಸುತ್ತಿದೆ ಎಂದು ಆರೋಪಿಸಿರುವ ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್, ಇದಕ್ಕೆ ಪ್ರತ್ಯುತ್ತರವಾಗಿ ಕನ್ನಡ ಸೇರಿದಂತೆ ಏಳು ಭಾರತೀಯ ಭಾಷೆಗಳಿಗೆ

ತಮಿಳುನಾಡು ಸರಕಾರದ ವತಿಯಿಂದಲೇ ವಾರ್ಷಿಕ ಸಾಹಿತ್ಯ ಪ್ರಶಸ್ತಿ ನೀಡುವುದಾಗಿ ಘೋಷಿಸಿದ್ದಾರೆ. ಭಾನುವಾರ ನಡೆದ ಚೆನ್ನೈ ಅಂತಾರಾಷ್ಟ್ರೀಯ ಪುಸ್ತಕ ಮೇಳದ (ಸಿಐಬಿಎಫ್-2026) ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಸ್ಟಾಲಿನ್, ಕೇಂದ್ರದ ನಡೆಗೆ ಅಸಮಾಧಾನ ವ್ಯಕ್ತಪಡಿಸಿ ಈ ಮಹತ್ವದ ನಿರ್ಧಾರ ಪ್ರಕಟಿಸಿದ್ದಾರೆ.

ಪಾಕ್‌ನಿಂದ ಇಸ್ಲಾಮ್ ರಕ್ಷಣೆ: ಮುನೀರ್

ಇಸ್ಲಾಮಾಬಾದ್: ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಮತ್ತೊಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಪಾಕಿಸ್ತಾನ ಏಕೆ ರಚನೆಯಾಯಿತೋ ಅದರ ಉದ್ದೇಶ ಇನ್ನು ಈಡೇರಲಿದೆ ಎಂದಿದ್ದಾರೆ. ಇಸ್ಲಾಮ್ ಹೆಸರಿನಲ್ಲೇ ಹುಟ್ಟಿರುವ ಪಾಕಿಸ್ತಾನ ಇನ್ನು ಮುಂದೆ ಪೂರ್ಣ ಇಸ್ಲಾಮೀಕರಣ ಆಗಲಿದೆ ಎಂದು ಪರೋಕ್ಷವಾಗಿ ಹೇಳಿದ್ದಾರೆ. ನಮ್ಮ ರಾಷ್ಟ್ರ ಇಸ್ಲಾಮ್ ಹೆಸರಿನಲ್ಲಿ ನಿರ್ಮಾಣಗೊಂಡಿದೆ. ಭಯೋತ್ಪಾದಕರನ್ನು ಹೇಗೆ ಎದುರಿಸಬೇಕು ಎಂಬುದು ನಮಗೆ ಗೊತ್ತಿದೆ. ಭಯೋತ್ಪಾದನೆ ಯನ್ನು ಬುಡಸಮೇತ ಕಿತ್ತು ಹಾಕುವ ಕಾರ್ಯದಲ್ಲಿ ನಾವು ಪರಿಣಾಮ ಕಾರಿಯಾಗಿ ಯಶಸ್ವಿಯಾಗು ತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ ಪಾಕ್ ಸೇನಾಧ್ಯಕ್ಷ ಪಾಕ್ ರಚನೆಯ ಅಸಲಿ ಉದ್ದೇಶ ಏನು ಎಂಬುದನ್ನು ವಿವರಿಸಿಲ್ಲ. ಪಾಕಿಸ್ತಾನವು ಯಾವ ಉದಾತ್ತ ಉದ್ದೇಶಕ್ಕಾಗಿ ಸೃಷ್ಟಿಸಲ್ಪಟ್ಟಿತ್ತೋ ಆ ಉದಾತ್ತ ಉದ್ದೇಶವನ್ನು ಸಾಧಿಸಲು ಸರ್ವಶಕ್ತನಾದ ಅಲ್ಲಾಹನು ಪಾಕಿಸ್ತಾನಕ್ಕೆ ಐತಿಹಾಸಿಕ ಅವಕಾಶವನ್ನು ನೀಡಿದ್ದಾನೆ. ಆ ಗುರಿಯತ್ತ ದೇಶವು ವೇಗವಾಗಿ ಸಾಗುತ್ತಿದೆ. ಇಸ್ಲಾಮ್ ರಕ್ಷಣೆಯ ಏಕೈಕ ಗುರಿಯೊಂದಿಗೆ ನಾವು ಮುನ್ನುಗ್ಗುತ್ತಿದ್ದು, ಧರ್ಮ ವಿರೋಧಿಗಳಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದಿದ್ದಾರೆ.

ಹೊಸೂರು ವಿಮಾನ ನಿಲ್ದಾಣ: ತ.ನಾ. ಅರ್ಜಿಗೆ ಕೇಂದ್ರ ತಿರಸ್ಕಾರ

ಬೆಂಗಳೂರು ವಿಮಾನನಿಲ್ದಾಣದ ಸನಿಹದಲ್ಲೇ ನಿಲ್ದಾಣ ನಿರ್ಮಾಣಕ್ಕೆ ಯತ್ನ

ತಮಿಳುನಾಡಿನ ಸತತ 2ನೇ ಮನವಿಯನ್ನು ಬದಿಗೆ ಸರಿಸಿದ ರಕ್ಷಣಾ ಸಚಿವಾಲಯ

ಹೊಸೂರು ನಿಲ್ದಾಣದಿಂದ ಎಚ್‌ಎಎಲ್‌ಗೆ ತೊಂದರೆ: ಕಾರಣ ನೀಡಿದ ಕೇಂದ್ರ

ಚೆನ್ನೈ: ಹೊಸೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಬೇಕೆಂಬ ತಮಿಳುನಾಡು ಸರಕಾರದ ಮನವಿಯನ್ನು ರಕ್ಷಣಾ ಸಚಿವಾಲಯ ಮತ್ತೊಮ್ಮೆ ತಿರಸ್ಕರಿಸಿದೆ. ಬೆಂಗಳೂರು ವಿಮಾನನಿಲ್ದಾಣಕ್ಕೆ ಬರೀ 72 ಕಿ.ಮೀ. ಹತ್ತಿರದಲ್ಲಿರುವ ಹೊಸೂರಿನಲ್ಲಿ ವಿಮಾನನಿಲ್ದಾಣ ಸ್ಥಾಪಿಸಿ ಕರ್ನಾಟಕಕ್ಕೆ ಹೊಡೆತ ನೀಡುವ ಉದ್ದೇಶವನ್ನು ತಮಿಳುನಾಡು ಹೊಂದಿತ್ತು. ಆದರೆ ಇದಕ್ಕೆ ರಕ್ಷಣಾ ಸಚಿವಾಲಯ ಅನುಮತಿ ನಿರಾಕರಿಸಿದೆ. ಏಕೆಂದರೆ, ಈ ಪ್ರದೇಶದ ವಾಯುಪ್ರದೇಶವನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನಿಯಂತ್ರಿಸುತ್ತದೆ. ಕಳೆದ ವಾರ ಸಚಿವಾಲಯವು ತಮಿಳುನಾಡಿಗೆ ಬರೆದ ಪತ್ರವೊಂದರಲ್ಲಿ ಎಚ್‌ಎಎಲ್‌ಗೆ ವಾಯುಪ್ರದೇಶದ ಅಗತ್ಯವಿದೆ ಎಂದು ತಿಳಿಸಿ, ವಿನಂತಿಯನ್ನು ನಿರಾಕರಿಸಿತು. ಈ ಮೊದಲು, ಬೆಂಗಳೂರು ವಿಮಾನ ನಿಲ್ದಾಣದಿಂದ ಹೊಸೂರು 150 ಕಿ.ಮೀ.ಗಿಂತ ಕಡಿಮೆ ಅಂತರದಲ್ಲಿದೆ ಎಂಬ ಕಾರಣ ನೀಡಿ ಉಡಾನ್ ಪಟ್ಟಿಯಿಂದ ಕೈಬಿಡಲಾಗಿತ್ತು.

ಎಚ್‌ಎಎಲ್ ವಾಯುಪ್ರದೇಶವನ್ನು ಬಳಸಲು ಅನುಮತಿ ಕಲ್ಪಿಸುವಂತೆ ತಮಿಳುನಾಡು ಸರಕಾರ 2025ರ ಜೂನ್‌ನಲ್ಲೂ ಒಮ್ಮೆ ಮನವಿ ಮಾಡಿತ್ತು. ಅದನ್ನು ತಿರಸ್ಕರಿಸಲಾಗಿತ್ತು. ಬಳಿಕ ಮತ್ತೆ ನವೆಂಬರ್‌ನಲ್ಲಿ, ಎಚ್‌ಎಎಲ್‌ನ ಕಾರ್ಯಾಚರಣೆಗಳಿಗೆ ಅಡಚಣೆಯಾಗದಂತೆ ಕಾರ್ಯಾಚರಿಸುವ ಭರವಸೆಯೊಂದಿಗೆ ವಿಸ್ತೃತ ಮನವಿ ಸಲ್ಲಿಕೆ ಮಾಡಿತ್ತು. ಅದನ್ನೂ ಈಗ ರಕ್ಷಣಾ ಸಚಿವಾಲಯ ತಿರಸ್ಕಾರ ಮಾಡಿದೆ. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ತಮಿಳುನಾಡು ಅಧಿಕಾರಿಗಳು, ಮಾತುಕತೆಗೂ ಅವಕಾಶ ಕೊಡದೆ ಅನುಮತಿ ನಿರಾಕರಿಸಿರುವುದು ನಿರಾಶಾದಾಯಕ ಎಂದಿದ್ದಾರೆ.

ಈಗ ತಮಿಳುನಾಡು ಸರಕಾರವು ಮುಂದಿನ ಕ್ರಮ ಮತ್ತು ಏನು ಮಾಡಬೇಕೆಂಬುದರ ಕುರಿತು ಅದರ ಆಯ್ಕೆಗಳನ್ನು ಹುಡುಕಲು ಆರಂಭಿಸಿದೆ ಎಂದು ಮೂಲಗಳು ತಿಳಿಸಿವೆ. ಶೂಲಗಿರಿ ತಾಲೂಕಿನಲ್ಲಿ (ಬೇರಿಗೈ ಮತ್ತು ಬಾಗಲೂರು ನಡುವೆ) ಬರುವ ಹೊಸೂಸಿನಲ್ಲಿ 3 ಕೋಟಿ ಪ್ರಯಾಣಿಕರ ಸಾಮರ್ಥ್ಯದೊಂದಿಗೆ ನಿರ್ಮಿಸಲು ಉದ್ದೇಶಿಸಲಾದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಒಟ್ಟು, 2,300 ಎಕರೆ ಜಾಗದ ಅಗತ್ಯವಿದೆ. ಹೊಸೂರು ವಿಮಾನ ನಿಲ್ದಾಣಕ್ಕೆ ಸ್ಥಳದ ಅನುಮತಿ ದೊರೆತ ನಂತರ, ಟಿಡ್ಕೊ ನಾಗರಿಕ ವಿಮಾನಯಾನ ಸಚಿವಾಲಯದಿಂದ ತಾತ್ವಿಕ ಅನುಮೋದನೆಯನ್ನು ಪಡೆಯಲಿದೆ.

ರಾಷ್ಟ್ರೀಯ ಭದ್ರತೆಗೂ ಅಪಾಯ ಸಾಧ್ಯತೆ

ಭಾರತೀಯ ರಕ್ಷಣಾ ಉತ್ಪಾದಕ ಕಂಪನಿಯಾಗಿರುವ ಎಚ್‌ಎಎಲ್, ಆ ವಾಯುಪ್ರದೇಶವನ್ನು ಹಾರಾಟ ಪರೀಕ್ಷೆ, ತರಬೇತಿಯಂತಹ ಕೆಲಸಗಳಿಗೆ ಬಳಸುತ್ತದೆ. ಹೀಗಿರುವಾಗ ಹೊಸೂರಿನಲ್ಲಿ ನಾಗರಿಕ ವಿಮಾನಗಳ ಹಾರಾಟ ಆರಂಭವಾದರೆ, ಇವುಗಳಿಗೆ ಅಡಚಣೆಯಾಗುತ್ತದೆ. ಜತೆಗೆ, ರಾಷ್ಟ್ರೀಯ ಭದ್ರತೆಗೂ ಅಪಾಯ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅನುಮತಿ ಸಿಗುತ್ತಿಲ್ಲ ಎಂಬ ಕಾರಣ ನೀಡಲಾಗಿದೆ. ರಕ್ಷಣಾ ಸಚಿವಾಲಯದ ತಿರಸ್ಕಾರದ ಹೊರತಾಗಿಯೂ ಸುಮ್ಮನಾಗದ ತಮಿಳುನಾಡು ಸರಕಾರ ಈ ಕುರಿತು ಕೇಂದ್ರದ ಮುಂದೆ ಮೇಲ್ಮನವಿ ಸಲ್ಲಿಸುವ ಅಥವಾ ನಿಲ್ದಾಣ ನಿರ್ಮಾಣಕ್ಕೆ ಪರ್ಯಾಯ ಸ್ಥಳವನ್ನು ಹುಡುಕುವ ಚಿಂತನೆ ನಡೆಸಿರುವುದಾಗಿ ವರದಿಯಾಗಿದೆ.

ಉಗ್ರ ಪಾಕ್‌ಗೆ ಬೆಂಬಲ ಬೇಡ: ಪೋಲೆಂಡ್‌ಗೆ ಭಾರತ ನೇರ ಎಚ್ಚರಿಕೆ

ಪೋಲೆಂಡ್ ವಿದೇಶಾಂಗ ಸಚಿವರೊಂದಿಗೆ ಜೈಶಂಕರ್ ಮಾತುಕತೆ

ಪಾಕ್‌ನಲ್ಲಿ ಕಾಶ್ಮೀರ ಪ್ರಸ್ತಾಪಿಸಿದ್ದಕ್ಕೆ ವಿದೇಶಾಂಗ ಸಚಿವ ತಿರುಗೇಟು

ದೆಹಲಿ: ಪೋಲೆಂಡ್ ಉಪ ಪ್ರಧಾನಿ ಹಾಗೂ ವಿದೇಶಾಂಗ ಸಚಿವ ರಾಡೋಸ್ಲಾವ್ ಸಿಕೋರ್ಸ್ಕಿ ಭಾರತಕ್ಕೆ ಭೇಟಿ ನೀಡಿದ್ದಾರೆ. ಈ ವೇಳೆ ಅವರನ್ನು ಭೇಟಿಯಾದ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಪೋಲೆಂಡ್ ವಿದೇಶಾಂಗ ಸಚಿವರು ಪಾಕಿಸ್ತಾನಕ್ಕೆ ಯಾವುದೇ ನೇರ ಅಥವಾ ಪರೋಕ್ಷ ಬೆಂಬಲವನ್ನು ನೀಡದಂತೆ ಮನವಿ ಮಾಡಿದರು. ಕಳೆದ ವರ್ಷ ಅಕ್ಟೋಬರ್‌ನಲ್ಲಿ ರಾಡೋಸ್ಲಾವ್ ಸಿಕೋರ್ಸ್ಕಿ ಪಾಕಿಸ್ತಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪಾಕಿಸ್ತಾನದೊಂದಿಗೆ ಜಂಟಿ ಹೇಳಿಕೆಯಲ್ಲಿ ಕಾಶ್ಮೀರದ ಬಗ್ಗೆ ಉಲ್ಲೇಖವಾಗಿತ್ತು. ವಸ್ತುಸ್ಥಿತಿಯಲ್ಲಿ ರಾಡೋಸ್ಲಾವ್ ಏನೂ ಹೇಳದಿದ್ದರೂ ಪಾಕ್ ವಿದೇಶಾಂಗ ಸಚಿವ ಕಾಶ್ಮೀರ ವಿಚಾರವನ್ನು ಕೆದಕಿದ್ದರು. ಈ ಹಿನ್ನೆಲೆಯಲ್ಲಿ ಜೈಶಂಕರ್ ಅವರ ಈ ಹೇಳಿಕೆಗಳು ಮಹತ್ವ ಪಡೆದಿವೆ.

ಸಿಕೋರ್ಸ್ಕಿ ಅವರೊಂದಿಗಿನ ದ್ವಿಪಕ್ಷೀಯ ಸಭೆಯಲ್ಲಿ ತಮ್ಮ ಆರಂಭಿಕ ಹೇಳಿಕೆಯಲ್ಲಿ, ಪೋಲಿಷ್ ಉಪಪ್ರಧಾನ ಮಂತ್ರಿಗೆ ಗಡಿಯಾಚೆಗಿನ ಭಯೋತ್ಪಾದನೆಯ ದೀರ್ಘಕಾಲದ ಬೆದರಿಕೆಯ ಬಗ್ಗೆ ತಿಳಿದಿದೆ. ಉಪ ಪ್ರಧಾನ ಮಂತ್ರಿಗಳೇ, ನೀವು ನಮ್ಮ ಪ್ರದೇಶಕ್ಕೆ ಹೊಸಬರಲ್ಲ. ಗಡಿಯಾಚೆಗಿನ ಭಯೋತ್ಪಾದನೆಯ ದೀರ್ಘಕಾಲದ ಸವಾಲಿನ ಬಗ್ಗೆ ನಿಮಗೂ ತಿಳಿದಿದೆ. ಈ ಸಭೆಯಲ್ಲಿ ನಿಮ್ಮ ಇತ್ತೀಚಿನ ಪ್ರವಾಸಗಳ ಕುರಿತು ಚರ್ಚಿಸಲು ನಾನು ಬಯಸುತ್ತೇನೆ. ಪೋಲೆಂಡ್ ಭಯೋತ್ಪಾದನೆಗೆ ಶೂನ್ಯ ಸಹಿಷ್ಣುತೆಯನ್ನು ಪ್ರದರ್ಶಿಸಬೇಕು ಮತ್ತು ನಮ್ಮ ನೆರೆಹೊರೆಯ ದೇಶಗಳಲ್ಲಿ ಭಯೋತ್ಪಾದಕ ಮೂಲಸೌಕರ್ಯವನ್ನು ಉತ್ತೇಜಿಸಲು ಸಹಾಯ ಮಾಡಬಾರದು ಎಂದು ಜೈಶಂಕರ್ ಹೇಳಿದ್ದಾರೆ.

ಜೈಶಂಕರ್ ಅವರ ಈ ಹೇಳಿಕೆಗಳ ನಂತರ, ಸಿಕೋರ್ಸ್ಕಿ ಕೂಡ ಇದಕ್ಕೆ ಸಹಮತ ವ್ಯಕ್ತಪಡಿಸಿ ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸುವ ಅಗತ್ಯದ ಬಗ್ಗೆ ಮಾತನಾಡಿದ್ದಾರೆ. ಇತ್ತೀಚೆಗೆ ಚಲಿಸುವ ರೈಲಿನ ಕೆಳಗೆ ಸ್ಫೋಟಕವಿಟ್ಟು ಪೋಲಿಷ್ ರೈಲ್ವೆ ಮಾರ್ಗವನ್ನು ಸ್ಫೋಟಿಸಲಾಗಿತ್ತು. ಪೋಲೆಂಡ್‌ನಲ್ಲೂ ಭಯೋತ್ಪಾದನೆ ದೊಡ್ಡ ಸವಾಲಾಗಿದೆ ಎಂದು ಪೋಲಿಷ್ ಸಚಿವರು ಹೇಳಿದ್ದಾರೆ.

ತಮ್ಮ ಮಾತುಕತೆಯ ಸಮಯದಲ್ಲಿ, ಇಬ್ಬರೂ ಅಮೆರಿಕ ಅಧ್ಯಕ್ಷ ಟ್ರಂಪ್ ಹೇರಿದ ಸುಂಕಗಳ ಬಗ್ಗೆಯೂ ಚರ್ಚೆ ನಡೆಸಿದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರಷ್ಯಾ ಕಚ್ಚಾ ತೈಲವನ್ನು ಖರೀದಿಸಿದ್ದಕ್ಕಾಗಿ ಭಾರತವನ್ನು ವಿರೋಧಿಸಿ, ಶೇ.50ರಷ್ಟು ಸುಂಕಗಳನ್ನು ವಿಧಿಸಿದ್ದಾರೆ.

ಭಾರತಕ್ಕೆ ಯುಎಇ ಅಧ್ಯಕ್ಷ 2 ಗಂಟೆ ದಿಢೀರ್ ಭೇಟಿ

ನವದೆಹಲಿ: ಕೇವಲ 2 ಗಂಟೆಯ ಭೇಟಿಗಾಗಿ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಸೋಮವಾರ ಭಾರತಕ್ಕೆ ಆಗಮಿಸಿ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮಾತುಕತೆ ನಡೆಸಿದ್ದಾರೆ. ಸಾಧಾರಣವಾಗಿ ಯಾವುದೇ ದೇಶದ ಮುಖ್ಯಸ್ಥರು ಭಾರತಕ್ಕೆ ಬಂದರೆ 1 -2 ದಿನ ಇರುತ್ತಾರೆ ಅಥವಾ ಬೆಳಗ್ಗೆ ಬಂದು ರಾತ್ರಿ ತೆರಳುತ್ತಾರೆ. ಆದರೇ ಕೇವಲ 2 ಗಂಟೆಗಾಗಿ ಯುಎಇ ಅಧ್ಯಕ್ಷರು ಭಾರತಕ್ಕೆ ಬಂದು ತೆರಳಿರುವುದು ಅಪರೂಪದಲ್ಲಿ ಅಪರೂಪ. ಸದ್ಯ ಲಭಿಸಿರುವ ಮಾಹಿತಿಗಳ ಪ್ರಕಾರ ಅಣು ರಿಯಾಕ್ಟರ್‌ಗಳು, ಕೃತಕ ಬುದ್ಧಿಮತ್ತೆ, ಇಂಧನ ಭದ್ರತೆ, ಭಯೋತ್ಪಾದನೆ ನಿಗ್ರಹ ಮಾತುಕತೆಯ ಕೇಂದ್ರವಾಗಿತ್ತು ಎಂದು ಸರಕಾರ ಹೇಳಿದೆ.

ಮೂಲಗಳ ಪ್ರಕಾರ ಸದ್ಯ ಮಧ್ಯಪ್ರಾಚ್ಯದಲ್ಲಿ ಭಾರೀ ಬಿಕ್ಕಟ್ಟು ಸಂಭವಿಸಿದೆ. ಒಂದು ಕಡೆ ಇರಾನ್ ವಿರುದ್ಧ ಅಮೆರಿಕ ತಿರುಗಿ ಬಿದ್ದಿದೆ. ತನ್ನ ಮೇಲೆ ದಾಳಿ ನಡೆಸಿದರೆ ಅಮೆರಿಕದ ವಿರುದ್ಧ ತಾನು ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಇನ್ನೊಂದು ಕಡೆ ಯೆಮೆನ್ ವಿಚಾರದಲ್ಲಿ ಸೌದಿ ಅರೇಬಿಯಾ ಮತ್ತು ಯುಎಇ ಮಧ್ಯೆ ಉದ್ವಿಗ್ನತೆ ಹೆಚ್ಚಾಗಿದೆ. ಈ ಎಲ್ಲದರ ಮಧ್ಯೆ ಗಾಜಾ ಶಾಂತಿ ಮಂಡಳಿಯನ್ನು ಟ್ರಂಪ್ ರಚನೆ ಮಾಡಿದ್ದು ಈ ಮಂಡಳಿ ಸೇರ್ಪಡೆಗೆ ಟ್ರಂಪ್ ಭಾರತ, ಯುಎಇ ಸೇರಿದಂತೆ ಹಲವು ದೇಶಗಳಿಗೆ ಆಹ್ವಾನ ನೀಡಿದ್ದಾರೆ. ಹೀಗಾಗಿ ಈ ಎಲ್ಲಾ ವಿಚಾರಗಳ ಮಧ್ಯೆ ಮಾತನಾಡಿರಬಹುದು ಎನ್ನಲಾಗುತ್ತಿದೆ.

ಸಂಜೆ ದೆಹಲಿಯ ಪಾಲಂ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅಲ್ ನಹ್ಯಾನ್ ಅವರನ್ನು ಮೋದಿಯೇ ಖುದ್ದು ಸ್ವಾಗತಿಸಿದರು. ಬಳಿಕ ಮೋದಿ ಮತ್ತು ಅಲ್ ನಹ್ಯಾನ್ ಜೊತೆಯಾಗಿ ಕಾರಿನಲ್ಲಿ ಕುಳಿತು ಲೋಕಕಲ್ಯಾಣ್ ಮಾರ್ಗದಲ್ಲಿರುವ ಪ್ರಧಾನಿ ನಿವಾಸಕ್ಕೆ ಆಗಮಿಸಿದರು. ಮೋದಿ ಜೊತೆ ಮಾತುಕತೆ ನಡೆಸಿದ ಬಳಿಕ ಸಂಜೆ ಅಲ್ ನಹ್ಯಾನ್ ಯುಎಇಗೆ ತೆರಳಿದರು.

12,000 ಅಡಿ ಎತ್ತರದಲ್ಲಿದ್ದ ಜೈಶ್ ಅಡಗು ತಾಣ ಪತ್ತೆ

ಶ್ರೀನಗರ: ಜಮ್ಮು-ಕಾಶ್ಮೀರದ ಛತ್ರೂ ಪ್ರದೇಶದಲ್ಲಿ 12,000 ಅಡಿ ಎತ್ತರದಲ್ಲಿದ್ದ ಜೈಶ್-ಎ-ಮೊಹಮ್ಮದ್ ಉಗ್ರರ ಭೂಗತ ಅಡಗುತಾಣವೊಂದು ಪತ್ತೆಯಾಗಿದೆ. ಜೈಶ್ ಉಗ್ರರ ಹೆಡೆಮುರಿ ಕಟ್ಟುವ ಉದ್ದೇಶದಿಂದ ಆಪರೇಷನ್ ತ್ರಾಶಿ-ಐ ಕಾರ್ಯಾಚರಣೆಯ ಭಾಗವಾಗಿ ಭದ್ರತಾ ಪಡೆಗಳು ಛತ್ರೂ ಪ್ರದೇಶದ ಕಿಶ್ತ್ವಾರ್‌ನಲ್ಲಿ ಕಾರ್ಯಾಚರಣೆ ಕೈಗೊಂಡಿದ್ದವು. ಈ ವೇಳೆ 12,000 ಅಡಿ ಎತ್ತರದಲ್ಲಿದ್ದ ಅಡಗು ತಾಣ ಪತ್ತೆಯಾಗಿದೆ. ಅನೇಕ ಕಡೆ ಆಗಮನ, ನಿರ್ಗಮನಗಳನ್ನು ಹೊಂದಿರುವ ಈ ಅಡಗು ತಾಣದಲ್ಲಿ ಏಕಕಾಲಕ್ಕೆ ನಾಲ್ವರು ಅಡಗಿಕೊಳ್ಳುವ ಮತ್ತು ತಪ್ಪಿಸಿಕೊಳ್ಳುವಷ್ಟು ದೊಡ್ಡದಿದೆ. ಹಲವು ದಿನಗಳಿಂದ ಇಲ್ಲಿ ಉಗ್ರರು ಸಕ್ರಿಯರಾಗಿದ್ದರು ಅನ್ನುವುದಕ್ಕೆ ಸಾಕ್ಷಿಗಳು ಸಿಕ್ಕಿವೆ. ಈ ವೇಳೆ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಓರ್ವ ಸೇನಾ ಜವಾನ ಹುತಾತ್ಮನಾದರೆ, ಉಳಿದ 7 ಮಂದಿ ಗಾಯಗೊಂಡಿದ್ದರು.

ಇರಾನ್‌ನಲ್ಲಿ ಆಂತರಿಕ ಪ್ರತಿಭಟನೆ ನಡೆಯುತ್ತಲೇ ಇದೆ. ಮತ್ತೊಂದು ಕಡೆ ಅಮೆರಿಕ ದಾಳಿ ಮಾಡುತ್ತೇನೆ, ದಾಳಿ ಮಾಡುತ್ತೇನೆ ಎನ್ನುತ್ತಲೇ ಇದ್ದರೂ ಏನೂ ಮಾಡದೆ ಸುಮ್ಮನಿದೆ. ಇದು ಇರಾನ್ ಪ್ರತಿಭಟನಾಕಾರರಿಗೆ ಸಿಟ್ಟು ತರಿಸಿದೆ. ಕುತೂಹಲಕಾರಿ ಸಂಗತಿಯೆಂದರೆ ಅಮೆರಿಕ ಮತ್ತು ಇರಾನ್ ಎರಡರೊಂದಿಗೂ ಉತ್ತಮ ಸಂಬಂಧ ಹೊಂದಿರುವ ಪಾಕಿಸ್ತಾನ ಈಗ ಇಕ್ಕಟ್ಟಿಗೆ ಸಿಲುಕಿದೆ. ಒಂದೋ ಅಮೆರಿಕ ಜೊತೆಗೆ ಸ್ನೇಹ ಉಳಿಸಿಕೊಳ್ಳಬೇಕು, ಇಲ್ಲ ಇರಾನ್ ಬೇಕು ಎನ್ನುವ ಅಡಕತ್ತರಿಯಲ್ಲಿ ಸಿಕ್ಕಿದೆ. ಈ ಸನ್ನಿವೇಶದ ಚಿತ್ರಣ ಇಲ್ಲಿದೆ.

ಅಮೆರಿಕ ಇರಾನ್ ಮೇಲೆ ದಾಳಿ ಮಾಡಿದರೆ...

ಇರಾನ್ ಮೇಲೆ ದಾಳಿ ಮಾಡುತ್ತೇನೆ, ಮಾಡುತ್ತೇನೆ ಎನ್ನುತ್ತಲೇ ಇದುವರೆಗೆ ತಣ್ಣಗಿರುವ ಅಮೆರಿಕ

ದಾಳಿ ಮಾಡಿದರೆ ಇರಾನ್ ಛಿದ್ರಛಿದ್ರ? ಅಮೆರಿಕಕ್ಕೂ ಇದೆ ಇರಾನ್ ಪ್ರತಿದಾಳಿ ನಡೆಸುವ ಭೀತಿ

ಅಮೆರಿಕ-ಇರಾನ್ ಅಂತರ 10000 ಕಿಮೀ

ಭೌಗೋಳಿಕವಾಗಿ ಅಮೆರಿಕದ ಪೂರ್ವ ಕರಾವಳಿಯಿಂದ ಇರಾನ್‌ಗೆ ಸುಮಾರು 11,000 ಕಿಲೋಮೀಟರ್ ಅಂತರವಿದೆ. ಆದರೆ, ಯುದ್ಧದ ಲೆಕ್ಕಾಚಾರದಲ್ಲಿ ಈ ದೂರ ಗೌಣ. ಯಾಕೆಂದರೆ, ಇರಾನ್ ಸುತ್ತಮುತ್ತಲಿನ ಕತಾರ್, ಕುವೈತ್ ಮತ್ತು ಯುಎಇಗಳಲ್ಲಿ ಅಮೆರಿಕದ ಬಲಿಷ್ಠ ಸೇನಾ ನೆಲೆಗಳಿವೆ. ಈ ನೆಲೆಗಳಿಂದ ಇರಾನ್‌ಗೆ ಇರುವ ದೂರ ಕೇವಲ 300ರಿಂದ 1,500 ಕಿಲೋಮೀಟರ್ ಮಾತ್ರ! ಅಂದರೆ, ಅಮೆರಿಕವು ಇರಾನಿನ ಬೆನ್ನ ಹಿಂದೆಯೇ ನಿಂತು ಗುರಿ ಇಟ್ಟಂತಿದೆ.

10 ನಿಮಿಷಗಳಲ್ಲಿ ಮುಗಿಯುತ್ತಾ ಕಥೆ?

ಒಂದು ವೇಳೆ ಅಮೆರಿಕ ಇರಾನ್ ಮೇಲೆ ದಾಳಿ ಮಾಡಿದರೆ, ಅದರ ವೇಗವು ಅಮೆರಿಕ ಬಳಸುವ ಆಯುಧಗಳ ಮೇಲೆ ನಿರ್ಧಾರವಾಗುತ್ತದೆ. ಒಂದು ವೇಳೆ ಅಮೆರಿಕ ತನ್ನ ಕ್ರೂಸ್ ಕ್ಷಿಪಣಿಗಳನ್ನು ಹಾರಿಸಿದರೆ, ಅವು ಗಂಟೆಗೆ 1,000 ಕಿ.ಮೀ ವೇಗದಲ್ಲಿ ಸಾಗಿ 1ರಿಂದ 2 ಗಂಟೆಯೊಳಗೆ ಗುರಿ ಮುಟ್ಟುತ್ತವೆ. ಆದರೆ ಅಮೆರಿಕ ತನ್ನ 'ಬ್ಯಾಲಿಸ್ಟಿಕ್' ಕ್ಷಿಪಣಿಗಳನ್ನು ಬಳಸಿದರೆ ಕಥೆಯೇ ಬೇರೆ. ಸಾವಿರಾರು ಕಿಲೋಮೀಟರ್ ವೇಗದಲ್ಲಿ ನುಗ್ಗುವ ಈ ಕ್ಷಿಪಣಿಗಳು ಇರಾನ್ ತಲುಪಲು ಕೇವಲ 10ರಿಂದ 15 ನಿಮಿಷ ಸಾಕು! ಇರಾನಿನ ವಾಯುರಕ್ಷಣಾ ವ್ಯವಸ್ಥೆ ಎಚ್ಚರಗೊಳ್ಳುವ ಮೊದಲೇ ಮೊದಲ ಸುತ್ತಿನ ಧ್ವಂಸ ಕಾರ್ಯ ಮುಗಿದಿರುತ್ತದೆ.

30 ನಿಮಿಷಗಳಲ್ಲಿ ಬದಲಾಗಬಹುದು ಇಡೀ ಇರಾನ್ ದೇಶದ ಚಿತ್ರಣ!

ಯುದ್ಧದ ಮೊದಲ 30 ನಿಮಿಷಗಳು ಅತ್ಯಂತ ನಿರ್ಣಾಯಕ. ಅಮೆರಿಕದ ಮೊದಲ ಗುರಿ ಇರಾನಿನ ರಾಡಾರ್ ವ್ಯವಸ್ಥೆ, ಮಿಲಿಟರಿ ನೆಲೆಗಳು ಮತ್ತು ಸಂವಹನ ಕೇಂದ್ರಗಳಾಗಿರುತ್ತವೆ. ಕ್ಷಿಪಣಿಗಳು ನುಗ್ಗುತ್ತಿದ್ದಂತೆಯೇ ಇರಾನಿನ ಪ್ರಮುಖ ನಗರಗಳಲ್ಲಿ ಸೈರನ್ ಸದ್ದು ಮೊಳಗಲಿದ್ದು, ಇಡೀ ಪ್ರದೇಶ ಸ್ಮಶಾನ ಸದೃಶವಾಗಬಹುದು. ಜಗತ್ತಿನ ತೈಲ ಪೂರೈಕೆ ಮತ್ತು ಮಾರುಕಟ್ಟೆಗಳು ಕೇವಲ ಅರ್ಧ ಗಂಟೆಯಲ್ಲಿ ಕುಸಿಯುವ ಭೀತಿ ಇರುತ್ತದೆ.

ಪ್ರತೀಕಾರಕ್ಕೆ ಇರಾನ್ ಕೂಡ ಸಿದ್ಧ

ಅಮೆರಿಕದ ದಾಳಿಗೆ ಇರಾನ್ ಸುಮ್ಮನೆ ಕೂರುವುದಿಲ್ಲ. ಇರಾನ್ ಬಳಿ 2,000 ಕಿಲೋಮೀಟರ್ ವ್ಯಾಪ್ತಿಯ ಕ್ಷಿಪಣಿಗಳಿವೆ. ಅಂದರೆ, ಅಮೆರಿಕದ ಮುಖ್ಯ ಭೂಭಾಗಕ್ಕೆ ತಲುಪದಿದ್ದರೂ, ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ಎಲ್ಲಾ ಸೇನಾನೆಲೆಗಳನ್ನು ಧ್ವಂಸ ಮಾಡುವ ತಾಕತ್ತು ಇರಾನ್‌ಗಿದೆ. ಈ ಯುದ್ಧ ಶುರುವಾದರೆ ಅದು ಕೇವಲ ಎರಡು ದೇಶಗಳ ನಡುವಿನ ಸಂಘರ್ಷವಾಗಿ ಉಳಿಯದೆ, ಇಡೀ ಮಧ್ಯಪ್ರಾಚ್ಯವನ್ನು ಬೆಂಕಿಯ ಕೆನ್ನಾಲಿಗೆಗೆ ತಳ್ಳುವ ಸಾಧ್ಯತೆ ಇದೆ.



'ಡಿಜಿಟಲ್ ಕಣ್ಗಾವಲು' ಮುಖ್ಯ

ಇಂದಿನ ಕಾಲದಲ್ಲಿ ಸಾವಿರಾರು ಕಿಲೋಮೀಟರ್ ದೂರ ಎಂಬುದು ಕೇವಲ ಅಂಕಿ-ಅಂಶವಷ್ಟೇ. ಉಪಗ್ರಹ ಮಾರ್ಗದರ್ಶಿತ ಕ್ಷಿಪಣಿಗಳು ಮತ್ತು ಅತ್ಯಾಧುನಿಕ ರಾಡಾರ್‌ಗಳು ಇರುವುದರಿಂದ, ಅಮೆರಿಕ ತನ್ನ ನೆಲದಲ್ಲಿ ಕುಳಿತೇ ಇರಾನಿನ ಸಣ್ಣ ಗುರಿಯನ್ನೂ ನಿಖರವಾಗಿ ಹೊಡೆಯಬಲ್ಲದು. ತಂತ್ರಜ್ಞಾನದ ಈ ವೇಗವೇ ಇಂದಿನ ಆಧುನಿಕ ಯುದ್ಧವನ್ನು ಅತ್ಯಂತ ಅಪಾಯಕಾರಿಯಾಗಿಸಿದೆ.

ಇರಾನ್ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದರೆ ಜಗತ್ತಿನಲ್ಲಿ ತೈಲದರ ಏರಿಕೆ

ಅಮೆರಿಕದ ದಾಳಿಯ ಬೆದರಿಕೆಯಿಂದಾಗಿ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತೀವ್ರ ಏರುಪೇರು ಉಂಟಾಗುವ ಸಾಧ್ಯತೆ ಇದೆ. ತೈಲ ಪೂರೈಕೆಯ ಪ್ರಮುಖ ಕೇಂದ್ರವಾಗಿರುವ ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಬಹುದು ಎಂಬ ಎಚ್ಚರಿಕೆಯನ್ನು ಗಲ್ಫ್ ದೇಶಗಳು ನೀಡಿವೆ. ಒಂದು ವೇಳೆ ಈ ಜಲಸಂಧಿ ಬಂದ್ ಆದರೆ ಜಾಗತಿಕ ಮಾರುಕಟ್ಟೆಗೆ ತೈಲ ಪೂರೈಕೆ ಕಡಿತಗೊಂಡು, ಚೀನಾದಂತಹ ಬೃಹತ್ ರಾಷ್ಟ್ರಗಳು ಪರ್ಯಾಯಗಳನ್ನು ಹುಡುಕುವ ಅನಿವಾರ್ಯತೆಗೆ ಸಿಲುಕಲಿವೆ. ಇದು ಜಾಗತಿಕ ಆರ್ಥಿಕತೆಗೆ ಭಾರಿ ಹಿನ್ನಡೆಯನ್ನುಂಟು ಮಾಡುವ ಅಪಾಯವಿದೆ.

ಇಕ್ಕಟ್ಟಿಗೆ ಸಿಲುಕಿದ ಪಾಕಿಸ್ತಾನ

ಇರಾನ್ ಮತ್ತು ಅಮೆರಿಕ ನಡುವಿನ ಸಂಘರ್ಷದ ನಡುವೆ ಅಮೆರಿಕ ತನ್ನ ಬೃಹತ್ ನೌಕಾಪಡೆಗಳನ್ನು ಮಧ್ಯಪ್ರಾಚ್ಯದತ್ತ ರವಾನಿಸಿದೆ. ಯುಎಸ್‌ಎಸ್ ಅಬ್ರಹಾಂ ಲಿಂಕನ್ ಮತ್ತು ಜಾರ್ಜ್ ಎಚ್. ಡಬ್ಲ್ಯು. ಬುಷ್ ಕ್ಯಾರಿಯರ್ ಸ್ಟ್ರೈಕ್ ಗ್ರೂಪ್‌ಗಳು ಇರಾನ್ ಸಮೀಪವೇ ಇವೆ. ಈ ಹಿಂದೆ ಪೆಂಟಗನ್ ಇಷ್ಟು ದೊಡ್ಡ ಪ್ರಮಾಣದ ಸೇನಾ ನಿಯೋಜನೆ ಮಾಡಿದಾಗ ವೆನೆಜುವೆಲಾದ ಅಧ್ಯಕ್ಷರ ಬಂಧನದಂತಹ ಘಟನೆಗಳು ನಡೆದಿದ್ದವು. ಈ ವಿದ್ಯಮಾನವು ಇರಾನ್ ಮಾತ್ರವಲ್ಲದೆ ಸೌದಿ ಅರೇಬಿಯಾ, ಕತಾರ್ ಮತ್ತು ಇತರೆ ಗಲ್ಫ್ ದೇಶಗಳಲ್ಲಿ ಭೀತಿ ಹುಟ್ಟಿಸಿದೆ. ಇರಾನ್ ಮೇಲಿನ ಯಾವುದೇ ಮಿಲಿಟರಿ ದಾಳಿಯು ನೆರೆಯ ಪಾಕಿಸ್ತಾನದ ಮೇಲೆ ನೇರ ಪರಿಣಾಮ ಬೀರಲಿದೆ ಎಂದು ರಾಜತಾಂತ್ರಿಕ ತಜ್ಞೆ ಮಲೀಹಾ ಲೋಧಿ ಎಚ್ಚರಿಸಿದ್ದಾರೆ. ಇರಾನ್ ಜೊತೆಗೆ ಸುಮಾರು 900 ಕಿಲೋಮೀಟರ್ ಉದ್ದದ ಗಡಿಯನ್ನು ಹಂಚಿಕೊಂಡಿರುವ ಪಾಕಿಸ್ತಾನಕ್ಕೆ ಇದು ಭದ್ರತಾ ಕಳವಳವನ್ನು ತಂದಿದೆ. ಅಮೆರಿಕದ ದಾಳಿಯ ಸಂದರ್ಭದಲ್ಲಿ ಉಂಟಾಗುವ ಅಸ್ಥಿರತೆಯು ಬಲೂಚಿಸ್ತಾನದ ಉಗ್ರಗಾಮಿ ಗುಂಪುಗಳಾದ ಬಿಎಲ್‌ಎ ಮತ್ತು ಬಿಎಲ್‌ಎಫ್‌ಗೆ ವರದಾನವಾಗುವ ಸಾಧ್ಯತೆ ಇದೆ, ಇದು ಪಾಕಿಸ್ತಾನದ ಆಂತರಿಕ ಭದ್ರತೆಗೆ ದೊಡ್ಡ ಸವಾಲಾಗಲಿದೆ.

ದಾಯಾದಿಗಳ ನಡುವೆ ಅಪನಂಬಿಕೆ

ಇರಾನ್ ಮತ್ತು ಪಾಕಿಸ್ತಾನ ಪರಸ್ಪರ ಉಗ್ರಗಾಮಿಗಳಿಗೆ ಆಶ್ರಯ ನೀಡುತ್ತಿವೆ ಎಂದು ಆರೋಪಿಸಿಕೊಳ್ಳುತ್ತಿವೆ. ಪಾಕಿಸ್ತಾನದ ಬಲೂಚಿಸ್ತಾನವು ಇರಾನ್ ವಿರೋಧಿ ಪಡೆಗಳಿಗೆ ಸುರಕ್ಷಿತ ತಾಣವಾದರೆ, ಇರಾನ್ ಗಡಿಯು ಪಾಕಿಸ್ತಾನಿ ವಿರೋಧಿ ಬಲೂಚ್ ಬಂಡುಕೋರರಿಗೆ ಆಶ್ರಯ ನೀಡಿದೆ ಎಂಬ ವಾದಗಳಿವೆ. ಜನವರಿ 2024ರಲ್ಲಿ ನಡೆದ ಕ್ಷಿಪಣಿ ದಾಳಿಗಳ ನಂತರ ಉಭಯ ದೇಶಗಳು ಶಾಂತಿ ಕಾಪಾಡಲು 12 ಒಪ್ಪಂದಗಳಿಗೆ ಸಹಿ ಹಾಕಿದ್ದವು. ಆದರೆ ಈಗ ಅಮೆರಿಕದ ಪ್ರವೇಶವು ಈ 'ಸಹೋದರತ್ವ'ದ ಒಪ್ಪಂದವನ್ನು ಅಪಾಯಕ್ಕೆ ಸಿಲುಕಿಸುವ ಸಾಧ್ಯತೆ ಇದೆ.

ಪಾಕ್ ವಾಯುಪ್ರದೇಶ ಬಳಸುತ್ತಾ ಅಮೆರಿಕ?

ಸಂಭವನೀಯ ದಾಳಿಯ ಸಂದರ್ಭದಲ್ಲಿ ಅಮೆರಿಕವು ಇರಾನ್ ಮೇಲೆ ದಾಳಿ ನಡೆಸಲು ಪಾಕಿಸ್ತಾನದ ವಾಯುಪ್ರದೇಶ ಅಥವಾ ಮಿಲಿಟರಿ ನೆಲೆಗಳನ್ನು ಬಳಸುವ ಸಾಧ್ಯತೆ ಇದೆ ಎಂಬ ಚರ್ಚೆಗಳು ನಡೆಯುತ್ತಿವೆ. ಒಂದು ವೇಳೆ ಅಮೆರಿಕಕ್ಕೆ ಪಾಕಿಸ್ತಾನ ಸಾಥ್ ನೀಡಿದರೆ ಇರಾನ್ ಜೊತೆಗಿನ ಸಂಬಂಧ ಸಂಪೂರ್ಣ ಹದಗೆಡಲಿದೆ. ಅತ್ತ ಅಮೆರಿಕದ ಸ್ನೇಹ, ಇತ್ತ ನೆರೆಯ ಇರಾನ್ ಜೊತೆಗಿನ ಗಡಿ ಭದ್ರತೆಯ ನಡುವೆ ಪಾಕಿಸ್ತಾನ ಈಗ ಇಕ್ಕಟ್ಟಿಗೆ ಸಿಲುಕಿದೆ.

ಸಮಾಚಾರ ಸಣ್ಣದಲ್ಲ

ಆಟೋ ಪ್ರಯಾಣ ದರ ಪರಿಷ್ಕರಣೆ ಫೆ.1ರಿಂದ

ಕೋಲಾರ: ಕೋಲಾರ ಜಿಲ್ಲೆಯಲ್ಲಿ ಆಟೋ ಪ್ರಯಾಣ ದರವನ್ನು ಪರಿಷ್ಕರಣೆ ಮಾಡಲಾಗಿದೆ ಎಂದು ಆರ್‌ಟಿಒ ವೇಣುಗೋಪಾಲರೆಡ್ಡಿ ತಿಳಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು, ಇಂಧನ, ಎಲ್ಪಿಜಿ, ಆಟೋಮೊಬೈಲ್ ಬಿಡಿಭಾಗಗಳ ಬೆಲೆ ಏರಿಕೆ ಆಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಭೆಯಲ್ಲಿ ಸಮಗ್ರ ಚರ್ಚೆ ಮಾಡಿ ಆಟೋ ಪ್ರಯಾಣ ದರದ ಏರಿಕೆ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಮೂವ ರು ಪ್ರಯಾಣಿಕರಿಗೆ ಮೊದಲ 2.25 ಕಿಮೀ ಪ್ರಯಾಣಕ್ಕೆ 32 ರೂ. ನಿಗದಿ ಮಾಡಲಾಗಿದೆ. ನಂತರದ ಪ್ರತಿಯೊಂದು ಕಿಮೀಗೆ 16 ರೂ. ಹೆಚ್ಚುವರಿಯಾಗಿ ಪಾವತಿ ಮಾಡಬೇಕಾಗುತ್ತದೆ. ಮೊದಲ 5 ನಿಮಿಷ ಆಟೋ ಚಾಲಕರು ಉಚಿತವಾಗಿ ಕಾಯಲಿದ್ದು ನಂತರದ ಪ್ರತಿ 15 ನಿಮಿಷಕ್ಕೆ 2 ರೂ. ಕೊಡಬೇಕಾಗುತ್ತದೆ. ಮೊದಲ 20 ಕೆಜಿ ತೂಕದ ಲಗ್ಗೇಜ್ ಸಾಗಣೆ ಉಚಿತವಾಗಿದ್ದು ನಂತರದ ಪ್ರತಿ 20 ಕೆಜಿಗೆ 4 ರೂ. ಗಳನ್ನು ಪ್ರಯಾಣಿಕರು ಕೊಡಬೇಕಾಗುತ್ತದೆ. ರಾತ್ರಿ 10 ಗಂಟೆಯಿಂದ ಮುಂಜಾನೆ 5 ಗಂಟೆವರೆಗೆ ಆಟೋ ಚಾಲಕರು ಪಡೆಯುವ ಹಣ ನಿಗದಿತ ದರದ ಒಂದೂವರೆ ಪಟ್ಟಿಗಿಂದ ಹೆಚ್ಚಾಗಿರಬಾರದು. ಪ್ರತಿಯೊಂದು ಆಟೋ ಪ್ಲಾಗ್ ಮೀಟರ್‌ಹೊಂದಿದ್ದು ಪರಿಷ್ಕರಣೆ ಹೊಂದಿದ ಪ್ರಯಾಣ ದರಕ್ಕೆ ಅನುಗುಣವಾಗಿ ತೂಕ ಮತ್ತು ಅಳತೆ ಇಲಾಖೆಯ ಸಹಾಯಕ ನಿರ್ದೇಶಕರಿಂದ ಅನುಮೋದನೆ ಪಡೆದಿರಬೇಕು. ಹೀಗಾಗಿ ಪ್ರತಿಯೊಬ್ಬ ಆಟೋ ಚಾಲಕರು ತಮ್ಮ ವಾಹನಕ್ಕೆ ಪರಿಷ್ಕೃತ ದರವನ್ನು ಹೊಂದಿಸಿಕೊಳ್ಳಬೇಕು. ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟಿರುವ ನಿಗದಿತ ಪರಿಷ್ಕೃತ ದರದ ಪಟ್ಟಿಯನ್ನು ಆಟೋರಿಕ್ಷಾದ ಪ್ರಮುಖ ಜಾಗದಲ್ಲಿ ಪ್ರದರ್ಶಿಸಬೇಕು. ಫೆಬ್ರವರಿ ಒಂದನೇ ತಾರೀಖಿನಿಂದ ಆಟೋಗಳ ಮೀಟರ್‌ತಪಾಸಣೆ ನಡೆಯಲಿದ್ದು ಸಮರ್ಪಕ ಮೀಟರ್‌ಹೊಂದದ ಆಟೋಗಳನ್ನು ವಶಪಡಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ವೇಣುಗೋಪಾಲರೆಡ್ಡಿ ಮಾಹಿತಿ ನೀಡಿದ್ದಾರೆ.

ಜಿಲ್ಲಾ ಫಲಪುಷ್ಪ ಪ್ರದರ್ಶನ 26ರಿಂದ

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ, ತೋಟಗಾರಿಕೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ''ಫಲಪುಷ್ಪ ಪ್ರದರ್ಶನ ಜನವರಿ 26 ಮತ್ತು 27 ರಂದು ನಗರದ ಸರ್. ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಇಲಾಖಾ ಯೋಜನೆಗಳ ಮಾಹಿತಿ ಹಾಗೂ ಇತ್ಯಾದಿ, ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಉತ್ಪಾದಿಸಲಾಗಿರುವ ಕಸಿ ಸಸಿಗಳ ಮಾರಾಟಕ್ಕಾಗಿ ಸಸ್ಯಸಂತೆ ಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕಿ ಗಾಯತ್ರಿ. ಎಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈದ್ಯಾಧಿಕಾರಿಗಳ ಹುದ್ದೆಗೆ ಆಹ್ವಾನ

ಚಿಕ್ಕಬಳ್ಳಾಪುರ: ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರು, ಸಮುದಾಯ ಆರೋಗ್ಯ ಕೇಂದ್ರ, ಹೊಸೂರು ಇಲ್ಲಿ ಖಾಲಿ ಇರುವ ತಜ್ಞ ವೈದ್ಯರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಅನುಮೋದನೆಯಂತೆ ಅರ್ಹ ಅಭ್ಯರ್ಥಿಗಳಿಂದ ''ನೇರ ಸಂದರ್ಶನ''ಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಜನವರಿ 23 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳ ಸಮಕ್ಷಮದಲ್ಲಿ ನಡೆಯುವ ''ನೇರ ಸಂದರ್ಶನ''ಕ್ಕೆ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗಾಗಿ ಡಿಎಚ್‌ಒ ಕಚೇರಿಗೆ ಹಾಜರಾಗತಕ್ಕದ್ದು. ಖಾಲಿ ಇರುವ ಹುದ್ದೆಗಳಿಗೆ ಪ್ರತಿ ಸೋಮವಾರ ''ನೇರ ಸಂದರ್ಶನ'' ನಡೆಯುತ್ತದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ತಲಕಾಯಲ ಬೆಟ್ಟ ಬ್ರಹ್ಮ ರಥೋತ್ಸವ ಫೆ.1ರಂದು

ಶಿಡ್ಲಘಟ್ಟ: ತಾ.ಸಾದಲಿ ಹೋಬಳಿ ತಲಕಾಯಲಬೆಟ್ಟ (ಟಿ.ವೆಂಕಟಾಪುರ) ಗ್ರಾಮದ ಶ್ರೀ ಭೋನೀಳಾ ಸಮೇತ ವೆಂಕಟರಮಣಸ್ವಾಮಿ ದೇವಾಲಯ ''ಎ'' ದರ್ಜೆ ದೇವಾಲಯವಾಗಿದ್ದು, ಮುಜರಾಯಿ ಇಲಾಖೆಗೆ ಸೇರಿರುತ್ತದೆ. ಸದರಿ ದೇವಾಲಯದಲ್ಲಿ 2 ಜನವರಿ 27 ರಿಂದ ಫೆಬ್ರವರಿ 7 ರ ವರೆಗೆ ಜಾತ್ರಾ, ರಥೋತ್ಸವ ಹಮ್ಮಿಕೊಳ್ಳಲಾಗಿದ್ದು, ಫೆಬ್ರವರಿ 1 ರಂದು ಬ್ರಹ್ಮರಥೋತ್ಸವ ನಡೆಯಲಿದೆ.

ವಿರಾಮ
ಪ್ರತಿ ಭಾನುವಾರ

{ಸಿದ್ದರಾಮಯ್ಯ } ಮುಖ್ಯಮಂತ್ರಿ
ನಾನು ಮೈಸೂರಿಗೆ ಬಂದರೆ ಜಿಲ್ಲೆಯ ಜನರನ್ನು ಸಂಪರ್ಕ ಮಾಡುತ್ತಿದ್ದೇನೆ. ನಾನು ಇಲ್ಲದ ಸಮಯದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ ಸಾರ್ವಜನಿಕರ ಸಮಸ್ಯೆಗೆ ನಿರಂತರ ಸ್ಪಂದಿಸಲಿದ್ದಾರೆ. ಯಾರೂ ಅನ್ಯತಾ ಭಾವಿಸಬಾರದು. ನಿಮ್ಮಿಂದ ನಾನು ಎರಡು ಬಾರಿ ಮುಖ್ಯಮಂತ್ರಿ ಹಾಗೂ ಒಮ್ಮೆ ವಿಪಕ್ಷ ನಾಯಕನಾಗಿದ್ದೇನೆ.ದಿ

ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮ | ಅಪಘಾತದಲ್ಲಿ ತುಮಕೂರು ಜಿಲ್ಲೆಗೆ ಎರಡನೇ ಸ್ಥಾನ

ಅಪಘಾತ ತಡೆಗೆ ವಿಶೇಷ ಕಾರ್ಯ ಯೋಜನೆ

ತುಮಕೂರು: ರಾಜ್ಯದಲ್ಲಿಯೇ ಅತಿಹೆಚ್ಚು ರಸ್ತೆ ಅಪಘಾತ ಪ್ರಕರಣಗಳಲ್ಲಿ ತುಮಕೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಈ ಪರಿಸ್ಥಿತಿಯಲ್ಲಿ ಅಪಘಾತ ಪ್ರಕರಣಗಳ ತಡೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗಿದೆ.

ಅಪಘಾತ ಹೆಚ್ಚಳಕ್ಕೆ ಕಾರಣಗಳನ್ನು ಪತ್ತೆ ಮಾಡಿ ನಿಯಂತ್ರಿಸಲು ಅನುಸರಿಸಬೇಕಾದ ವೈಜ್ಞಾನಿಕ ಕ್ರಮ ರೂಪಿಸಲಾಗುತ್ತಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಎ.ಎಂ.ಪ್ರಸಾದ್ ಹೇಳಿದರು.

ನಗರದ ಸಿಎಸ್‌ಐ ಸಂಸ್ಥೆಯ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ರೋಟರಿ ಸಂಸ್ಥೆ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸ್ತೆ ಅಪಘಾತ ಸಂಭವಿಸುತ್ತಿರುವುದಕ್ಕೆ ಕಾರಣಗಳೇನು ಎಂಬುದನ್ನು ಸಮಿತಿ ಅಧ್ಯಯನ ಮಾಡಿ, ಅಪಘಾತ ನಿಯಂತ್ರಣಕ್ಕೆ ಸೂಕ್ತ ಕಾರ್ಯಕ್ರಮ ರೂಪಿಸಲಿದೆ. ಅಪಘಾತ ವಲಯಗಳನ್ನು ಗುರುತಿಸಿ ಅಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ನಿರ್ವಹಿಸಲಿದೆ ಎಂದು ತಿಳಿಸಿದರು.

ನಗರದ ಸಿಎಸ್‌ಐ ಸಂಸ್ಥೆಯ ಶಾಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ರೋಟರಿ ಸಂಸ್ಥೆ ಸಹಯೋಗದಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮ ನಡೆಯಿತು.

ರಸ್ತೆ ಅಪಘಾತ ನಿಯಂತ್ರಣದಲ್ಲಿ ಪ್ರಮುಖವಾಗಿ ವಾಹನ ಚಾಲನೆ ಮಾಡುವವರಲ್ಲಿ ರಸ್ತೆ ನಿಯಮಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಬೇಕಾಗಿದೆ. ವಿಶೇಷವಾಗಿ ವಿದ್ಯಾರ್ಥಿಗಳು, ಯುವಜನರು ಅಪಘಾತಕ್ಕೀಡಾಗುತ್ತಿರುವ ಪ್ರಕರಣ ಹೆಚ್ಚಾಗುತ್ತಿವೆ. ಇವರು ರಸ್ತೆ ನಿಯಮಗಳು ಹಾಗೂ ವಾಹನ ಚಾಲನಾ ಪರವಾನಗಿ, ಅಗತ್ಯ ದಾಖಲಾತಿ ಹೊಂದುವುದು ಕಡ್ಡಾಯವಾಗಿದೆ. ಈ ಬಗ್ಗೆ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಸಂಚಾರ ಸುರಕ್ಷತೆ ಬಗ್ಗೆ ಅರಿವು ಮೂಡಿಸಲಾಗುತ್ತದೆ ಎಂದರು.

ರಾಜ್ಯ ವಾಹನ ತರಬೇತಿ ಶಾಲೆಗಳ ಒಕ್ಕೂಟದ ಗೌರವಾಧ್ಯಕ್ಷ ಟಿ.ಆರ್.ಸದಾಶಿವಯ್ಯ ಮಾತನಾಡಿ, ಸಾರಿಗೆ ಪ್ರಾಧಿಕಾರ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಸಹಯೋಗದಲ್ಲಿ ರೋಟರಿ ಸಂಸ್ಥೆ, ವಾಹನ ತರಬೇತಿ ಶಾಲೆ ಸಂಘದಿಂದ ಜಿಲ್ಲೆಯ ಎಲ್ಲಾ ಶಾಲೆ, ಕಾಲೇಜು ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಗುವುದು. 18 ವರ್ಷಕ್ಕೆ ಕಡಿಮೆ ವಯಸ್ಸಿನವರು ವಾಹನ ಚಲಾಯಿಸಬಾರದು. ಈ ಬಗ್ಗೆ ಪೋಷಕರು ಮಕ್ಕಳಲ್ಲಿ ತಿಳುವಳಿಕೆ ಮೂಡಿಸಬೇಕು. 18ವರ್ಷದ ನಂತರ ವಾಹನ ಚಾಲನಾ ಪರವಾನಗಿ ಪಡೆಯಬೇಕು. ಚಲಾಯಿಸುವ ವಾಹನಗಳ ಅಗತ್ಯ ದಾಖಲಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ವೇಗದ ಚಾಲನೆ, ವ್ಹೀಲಿಂಗ್‌ನಂತಹ ವಿಕೃತಿ ಮೆರೆದರೆ ಅಪಘಾತದಲ್ಲಿ ಜೀವ ಕಳೆದುಕೊಳ್ಳುವ ಅಪಾಯವಿದೆ ಎಂದು ವಿದ್ಯಾರ್ಥಿಗಳಿಗೆ ಎಚ್ಚರಿಸಿದರು.

ಸಿಎಸ್‌ಐ ವಲಯ ಅಧ್ಯಕ್ಷರಾದ ರೆವರೆಂಡ್ ಮನೋಜ್‌ಕುಮಾರ್‌ಅವರು ಮಾತನಾಡಿ, ರಸ್ತೆ ಸುರಕ್ಷತೆ ಬಗ್ಗೆ ಇಲಾಖೆ ಮಕ್ಕಳಿಗೆ ಅರಿವು ಮೂಡಿಸಿದರೆ ಸಾಲದು, ಶಾಲೆ ಕಾಲೇಜುಗಳಲ್ಲಿ ಬೋಧಕರು ಸಂಚಾರ ನಿಯಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು. ತಮ್ಮ ಸಂಸ್ಥೆಯ ಶಾಲಾಕಾಲೇಜು ಬೋಧಕರಿಗೆ ಈ ಬಗ್ಗೆ ಸೂಚನೆ ನೀಡುವುದಾಗಿ ಹೇಳಿದರು.

ರೋಟರಿ ತುಮಕೂರು ಅಧ್ಯಕ್ಷ ಡಾ.ಎ.ಎಸ್. ಸುದರ್ಶನ್, ರೋಟರಿ ಜಿಲ್ಲಾ ಕಾರ್ಯದರ್ಶಿ ಎಂ.ಎಸ್.ಉಮೇಶ್, ಕಾರ್ಯದರ್ಶಿ ಮಲ್ಲೇಶಯ್ಯ, ಸಮುದಾಯ ಸೇವೆ ನಿರ್ದೇಶಕಿ ಚಂದ್ರಕಲಾ, ಮುಖಂಡರಾದ ಮೀರಾರಾಣಿ, ಅನಿತಾ ನಾಗೇಶ್ ಭಾಗವಹಿಸಿದ್ದರು.

ಪತ್ರಕರ್ತರ ಸಂಘದ ಕಚೇರಿಗೆ ನಿವೇಶನ: ಶಾಸಕ

ತಾಲೂಕು ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪತ್ರಿಕಾ ವಿತರಕರಿಗೆ ಸನ್ಮಾನಿಸಲಾಯಿತು.

ತಿಪಟೂರು: ತಾಲೂಕು ಪತ್ರಕರ್ತರ ಸಂಘದ ಬಹುದಿನಗಳ ಬೇಡಿಕೆಯಾಗಿದ್ದ ಸಂಘಕ್ಕೆ ಕಚೇರಿ ಸ್ಥಳಾವಕಾಶ ನೀಡುವ ಬಗ್ಗೆ ಶಾಸಕ ಕೆ. ಷಡಕ್ಷರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಶೀಘ್ರದಲ್ಲಿಯೇ ಸಂಘಕ್ಕೆ ಒಂದು ತಾತ್ಕಾಲಿಕ ವ್ಯವಸ್ಥೆ ಮಾಡುವುದಾಗಿ ವಾಗ್ದಾನ ಮಾಡಿದರು.

ನಗರದ ರೋಟರಿ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ತಾಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪತ್ರಕರ್ತರ ಭವನದ ಸಮಸ್ಯೆ ಎಂದೋ ಬಗೆಹರಿಯುತ್ತಿತ್ತು. ಈಗಲೂ ಕಾಲ ಮಿಂಚಿಲ್ಲ ಪತ್ರಕರ್ತರು ಸಮಾಜ ಸೇವೆಗಾಗಿ ಮತ್ತು ಸಮಾಜವನ್ನು ಎಚ್ಚರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು. ಪರ್ತಕರ್ತರ ಬಗ್ಗೆ ನನಗೆ ಗೌರವ ಇದೆ. ಸದ್ಯಕ್ಕೆ ಸಂಘಕ್ಕೆ ತಾತ್ಕಾಲಿಕ ಕಚೇರಿಗೆ ವ್ಯವಸ್ಥೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಅರಸೀಕೆರೆ ಶಾಸಕ ಶಿವಲಿಂಗೇಗೌಡರು ಪತ್ರಕರ್ತರ ಭವನಕ್ಕೆ ನಿವೇಶನ ಮತ್ತು ಅನುದಾನ ಯಾವ ರೀತಿಯಲ್ಲಿ ತಂದಿದ್ದಾರೆ ಎಂದು ತಿಳಿದುಕೊಂಡು ಅದೇ ರೀತಿ ನಾನು ವ್ಯವಸ್ಥೆ ಮಾಡುತ್ತೇನೆ ಎಂದರು.

ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಡಿ.ವಿ. ಗುಂಡಪ್ಪನವರು ಕಟ್ಟಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹತ್ತು ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ. ಇಲ್ಲಿ ಸದಸ್ಯರಾಗುವುದೇ ಹೆಮ್ಮೆಯ ವಿಷಯ. ತುಮಕೂರು ಹೊರತುಪಡಿಸಿದರೆ ಜಿಲ್ಲೆಯ ಬಹುತೇಕ ಕಡೆ ಅವಿರೋಧವಾಗಿ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ.ಆದರೆ ಗೆದ್ದವರು ಹಿಗ್ಗಬಾರದು, ಸೋತವರು ಕುಗ್ಗಬಾರದು ಮತ್ತು ಗೆದ್ದವರ ಕಾಲೆಳೆಯಬಾರದು. ಸಮಾಜ ಪತ್ರಕರ್ತರನ್ನು ವಿಶೇಷ ದೃಷ್ಟಿಯಿಂದ ನೋಡುತ್ತದೆ. ನೀವು ಬಳಸುವ ಶಬ್ದ ಇನ್ನೊಬ್ಬರಿಗೆ ಅಥವ ಸಮಾಜಕ್ಕೆ ಹಾನಿ ಉಂಟುಮಾಡಿದರಲಿ,ನಿಮ್ಮ ಬರವಣಿಗೆ ಸಮಾಜ ಮತ್ತು ಹೃದಯಗಳನ್ನು ಒಡೆಯಬಾರದು ವ್ಯಕ್ತಿತ್ವ ಹಣದಿಂದ ಬರಲ್ಲ, ಇದು ನಿಮ್ಮ ನಡೆ ನುಡಿಯಲ್ಲಿರಬೇಕು ಎಂದು ಹೇಳಿದರು.

ಪ್ರಮಾಣವಚನ ಬೋಧಿಸಿದ ರಾಜ್ಯಘಟಕದ ಉಪಾಧ್ಯಕ್ಷ್ಷ ಮದನಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರಕರ್ತರ ನೆರವಿಗೆ ಬಂದಿದ್ದಾರೆ. ಕೋವಿಡ್ ಸಂದರ್ಭ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ 5 ಲಕ್ಷ ಸಹಾಯಧನ ನೀಡಿದ್ದಾರೆ. ಮಾಸಾಸನವನ್ನು 15 ಸಾವಿರಕ್ಕೆ ಏರಿಸಿದ್ದಾರೆ ಎಂದರು.

ಸಮಾರಂಭದಲ್ಲಿ ಬಿಜೆಪಿ ಮುಖಂಡರಾದ ಲೋಕೇಶ್ವರ್, ಜೆಡಿಎಸ್ ಕೆ.ಟಿ.ಶಾಂತಕುಮಾರ್, ನವಿಲೆ ಪರಮೇಶ್, ಜಿಲ್ಲಾಧ್ಯಕ್ಷ ಎಲ್.ಯೋಗೇಶ್, ಉಪಾಧ್ಯಕ್ಷ ಪ್ರಸನ್ನ, ಪ್ರಧಾನ ಕಾರ್ಯದರ್ಶಿ ರಘುರಾಮ್, ಜಿಲ್ಲಾ ನಿರ್ದೇಶಕರಾದ ಸುರೇಶ್ ಶ್ರೀವತ್ಸ, ಸುಪ್ರತೀಕ್,ನೂತನ ತಾಲೂಕು ಅಧ್ಯಕ್ಷ ಟಿ.ಎಸ್.ದಯಾನಂದ, ಉಪಾಧ್ಯಕ್ಷ ಪ್ರಶಾಂತ್ ಕರೀಕೆರೆ, ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಖಜಾಂಚಿ ಕುಮಾರಸ್ವಾಮಿ, ಕಾರ್ಯದರ್ಶಿ ರವೀಂದ್ರಕುಮಾರ್, ಕಾಸಪತಾ ಅಧ್ಯಕ್ಷ ಬಸವರಾಜು,ಗೌರವಾಧ್ಯಕ್ಷ ಶಿವಕುಮಾರ್ ಇದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪತ್ರಿಕಾ ವಿತರಕರಿಗೆ ಸನ್ಮಾನಿಸಲಾಯಿತು.

ಮಾದಿಗ ಸಮುದಾಯದ ಸಂಘಟನೆಗೆ ಮಹಾಸಭಾ

ಗುಬ್ಬಿ: ಸಾಮಾಜಿಕ ಶೈಕ್ಷಣಿಕ ಆರ್ಥಿಕ ಪ್ರಗತಿ ಸಾಧಿಸಿ ಸಮಾಜದ ಮುಖ್ಯವಾಹಿನಿಗೆ ಮಾದಿಗ ಸಮುದಾಯ ಬರಲು ರಾಜ್ಯದಲ್ಲಿ ಏಕೈಕ ಪ್ರಬಲ ಸಂಘಟನೆಯಾಗಿ ಮಾದಾರ ಮಹಾಸಭಾ ರಚನೆಯಾಗಿದ್ದು ಅದೇ ಮಾದರಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಘಟಕ ಪದಾಧಿಕಾರಿಗಳ ಆಯ್ಕೆ ಘೋಷಣೆಯಾಗಿದೆ.

ಮಾದಾರ ಮಹಾಸಭಾ ತಾ. ಅಧ್ಯಕ್ಷರಾಗಿ ಆಯ್ಕೆಯಾದ ಕೊಡಿಯಾಲ ಮಹದೇವು, ಹಿರಿಯ ಉಪಾಧ್ಯಕ್ಷರಾಗಿ ಗುಬ್ಬಿಯ ಪಾಂಡುರಂಗಯ್ಯ ಅವರನ್ನು ಆಯ್ಕೆ ಮಾಡಲಾಯಿತು.

ಈ ಬೆನ್ನಲ್ಲೇ ಹೋಬಳಿ ಹಾಗೂ ನಗರ ಘಟಕ ಅಸ್ತಿತ್ವಕ್ಕೆ ತರಲು ಪೂರ್ವಭಾವಿ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಮಾದಾರ ಮಹಾಸಭಾ ತಾ. ಅಧ್ಯಕ್ಷರಾಗಿ ಆಯ್ಕೆಯಾದ ಕೊಡಿಯಾಲ ಮಹದೇವು ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಗರ ಘಟಕ ರಚಿಸಿ ಪದಾಧಿಕಾರಿಗಳ ನೇಮಕ ಮಾಡಲಾಯಿತು.

ತಾ.ಘಟಕಕ್ಕೆ ಹಿರಿಯ ಉಪಾಧ್ಯಕ್ಷರಾಗಿ ಗುಬ್ಬಿಯ ಪಾಂಡುರಂಗಯ್ಯ ಅವರನ್ನು ಆಯ್ಕೆ ಮಾಡಿ ಘೋಷಣೆ ಮಾಡಲಾಯಿತು. ಅಧ್ಯಕ್ಷ ಕೊಡಿಯಾಲ ಮಹದೇವು ಮಾತನಾಡಿ, ರಾಜ್ಯ ಮಟ್ಟದ ನಮ್ಮ ಮುಖಂಡರು ಮಾದಾರ ಮಹಾಸಭಾ ರಚಿಸಿಕೊಂಡು ಎಲ್ಲಾ ಜಿಲ್ಲೆಯಲ್ಲಿ ಘಟಕ ಆರಂಭವಾಗಿವೆ. ಶಿಕ್ಷಣ, ಆರೋಗ್ಯ, ಆರ್ಥಿಕ ನೆರವು, ಬ್ಯಾಂಕ್ ಹೀಗೆ ಅನೇಕ ಚಟುವಟಿಕೆ ಮೂಲಕ ಮಾದಿಗರನ್ನು ಮೇಲೆತ್ತುವ ಕೆಲಸ ಪ್ರತಿ ಗ್ರಾಮಲ್ಲಿ ನಡೆಸಲಾಗುವುದು ಎಂದು ತಿಳಿಸಿದರು. ಮಹಾಸಭಾ ತಾ.ಖಜಾಂಚಿ ಜಿ.ಎಸ್. ಆನಂದ್ ಮಾತನಾಡಿದರು. ನಗರ ಘಟಕಕ್ಕೆ ಜಿ.ಎನ್.ಮನೋಹರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಉಪಾಧ್ಯಕ್ಷರಾಗಿ ನರಸಿಂಹಮೂರ್ತಿ, ಕಾರ್ಯದರ್ಶಿಯಾಗಿ ಕೆ.ಮಧು, ಖಜಾಂಚಿಯಾಗಿ ಮಂಜುನಾಥ್, ಸಂಘಟನಾ ಕಾರ್ಯದರ್ಶಿಯಾಗಿ ಶಿವರಾಜ್ ಅವರನ್ನು ಆಯ್ಕೆ ಮಾಡಲಾಯಿತು.

ಹಾಲು ಕರೆಯುವ ಸ್ಪರ್ಧೆ | ಶಾಸಕರಿಂದ ಬಹುಮಾನ ವಿತರಣೆ

ಹೈನುಗಾರಿಕೆಯಿಂದ ಸ್ವಾವಲಂಬನೆ ಸಾಧ್ಯ

ಚಿಕ್ಕನಾಯಕನಹಳ್ಳಿ: ರೈತರು ಕೇವಲ ಕೃಷಿಯನ್ನೇ ನಂಬಿ ಕೂರದೆ, ಹೈನುಗಾರಿಕೆ ಕೂಡ ಅಳವಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಶಾಸಕ ಸಿ.ಬಿ.ಸುರೇಶ ಬಾಬು ಸಲಹೆ ನೀಡಿದರು.

ಚೌಳಕಟ್ಟೆ ಗ್ರಾಮದಲ್ಲಿ ಸೋಮವಾರ ಪಶು ವೈದ್ಯಕೀಯ ಸೇವಾ ಇಲಾಖೆ, ಗ್ರಾಮ ಪಂಚಾಯಿತಿ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ''ಉಚಿತ ಜಾನುವಾರು ಆರೋಗ್ಯ ತಪಾಸಣೆ, ಬರಡು ರಾಸು ಚಿಕಿತ್ಸಾ ಶಿಬಿರ ಹಾಗೂ ಮಿಶ್ರತಳಿ ಕರುಗಳ ಪ್ರದರ್ಶನ'' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪಶುಪಾಲನೆ ಉತ್ತೇಜಿಸಲು ಸರಕಾರದಿಂದ ನೆಲಹಾಸು, ಮೇವು ಕತ್ತರಿಸುವ ಯಂತ್ರ ಸವಲತ್ತುಗಳು ಹಾಗೂ ಉಚಿತ ವೈದ್ಯಕೀಯ ಸೌಲಭ್ಯಗಳು ಸಿಗುತ್ತಿದ್ದು, ರೈತರು ಇವುಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಇದೇ ವೇಳೆ ಚೌಳಕಟ್ಟೆ ದೇವಾಲಯದ ಆವರಣದಲ್ಲಿ ಸಾರ್ವಜನಿಕ ಕಾರ್ಯಕ್ರಮಗಳ ಅನುಕೂಲಕ್ಕಾಗಿ 10 ಲಕ್ಷ ರೂ. ವೆಚ್ಚದಲ್ಲಿ ಶೀಟ್ ಹಾಕಿಸುವ ಭರವಸೆ ನೀಡಿದರು.

ಚಿಕ್ಕನಾಯಕನಹಳ್ಳಿ ತಾ.ಚೌಳಕಟ್ಟೆ ಗ್ರಾಮದಲ್ಲಿ ಹಾಲು ಕರೆಯುವ ಸ್ಪರ್ಧೆಯ ವಿಜೇತ ರೈತರಿಗೆ ಶಾಸಕ ಸಿ.ಬಿ. ಸುರೇಶ್ಬಾಬು ಬಹುಮಾನ ವಿತರಿಸಿದರು.

ಮಾಜಿ ತಾ.ಪಂ. ಸದಸ್ಯೆ ಹೇಮಲತಾ ಮಾತನಾಡಿ, ಪ್ರಧಾನಮಂತ್ರಿಯವರು ಕೃಷಿ ಕ್ಷೇತ್ರಕ್ಕಾಗಿ ಹೊಸ ಯಂತ್ರೋಪಕರಣ ಪರಿಚಯಿಸುತ್ತಿದ್ದು, ಅವುಗಳನ್ನು ಬಳಸಿ ಸಾಧನೆ ಮಾಡಿ ಎಂದು ತಿಳಿಸಿದರು.

ಪಶುಸಂಗೋಪನಾ ಸಹಾಯಕ ನಿರ್ದೇಶಕ ಕಾಂತರಾಜು ಮಾತನಾಡಿ, ಶಿಬಿರದಲ್ಲಿ ಸುಮಾರು 300 ರಾಸುಗಳಿಗೆ 1 ಲಕ್ಷ ರೂ. ವೆಚ್ಚದ ಔಷಧಿಗಳನ್ನು ಉಚಿತವಾಗಿ ನೀಡಲಾಗಿದೆ ಎಂದರು.

ಚೌಳಕಟ್ಟೆ, ಸಬ್ಬೇನಹಳ್ಳಿ ಹಾಗೂ ಹರೇನಹಳ್ಳಿ ಯಲ್ಲಿ ಹಮ್ಮಿಕೊಳ್ಳಲಾಗಿದ್ದ ಹಾಲು ಕರೆಯುವ ಸ್ಪರ್ಧೆಯ ವಿಜೇತರಿಗೆ ಶಾಸಕರು ಬಹುಮಾನ ವಿತರಿಸಿದರು. ಗ್ರಾಪಂ ಸದಸ್ಯರಾದ ಸುಮಾ, ಶಿವಣ್ಣ, ಮಾಜಿ ತಾ.ಪಂ. ಸದಸ್ಯ ಶಿವಣ್ಣ, ಪಶುವೈದ್ಯ ಪ್ರಮೋದ್, ಪಿಡಿಒ ರಂಜಿತ್ ಉಪಸ್ಥಿತರಿದ್ದರು.

ಸೊಸೈಟಿ ಮತದಾರರ ಪಟ್ಟಿ ಅಕ್ರಮ: ಪ್ರತಿಭಟನೆ

ಕೋಲಾರ: ನರಸಾಪುರ ಸೊಸೈಟಿಯಲ್ಲಿ ಅಕ್ರಮ ಮತದಾರರ ಪಟ್ಟಿಯನ್ನು ಸಿದ್ದಪಡಿಸುವ ಮೂಲಕ ವಾಮ ಮಾರ್ಗವಾಗಿ ಚುನಾವಣೆಯನ್ನು ಎದುರಿಸಲು ಮುಂದಾಗಿದ್ದಾರೆಂದು ದಳಪತಿ ಕುರ್ಕಿ ರಾಜೇಶ್ವರಿ ಹೇಳಿದರು.

ನರಸಾಪುರ ಸೊಸೈಟಿ ಮುಂದೆ ಮೈತ್ರಿಕೂಟದಿಂದ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, ಕಳೆದ 5 ವರ್ಷದ ಅವಧಿಯಲ್ಲಿ ಸಾಲಗಾರರಲ್ಲದ ಕ್ಷೇತ್ರದ ಮತಪಟ್ಟಿಯಲ್ಲಿ 200 ಮತದಾರರನ್ನು ಅಕ್ರಮವಾಗಿ ಸೇರ್ಪಡೆ ಮಾಡಿಕೊಳ್ಳಲಾಗಿದ್ದು ಹೊಸ ಸದಸ್ಯರೆಲ್ಲರೂ ಅಧ್ಯಕ್ಷರು ಮತ್ತು ನಿರ್ದೇಶಕರ ಕುಟುಂಬದವರೇ ಆಗಿದ್ದಾರೆ. ಈ ಮತಚೋರಿ ಪಟ್ಟಿಯಿಂದ ಗೆಲ್ಲಲು ತಯಾರಿ ಮಾಡಿದ್ದು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಮುಂದೆ ಈ ಆಟಗಳೆಲ್ಲಾ ನಡೆಯುವುದಿಲ್ಲ ಎಂದು ಎಚ್ಚರಿಸಿದರು.

ಹೊಸ ಮತದಾರರ ಸೇರ್ಪಡೆ ಕುರಿತು ದಾಖಲೆಗಳನ್ನು ಕೇಳಿದರೆ ಷೇರುದಾರರು ಅರ್ಜಿ ಕೊಡಬೇಕು ಎಂದು ಸಿಇಒ ಹೇಳಿದ್ದು ಅಪ್ಲಿಕೇಷನ್ ಕೊಟ್ಟ ನಂತರ ಚುನಾವಣಾಧಿಕಾರಿ ಬಳಿ ಕೇಳಬೇಕು ಎಂದು ಉತ್ತರಿಸಿದರು.

ಎಲೆಕ್ಷನ್ ಅಧಿಕಾರಿ ನವೀನ್‌ಕುಮಾರ್ ಅವರಿಗೆ ಫೋನ್ ಮಾಡಿದರೆ ಕೋಲಾರದ ಕಚೇರಿಗೆ ಬನ್ನಿ ಕೊಡೋಣ, ಚರ್ಚೆ ಮಾಡೋಣ ಎಂದು ಹೇಳಿದ್ದು ಕಚೇರಿಗೆ ಬಂದರೆ ಸಾಹೇಬರಿಲ್ಲ ಎಂದು ಸಿಬ್ಬಂದಿ ಹೇಳುತ್ತಿದ್ದಾರೆ. ಕಚೇರಿ ಅವಧಿಯಲ್ಲಿ ಚುನಾವಣಾಧಿಕಾರಿ ಮತದಾರರ ಕೈಗೆ ಸಿಗದಿದ್ದರೆ ಹೇಗೆ? ಸಹಕಾರ ಸಂಘಗಳ ಜಿಲ್ಲಾ ಅಧಿಕಾರಿ ಜೋಷಿ ಅವರನ್ನು ಕೇಳೋಣವೆಂದರೆ ಅವರ ಸೀಟ್ ಸಹಾ ಖಾಲಿ ಇದ್ದು ಯಾವಾಗ ನೋಡಿದರೂ ಕಚೇರಿಯಲ್ಲಿ ಸಿಗುವುದಿಲ್ಲ. ಇಬ್ಬರೂ ಅಧಿಕಾರಿಗಳ ಸ್ಥಿತಿ ಹೀಗಾದರೆ ಮತದಾರರ ಅಳಲು ಕೇಳುವುದು ಮತ್ಯಾರು ಎಂದು ಪ್ರಶ್ನಿಸಿದರು.

ನರಸಾಪುರ ಸೊಸೈಟಿ ಅಕ್ರಮದ ವಿರುದ್ಧ ಮೈತ್ರಿಕೂಟದಿಂದ ಪ್ರತಿಭಟನೆ ನಡೆಯಿತು.

ಹೀಗಾಗಿ ನರಸಾಪುರ ಸೊಸೈಟಿ ಅಕ್ರಮವನ್ನು ಪ್ರತಿಭಟಿಸುವ ಬಗ್ಗೆ ಜ.20 ರಂದು ಮಂಗಳವಾರ ಮುಖಂಡರಾದ ಸಿಎಂಆರ್‌ಶ್ರೀನಾಥ್ ಅವರ ಮನೆಯಲ್ಲಿ ಮೈತ್ರಿಕೂಟದ ನಾಯಕರ ಸಭೆ ನಡೆಸಲಾಗುತ್ತಿದ್ದು ಸಮಗ್ರ ಚರ್ಚೆ ಮಾಡುವ ಮೂಲಕ ಓಟ್ ಚೋರಿ ಕುರಿತು ಅಭಿಯಾನ ನಡೆಸಲಾಗುವುದು ಎಂದು ಕುರ್ಕಿ ರಾಜೇಶ್ವರಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ವರ್ತೂರ್‌ಪ್ರಕಾಶ್, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ, ಮುಖಂಡರಾದ ಬಾಬುಮೌನಿ, ಸಿ.ಡಿ.ರಾಮಚಂದ್ರ, ಕೆಇಬಿ ಚಂದ್ರು, ಬೆಗ್ಲಿಸೂರ್ಯಪ್ರಕಾಶ್, ಕೂಡಾ ಮಾಜಿ ಅಧ್ಯಕ್ಷ ವಿಜಯಕುಮಾರ್, ಕೆಂಬೋಡಿ ನಾರಾಯಣಸ್ವಾಮಿ ಇದ್ದರು.

ಗಿಲ್ಲಿ ನಟನಿಗೆ ಬಿಗ್ ಬಾಸ್ ಕಿರೀಟ: ಸಿಹಿ ವಿತರಣೆ

ಚಿಕ್ಕನಾಯಕನಹಳ್ಳಿ: ಖ್ಯಾತ ರಿಯಾಲಿಟಿ ಶೋ ''ಬಿಗ್ ಬಾಸ್'' ಸೀಸನ್ನ ಮಹತ್ವದ ಹಣಾಹಣಿಯಲ್ಲಿ 'ಗಿಲ್ಲಿ' ಚಿತ್ರದ ಖ್ಯಾತಿಯ ನಟ ಜಯಭೇರಿ ಬಾರಿಸಿದ್ದು, ಈ ಸಂಭ್ರಮವನ್ನು ಅವರ ಅಭಿಮಾನಿಗಳು ಹಾಗೂ ಪಟ್ಟಣದ ಜನರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಅದ್ದೂರಿಯಾಗಿ ಆಚರಿಸಿದರು. ನಟನ ಈ ಅಮೋಘ ಗೆಲುವಿನ ಕುರಿತು ಸ್ಥಳೀಯ ಕನ್ನಡ ಸಂಘದ ಕಾರ್ಯದರ್ಶಿ ಕೃಷ್ಣೇಗೌಡ ಅವರು ಹರ್ಷ ವ್ಯಕ್ತಪಡಿಸಿದ್ದಾರೆ. ನಂತರ ಮಾತನಾಡಿದ ಅವರು, ಕನ್ನಡಿಗರ ಮನೆಮಾತಾಗಿದ್ದ ಗಿಲ್ಲಿ ನಟರಾಜ್ ಬಿಗ್ ಬಾಸ್ ವೇದಿಕೆಯಲ್ಲೂ ಗೆಲುವು ಸಾಧಿಸಿರುವುದು ಅತ್ಯಂತ ಸಂತೋಷದ ವಿಷಯ. ಅವರ ಈ ಸಾಧನೆ ಯುವ ಪ್ರತಿಭೆಗಳಿಗೆ ಸ್ಫೂರ್ತಿಯಾಗಲಿ ಎಂದರು. ಫಿನಾಲೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಚಿಕ್ಕನಾಯಕನಹಳ್ಳಿಯ ನೆಹರೂ ವೃತ್ತ ಹಾಗೂ ಬಸ್ ನಿಲ್ದಾಣದ ಬಳಿ ಜಮಾಯಿಸಿದ ಅಭಿಮಾನಿಗಳು, ನಟನ ಭಾವಚಿತ್ರ ಹಿಡಿದು ಸಂಭ್ರಮಿಸಿದರು. ಸಾರ್ವಜನಿಕರಿಗೆ ಲಡ್ಡು ಹಾಗೂ ಪೇಡಾ ವಿತರಿಸುವ ಮೂಲಕ ತಮ್ಮ ನೆಚ್ಚಿನ ನಟನ ಯಶಸ್ಸನ್ನು ಕೊಂಡಾಡಿದರು. ಈ ಗೆಲುವು ಅವರ ಪರಿಶ್ರಮಕ್ಕೆ ಸಿಕ್ಕ ಗೌರವ ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟಿದ್ದಾರೆ. ತಾಲ್ಲೂಕಿನ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಅಭಿನಂದನೆಗಳ ಮಹಾಪೂರವನ್ನೇ ಹರಿಸುತ್ತಿದ್ದಾರೆ.

ಶ್ರೀವೈಷ್ಣವ ಸಮಾಜ ನಿಗಮ ಸ್ಥಾಪನೆಗೆ ಒತ್ತಾಯ

ತುಮಕೂರು: ರಾಜ್ಯದಲ್ಲಿ ಕಡಿಮೆ ಜನಸಂಖ್ಯೆಯಲ್ಲಿರುವ, ಆರ್ಥಿಕವಾಗಿ ಹಿಂದುಳಿದಿರುವ ಶ್ರೀವೈಷ್ಣವ ಸಮಾಜಕ್ಕೆ ಶಕ್ತಿ ತುಂಬಲು ರಾಜ್ಯ ಸರ್ಕಾರ ಶ್ರೀವೈಷ್ಣವ ಸಮಾಜ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿ ನಿಗಮಕ್ಕೆ ಕನಿಷ್ಟ ನೂರು ಕೋಟಿ ರೂ. ಅನುದಾನ ನೀಡಬೇಕು. ರಾಮಾನುಜಾಚಾರ್ಯರ ಜಯಂತಿಯನ್ನು ಸರಕಾರ ಆಚರಿಸಬೇಕು ಎಂದು ಜಿಲ್ಲಾ ಶ್ರೀವೈಷ್ಣವ ಸಮುದಾಯ ಧಾರ್ಮಿಕ ಸಂಸ್ಥೆ ಅಧ್ಯಕ್ಷ ಟಿ.ಎಸ್. ಮೋಹನ್‌ಕುಮಾರ್ ಒತ್ತಾಯಿಸಿದರು.

ನಗರದ ಮಾರುತಿನಗರದ ಶ್ರೀವೈಷ್ಣವ ಸಮಾಜ ಸಮುದಾಯಭವನದಲ್ಲಿ ಸೋಮವಾರ ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣಾ ಸಮಾರಂಭದಲ್ಲಿ ಅಧಿಕಾರ ಸ್ವೀಕಾರಮಾಡಿ ಮಾತನಾಡಿದರು. ಶ್ರೀವೈಷ್ಣವ ಸಮಾಜದವರು ಸಾರ್ವಜನಿಕ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಗೆಲುವು ಪಡೆಯುವಷ್ಟು ರಾಜಕೀಯ ಶಕ್ತಿ ಹೊಂದಿಲ್ಲ. ಈ ಪರಿಸ್ಥಿತಿಯಲ್ಲಿ ಸರಕಾರದ ವಿವಿಧ ಸ್ಥಾನಮಾನಗಳಿಗೆ ಸಮಾಜದ ಮುಖಂಡರನ್ನು ನೇಮಕ ಮಾಡಿ ಪ್ರಾತಿನಿಧ್ಯ ನೀಡಬೇಕು ಎಂದು ಮನವಿ ಮಾಡಿದರು.

ಅರ್ಚಕ ವೃತ್ತಿ ಮಾಡಿಕೊಂಡು ಬರುತ್ತಿರುವ ಶ್ರೀವೈಷ್ಣವ ಸಮಾಜದವರು ಆರ್ಥಿಕವಾಗಿ ಹಿಂದೆ ಇದ್ದಾರೆ. ಶೈಕ್ಷಣಿಕವಾಗಿಯೂ ಉತ್ತಮ ಸಾಧನೆ ಮಾಡಿಲ್ಲ. ಸಮಾಜದವರನ್ನು ಮುಖ್ಯವಾಹಿನಿಗೆ ತರಲು ಸಂಘಟನೆಗೆ ಒತ್ತು ನೀಡಲಾಗುತ್ತಿದೆ. ಜಿಲ್ಲೆಯ ಸಮಾಜದವರನ್ನು ಒಟ್ಟುಗೂಡಿಸಲು ತಾಲ್ಲೂಕು, ಹೋಬಳಿ, ವಾರ್ಡ್ ಮಟ್ಟದ ಸಮಿತಿಗಳ ರಚನೆ ಮಾಡಲಾಗುತ್ತಿದೆ. ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಲಾಗುವುದು ಎಂದು ಹೇಳಿದರು. ನಮ್ಮ ಸಮಾಜದ ಸಂಸ್ಕೃತಿ, ಆಚಾರ, ವಿಚಾರಗಳ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸಲು ಪೂಜಾ, ಸಂಸ್ಕಾರ ಕೈಂಕರ್ಯಗಳನ್ನು ಮುಂದುವರೆಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದು ಹೇಳಿದರು. ಈ ವೇಳೆ ಸಮಾಜದ ಹಿರಿಯರನ್ನು ಸನ್ಮಾನಿಸಿ ಗೌರವಿಸಲಾಯಿತು.ಜಿಲ್ಲಾ ಶ್ರೀವೈಷ್ಣವ ಸಂಸ್ಥೆಯ ಉಪಾಧ್ಯಕ್ಷ ನವರತ್ನ ಕುಮಾರ್, ಕಾರ್ಯದರ್ಶಿ ಯೋಗಾನಂದ್, ಸಂಘಟನಾ ಕಾರ್ಯದರ್ಶಿ ಕೆ.ಎಸ್.ರವಿಕುಮಾರ್, ಖಜಾಂಚಿ ಡಿ.ಎಸ್.ಭಕ್ತವತ್ಸಲ, ನಿರ್ದೇಶಕರಾದ ಹೆಚ್.ಎನ್.ಕುಮಾರ್, ಎನ್.ರವಿಕುಮಾರ್, ನಳಿನಾ ಶ್ರೀವತ್ಸ, ಸೀನಪ್ಪ, ಕೆ.ವೆಂಕಟೇಶ್, ಸತ್ಯನಾರಾಯಣ, ಜನಾರ್ಧನ, ಜಿ. ಕೇಶವಮೂರ್ತಿ, ಹೆಚ್.ಕೆ.ಪುಟ್ಟರಾಜು ಇದ್ದರು.

ಜಿಲ್ಲಾ ಶ್ರೀವೈಷ್ಣವ ಸಮುದಾಯ ಧಾರ್ಮಿಕ ಸಂಸ್ಥೆ ಅಧ್ಯಕ್ಷ ಟಿ.ಎಸ್.ಮೋಹನ್‌ಕುಮಾರ್ ಅಧಿಕಾರ ಸ್ವೀಕಾರ ಮಾಡಿದರು.

ಸಮಾಜಮುಖಿ ವ್ಯಕ್ತಿತ್ವದ ಭೀಮಣ್ಣ ಖಂಡ್ರೆ

ನಗರದಲ್ಲಿ ವೀರಶೈವ– ಲಿಂಗಾಯತ ಮಹಾಸಭಾ ಜಿಲ್ಲಾ ಶಾಖೆ ವತಿಯಿಂದ ಮಾಜಿ ಸಚಿವ ಭೀಮಣ್ಣ ಖಂಡ್ರೆ ನಿಧನಕ್ಕೆ ಶ್ರದ್ಧಾಂಜಲಿ ಸಭೆ ನಡೆಯಿತು.

ತುಮಕೂರು: ಭೀಮಣ್ಣ ಖಂಡ್ರೆ ಅವಿಸ್ಮರಣೀಯ ಸಮಾಜಮುಖಿ ವ್ಯಕ್ತಿತ್ವದ ಮೇರು ಪರ್ವತ ಎಂದು ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಸ್.ಪರಮೇಶ್ ಅಭಿಪ್ರಾಯಪಟ್ಟರು. ನಗರದಲ್ಲಿ ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ಮಾಜಿ ಸಚಿವ ಭೀಮಣ್ಣ ಖಂಡ್ರೆ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರಾಗಿ, ಕರ್ನಾಟಕ ಏಕೀಕರಣ ಚಳವಳಿಯ ನೇತಾರರಾಗಿ, ಹೈದರಾಬಾದ್ ಕರ್ನಾಟಕದ ಸಮಗ್ರ ಬೆಳವಣಿಗೆಗೆ ಶ್ರಮಿಸಿದ್ದಾರೆ. ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿ ಮಾಡಿರುವ ಸಾಧನೆ ಅವಿಸ್ಮರಣೀಯ ಎಂದು ಬಣ್ಣಿಸಿದರು. ಮಹಾಸಭಾ ಅಧ್ಯಕ್ಷರಾಗಿದ್ದ ಸಮಯದಲ್ಲಿ ಮಹಾಸಭೆ ಆಡಳಿತ ಕಚೇರಿ ಕಟ್ಟಡ ಕೆಲಸ ಮುಗಿಯುವವರೆಗೂ ದ್ರವಾಹಾರ ಮಾತ್ರ ಸೇವಿಸುವ ಶಪಥ ಮಾಡಿದ್ದರು. ಸಂಸ್ಥೆಗೆ ಶಾಶ್ವತವಾದ ಕಟ್ಟಡ ಕಟ್ಟುವ ಮೂಲಕ ಮಾಡಿದ ಸಾಧನೆ ನಮಗೆಲ್ಲರಿಗೂ ಸ್ಫೂರ್ತಿ, ಆದರ್ಶಪ್ರಾಯವಾಗಿದೆ ಎಂದು ತಿಳಿಸಿದರು. ಮಹಾಸಭಾ ಮಹಾನಗರ ಪಾಲಿಕೆ ಘಟಕದ ಅಧ್ಯಕ್ಷ ಕೆ.ಎಸ್.ಉಮಾಮಹೇಶ್, ''ಖಂಡ್ರೆ ನಿಧನದಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಸಮಾಜಕ್ಕೆ ತೊಂದರೆಯಾದ ಸಂದರ್ಭದಲ್ಲಿ ಸಿಡಿದೆದ್ದು ಹೋರಾಟ ಮಾಡುತ್ತಿದ್ದರು. ಹಾವನೂರು ವರದಿ ಲಿಂಗಾಯತ ವಿರೋಧಿಯೆಂದು ವಾದಿಸಿ ವಿಧಾನಸಭೆಯಲ್ಲಿ ವರದಿ ಪ್ರತಿ ಹರಿದುಹಾಕಿ ಪ್ರತಿಭಟಿಸುವ ಎದೆಗಾರಿಕೆ ತೋರಿದ್ದರು ಎಂದು ನೆನಪಿಸಿಕೊಂಡರು. ಮಹಾಸಭೆ ಮಹಿಳಾ ಘಟಕದ ಅಧ್ಯಕ್ಷೆ ಮಮತಾ ದಿವಾಕರ್, ನಗರ ಘಟಕದ ಅಧ್ಯಕ್ಷೆ ಪುಷ್ಪಾ ಉದಯ್, ಪದಾಧಿಕಾರಿಗಳಾದ ಎಚ್.ಜಿ.ಸದಾಶಿವಯ್ಯ, ಧರ್ಮಪಾಲ್, ಟಿ.ಎಂ.ವಿಜಯ ಕುಮಾರ್, ಬಿ.ರಾಜಶೇಖರಯ್ಯ, ಮನು, ನಟರಾಜು, ಶಾಂತ ಉಮೇಶ್, ರಶ್ಮಿ, ಮಮತಾ ಪ್ರಸನ್ನ ಹಾಜರಿದ್ದರು.

ಶಿರೂರು ಶ್ರೀಗಳಿಗೆ ಶ್ರೀಕೃಷ್ಣಪೂಜಾ ದೀಕ್ಷೆ, ಪುತ್ತಿಗೆ ಶ್ರೀಗಳಿಂದ ಅಕ್ಷಯ ಪಾತ್ರೆ, ಸಟ್ಟುಗ, ಕೀಲಿಕೈ ಹಸ್ತಾಂತರ, ಸರ್ವಜ್ಞ ಪೀಠಾರೋಹಣ

ಪರ್ಯಾಯ ಪೀಠ ಏರುವ ಮೂಲಕ ಮುಂದಿನ 2 ವರ್ಷ ಅವಧಿಯ ಶ್ರೀಕೃಷ್ಣ ಪೂಜೆಯ ಕೈಂಕರ್ಯವನ್ನು ಶಿರೂರು ಮಠದ ವೇದವರ್ಧನ ತೀರ್ಥ ಸ್ವಾಮೀಜಿ ಭಾನುವಾರ ಅಧಿಕೃತವಾಗಿ ವಹಿಸಿಕೊಂಡರು.

ಪರ್ಯಾಯ ಅಧಿಕಾರ ಹಸ್ತಾಂತರದ ಸಂಕೇತವಾಗಿ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥರು ಅಕ್ಷಯ ಪಾತ್ರೆ, ಸಟ್ಟುಗ ಮತ್ತು ಕೀಲಿಕೈಯನ್ನು ನೂತನ ಪೀಠಾಧಿಪತಿಗಳಿಗೆ ಹಸ್ತಾಂತರಿಸಿದರು. ಸಂಸದ ಯದುವೀರ್ ಪರ್ಯಾಯದ ವಿಧಿವಿಧಾನಗಳಿಗೆ ಸಾಕ್ಷಿಯಾದರು.

ಕೃಷ್ಣಾಪುರ ಶ್ರೀವಿದ್ಯಾಸಾಗರ ತೀರ್ಥ ಶ್ರೀಪಾದರು, ಪಲಿಮಾರು ಶ್ರೀವಿದ್ಯಾಧೀಶ ಶ್ರೀಪಾದರು, ಪೇಜಾವರ ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಕಾಣಿಯೂರು ಶ್ರೀವಿದ್ಯಾವಲ್ಲಭ ತೀರ್ಥ ಶ್ರೀಪಾದರು, ಸೋದೆ ಶ್ರೀವಿಶ್ವವಲ್ಲಭ ತೀರ್ಥ ಶ್ರೀಪಾದರು, ಅದಮಾರು ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು, ಪಲಿಮಾರು ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದರು ಸೇರಿ ಅಷ್ಟಮಠದ ಯತಿಗಳು ಪರ್ಯಾಯ ಪೀಠಾಧಿಪತಿ ಪೀಠಾರೋಹಣ ಸಂದರ್ಭದಲ್ಲಿ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಬಳ್ಳಾರಿ ಪ್ರಕರಣ ಸಿಬಿಐಗೆ ನೀಡಲಿ

ಬೆಂಗಳೂರು: ಬಳ್ಳಾರಿಯ ಪ್ರಕರಣವನ್ನು ಸಿಬಿಐಗೆ ಕೊಡಲು ಯಾಕೆ ಸಿಎಂ ಸಿದ್ದರಾಮಯ್ಯ ಹಿಂದೇಟು ಹಾಕುತ್ತಿದ್ದಾರೆ ಎಂದು ಶಾಸಕ ಜಿ. ಜನಾರ್ದನ ರೆಡ್ಡಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಇರುವ ಸಂದರ್ಭದಲ್ಲಿ ಸುಮಾರು 7 ಪ್ರಕರಣ ಸಿಬಿಐಗೆ ಕೊಟ್ಟಿದ್ದೇನೆ. ಬಿಜೆಪಿಯವರು ಒಂದು ಕೇಸನ್ನಾದರೂ ಸಿಬಿಐಗೆ ಕೊಟ್ಟಿದ್ದಾರಾ ಎಂದು ಪ್ರಶ್ನಿಸಿದ್ದಾರೆ. ಯಡಿಯೂರಪ್ಪ ಅವರ ಸರಕಾರದ ಅವಧಿಯಲ್ಲಿ ಎಷ್ಟು ಸಿಬಿಐಗೆ ಕೊಟ್ಟಿದ್ದಾರೆ, ಸಿದ್ದರಾಮಯ್ಯರ ಅವಧಿಯಲ್ಲಿ ಎಷ್ಟು ಸಿಬಿಐಗೆ ವಹಿಸಿದ್ದಾರೆ ಎಂಬ ಪ್ರಶ್ನೆ ಮುಖ್ಯವಲ್ಲ ಎಂದರು. ಕಾಂಗ್ರೆಸ್ ಶಾಸಕನೇ ಕೊಲೆ ಮಾಡಿಸಿದ್ದೆಂದು ನಿಮಗೆ ಈಗಾಗಲೇ ಗೊತ್ತಾಗಿದೆ. ಇದರಿಂದ ಆ ಪಕ್ಷಕ್ಕೆ ಮುಜುಗರ ಆಗಿದೆ. ಕೇವಲ ಮೂವರು ಖಾಸಗಿ ಗನ್‌ಮ್ಯಾನ್ ಬಂಧಿಸಿ, ಸಿಐಡಿಗೆ ಕೊಡುವ ಮೂಲಕ ಇದನ್ನು ಜನರು ಮರೆಯುವಂತೆ ಮಾಡಬೇಕು. ಶಾಸಕರ ಬಂಧನ ಮಾಡಬಾರದೆಂಬ ನಿಮ್ಮ ಕೆಟ್ಟ ಯೋಚನೆ ಇದರಿಂದ ಬಹಿರಂಗ ಆಗುತ್ತಿದೆ. 7 ಪ್ರಕರಣ ಸಿಬಿಐಗೆ ಕೊಟ್ಟಿದ್ದೇನೆ ಎಂದಿರುವ ಸಿಎಂ, ಈ ಪ್ರಕರಣವನ್ನೂ ಸಿಬಿಐಗೆ ಕೊಡಲು ಯಾಕೆ ಹಿಂದೇಟು ಹಾಕುತ್ತಿದ್ದಾರೆಂದು ರಾಜ್ಯದ ಜನರಿಗೆ ತಿಳಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಮುಂಬೈ ಮೇಯರ್: ರಾವತ್ ಅಚ್ಚರಿ ಹೇಳಿಕೆ



ಮುಂಬೈ: ಬಿಎಂಸಿ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತ ದೊರೆತಿದ್ದರೂ, ಉದ್ಧವ್ ಠಾಕ್ರೆ ಬಣದ ಪ್ರಮುಖ ನಾಯಕ ಸಂಜಯ್ ರಾವತ್, ಮುಂಬೈ ಮೇಯರ್ ಹುದ್ದೆಗೆ ಸ್ಪರ್ಧೆ ಇನ್ನೂ ಮುಗಿದಿಲ್ಲ ಎಂದು ಅಚ್ಚರಿಯ ಹೇಳಿಕೆ ನೀಡಿದ್ದಾರೆ. 74,000 ಕೋಟಿ ರೂ.ಗಳನ್ನು ಮೀರಿದ ವಾರ್ಷಿಕ ಬಜೆಟ್ ಹೊಂದಿರುವ ಭಾರತದ ಅತ್ಯಂತ ಶ್ರೀಮಂತ ಪುರಸಭೆಯಾದ ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಚುನಾವಣೆಯಲ್ಲಿ 227 ವಾರ್ಡ್‌ಗಳ ಪೈಕಿ ಬಿಜೆಪಿ 89 ವಾರ್ಡ್‌ಗಳನ್ನು ಗೆದ್ದರೆ, ಅದರ ಮಿತ್ರ ಪಕ್ಷವಾದ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ 29 ಸ್ಥಾನಗಳನ್ನು ಗೆದ್ದುಕೊಂಡಿತು. ಉದ್ಧವ್ ಠಾಕ್ರೆ ಅವರ ಶಿವಸೇನೆ (ಯುಬಿಟಿ) 65 ವಾರ್ಡ್‌ಗಳೊಂದಿಗೆ ಎರಡನೇ ಸ್ಥಾನ ಗಳಿಸಿತು. ಮಿತ್ರಪಕ್ಷಗಳ ಸಹಾಯದಿಂದ, ಸಂಖ್ಯೆ 108ರಷ್ಟಿದೆ. ಈ ಹಿನ್ನೆಲೆಯಲ್ಲಿ ಬಹುಮತಕ್ಕೆ ಕೇವಲ ಆರು ಸ್ಥಾನಗಳ ಕೊರತೆಯಿದೆ ಎಂದು ಸಂಜಯ್ ರಾವತ್ ಹೇಳಿದ್ದಾರೆ. ಚುನಾವಣೆಗೆ ಕೆಲವೇ ವಾರಗಳ ಮೊದಲು ಯುಬಿಟಿ ಜೊತೆ ಮೈತ್ರಿ ಮಾಡಿಕೊಂಡಿದ್ದ ರಾಜ್ ಠಾಕ್ರೆ ಅವರ ಮಹಾರಾಷ್ಟ್ರ ನವನಿರ್ಮಾಣ ಸೇನೆ (ಎಂಎನ್‌ಎಸ್) 6 ಸ್ಥಾನಗಳನ್ನು ಗೆದ್ದಿದೆ.

ಇಳಯರಾಜಗೆ ಪದ್ಮಪಾಣಿ ಪ್ರಶಸ್ತಿ

ಮುಂಬೈ: ಛತ್ರಪತಿ ಸಂಭಾಜಿ ನಗರದಲ್ಲಿ ಜನವರಿ 28ರಿಂದ ಫೆಬ್ರವರಿ 4ರವರೆಗೆ ನಡೆಯಲಿರುವ ಅಜಂತಾ-ಎಲ್ಲೋರಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಸಿದ್ಧ ಸಂಗೀತ ಸಂಯೋಜಕ ಇಳಯರಾಜ ಅವರಿಗೆ ಪದ್ಮಪಾಣಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ. ಜನವರಿ 28ರಂದು ನಡೆಯುವ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಲಾವಿದರು, ಗಣ್ಯ ವ್ಯಕ್ತಿಗಳು ಹಾಗೂ ಚಲನಚಿತ್ರ ಪ್ರೇಮಿಗಳು ಭಾಗಿಯಾಗಲಿದ್ದಾರೆ. ಎಂಟು ದಿನಗಳ ಚಿತ್ರೋತ್ಸವದಲ್ಲಿ ಸುಮಾರು 70 ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ. ಪ್ರಶಸ್ತಿ ಆಯ್ಕೆ ಮಂಡಳಿಯಲ್ಲಿ ಲತಿಕಾ ಪಡ್‌ಗಾಂಕರ್, ನಿರ್ಮಾಪಕರಾದ ಅಶುತೋಷ್ ಗೋವಾರಿಕರ್, ಸುನಿಲ್ ಸುಕ್ತಂಕರ್ ಮತ್ತು ಚಂದ್ರಕಾಂತ್ ಕುಲಕರ್ಣಿ ಇದ್ದರು. ಇವರ ಸಮ್ಮುಖದಲ್ಲಿ ಇಳಯರಾಜ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಇಳಯರಾಜ ಅವರಿಗೆ ಪದ್ಮಪಾಣಿ ಸ್ಮರಣಿಕೆಯ ಜತೆಗೆ ಗೌರವ ಪ್ರಮಾಣ ಪತ್ರ ಹಾಗೂ ₹2 ಲಕ್ಷ ನಗದನ್ನು ಬಹುಮಾನ ನೀಡಲಾಗುತ್ತದೆ. ಈ ಹಿಂದೆ ಜಾವೇದ್ ಅಖ್ತರ್, ಹಿರಿಯ ನಿರ್ದೇಶಕ ಹಾಗೂ ಲೇಖಕ ಸಾಯಿ ಪರಾಂಜಪೆ ಮತ್ತು ನಟ ಓಂ ಪುರಿ ಸೇರಿದಂತೆ ಹಲವರು ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಯುವ ಉದ್ಯಮಿ ಮುದ್ದಾ ಸಾಧನೆಗೆ ಗೌರವ | ಜ.26ರ ಕಾರ್ಯಕ್ರಮಕ್ಕೆ ಆಹ್ವಾನ

ರಾಷ್ಟ್ರಪತಿ ಔತಣಕೂಟಕ್ಕೆ ರಾಜ್ಯದ ಕೌಶಿಕ್ ಆಯ್ಕೆ

ಬೆಂಗಳೂರು: ಗಣರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ರಾಷ್ಟ್ರಪತಿ ಭವನದಲ್ಲಿ ನಡೆಯುವ ಔತಣ ಕೂಟದಲ್ಲಿ ಭಾಗವಹಿಸಲು ರಾಜ್ಯದ ಯುವ ಉದ್ಯಮಿ ಹಾಗೂ ಎಥೆರಿಯಲ್ ಮಿಷನ್ಸ್ ಕಂಪನಿಯ ಸಹ ಸಂಸ್ಥಾಪಕ ಕೌಶಿಕ್ ಮುದ್ದಾ ಅವರಿಗೆ ಆಹ್ವಾನ ಲಭಿಸಿದೆ. ರಾಷ್ಟ್ರಪತಿ ಭವನದಲ್ಲಿ ಜನವರಿ 26ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಪ್ರತಿವರ್ಷ ವಿಜ್ಞಾನಿಗಳು, ಎಂಜಿನಿಯರ್‌ಗಳು, ಚಿಂತಕರು, ನಾನಾ ಕ್ಷೇತ್ರಗಳ ಸಾಧಕರನ್ನು ಆಹ್ವಾನಿಸಲಾಗುತ್ತದೆ. ಇದು ಆ ಸಾಧಕರಿಗೆ ಸರಕಾರ ನೀಡುವ ಗೌರವದ ದ್ಯೋತಕವೂ ಆಗಿದೆ.

ಅದೇ ರೀತಿ ಈ ವರ್ಷ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಕೌಶಿಕ್ ಮುದ್ದಾ ಅವರನ್ನು ಆಹ್ವಾನಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ವಲಯದಲ್ಲಿ ಮಾಡಿರುವ ಸಾಧನೆಯನ್ನು ಪರಿಗಣಿಸಿ ರಾಷ್ಟ್ರಪತಿ ಭವನದಲ್ಲಿನ ಔತಣಕೂಟಕ್ಕೆ ಆಹ್ವಾನ ಲಭಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಈ ಆಹ್ವಾನ ಸಿಕ್ಕಿರುವುದು ಸಂತಸ ತಂದಿದೆ. ಇದು ಮತ್ತಷ್ಟು ಸಾಧನೆಗೆ ಸ್ಫೂರ್ತಿ ನೀಡಲಿದೆ ಎಂದು ಕೌಶಿಕ್ ಮುದ್ದಾ ಹೇಳಿದ್ದಾರೆ. ಬೆಂಗಳೂರಿನ ಪ್ರಧಾನ ಅಂಚೆ ಕಚೇರಿಯ ಸಿಬ್ಬಂದಿ ಕೌಶಕ್ ಮುದ್ದಾ ಅವರ ನಿವಾಸಕ್ಕೆ ತೆರಳಿ ಆಹ್ವಾನ ಪತ್ರವನ್ನು ಕೊಟ್ಟು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ. ಕೌಶಿಕ್ ಮುದ್ದಾ ಅವರ ತಂದೆ ಕಲಬುರಗಿ ಮೂಲದ ಕೇದಾರನಾಥ ಮುದ್ದಾ ಅವರು ಕಾರ್ಪೊರೇಟ್ ವಲಯದ ಕಂಪನಿಗಳಲ್ಲಿ ಸೇವೆ ಸಲ್ಲಿಸಿದ್ದರು. ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು ಮುಖ್ಯ ಮಂತ್ರಿ ಆಗಿದ್ದಾಗ ವಾಣಿಜ್ಯ, ಕೈಗಾರಿಕೆ ಕುರಿತ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದರು.

ಯುವ ಉದ್ಯಮಿಗಳಿಗೆ ಮಾದರಿ

ಕೌಶಿಕ್ ಮುದ್ದಾ ಅವರು ಯುವ ಉದ್ಯಮಿಗಳಿಗೆ ಮಾದರಿಯಾಗಿದ್ದಾರೆ. ಬೆಂಗಳೂರಿನ ಆರ್.ವಿ.ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ಸ್ ಓದಿದ ಬಳಿಕ ಸ್ನೇಹಿತ ನವೀನ್ ಜೈನ್ ಜತೆಗೂಡಿ 2014ರಲ್ಲಿ ಸ್ಟಾರ್ಟಪ್ ಆರಂಭಿಸಿದ್ದರು. ತಂದೆಯವರಿಂದಲೂ ಆರಂಭಿಕ ಬಂಡವಾಳವನ್ನು ಬಯಸದೆ, ಸ್ವಂತ ದುಡಿಮೆ, ಉಳಿತಾಯದ ಹಣದಿಂದ ಸ್ಟಾರ್ಟಪ್ ಸ್ಥಾಪಿಸಿದ್ದರು. ಈಗ 500ಕ್ಕೂ ಹೆಚ್ಚು ಮಂದಿಗೆ ಉದ್ಯೋಗವನ್ನು ಇದೇ ಎಥೆರಿಯಲ್ ಮಿಷನ್ಸ್ ಕಲ್ಪಿಸಿರುವುದು ವಿಶೇಷ. ಬೆಂಗಳೂರಿನ ಪೀಣ್ಯದಲ್ಲಿ ಇದರ ಕಚೇರಿ ಇದೆ. ಸಿಎನ್‌ಸಿ ಯಂತ್ರಗಳನ್ನು ಕಂಪನಿ ತಯಾರಿಸುತ್ತಿದೆ. ಏರೋಸ್ಪೇಸ್, ಡಿಫೆನ್ಸ್, ಹೆಲ್ತ್ ಕೇರ್, ಸೆಮಿಕಂಡಕ್ಟರ್ ಉದ್ದಿಮೆಗೆ ಬೇಕಾದ ಹೈಟೆಕ್ ಬಿಡಿಭಾಗಗಳನ್ನು ಉತ್ಪಾದಿಸುತ್ತಿದೆ. ಎಂಐಟಿ ಟೆಕ್ನಾಲಜಿ ರಿವ್ಯೂ ವತಿಯಿಂದ ಇನ್ನೊವೇಟರ್ಸ್ ಅಂಡರ್ 35 ಇಂಡಿಯಾ ಪ್ರಶಸ್ತಿ ಕೌಶಿಕ್ ಮುದ್ದಾ ಅವರಿಗೆ ಲಭಿಸಿದೆ.

ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆ: ಕೌಶಿಕ್ ಮುದ್ದಾ ಅವರು 5ಡಿ ಪ್ರಿಂಟರ್ ಅನ್ನು ಅಭಿವೃದ್ಧಿಪಡಿಸಿದ್ದರು. ಇದರ ಬಗ್ಗೆ ಅವರಿಂದ ಸಮಗ್ರ ಮಾಹಿತಿ ಪಡೆದಿದ್ದ ಪ್ರಧಾನಿ ನರೇಂದ್ರ ಮೋದಿಯವರು ಕೌಶಿಕ್ ಮುದ್ದಾ ಅವರನ್ನು ಪ್ರಶಂಸಿಸಿದ್ದರು. ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಕೌಶಿಕ್ ಮುದ್ದಾ ಅವರು ಏಕಕಾಲದಲ್ಲಿ ಇಬ್ಬರು ರೋಗಿಗಳಿಗೆ ಆಮ್ಲಜನಕ ಪೂರೈಸುವ ಟು-ವೇ ವೆಂಟಿಲೇಟರ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದರು.

ಎಥೆರಿಯಲ್ ಮಿಷನ್ಸ್ ಸ್ಥಾಪನೆ: ಎಥೆರಿಯಲ್ ಮಿಷನ್ಸ್ ತಂತ್ರಜ್ಞಾನ ಆಧಾರಿತ ಸ್ಟಾರ್ಟಪ್ ಆಗಿದೆ. ಏರೋಸ್ಪೇಸ್, ರಕ್ಷಣೆ, ಆರೋಗ್ಯ, ಅರೆವಾಹಕ ವಲಯಗಳಲ್ಲಿ ಇದರ ಹೈಟೆಕ್ ಉತ್ಪನ್ನಗಳ ಬಳಕೆ ಯಾಗುತ್ತವೆ. ಇದು ಸಿಎನ್‌ಸಿ ಯಂತ್ರಗಳನ್ನು ಉತ್ಪಾದಿಸುತ್ತಿದ್ದು, ಸಿಐಎಸ್ ಬೆಸ್ಟ್ ಆಫ್ ಇನ್ನೋವೇಶನ್ಸ್ ಪ್ರಶಸ್ತಿಯನ್ನು ಗಳಿಸಿದೆ. ಭಾರತೀಯ ಕೈಗಾರಿಕಾ ಒಕ್ಕೂಟ ಸಿಐಐನಿಂದ ಟಾಪ್ ಸ್ಟಾರ್ಟಪ್ ಪ್ರಶಸ್ತಿಯನ್ನು ಗಳಿಸಿದೆ.

ಗಣರಾಜ್ಯೋತ್ಸವಕ್ಕೆ 10,000 ಅತಿಥಿಗಳು

ದೆಹಲಿ: ರಾಷ್ಟ್ರ ರಾಜಧಾನಿಯ ಕರ್ತವ್ಯ ಪಥದಲ್ಲಿ ನಡೆಯಲಿರುವ 77ನೇ ಗಣರಾಜ್ಯೋತ್ಸವದ ಮೆರವಣಿಗೆಯನ್ನು ವೀಕ್ಷಿಸಲು ದೇಶಾದ್ಯಂತ 10,000ಕ್ಕೂ ಹೆಚ್ಚು ವಿಶೇಷ ಅತಿಥಿಗಳನ್ನು ಆಹ್ವಾನಿಸಲಾಗಿದೆ ಎಂದು ಕೇಂದ್ರ ಸರಕಾರ ಸೋಮವಾರ ತಿಳಿಸಿದೆ.

ಪತ್ರಿಕಾ ಮಾಹಿತಿ ಬ್ಯೂರೋ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಅತಿಥಿಗಳು ವಿವಿಧ ಕ್ಷೇತ್ರಗಳಿಂದ ಬಂದವರಾಗಿದ್ದು, ಆದಾಯ ಮತ್ತು ಉದ್ಯೋಗ ಸೃಷ್ಟಿ, ನಾವೀನ್ಯತೆ, ಸಂಶೋಧನೆ, ಸಾಮಾಜಿಕ ಸೇವೆ ಮತ್ತು ಗ್ರಾಮಾಂತರ ಅಭಿವೃದ್ಧಿಯಲ್ಲಿ ವಿಶೇಷ ಸಾಧನೆ ಮಾಡಿರುವವರು ಕೂಡ ಸೇರಿದ್ದಾರೆ. ರಾಷ್ಟ್ರ ನಿರ್ಮಾಣ ಮತ್ತು ರಾಷ್ಟ್ರೀಯ ಮಹತ್ವದ ಕಾರ್ಯಕ್ರಮಗಳಲ್ಲಿ ಜನ ಭಾಗಶಃ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಸರಕಾರಿ ವಕ್ತಾರರು ತಿಳಿಸಿದ್ದಾರೆ. ಪ್ರಕಟಣೆಯ ಪ್ರಕಾರ, ಆಹ್ವಾನಿತರ ಪಟ್ಟಿಯಲ್ಲಿ ವಿಶ್ವ ಅಥ್ಲೆಟಿಕ್ ಪ್ಯಾರಾ ಚಾಂಪಿಯನ್‌ಶಿಪ್ ವಿಜೇತರು ಮತ್ತು ಅಂತಾರಾಷ್ಟ್ರೀಯ ಕ್ರೀಡಾ ಪಂದ್ಯಾವಳಿಗಳಲ್ಲಿ ಪದಕಗಳನ್ನು ಗೆದ್ದ ಕ್ರೀಡಾಪಟುಗಳು ಇದ್ದಾರೆ. ನೈಸರ್ಗಿಕ ಕೃಷಿಯನ್ನು ಅಳವಡಿಸಿರುವ ರೈತರು ಮತ್ತು ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮತ್ತು ಮೆಕ್ಕೆಜೋಳವನ್ನು ಬೆಳೆಸಲು ಆತಂಭಿಸ ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್ ಅಡಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ರೈತರನ್ನು ಸಹ ಆಹ್ವಾನಿಸಲಾಗಿದೆ.

ಹೊಸ ಪಕ್ಷ ಕಟ್ಟಲು ಮುಂದಾದ ಕವಿತಾ

ಹೈದರಾಬಾದ್: ಬಿಆರ್‌ಎಸ್ ಪಕ್ಷದ ಅಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ಪುತ್ರಿ ಕೆ.ಕವಿತಾ ಅವರು ಹೊಸ ಪಕ್ಷ ಕಟ್ಟಲು ಮುಂದಾಗಿದ್ದು, ಈ ಕುರಿತು ಚುನಾವಣಾ ಚಾಣಕ್ಯ ಪ್ರಶಾಂತ್ ಕಿಶೋರ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದೀಗ ತೆಲಂಗಾಣ ಜಾಗೃತಿ ಸಂಘಟನೆಯ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ಬಲಿಷ್ಠ ಪಕ್ಷ ಕಟ್ಟಿ ಆ ಮೂಲಕ ಚುನಾವಣಾ ಅಖಾಡಕ್ಕೆ ಮತ್ತೆ ಧುಮುಕಲು ಮುಂದಾಗಿದ್ದಾರೆ. ಇತ್ತೀಚೆಗೆ ಹೈದರಾಬಾದ್‌ನಲ್ಲಿ ಕಿಶೋರ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ರಾಜಕೀಯ ಪಕ್ಷ ಸ್ಥಾಪನೆ, ಕಾರ್ಯತಂತ್ರ, ಪರಿಣಾಮಕಾರಿಯಾಗಿ ಪಕ್ಷ ಸಂಘಟನೆ ಕುರಿತಂತೆ ಕಿಶೋರ್ ಜತೆ ಕವಿತಾ ಮಾತನಾಡಿ, ಸಲಹೆಗಳನ್ನು ಪಡೆದಿದ್ದಾರೆ ಎಂದು ತೆಲಂಗಾಣ ಜಾಗೃತಿ ಮೂಲಗಳು ತಿಳಿಸಿವೆ.

ವಿಶ್ವ ಆರ್ಥಿಕ ಶೃಂಗದಲ್ಲಿ ಕೇಂದ್ರವನ್ನು ಪ್ರತಿನಿಧಿಸಿದ ರಾಜ್ಯದ ಮೊದಲ ಕೇಂದ್ರ ಸಚಿವ ಜೋಶಿ

ದಾವೋಸ್ ಆರ್ಥಿಕ ಶೃಂಗ: ಪ್ರಲ್ಹಾದ್ ಜೋಶಿ ಕೇಂದ್ರದ ಪ್ರತಿನಿಧಿ

ದಾವೋಸ್: ಸ್ವಿಜರ್ಲೆಂಡ್‌ನ ದಾವೋಸ್‌ನಲ್ಲಿ ಆರಂಭವಾಗಿರುವ ಐದು ದಿನಗಳ ಕಾಲ ವಿಶ್ವ ಆರ್ಥಿಕ ವೇದಿಕೆ ಶೃಂಗದಲ್ಲಿ ಭಾರತ ಸರ್ಕಾರದ ಪ್ರಮುಖ ಪ್ರತಿನಿಧಿಯಾಗಿ ಕೇಂದ್ರದ ಹಿರಿಯ ಸಚಿವ ಪ್ರಲ್ಹಾದ ಜೋಶಿ ಭಾಗವಹಿಸಿದ್ದಾರೆ. ವಿಶ್ವ ಮಟ್ಟದಲ್ಲಿ ಮಹತ್ವ ಪಡೆದಂತಹ ಈ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಪರವಾಗಿ ಕೇಂದ್ರದ ವಿಶೇಷ ಪ್ರತಿನಿಧಿಯಾಗಿ ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರನ್ನು ಕಳುಹಿಸಿದ್ದಾರೆ.

ರಾಜ್ಯದ ಮೊದಲ ಸಚಿವ: ಜಾಗತಿಕ ಮಟ್ಟದಲ್ಲಿ ಮಹತ್ವ ಪಡೆದಿರುವ ವಿಶ್ವ ಆರ್ಥಿಕ ವೇದಿಕೆ ಸಭೆಗೆ ಭಾರತ ಸರಕಾರವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಮೊದಲ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ. ಈವರೆಗೆ ರಾಜ್ಯದಿಂದ ಅನೇಕ ಮುಖ್ಯಮಂತ್ರಿಗಳು ತೆರಳಿದ್ದರು. ಆದರೆ ಈ ಬಾರಿ ಕರ್ನಾಟಕದಿಂದ ಕೇಂದ್ರ ಸಚಿವರಾಗಿರುವವರ ಪೈಕಿ ಪ್ರಲ್ಹಾದ ಜೋಶಿ

ಭಾಗಿಯಾಗುತ್ತಿರುವುದು ಇದೇ ಮೊದಲು ಎನ್ನುವುದೇ ಒಂದು ವಿಶೇಷ.

ಸಚಿವ ಪ್ರಲ್ಹಾದ್ ಜೋಶಿ ಅವರು ಮೊದಲು ಕೆನಡಾದ ಚಾರ್ಲ್ಸ್ ಎಮಂಡ್ ಮತ್ತು ಲಾ ಕೈಸ್ಸೆ ಅವರೊಂದಿಗೆ ಖಾಸಗಿ ಸಭೆ ನಡೆಸಿ ಮಾತುಕತೆ ನಡೆಸಿದ್ದಾರೆ. ಬಳಿಕ ಸ್ಪೇನ್ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ್ದಾರೆ. ಅಲ್ಲದೇ, ಒಮಾನ್‌ನ ಸೈದ್ ಮೊಹಮ್ಮದ್ ಅಹ್ಮದ್ ಅಲ್-ಸಕ್ರಿ ಅವರೊಂದಿಗೆ ಚರ್ಚೆ ನಡೆಸಿದ್ದು, ಭಾರತದ ನವೀಕರಿಸಬಹುದಾದ ಇಂಧನ ವಲಯ ಸೇರಿದಂತೆ ವಿವಿಧ ಉದ್ದಿಮೆಗಳಲ್ಲಿ ಹೂಡಿಕೆಗೆ ಆಕರ್ಷಿಸುವ ವಿಶೇಷ ಪ್ರಯತ್ನ ನಡೆಸಿದ್ದಾರೆ.

ಕಳೆದ ಬಾರಿ ನಡೆದ ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಅಧಿವೇಶನದಲ್ಲಿ ಭಾರತದ ಸೌರ ಸಾಧನೆ ಪ್ರಚುರಪಡಿಸಿ ಯುರೋಪಿಯನ್ ಒಕ್ಕೂಟವನ್ನು ಸೆಳೆದಿದ್ದ ಜೋಶಿ, ಇದೀಗ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ಸಹ ಅಂತಾರಾಷ್ಟ್ರೀಯವಾಗಿ ಭಾರತದ ನಾಯಕತ್ವವನ್ನು ಪ್ರತಿಪಾದಿಸುವಲ್ಲಿ ಮುಂದಾಗಿದ್ದಾರೆ. ಪ್ರಧಾನಿ ಮೋದಿ ಅವರ ಸೂಚನೆಯಂತೆ ಡಬ್ಲ್ಯೂಇಎಫ್ (ವಿಶ್ವ ಆರ್ಥಿಕ ಶೃಂಗ) 2026ರ ಈ ವಾರ್ಷಿಕ ಸಭೆಯಲ್ಲಿ ಭಾರತದಿಂದ ಮೂವರು ಕೇಂದ್ರ ಸಚಿವರು ಪಾಲ್ಗೊಳ್ಳುತ್ತಿದ್ದಾರೆ. ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರೂ ಆಗಿರುವ ಜೋಶಿ ಅವರೊಂದಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ನಾಗರಿಕ ವಿಮಾನಯಾನ ಸಚಿವ ರಾಮ ಮೋಹನ್ ನಾಯ್ಡು ಅವರೂ ದಾವೋಸ್‌ಗೆ ತೆರಳಿದ್ದಾರೆ. ಭಾನುವಾರ ಸಂಜೆ ದಾವೋಸ್‌ನ ಜ್ಯೂರಿಚ್ ವಿಮಾನ ನಿಲ್ದಾಣದಲ್ಲಿ ಭಾರತದ ಈ ಸಚಿವದ್ವಯರ ತಂಡವನ್ನು ರಾಯಭಾರಿ ಕುಮಾರ್ ಆತ್ಮೀಯವಾಗಿ ಸ್ವಾಗತಿಸಿದರು. ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ವಿಶ್ವ ಆರ್ಥಿಕ ವೇದಿಕೆ ವಾರ್ಷಿಕ ಸಭೆ ಕುರಿತಂತೆ ಚರ್ಚೆ ನಡೆಸಿದರು. ಈ ವೇಳೆ ನವೀಕರಿಸಬಹುದಾದ ಇಂಧನದಲ್ಲಿ ಭಾರತದ ಮಹತ್ತರ ಹೆಜ್ಜೆ ಕುರಿತು ಅಚ್ಚರಿ ವ್ಯಕ್ತಪಡಿಸಿದರು.

ಭಾರತದಲ್ಲಿನ ಆಹಾರ ವ್ಯವಸ್ಥೆ, ಸಾರ್ವಜನಿಕ ವಿತರಣೆ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ನಮ್ಮ ಕ್ರಾಂತಿ, ಆಡಳಿತ ಸುಧಾರಣೆ ಹಾಗೂ ಕಾರ್ಯವೈಖರಿಯು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ ಎಂಬುದರ ಸಂಕೇತ ಇದಾಗಿದೆ. ಅಲ್ಲದೇ, ಹೆಚ್ಚಿನ ಹೂಡಿಕೆಎನ್ನು ಸೆಳೆಯಲು ಅವಕಾಶವಾಗಿದೆ ಎಂದು ಸಚಿವ ಪ್ರಲ್ಹಾದ್ ಜೋಶಿ ಇದೇ ವೇಳೆ ಪ್ರತಿಕ್ರಿಯಿಸಿದ್ದಾರೆ.

ಆರ್‌ಆರ್‌ಆರ್ ಸಿನಿಮಾದ ನಾಟು ನಾಟು ಹಾಡು ಖ್ಯಾತಿಯ ಸಂಗೀತ ಸಂಯೋಜಕನಿಗೆ ಗೌರವ

ಗಣರಾಜ್ಯೋತ್ಸವ ಪರೇಡ್‌ಗೆ ಕೀರವಾಣಿ ಸಂಗೀತ

ದೆಹಲಿ: ಖ್ಯಾತ ತೆಲುಗು ಸಿನಿಮಾ ಆರ್‌ಆರ್‌ಆರ್ 'ನಾಟು ನಾಟು' ಹಾಡಿನ ಸಂಯೋಜಕ, ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ, ಆಸ್ಕರ್ ಪ್ರಶಸ್ತಿ ವಿಜೇತ ಎಂ.ಎಂ. ಕೀರವಾಣಿ ಅವರು ಈ ಸಲದ ದೆಹಲಿ ಗಣರಾಜ್ಯೋತ್ಸವ ಪರೇಡ್‌ಗೆ ಸಂಗೀತ ಸಂಯೋಜಿಸಿದ್ದಾರೆ. ಈ ಅವಕಾಶ ತನಗೆ ಸಿಕ್ಕಿದ್ದು ಬಹುದೊಡ್ಡ ಗೌರವ ಎಂದು ಅವರು ಹೇಳಿದ್ದಾರೆ.

'ಐತಿಹಾಸಿಕ ಗೀತೆಯಾದ ವಂದೇ ಮಾತರಂಗೆ 150 ವರ್ಷ ಪೂರೈಸುತ್ತಿರುವ ಈ ಸಂದರ್ಭದಲ್ಲಿ, ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದ ಆಶ್ರಯದಲ್ಲಿ ಜನವರಿ 26ರ ಗಣರಾಜ್ಯೋತ್ಸವ ಮೆರವಣಿಗೆಗೆ ಸಂಗೀತ ಸಂಯೋಜಿಸಲು ನನಗೆ ಸಿಕ್ಕಿರುವುದು ಸೌಭಾಗ್ಯ' ಎಂದು ಎಂ.ಎಂ. ಕೀರವಾಣಿ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಹಾಡಿಗೆ ದೇಶದ ವಿವಿಧ ಭಾಗಗಳಿಂದ ಆಗಮಿಸುವ 2,500 ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ನಮ್ಮ ರಾಷ್ಟ್ರದ ಚೈತನ್ಯವನ್ನು ಆಚರಿಸಲು ನಾವು ಒಂದಾಗಿ ಸೇರುವ ಕ್ಷಣಕ್ಕೆ ನಮ್ಮೊಂದಿಗೆ ನೀವೂ ಇರಿ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ಜನವರಿ 26ರ ಆಚರಣೆಗೆ ಮುಂಚಿತವಾಗಿ ಕರ್ತವ್ಯ ಪಥ್‌ನಲ್ಲಿ 77ನೇ ಗಣ ರಾಜ್ಯೋತ್ಸವ ಪರೇಡ್‌ನ ಅಭ್ಯಾಸಗಳು ನಡೆಯುತ್ತಿವೆ. ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಲೂಯಿಸ್ ಸ್ಯಾಂಟೋಸ್ ಡಾ ಕೋಸ್ಟಾ ಮತ್ತು ಯುರೋ ಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ 77ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಆಸ್ಕರ್ ಪ್ರಶಸ್ತಿ ವಿಜೇತ ಸಂಗೀತ ನಿರ್ದೇಶಕ

ಕೀರವಾಣಿ ಪ್ರಸಿದ್ಧ ಸಂಗೀತ ನಿರ್ದೇಶಕ, ಗಾಯಕ. ತೆಲಂಗಾಣದ ನಲ್ಗೊಂಡಾ ಜಿಲ್ಲೆಯಲ್ಲಿ ಜನಿಸಿದ ಕೀರವಾಣಿ ತೆಲುಗು ಜತೆಗೆ, ಕನ್ನಡ, ತಮಿಳು, ಹಿಂದಿ ಮತ್ತು ಮಲಯಾಳಂ ಚಿತ್ರರಂಗ ದಲ್ಲಿ ಸಂಗೀತ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 350ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ಸಂಯೋ ಜಿಸಿ, ತಮ್ಮದೇ ಶೈಲಿಯಲ್ಲಿ ಜಾನಪದ, ಶಾಸ್ತ್ರೀಯ ಹಾಗೂ ಆಧುನಿಕ ಸಂಗೀತವನ್ನು ಪರಿಪೂರ್ಣವಾಗಿಸಿದ್ದಾರೆ.

ಲಡಾಕ್‌ನಲ್ಲಿ ಭೂಕಂಪ

ಲೇಹ್: ಕೇಂದ್ರಾಡಳಿತ ಪ್ರದೇಶ ಲಡಾಕ್‌ನ ಲೇಹ್ ಜಿಲ್ಲೆಯಲ್ಲಿ ಸೋಮವಾರ 5.7 ತೀವ್ರತೆಯ ಭೂಕಂಪ ಸಂಭವಿಸಿದ್ದು, ಯಾವುದೇ ಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ (ಎನ್‌ಸಿಎಸ್) ಪ್ರಕಾರ, ಇಂದು ಬೆಳಗ್ಗೆ 11.51 ಕ್ಕೆ ಕಂಪನದ ಅನುಭವವಾಗಿದೆ. ಭೂಕಂಪದ ಆಳವು 171 ಕಿಲೋಮೀಟರ್ ಕೆಳಗೆ 36.71 ಡಿಗ್ರಿ ಉತ್ತರ ಅಕ್ಷಾಂಶ ಮತ್ತು 74.32 ಡಿಗ್ರಿ ಪೂರ್ವ ರೇಖಾಂಶದಲ್ಲಿತ್ತು ಎಂದು ಎಕ್ಸ್‌ನಲ್ಲಿ ಎನ್‌ಸಿಎಸ್ ಪೋಸ್ಟ್ ಮಾಡಿದೆ.

ಕೋಟ್ಯಧಿಪತಿ ಭಿಕ್ಷುಕ ಇಂದೋರ್‌ನಲ್ಲಿ ಪತ್ತೆ

ಇಂದೋರ್ (ಮಧ್ಯಪ್ರದೇಶ): ಇತ್ತೀಚೆಗಷ್ಟೇ ಕಲುಷಿತ ನೀರು ಸೇವನೆಯಿಂದ ಹಲವರು ಸಾವನ್ನಪ್ಪಿ, ಇನ್ನೂ ಕೆಲವರು ಅಸ್ವಸ್ಥರಾಗುವ ಮೂಲಕ ಸುದ್ದಿಯಾಗಿದ್ದ ದೇಶದ ಸ್ವಚ್ಛ ನಗರಿಯಾಗಿರುವ ಇಂದೋರ್, ಈಗ ಭಿಕ್ಷುಕನೋರ್ವನಿಂದ ಸುದ್ದಿ ಯಾಗಿದೆ.

ಇಂದೋರ್‌ನ ಆ ಭಿಕ್ಷುಕನ ಬಳಿ ಕೋಟಿಗಟ್ಟಲೆ ಆಸ್ತಿ ಇರುವುದು ಪತ್ತೆಯಾಗಿದೆ. ತನಿಖೆಯ ನಂತರ, ಅವನು ಕೋಟ್ಯಾಧಿಪತಿ ಅನ್ನೋದು ಅಧಿಕಾರಿಗಳಿಗೆ ಗೊತ್ತಾಗಿದೆ. ಆತನ ಬಳಿ ಕಾರಿದ್ದು, ಅದಕ್ಕೆ ಓರ್ವ ಚಾಲಕನನ್ನು ಸಹ ನೇಮಿಸಿಕೊಂಡಿದ್ದಾನೆ. ಈ ವ್ಯಕ್ತಿ ನಗರದಲ್ಲಿ ಮೂರು ಸ್ವಂತ ಮನೆಗಳನ್ನು ಹೊಂದಿದ್ದಾನಲ್ಲದೆ, ಆತನ ಬಳಿ ಮೂರು ಆಟೋರಿಕ್ಷಾಗಳು ಸಹ ಇವೆ ಎನ್ನುವುದು ಕಾರ್ಯಾಚರಣೆಯಲ್ಲಿದ್ದ ಅಧಿಕಾರಿಗಳ ತಂಡದ ಗಮನಕ್ಕೆ ಬಂದಿದೆ.

ಇಂದೋರ್ ನಗರವನ್ನು ಭಿಕ್ಷಾಟನೆಯಿಂದ ಮುಕ್ತಗೊಳಿಸಲು ಅಲ್ಲಿನ ಜಿಲ್ಲಾಡಳಿತವು ನಿರಂತರವಾಗಿ ಭಿಕ್ಷುಕರ ನಿರ್ಮೂಲನಾ ಅಭಿಯಾನವನ್ನು ನಡೆಸುತ್ತಿದೆ. ಈ ಸಂಬಂಧ ಭಿಕ್ಷುಕರ ನಿರ್ಮೂಲನಾ ಅಭಿಯಾನ ತಂಡವು ಇಂದೋರ್‌ನ ಸರಾಫಾ ಬಜಾರ್ ಪ್ರದೇಶದ ಭಿಕ್ಷುಕನನ್ನು ರಕ್ಷಿಸಿತು. ವಿಚಾರಣೆ ನಂತರ, ಆ ಪ್ರದೇಶದಲ್ಲಿ ಭಿಕ್ಷೆ ಬೇಡುತ್ತಿದ್ದ ಮಂಗಿಲಾಲ್ ಎಂಬ ಭಿಕ್ಷುಕ ಕೋಟ್ಯಾಧಿಪತಿ ಎನ್ನುವುದು ತಿಳಿದು ಬಂದಿದೆ. ಈ ಕುರಿತು ಮಾತನಾಡಿರುವ ರಕ್ಷಣಾ ತಂಡದ ನೋಡಲ್ ಅಧಿಕಾರಿ ದಿನೇಶ್ ಮಿಶ್ರಾ, 'ಹಲ ವಾರು ದಿನಗಳಿಂದ, ವಿಕಲಚೇತನನಾಗಿದ್ದ ಮತ್ತು ಪ್ಯಾಲೆಟ್ ಕಾರ್ಟ್‌ನ ಪ್ರದೇಶದಲ್ಲಿ ಸುತ್ತುತ್ತಿದ್ದ ಭಿಕ್ಷುಕನ ಬಗ್ಗೆ ನಮಗೆ ಸರಾಫಾ ಅವರಿಂದ ಮಾಹಿತಿ ಎಂದಿದ್ದಾರೆ.

ಕೈಮಗ್ಗ ನೇಕಾರಿಕೆ ಉತ್ತೇಜನಕ್ಕೆ ವಿಶೇಷ ಆದ್ಯತೆ | ಶಾಸಕರ ಸಭೆಯಲ್ಲಿ ಸಚಿವ ಶಿವಾನಂದ ಪಾಟೀಲ ಭರವಸೆ

ಅಂತಿಮ ಹಂತದಲ್ಲಿ ನೂತನ ಜವಳಿ ನೀತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ 2020-30ರ ಅವಧಿಯ ನೂತನ ಜವಳಿ ನೀತಿ ರಚನೆ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಕೈಮಗ್ಗ ನೇಕಾರಿಕೆ ಉತ್ತೇಜನಕ್ಕೂ ವಿಶೇಷ ಆದ್ಯತೆ ನೀಡಲಾಗುವುದು ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಭರವಸೆ ನೀಡಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಆಯೋಜಿಸಿದ್ದ ಶಾಸಕರೊಂದಿಗೆ ಮಾತನಾಡಿದ ಅವರು, ರೈತ ಸಂತೆ ಮಾದರಿಯಲ್ಲಿ ಕೈಮಗ್ಗ ಉತ್ಪನ್ನಗಳ ನೇರ ಮಾರಾಟ ವ್ಯವಸ್ಥೆ, ನೇಕಾರಿಕೆಯಿಂದ ವಿಮುಖರಾದ ಯುವ ಜನರನ್ನು ಮರು ಆಕರ್ಷಿಸಲು ಸ್ಟೈಫಂಡ್ ಸೌಲಭ್ಯ, ಹೊಸ ನೀತಿಯಲ್ಲಿ ಕೈಮಗ್ಗಕ್ಕೆ ಪ್ರತ್ಯೇಕ ವಿಭಾಗ ಸೇರಿದಂತೆ ಹಲವು ಉಪಯುಕ್ತ ಸಲಹೆಗಳು ಬಂದಿವೆ. ಸೂಕ್ತವಾದ ಸಲಹೆಗಳನ್ನು ಹೊಸ ಜವಳಿ ನೀತಿಯಲ್ಲಿ ಸೇರ್ಪಡೆ ಮಾಡಲಾಗುವುದು ಎಂದು ಹೇಳಿದರು.

ಕೈಮಗ್ಗ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದೇ ಉದ್ದಿಮೆ ಅವನತಿಗೆ ಪ್ರಮುಖ ಕಾರಣವಾಗಿದ್ದು, ಇಳಕಲ್, ರಬಕವಿ-ಬನಹಟ್ಟಿ, ದೊಡ್ಡಬಳ್ಳಾಪುರ ಸೇರಿದಂತೆ ಅತೀ ಹೆಚ್ಚು ಕೈಮಗ್ಗ ಉತ್ಪನ್ನಗಳ ತಯಾರಿಕಾ ಪ್ರದೇಶಗಳಲ್ಲಿ ನೇಕಾರರೇ ನೇರವಾಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ರೈತ ಸಂತೆ ಮಾದರಿಯಲ್ಲಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು. ಇದೇ ರೀತಿ ಕೃಷಿ ಉತ್ಪನ್ನಗಳ ಖರೀದಿಗೆ


ಕೈಮಗ್ಗ ನೇಕಾರಿಕೆ ಉತ್ತೇಜನಕ್ಕೆ ನೂತನ ಜವಳಿ ನೀತಿಯಲ್ಲಿ ಸೇರ್ಪಡೆ ಮಾಡಬೇಕಾದ ವಿಷಯಗಳ ಬಗ್ಗೆ ಸಚಿವ ಶಿವಾನಂದ ಪಾಟೀಲ ಅವರು ಸೋಮವಾರ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಶಾಸಕರ ಸಭೆ ನಡೆಸಿದರು. ಈ ವೇಳೆ ಕೇಶವ ಪ್ರಸಾದ್, ಎಂ.ವೈ. ಪಾಟೀಲ, ಎಂ.ಡಿ. ಲಕ್ಷ್ಮೀ ನಾರಾಯಣ, ವೆಂಕಟರಮಣರೆಡ್ಡಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಜವಳಿ ಇಲಾಖೆ ಆಯುಕ್ತೆ ಜ್ಯೋತಿ, ಹೆಚ್ಚುವರಿ ನಿರ್ದೇಶಕ ಯೋಗೇಶ್, ಜಂಟಿ ನಿರ್ದೇಶಕ ಯೋಗೀಶ್, ಉಪನಿರ್ದೇಶಕ ರಂಗಸ್ವಾಮಿ, ರಾಘವೇಂದ್ರ ಹೊಸಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇರುವ ಮಾದರಿಯಲ್ಲಿ ಜವಳಿ ಇಲಾಖೆಯಲ್ಲೂ ಆವರ್ತ ನಿಧಿ ಸ್ಥಾಪನೆ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ರಾಜ್ಯದಲ್ಲಿ ಉತ್ಪಾದನೆಯಾಗುವ ರೇಷ್ಮೆ ಸೀರೆಗಳನ್ನು ಹೊರ ರಾಜ್ಯದ ಮಧ್ಯವರ್ತಿಗಳು ಕಡಿಮೆ ಬೆಲೆಗೆ ಖರೀದಿ ಮಾಡಿ ತಮ್ಮ ಬ್ರ್ಯಾಂಡ್ ಹೆಸರಿನಲ್ಲಿ ಅಧಿಕ ಬೆಲೆಗೆ ಮರುಮಾರಾಟ ಮಾಡುತ್ತಿರುವುದನ್ನು ತಪ್ಪಿಸಿ, ನಮ್ಮ ನೇಕಾರರೇ ಬ್ರ್ಯಾಂಡ್ ಸೃಷ್ಟಿಸುವ ವ್ಯವಸ್ಥೆಗೆ ಸರಕಾರ ಅಗತ್ಯ ಸಹಕಾರ ನೀಡಲಿದೆ. ಸಭೆಯಲ್ಲಿ ಶಾಸಕರಿಂದ ಹೊಸ ನೀತಿಯಲ್ಲಿ ಸೇರ್ಪಡೆಗೆ ಹಲವು ಸಲಹೆಗಳು, ದೊಡ್ಡಬಳ್ಳಾಪುರದ ನೇಕಾರರ ಸಂಘಟನೆಯ ಮುಖಂಡರು ಸೂರತ್ ಸೀರೆಗಳ ಪ್ರಭಾವದಿಂದ ಚಿಕ್ಕಬಳ್ಳಾಪುರದ ಕೈಮಗ್ಗ ನೇಕಾರರು ಸಂಕಷ್ಟದಲ್ಲಿದ್ದು, ಪವರ್‌ಲೂಮ್ ಕಾಯ್ದೆಗೆ ತಿದ್ದುಪಡಿ ಅಗತ್ಯವಿದೆ ಎಂದು ಮನವಿ ಮಾಡಿದ್ದಾರೆ ಎಂದರು. ಈ ವೇಳೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಜವಳಿ ಇಲಾಖೆ ಆಯುಕ್ತೆ ಜ್ಯೋತಿ, ಹೆಚ್ಚುವರಿ ನಿರ್ದೇಶಕ ಯೋಗೇಶ್, ಜಂಟಿ ನಿರ್ದೇಶಕ ಯೋಗೀಶ್, ಉಪನಿರ್ದೇಶಕ ರಂಗಸ್ವಾಮಿ, ರಾಘವೇಂದ್ರ ಹೊಸಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಾಗತಿಕ ಟೆಂಡರ್

ಕಲಬುರಗಿಯಲ್ಲಿ ಕೇಂದ್ರ ಸರಕಾರದ ಸಹಭಾಗಿತ್ವದಲ್ಲಿ ಕೈಗೆತ್ತಿಕೊಂಡಿರುವ ಟೆಕ್ಸ್‌ಟೈಲ್ ಪಾರ್ಕ್ ಅಭಿವೃದ್ಧಿಗೆ ಮಾಸ್ಟರ್ ಡೆವಲಪರ್‌ಗಾಗಿ ಜಾಗತಿಕ ಟೆಂಡರ್ ಕರೆಯಲಾಗುತ್ತಿದೆ. ದೇಶದ ಒಟ್ಟು ಏಳು ರಾಜ್ಯಗಳಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಿಸಲು ಕೇಂದ್ರ ಸರಕಾರ ಮುಂದಾಗಿದ್ದು, ಮೂಲಸೌಕರ್ಯ ಇರುವ ಸೂಕ್ತ ಭೂಮಿ ಲಭ್ಯವಾಗದಿರುವುದರಿಂದ ಕರ್ನಾಟಕದಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ ವಿಳಂಬವಾಗಿದೆ. ಮೂಲಸೌಕರ್ಯಕ್ಕೆ 390 ಕೋಟಿ ರು. ಮಂಜೂರಾಗಿದ್ದು, ಇದರಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ 150 ಕೋಟಿ ರು. ನೀಡಲಾಗಿದೆ. ರಸ್ತೆ ನಿರ್ಮಾಣ, ನೀರು ಪೂರೈಕೆಗೆ ಚೆಕ್ ಡ್ಯಾಂ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಎರಡು ವರ್ಷಗಳಲ್ಲಿ ಮೂಲಸೌಕರ್ಯ ನಿರ್ಮಾಣ ಮಾಡಲಾಗುವುದು ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಶ್ವವಾಣಿ
@vishwavaninews
20-01-2026
ಮಂಗಳವಾರ

ಆರಾಮ

ಚಿತ್ತವಿಹಾರ

ಅಜ್ಞಾನದ ಕತ್ತಲೆಯಲ್ಲಿ ಜ್ಞಾನದ ಜ್ಯೋತಿ...!

• ಹೊಸ್ಮನೆ ಮುತ್ತು, ಬೆಂಗಳೂರು

'ನಿನಗೆ ನೀನೇ ಬೆಳಕು... ನೀವೇ ಬೆಳಕಾಗಿರಿ'– ಇದು ಇಡೀ ಮಾನವ ಕುಲಕ್ಕೆ ಜ್ಞಾನದ ಮೂಲಕ ಬೆಳಕು ನೀಡಿದ ಮಹಾನ್ ವ್ಯಕ್ತಿ ಬುದ್ಧನ ಬೋಧನೆ. 'ನಿಮ್ಮೊಳಗಿನ ಬೆಳಕನ್ನು ಹುಡುಕಲು ಪ್ರಯತ್ನಿಸಿ, ಅಜ್ಞಾನದ ಕತ್ತಲೆಯ ಜಗತ್ತಿನಲ್ಲಿ ಜ್ಞಾನದ ಹೊಸ ಬೆಳಕು ಹಚ್ಚಿ. ಇದು ನಿಮ್ಮ ಅಂತರಂಗದ ಅರಿವನ್ನು ಅರಳಿಸುವುದು. ನಿಜವಾದ ಜ್ಞಾನದ ಉದಯವಾದಾಗ ನಿತ್ಯೋತ್ಸವವಾಗುತ್ತದೆ' ಎಂದು ಜಗತ್ತಿಗೆ ಪರಮ ಸತ್ಯವನ್ನು ಬೋಧಿಸಿದ ಮಹಾಗುರು ಬುದ್ಧ.

ಮೈತ್ರಿ, ದಯೆ, ಕರುಣೆ, ಸಮತೆ, ಪ್ರೀತಿ, ಅನುಕಂಪ ಮತ್ತು ಜ್ಞಾನದೊಂದಿಗೆ ಅಷ್ಟಾಂಗ ಮಾರ್ಗಗಳನ್ನು ತೋರಿಸಿಕೊಟ್ಟವನು ಬುದ್ಧ. ದೇವರು, ಕರ್ಮ, ಮೋಕ್ಷ ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳಿಗಿಂತ ಮನುಷ್ಯನ ನೋವು, ಕಷ್ಟಗಳನ್ನು ನೀಗಿಸಿಕೊಳ್ಳುವುದು ಹೇಗೆ ಎಂಬುದೇ ಬುದ್ಧನ ಆಶಯವಾದಂತೆ ಕಾಣುತ್ತದೆ. ಸ್ನೇಹ, ಸೌಹಾರ್ದ, ಸಹಕಾರ, ಪರಸ್ಪರರಲ್ಲಿ ಪ್ರೀತಿ ಇವೇ ಆತ ಹೇಳಿದ ಜೀವನ ಸಿದ್ಧಾಂತಗಳು.

ಮತ್ತೊಬ್ಬರ ಬದುಕಿನಲ್ಲಿ ಬೆಳಕು ತರುವುದು ನಮಗೆ ಸಾಧ್ಯವಾಗುವುದಾದರೆ, ನಮ್ಮ ಜೀವನಕ್ಕೂ ಒಂದು ಅರ್ಥ ಬರುತ್ತದೆ ಎಂದ ಬುದ್ಧನ ಬೋಧನೆಗಳು ಯಾರೇ ಅನುಸರಿಸಬಹುದಾದಷ್ಟು ಸರಳ. ಯಾವುದೂ ಶಾಶ್ವತವಲ್ಲ ಎಂಬ ನಶ್ವರತೆಯ ಪ್ರಖರ ಮೌಲ್ಯಗಳನ್ನು ಬುದ್ಧ ಅನಾವರಣಗೊಳಿಸುವ ಪರಿ ವಿಶೇಷವಾದುದು. 'ತನ್ನನ್ನು ತಾನು ಪ್ರೀತಿಸಿಕೊಳ್ಳದವನು, ಯಾರನ್ನೂ ಪ್ರೀತಿಸಲಾರ. ಮನುಷ್ಯ ಮೊದಲು ತನ್ನನ್ನು ತಾನು ಪ್ರೀತಿಸುವುದನ್ನು ಕಲಿತುಕೊಳ್ಳಬೇಕು. ಇಷ್ಟವಾದವರನ್ನು ಬಿಗಿಯಾಗಿ ಹಿಡಿದಿಟ್ಟುಕೊಳ್ಳುವುದಲ್ಲ, ಸ್ವತಂತ್ರವಾಗಿರಲು ಬಿಡುವುದೇ ನಿಜವಾದ ಪ್ರೀತಿ' ಹೀಗೆಂದು ಬೋಧಿಸಿದ ಬುದ್ಧ, 'ಹರುಷದ ದಾರಿ ಯಾವುದೆಂದರೆ, ಭೂತಕಾಲದಲ್ಲಿ ಸಿಲುಕಿಕೊಳ್ಳದೇ, ಭವಿಷ್ಯದ ಕುರಿತು ಅತಿ ಹೆಚ್ಚು ಚಿಂತಿಸದೇ, ವರ್ತಮಾನದಲ್ಲಿ ಜೀವಿಸುವುದು' ಎಂದಿದ್ದಾನೆ. ಕೋಪದ ಕುರಿತಾದ ಆತನ ಮಾತು ಬಹಳ ಮಾರ್ಮಿಕವಾದುದು– 'ಕೋಪ ಎಂಬುದು ಶಾಪ. ಮನುಷ್ಯ ತನ್ನ ಕೋಪದ ಕಾರಣಕ್ಕೆ ಶಿಕ್ಷೆಗೆ ಒಳಗಾಗುವುದಿಲ್ಲ, ಬದಲಾಗಿ ಕೋಪದಿಂದಲೇ ಶಿಕ್ಷೆಗೊಳಗಾಗುತ್ತಾನೆ'. ಬುದ್ಧನ ಪ್ರಕಾರ, ಜೀವನದಲ್ಲಿ ದುಃಖ ಅನಿವಾರ್ಯ. ಆದರೆ, ಈ ದುಃಖದ ಮೂಲವನ್ನು ಅರ್ಥಮಾಡಿಕೊಂಡು ಅದನ್ನು ನಿವಾರಿಸುವ ಮಾರ್ಗವನ್ನು ಕಂಡುಕೊಳ್ಳಬಹುದು; ಬಯಕೆಯಲ್ಲೇ ದುಃಖದ ಮೂಲವಿದೆ. ಕಾರಣವಿಲ್ಲದೆ ಪ್ರೀತಿಸುವ ಶಕ್ತಿ ನಮ್ಮೆದೆಗೆ ಬರಬೇಕು. 'ನಿಮ್ಮ ಆಲೋಚನೆಗಳು, ಭಾವನೆಗಳು ಮತ್ತು ಕ್ರಿಯೆಗಳನ್ನು ಗಮನಿಸಿ. ನಿಮ್ಮ ಮನಸ್ಸನ್ನು ಶಾಂತಗೊಳಿಸಲು ಮತ್ತು ಆಂತರಿಕ ಶಾಂತಿಯನ್ನು ಸಾಧಿಸಲು ಧ್ಯಾನ ಮಾಡಿ. ಇತರರ ಸಂಕಷ್ಟಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವರಿಗೆ ಸಹಾಯ ಮಾಡಲು ಪ್ರಯತ್ನಿಸಿ. ಆಸೆಯೇ ದುಃಖಕ್ಕೆ ಕಾರಣ; ಅತಿಯಾದ ಆಸೆಗಳನ್ನು ಬಿಟ್ಟು ಸರಳ ಜೀವನವನ್ನು ನಡೆಸಿ' ಎನ್ನುವ ಬುದ್ಧನ ಬೋಧನೆಗಳು ಕೇವಲ ಒಂದು ನಿರ್ದಿಷ್ಟ ಕಾಲಕ್ಕೆ ಸೀಮಿತವಾಗಿಲ್ಲ, ಅವು ಸಾರ್ವಕಾಲಿಕ ಹಾಗೂ ಜೀವನದ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತವೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾವು ಹೆಚ್ಚು ಸಂತೋಷ, ಶಾಂತಿ ಮತ್ತು ನೆಮ್ಮದಿಯನ್ನು ಸಾಧಿಸಬಹುದು. ಬುದ್ಧನ ಬೋಧನೆಗಳು ಕಾಲಾತೀತವಾಗಿವೆ; ಇಂದು ನಾವು ಎದುರಿಸುತ್ತಿರುವ ಬಹಳಷ್ಟು ಸಂಕೀರ್ಣ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಬುದ್ಧನ ಬೋಧನೆಗಳು ಬೆಳಕು ನೀಡುತ್ತವೆ ಎಂಬುದನ್ನು ಮರೆಯದಿರೋಣ.

ಬಾಳಪಯಣದ ಸಹಯಾನ ಸಹನಾವವತು ಸಹನೌಭುನಕ್ತು...

• ಡಾ. ಮೈತ್ರಿ ಭಟ್, ವಿಟ್ಲ

ಅಮ್ಮನಿಲ್ಲದೆ ಮಮತೆಯೆಲ್ಲಿ? ಅಪ್ಪನಿಲ್ಲದೆ ಭರವಸೆಯೆಲ್ಲಿ? ಗುರುವಿಲ್ಲದೆ ಗುರಿಯೆಲ್ಲಿ? ಕಣ್ಣು ಇದ್ದರೂ ಜಗತ್ತು ಹೇಗಿದೆಯೆಂದು ತೋರಿಸುವುದಕ್ಕೆ ಒಂದು ಸಾಂಗತ್ಯ ಬೇಕು. ಕುಗ್ಗಿ ಕೂತಾಗ ಹೆಗಲು ಬಳಸಿ ಸಾಂತ್ವನ ಹೇಳುವುದಕ್ಕೂ ಒಂದು ಜತೆ ಬೇಕು. ನಮ್ಮ ಖುಷಿ ಹಂಚಿಕೊಳ್ಳುವಾಗ ಕೇಳುವುದಕ್ಕೆ ಒಂದು ಕಿವಿ ಬೇಕು. ಆತ್ಮಹತ್ಯೆ ಮಾಡಿಕೊಳ್ಳಲು ಹೊರಟವನ ಹತ್ತಿರ ಯಾರಾದರೂ ಒಮ್ಮೆ ಮಾತನಾಡಿದಲ್ಲಿ ಅವನ ನಿರ್ಧಾರ ಬದಲಾಗಬಹುದೇನೋ..?!

ಬೆಂಬಲ ಅಗತ್ಯ

ಬಾಗುವ ಮರಕ್ಕೆ ಕೋಲಿನ ಆಧಾರದಂತೆ, ಪ್ರತಿಯೊಬ್ಬ ಮಾನವನಿಗೂ, ಅದು ತನ್ನ ಕುಟುಂಬದಲ್ಲಾಗಿರಲೀ ಅಥವಾ ಸಮಾಜದಲ್ಲೇ ಆಗಿರಲಿ ಜೀವನದ ಪ್ರತಿ ಹಂತದಲ್ಲೂ ಬೆಂಬಲದ ಅಗತ್ಯ, ಅನಿವಾರ್ಯತೆ ಇದ್ದೇ ಇರುತ್ತದೆ. ಮನುಷ್ಯ ಪರಾವಲಂಬಿ ಜೀವಿ. ಬದುಕಿನ ಪ್ರತಿ ಹಂತದಲ್ಲೂ ಇತರರನ್ನು ಅವಲಂಬಿಸುತ್ತಾನೆ. ತನ್ನ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿರಲಿ, ಮಾನಸಿಕ ಸಾಂತ್ವನಕ್ಕೇ ಆಗಿರಲಿ ಆತನಿಗೆ ಇತರರ ಸಹಾಯ, ಬೆಂಬಲ ಅತಿ ಅಗತ್ಯ.

ಕೋಟಿ ವರ್ಷಗಳ ಪ್ರಕೃತಿ ಪಾಠದಲ್ಲಿ ಮಿಂದ ಜೀವಿಗಳಿಂದ ಹೊರಹೊಮ್ಮಿದ ಗುಟ್ಟು ಎಂದರೆ ಸಹಜೀವನ. ಒಂದನ್ನೊಂದು ಆಧರಿಸಿ ಬದುಕುವ ಕಲೆಯನ್ನು ಪ್ರಕೃತಿಯು ಜೀವಿಗಳಿಗೆ ಕಲಿಸಿದೆ. ಪರಸ್ಪರ ಅವಲಂಬನೆಯೇ ಜೀವವಿಕಾಸದ ತಳಹದಿ. ಇದನ್ನು ಅರಿತು ನಡೆದರೆ ಪ್ರಕೃತಿಮಾತೆ ಮೆಚ್ಚುವಳು. ಪರಸ್ಪರ ಸೌಹಾರ್ದ ಹಾಗೂ ಸಹಕಾರವಿಲ್ಲದ ಜೀವನ ಜೀವನವಲ್ಲ. ನಾವು ಬೆಳೆಯುವುದರ ಜತೆಗೆ ಸುತ್ತಮುತ್ತಲಿನ ಜನರ ಬೆಳವಣಿಗೆಯ ಕಾಳಜಿ ಹೊಂದಿದ್ದರೆ ಮಾತ್ರ ಲೋಕಕಲ್ಯಾಣ ಸಾಧ್ಯ.

ಸಂಯೋಜಿತ ವ್ಯವಸ್ಥೆ

ಮಾನವನ ಜೀವನವು ವೈಯಕ್ತಿಕ ಹಾಗೂ ಸಾಮಾಜಿಕ ಅಂಶಗಳಿಂದ ಕೂಡಿದ ಒಂದು ಸಂಯೋಜಿತ ವ್ಯವಸ್ಥೆಯಾಗಿದೆ. ವ್ಯಕ್ತಿಯೊಬ್ಬನು ತನ್ನ ಜೀವನದಲ್ಲಿ ಏನನ್ನಾದರೂ ಸಾಧಿಸಲು ಶ್ರಮಿಸುವಾಗ, ಅವನು ಒಂದೆಡೆಯಿಂದಾಗಿ ಮುಂದೆ ಸಾಗುತ್ತಿದ್ದರೂ, ಬದುಕಿನ ಅನೇಕ ಹಂತಗಳಲ್ಲಿ ಇತರರ ಬೆಂಬಲ ಅವಶ್ಯಕವಾಗುತ್ತದೆ. ಕೆಲವರು ಶ್ರಮ, ಧೈರ್ಯ ಮತ್ತು ದೃಢನಿಶ್ಚಯದಿಂದ ಏಕಾಂಗಿಯಾಗಿ ಮುನ್ನಡೆಯುತ್ತಾರೆ ಎಂದು ಭಾಸವಾಗಬಹುದು. ಆದರೆ ಆ ಪಯಣದ ಹಿಂದೆ ಅಸಂಖ್ಯಾತರು ನೀಡಿದ ನೇರ ಅಥವಾ ಪರೋಕ್ಷ ಸಹಾಯಗಳು ಇದ್ದೇ ಇರುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಮಾನವನು ಸಮುದಾಯದಲ್ಲಿ ಬದುಕುವ ಪ್ರಾಣಿ. ಇತರರೊಂದಿಗೆ ಬದುಕುವುದು, ಬೆಳೆಯುವುದೇ ಅವನ ಶಕ್ತಿಯ ಮೂಲವಾಗಿದೆ. ಮಕ್ಕಳು ಕುಟುಂಬದಲ್ಲಿ ಬೆಳೆದಾಗ ಅವರಿಗೆ ಮಾತು, ನಡತೆ, ಸಂಸ್ಕೃತಿ, ನೈತಿಕತೆ ಎಲ್ಲವೂ ಇತರರಿಂದಲೇ ದೊರಕುತ್ತವೆ. ಈ ಬೆಳವಣಿಗೆಯಲ್ಲಿಯೇ ಅವರ ವೈಯಕ್ತಿಕ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಮಕ್ಕಳಿಂದ ಮೊದಲ್ಗೊಂಡು ಹಿರಿಯರ ತನಕ ಪ್ರತಿ ಹಂತದಲ್ಲೂ ಇತರರ ಬಾಳಿನ ಅನುಭವಗಳು, ಮಾರ್ಗದರ್ಶನಗಳು ಬಹು ಅಮೂಲ್ಯವಾಗಿರುತ್ತವೆ.

ಬೆನ್ನು ತಟ್ಟಬೇಕು

ವ್ಯಕ್ತಿಯೊಬ್ಬನು ಶಿಖರವನ್ನು ಏರುವ ಕನಸು ಕಾಣುತ್ತಾನೆ. ಆತನು ಶ್ರಮಿಸುತ್ತಾನೆ, ಪ್ರಯತ್ನಿಸುತ್ತಾನೆ. ಆದರೆ ದಾರಿಯ ಮಧ್ಯದಲ್ಲಿ ಕೆಲವೊಮ್ಮೆ ಕುಗ್ಗುತ್ತಾನೆ. ಇಂಥ ಸಮಯದಲ್ಲಿ ಯಾರೋ ಒಂದಿಷ್ಟು ಬೆನ್ನುತಟ್ಟಿದರೂ, ಆ ಶಕ್ತಿಯು ಆತನನ್ನು ಮುಂದಕ್ಕೆ ನಡೆಸಬಹುದು. ಪ್ರಪಂಚದ ಮಹಾನ್ ವ್ಯಕ್ತಿಗಳ ಬದುಕನ್ನು ನೋಡುವುದಾದರೆ, ಅವರ ಯಶಸ್ಸು ಕೇವಲ ಅವರ ಶ್ರಮದಿಂದ ಮಾತ್ರವಲ್ಲ; ಅವರಿಗೆ ಸಿಕ್ಕಿದ ಮಾರ್ಗದರ್ಶನ, ಪ್ರೋತ್ಸಾಹ, ಮಾಡಿದ ಸಹಾಯಗಳಿಂದಲೇ ಆಗಿವೆ. ಎಪಿಜೆ ಅಬ್ದುಲ್ ಕಲಾಂ, ಮಹಾತ್ಮ ಗಾಂಧಿ, ಅಂಬೇಡ್ಕರ್– ಇವರ ಸಾಧನೆಯ ಹಿಂದೆ ಅವರ ಗುರುಗಳು, ಕುಟುಂಬ, ಸಮುದಾಯದ ಬೆಂಬಲವಿದೆ. ಒಂದು ಮರ ಬೆಳೆಯಲು ಹೇಗೆ ಅದಕ್ಕೆ ಗಾಳಿ, ನೀರು, ಬೆಳಕು, ಪೋಷಣೆ ಅಗತ್ಯವೋ ಹಾಗೆಯೇ ವೈಯಕ್ತಿಕ ಪ್ರಗತಿ ಕೂಡಾ ಇತರರ ಬೆಂಬಲವಿಲ್ಲದೆ ಸಾಧ್ಯವಿಲ್ಲ.

ವೈಯಕ್ತಿಕ ಪ್ರಗತಿ ಎಂದರೆ ಕೇವಲ ಹಣ ಅಥವಾ ಹುದ್ದೆ ಪಡೆಯುವುದಲ್ಲ; ಅದು ವ್ಯಕ್ತಿತ್ವದಲ್ಲಿ ಬೆಳವಣಿಗೆ, ಮಾನಸಿಕ ಪಕ್ವತೆ, ಜವಾಬ್ದಾರಿಯ ಅರಿವು, ಸಮಾಜ ಸಂಬಂಧಿ ಮನೋಭಾವ ಇವೆಲ್ಲವನ್ನೂ ಒಳಗೊಂಡಂತೆ ನಿಭಾಯಿಸಿದ ಬದುಕು. ಹೀಗೆ ನೋಡಿದರೆ, ಯಾವುದಕ್ಕೂ ನಾವು ಸಂಪೂರ್ಣ ಸ್ವತಂತ್ರರಲ್ಲ.

ಅವಕಾಶದ ಅಗತ್ಯವಿದೆ

ವೈಯಕ್ತಿಕ ಸಾಧನೆ ಎನ್ನುವುದು ಬಹುಪಾಲು ಸಂದರ್ಭಗಳಲ್ಲಿ ಸಮಾಜವು ಒದಗಿಸಿದ ಅವಕಾಶಗಳಿಂದ ನಿರ್ಧಾರಗೊಳ್ಳುತ್ತದೆ. ಉತ್ತಮ ಶಿಕ್ಷಣ ವ್ಯವಸ್ಥೆ, ಆರೋಗ್ಯಸೇವೆ, ಉದ್ಯೋಗಾವಕಾಶಗಳೆಲ್ಲವೂ ವ್ಯಕ್ತಿಗೆ ಅವನ ಸಾಧನೆಗೆ ನೆರವಾಗುತ್ತವೆ. ಸಾರ್ವಜನಿಕ ಮೂಲಸೌಲಭ್ಯಗಳಿಲ್ಲದೆ ವ್ಯಕ್ತಿಯು ಪ್ರಗತಿಯ ಪಥಕ್ಕೆ ಕಾಲಿಟ್ಟರೂ ಹಾದಿಯು ಕಠಿಣವಾಗುತ್ತದೆ. ಇದರ ಜತೆಗೆ ಸರಕಾರದ ಯೋಜನೆಗಳೂ ಬಹುಪಾಲು ವ್ಯಕ್ತಿಗಳ ಯಶಸ್ಸಿಗೆ ಕಾರಣವಾಗುತ್ತವೆ.

ಇತರರ ಅನುಭವಗಳಿಂದ, ಆತ್ಮಚರಿತ್ರೆಗಳಿಂದ, ಪುಸ್ತಕಗಳಿಂದ ವ್ಯಕ್ತಿಯು ಪ್ರೇರಿತನಾಗುತ್ತಾನೆ. ಈ ಪ್ರೇರಣೆಯು ಅವನ ಅಂತಃಶಕ್ತಿಯನ್ನು ಜಾಗೃತಗೊಳಿಸುತ್ತದೆ. ಮಾತ್ರವಲ್ಲ, ಇಂಥ ಪರೋಕ್ಷ ಬೆಂಬಲಗಳು ವ್ಯಕ್ತಿಯೊಳಗಿನ ಉತ್ಸಾಹವನ್ನು ಹೆಚ್ಚಿಸುತ್ತವೆ. ನಿಜಕ್ಕೂ ಒಬ್ಬ ವ್ಯಕ್ತಿಯ ಶ್ರಮ, ಆತ್ಮವಿಶ್ವಾಸ ಮತ್ತು ಪ್ರಯತ್ನವೇ ಅವನ ವೈಯಕ್ತಿಕ ಪ್ರಗತಿಗೆ ಪೂರಕವಾಗಿದ್ದರೂ ಅವು ಫಲ ನೀಡಲು ಸಂದರ್ಭ, ಬೆಂಬಲ, ಪ್ರೋತ್ಸಾಹ, ಮಾರ್ಗದರ್ಶನ ಇವುಗಳ ಅಗತ್ಯವಿದೆ. ಹೀಗಿರುವಾಗ ಜನರು ಮಾನವೀಯತೆಯ ಕೊಂಡಿ ಬೆಸೆದು, ಎಲ್ಲರೂ ಪರಸ್ಪರ ಸಹಕಾರ ತತ್ವದ ಮೇಲೆ ಬದುಕು ಹೆಣೆದುಕೊಂಡಿದ್ದೇ ಆದರೆ ಪ್ರಗತಿ ಸಾಧಿಸುವುದು ಕಠಿಣವಲ್ಲ.

ಮಾರ್ಗದರ್ಶನ ಬೇಕು

ಒಬ್ಬ ವಿದ್ಯಾರ್ಥಿಯು ಎಷ್ಟೇ ಬುದ್ಧಿವಂತನಾಗಿದ್ದರೂ ಉತ್ತಮ ಗುರುಗಳ ಮಾರ್ಗದರ್ಶನದ ಅವಶ್ಯಕತೆ ಇದ್ದೇ ಇರುತ್ತದೆ. ಶಿಕ್ಷಕರು ಪಠ್ಯದ ಜತೆಗೆ ಮೌಲ್ಯಗಳನ್ನೂ ಬೋಧಿಸುತ್ತಾರೆ. ಅವರಿಂದ ದೊರೆಯುವ ಪ್ರೇರಣೆ, ಶಿಸ್ತಿನ ಅಭ್ಯಾಸ ಹಾಗೂ ವಿಶ್ವಾಸಗಳೇ ವಿದ್ಯಾರ್ಥಿಯ ಯಶಸ್ಸಿಗೆ ದಾರಿಯಾಗುತ್ತವೆ. ಪ್ರತಿ ವ್ಯಕ್ತಿಯ ಪ್ರಗತಿಯಲ್ಲಿ ಕುಟುಂಬದ ಪ್ರೋತ್ಸಾಹವಿರುತ್ತದೆ. ಹಣಕಾಸಿನ ಸಹಾಯ, ಮಾನಸಿಕ ಬೆಂಬಲ, ಆಪತ್ಕಾಲದಲ್ಲಿ ಧೈರ್ಯ ತುಂಬುವ ಸಾಮರ್ಥ್ಯ ಇವೆಲ್ಲವೂ ಕುಟುಂಬದ ಮೂಲಕ ವ್ಯಕ್ತಿಗೆ ಸಿಗುತ್ತವೆ. ತಂದೆ-ತಾಯಿ, ಸಹೋದರ-ಸಹೋದರಿಯರ ಪ್ರೋತ್ಸಾಹಗಳು ವ್ಯಕ್ತಿಯ ಉತ್ಸಾಹವನ್ನು ವೃದ್ಧಿಸುತ್ತವೆ. ವ್ಯಕ್ತಿಯೊಬ್ಬನ ಜೀವನದಲ್ಲಿ ಸ್ನೇಹಿತರು ಅಥವಾ ಸಹೋದ್ಯೋಗಿಗಳು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಕೆಲಸದ ಸ್ಥಳದಲ್ಲಿ ಸಹೋದ್ಯೋಗಿಗಳ ಪ್ರೋತ್ಸಾಹ ಹಾಗೂ ಸಹಕಾರವಿಲ್ಲದೆ ಒಬ್ಬ ವ್ಯಕ್ತಿಯು ಪ್ರಗತಿ ಸಾಧಿಸುವುದು ಅಷ್ಟು ಸುಲಭವಲ್ಲ.

ಜೀವನದ ದಿವ್ಯೌಷಧಗಳು: ನಗು ಮತ್ತು ನಿದ್ರೆ

• ಬಸವರಾಜ ಶಿವಪ್ಪ ಗಿರಗಾಂವಿ

ಅವೈಜ್ಞಾನಿಕ ಜೀವನಶೈಲಿಯಿಂದ ವಿಶ್ವದೆಲ್ಲೆಡೆ ಇಂದು ಅನಾರೋಗ್ಯಕರ ವಾತಾವರಣವು ಸೃಷ್ಟಿಯಾಗುತ್ತಿದೆ. ಇದನ್ನು ತಡೆಗಟ್ಟಲು ನಗು ಮತ್ತು ನಿದ್ರೆ ಎಂಬ ಔಷಧವನ್ನು ಪ್ರತಿಯೊಬ್ಬರ ಬದುಕಿನಲ್ಲಿ ಭಗವಂತನು ಉಚಿತವಾಗಿ ಕರುಣಿಸಿದ್ದಾನೆ. ನಗುವಿನಲ್ಲಿರುವ ಸಂತೋಷ ಮತ್ತು ನಿದ್ರೆಯಲ್ಲಿರುವ ವಿಶ್ರಾಂತಿ ಮತ್ತಾವುದರಿಂದಲೂ ದೊರೆಯುವುದಿಲ್ಲ ಹಾಗೂ ಇವು ಹಣ ಕೊಟ್ಟರೂ ಮಾರುಕಟ್ಟೆಯಲ್ಲಿ ದೊರೆಯದ ವಸ್ತುಗಳಾಗಿವೆ ಎಂಬುದು ಬಹಳ ಸ್ಪಷ್ಟವಾಗಿದೆ.

ಆರೋಗ್ಯವಂತ ಬದುಕನ್ನು ನಿರ್ಮಾಣ ಮಾಡಿಕೊಳ್ಳಲು ಪ್ರತಿನಿತ್ಯ ಇವೆರಡನ್ನೂ ಅನುಭವಿಸುತ್ತಿರಬೇಕು. ಆರೋಗ್ಯಕರವಾದ ಜೀವನಕ್ಕೆ ನಗು ಮತ್ತು ನಿದ್ರೆ ಎಂಬ ಅನುಭವಗಳು ಮೂಲಗಳಾಗಿವೆ. ನಗುವೆಂಬುದು ಮುಖದ ಮೇಲಿನ ಬೆಲೆಕಟ್ಟಲಾಗದ ಆಭರಣವೆಂದರೆ ತಪ್ಪಾಗಲಿಕ್ಕಿಲ್ಲ, ಹಾಗೆಯೇ ನಿದ್ರೆ ಎಂಬುದು ಮಾನವನಲ್ಲಿರುವ ದುಗುಡ ಹಾಗೂ ಜಡತ್ವವನ್ನು ಕಳೆದು ಮನಸ್ಸಿಗೆ ನವಚೈತನ್ಯವನ್ನುಂಟು ಮಾಡುವ ಸರ್ವಶ್ರೇಷ್ಠ ಸಾಧನವಾಗಿದೆ.

ನಿಸರ್ಗದಲ್ಲಿರುವ ಕೋಟ್ಯಂತರ ಜೀವಸಂಕುಲದಲ್ಲಿ ನಗು ಎಂಬ ಕಲೆಯು ಮನುಕುಲಕ್ಕೆ ಮಾತ್ರ ದೊರೆತಿರುವ ವರದಾನವಾಗಿದೆ. ಇದು ಸುಮ್ಮನೆ ಬರುವುದಿಲ್ಲ, ಮನಸ್ಸು ನಿರಾಳವಾಗಿದ್ದಾಗ, ಹಾಸ್ಯದತ್ತ ಚಿತ್ತ ನೆಟ್ಟಾಗ ಮಾತ್ರ ಹೊರಬರುತ್ತದೆ. ಹೀಗೆ ಪರಿಸ್ಥಿತಿಯ ನೈಜತೆಯನ್ನು ಅರಿತು ಅಂತರಾಳದಿಂದ ಬರುವ ನಗು ನೈಜ ನಗುವಾಗಿದೆ. ಆಗ ಮನಸ್ಸು ಹಗುರವಾಗಿ ಮಾನಸಿಕ ಚಂಚಲತೆಯು ದೂರವಾಗುತ್ತದೆ. ಆದರೆ ಇಂದಿನ ಒತ್ತಡಮಯ ಮತ್ತು ಮೋಸಮಯ ಜಗತ್ತಿನಲ್ಲಿ ಹುಸಿನಗೆ, ಕುಹಕನಗೆ ಮತ್ತು ಕಪಟನಗೆಗಳು ಹೆಚ್ಚಾಗುತ್ತಿವೆ. ಇಂಥ ನಗುಗಳಿಂದ ಯಾವುದೇ ಪ್ರಯೋಜನವಿಲ್ಲ, ಬದಲಾಗಿ ಇವು ಮಾನಸಿಕ ಆರೋಗ್ಯವನ್ನು ಮತ್ತಷ್ಟು ಹದಗೆಡಿಸಿ ಸಮಾಜದಲ್ಲಿರುವ ಸಾಮರಸ್ಯ ಹಾಗೂ ಸ್ವಾಸ್ಥ್ಯವನ್ನು ಹಾಳುಗೆಡಹುತ್ತವೆ. ಆರೋಗ್ಯಕರ ನಗುವಿಗಾಗಿ ಹಾಸ್ಯವಿರಬೇಕೇ ವಿನಾ ಅಪಹಾಸ್ಯವಿರಬಾರದು ಎಂಬುದು ಗಮನಾರ್ಹ.



ನಗಲು ಮನಸ್ಸು ಹಗುರವಾಗಿರಬೇಕು ಮತ್ತು ಮನಸ್ಸಿನಲ್ಲಿರುವ ಚಂಚಲತೆಯನ್ನು ದೂರ ಮಾಡಿರಬೇಕು. ಅಂದಾಗ ಮಾತ್ರ ನಗುವಿನಲ್ಲಿರುವ ಸೌಭಾಗ್ಯವನ್ನು ಅನುಭವಿಸಬಹುದು. ನಕ್ಕಾಗ ಕಣ್ಣಿನಲ್ಲಿ ನೀರು ಬರಬೇಕು, ಅದುವೇ ಅಂತರಾಳದ ನಗುವಾಗಿದೆ. ಈ ಕಣ್ಣೀರಿಗೆ ಆನಂದಬಾಷ್ಪ ಎನ್ನುತ್ತಾರೆ. ನಗುವೆಂಬುದು ಎದುರಿಗಿನವರ ಸಿಟ್ಟನ್ನು ಕೊನೆಗೊಳಿಸಿ ವಿಶ್ವಾಸವೆಂಬ ಹೊಸತನವನ್ನು ಸೃಷ್ಟಿಸುವ ಸಾಧನವಾಗಿದೆ. ನಗುವಿನಲ್ಲಿರುವ ಸೆಳೆತವು ಎಂಥವರನ್ನೂ ಮಂತ್ರ-ಮುಗ್ಧರನ್ನಾಗಿಸುವಷ್ಟು ಶಕ್ತಿಯನ್ನು ಹೊಂದಿದೆ.

ನಗುವನ್ನು ಸಹಜ ಧರ್ಮವೆಂದೂ, ನಗಿಸುವುದನ್ನೂ ಪರಧರ್ಮವೆಂದೂ, ನಗುವನ್ನು ಕೇಳಿ ನಗುವುದನ್ನು ಅತಿಶಯದ ಧರ್ಮವೆಂದು ಡಾ.ಡಿ.ವಿ.ಗುಂಡಪ್ಪನವರು ವರ್ಣಿಸಿದ್ದಾರೆ. ನಗುವೆಂಬುದು ಆರೋಗ್ಯದ ರಹಸ್ಯವೂ, ಜೀವನವನ್ನು ಸುಂದರವಾಗಿಸಿಕೊಳ್ಳುವ ಅದ್ಭುತ ಕಲೆಯೂ ಆಗಿದೆ. ಇದು ಸ್ನಾಯುಗಳ ಚಲನೆಯಿಂದ ವ್ಯಕ್ತವಾಗುವ ಸುಂದರ ಭಾವನೆ. ಸೂಕ್ತ ಸಂದರ್ಭಗಳಲ್ಲಿ ನೈಸರ್ಗಿಕವಾಗಿ ಹೊರಬರುವ ನಗುವಿಗೆ ಜನರ ಮನಸ್ಸನ್ನು ಗೆಲ್ಲುವ ಶಕ್ತಿಯಿರುತ್ತದೆ. ಆದ್ದರಿಂದಲೇ ನಗುವನ್ನು, ಎಲ್ಲ ತೆರನಾದ ದೈಹಿಕ-ಮಾನಸಿಕ ರೋಗಗಳಿಗೆ ರಾಮಬಾಣವೆಂದು ಕರೆಯಬಹುದು.

ಇನ್ನು, ನಿದ್ರೆ ಎಂಬುದು ದೇಹ ಮತ್ತು ಮನಸ್ಸಿಗೆ ವಿಶ್ರಾಂತಿ ನೀಡುವ ನೈಸರ್ಗಿಕ ಕ್ರಿಯೆಯಾಗಿದೆ. ಉತ್ತಮ ನಿದ್ರೆಗೆ ಶಾಂತ ಮತ್ತು ಸೂಕ್ತ ವಾತಾವರಣ ಅತ್ಯವಶ್ಯ. ವಯಸ್ಸಿಗೆ ತಕ್ಕಂತೆ ಸರಾಸರಿ 7-9 ಗಂಟೆಗಳ ನಿದ್ರೆಯು ಅವಶ್ಯವಿದೆ. ನಿದ್ರೆಯ ಕೊರತೆಯು ಹಲವು ಮಾನಸಿಕ ಒತ್ತಡ, ಸ್ಥೂಲಕಾಯ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಕಾರಣವಾಗುತ್ತದೆ. ಗುಣಮಟ್ಟದ ನಿದ್ರೆಯು ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆಯಲ್ಲದೆ ದೇಹದ ಬೆಳವಣಿಗೆಗೆ ಮತ್ತು ಮಿದುಳಿನ ಕಾರ್ಯವನ್ನು ಚುರುಕುಗೊಳಿಸಲು ಸಹಕಾರಿಯಾಗುತ್ತದೆ. ಉತ್ತಮ ನಿದ್ರೆಗೆ ಸೂಕ್ತ ವೇಳಾಪಟ್ಟಿ, ಆಹಾರ, ವ್ಯಾಯಾಮ ಮತ್ತು ಯೋಗ-ಧ್ಯಾನಗಳು ಅವಶ್ಯವಿವೆ. ವಯಸ್ಸಿಗೆ ತಕ್ಕಂತೆ ನಿದ್ರೆ ಮಾಡುವುದರಿಂದ ಚರ್ಮದಲ್ಲಿರುವ ಜೀವಕೋಶಗಳು ಹೆಚ್ಚು ಕ್ರಿಯಾಶೀಲವಾಗುತ್ತವೆ. ರಕ್ತ ಪರಿಚಲನೆ ಸರಾಗವಾಗುತ್ತದೆ. ಸರಿಯಾದ ನಿದ್ರೆಯಾದ ವ್ಯಕ್ತಿಯು ದಿನಪೂರ್ತಿ ಉಲ್ಲಾಸದಿಂದ ಕೂಡಿರುತ್ತಾನೆ. ನಿರಂತರವಾಗಿ ಮಾಡುವ ಹಗಲಿನ ನಿದ್ರೆ ಮತ್ತು ಮಾತ್ರೆ-ಔಷಧಗಳಿಂದ ಬರುವ ನಿದ್ರೆಯು ಅಪಾಯಕಾರಿಯಾಗಿರುತ್ತದೆ ಹಾಗೂ ಸಹಜನಿದ್ರೆಗೆ ಭಂಗವನ್ನುಂಟುಮಾಡುತ್ತದೆ. ವಯಸ್ಸಿಗೆ ತಕ್ಕಂತೆ ಶಾರೀರಿಕ ಶ್ರಮವನ್ನು ಕೈಗೊಳ್ಳುವುದರಿಂದ ನಿದ್ರೆಯು ತನ್ನಿಂದ ತಾನೇ ದೊರೆಯುತ್ತದೆ.

ತಮ್ಮದೇ ಅಹಂಕಾರದಿಂದ ಅಂತ್ಯ ಕಂಡ ಮಧು-ಕೈಟಭಾಸುರರು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸೃಷ್ಟಿಯ ಆರಂಭದಲ್ಲಿ ಇಡೀ ಬ್ರಹ್ಮಾಂಡವು ಜಲಮಯವಾಗಿತ್ತು. ಮಹಾವಿಷ್ಣುವು ಆದಿಶೇಷನ ಮೇಲೆ ಯೋಗನಿದ್ರೆಯಲ್ಲಿದ್ದಾಗ ಆತನ ಕಿವಿಯ ಮಲದಿಂದ (ಕರ್ಣಮಲ) ಮಧು ಮತ್ತು ಬ್ರಹ್ಮ ಎಂಬ ಇಬ್ಬರು ಅಸುರರು ಜನಿಸಿದರು. ದೃಢಕಾಯರೂ, ಪರ್ವತಸದೃಶ ದೇಹದವರೂ ಆದ ಈ ಸಹೋದರರು ಸಮುದ್ರದಲ್ಲಿ ಆಟವಾಡುತ್ತಾ ಬೆಳೆದರು.

ಒಮ್ಮೆ ಅವರಿಗೆ ಗಾಳಿಯಲ್ಲಿ 'ವಾಗ್ಬೀಜ' ಮಂತ್ರವು ಕೇಳಿಸಿತು. ಕುತೂಹಲದಿಂದ ಆರಂಭವಾದ ಮಂತ್ರದ ಜಪವು ಕ್ರಮೇಣ ತಪಸ್ಸಾಗಿ ಬದಲಾಯಿತು. ಅವರ ಭಕ್ತಿಗೆ ಮೆಚ್ಚಿದ ಮಹಾದೇವಿಯು ಪ್ರತ್ಯಕ್ಷಳಾಗಿ, ''ನೀವಿಬ್ಬರೂ ಒಗ್ಗಟ್ಟಾಗಿರುವವರೆಗೆ ಯಾರೂ ನಿಮ್ಮನ್ನು ಸೋಲಿಸಲಾರರು'' ಎಂಬ ಅಜೇಯ ವರವನ್ನು ನೀಡಿದಳು.

ವರದ ಮದದಿಂದ ಉಬ್ಬಿದ ಅಸುರರು ಸೃಷ್ಟಿಕರ್ತ ಬ್ರಹ್ಮನ ಮೇಲೆ ದಾಳಿ ಮಾಡಿ ವೇದಗಳನ್ನು ಅಪಹರಿಸಿದರು. ಬ್ರಹ್ಮನು ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಉಪಾಯಗಳನ್ನು ಬಳಸಿದರೂ ಫಲ ನೀಡಲಿಲ್ಲ. ಗಾಬರಿಗೊಂಡ ಬ್ರಹ್ಮನು ವಿಷ್ಣುವಿನ ಬಳಿ ಧಾವಿಸಿದನು. ಆದರೆ ವಿಷ್ಣುವು ಯೋಗನಿದ್ರೆಯಲ್ಲಿದ್ದನು. ಆಗ ಬ್ರಹ್ಮನು ವಿಷ್ಣುವನ್ನು ನಿದ್ರೆಯಿಂದ ಎಬ್ಬಿಸಲು 'ನಿದ್ರಾದೇವಿ'ಯನ್ನು ಪ್ರಾರ್ಥಿಸಿದನು. ದೇವಿಯ ಕೃಪೆಯಿಂದ ವಿಷ್ಣುವು ಎಚ್ಚರಗೊಂಡು ಪರಿಸ್ಥಿತಿಯನ್ನು ಅರಿತನು.

ವೇದಗಳನ್ನು ರಕ್ಷಿಸಲು ಮತ್ತು ಅಸುರರನ್ನು ಸಂಹರಿಸಲು ವಿಷ್ಣುವು ಕುದುರೆಯ ಮುಖವುಳ್ಳ ಹಯಗ್ರೀವ ರೂಪವನ್ನು ತಳೆದನು. ಮಧು-ಕೈಟಭರು ವಿಷ್ಣುವನ್ನು ಯುದ್ಧಕ್ಕೆ ಆಹ್ವಾನಿಸಿದರು. ಈ ಘನಘೋರ ಮಲ್ಲಯುದ್ಧವು ಸತತ ಐದು ಸಾವಿರ ವರ್ಷಗಳ ಕಾಲ ನಡೆಯಿತು. ಆದರೂ ದೇವಿಯ ವರದಿಂದಾಗಿ ಅಸುರರನ್ನು ಸೋಲಿಸಲು ಸಾಧ್ಯವಾಗಲಿಲ್ಲ.

ದೈಹಿಕ ಬಲಕ್ಕಿಂತ ಬುದ್ಧಿವಂತಿಕೆಯೇ ಮದ್ದೆಂದು ಅರಿತ ವಿಷ್ಣುವು ಯುದ್ಧವನ್ನು ನಿಲ್ಲಿಸಿ ಮಧು-ಕೈಟಭರ ಶೌರ್ಯವನ್ನು ಹೊಗಳಿದನು. ''ನಿಮ್ಮ ಪರಾಕ್ರಮಕ್ಕೆ ನಾನು ಮೆಚ್ಚಿದ್ದೇನೆ, ಯಾವುದಾದರೂ ವರವನ್ನು ಕೇಳಿ'' ಎಂದನು ವಿಷ್ಣು. ಆಗ ಅಹಂಕಾರದಿಂದ ಬೀಗಿದ ಅಸುರರು, ''ನಾವು ವಿಜೇತರು, ನಿನ್ನಿಂದ ವರ ಕೇಳುವ ಅಗತ್ಯ ನಮಗಿಲ್ಲ. ಬೇಕಿದ್ದರೆ ನೀನೇ ನಮ್ಮಿಂದ ವರವನ್ನು ಕೇಳು'' ಎಂದರು.

ಇದೇ ಸಮಯಕ್ಕಾಗಿ ಕಾಯುತ್ತಿದ್ದ ವಿಷ್ಣುವು ಕಿರುನಗೆ ಬೀರುತ್ತಾ, ''ಹಾಗಿದ್ದಲ್ಲಿ, ನಿಮ್ಮಿಬ್ಬರ ಸಾವು ನನ್ನ ಕೈಯಿಂದಲೇ ಆಗಲಿ ಎಂಬ ವರವನ್ನು ಕೊಡಿ'' ಎಂದು ಕೇಳಿದನು.

ತಮ್ಮ ಮಾತಿನ ಬಲೆಯಲ್ಲಿ ತಾವೇ ಸಿಲುಕಿದ ಅಸುರರು ಗಾಬರಿಗೊಂಡರು. ತಪ್ಪಿಸಿಕೊಳ್ಳಲು ಕೊನೆಯ ಪ್ರಯತ್ನವಾಗಿ, ''ಸರಿ, ಆದರೆ ನಮ್ಮನ್ನು ಎಲ್ಲಿ ನೀರಿಲ್ಲವೋ ಅಂಥ ಒಣಪ್ರದೇಶದಲ್ಲಿ ಮಾತ್ರ ಕೊಲ್ಲಬೇಕು'' ಎಂಬ ಷರತ್ತು ಹಾಕಿದರು. ಆಗ ಮಹಾವಿಷ್ಣುವು ತನ್ನ ವಿರಾಟ ರೂಪವನ್ನು ತಾಳಿ, ಅಸುರರಿಬ್ಬರನ್ನೂ ತನ್ನ ಬಲಿಷ್ಠ ತೊಡೆಗಳ ಮೇಲೆ ಮಲಗಿಸಿಕೊಂಡನು (ನೀರಿಲ್ಲದ ಜಾಗವನ್ನಾಗಿ ತನ್ನ ತೊಡೆಯನ್ನೇ ಬಳಸಿದನು). ಅಲ್ಲಿ ತನ್ನ ಸುದರ್ಶನ ಚಕ್ರದಿಂದ ಅವರಿಬ್ಬರ ಶಿರಚ್ಛೇದ ಮಾಡಿದನು.

ಮಧುವನ್ನು ಸಂಹರಿಸಿದ್ದರಿಂದ ವಿಷ್ಣುವಿಗೆ 'ಮಧುಸೂದನ' ಎಂಬ ಹೆಸರು ಬಂತು. ಅಸುರರ ದೇಹದಿಂದ ಹೊರಬಂದ ಮೇದಸ್ಸು (ಕೊಬ್ಬು) ಸಮುದ್ರದಲ್ಲಿ ಹರಡಿತು. ವಿಷ್ಣುವು ಆ ಮೇದಸ್ಸಿನಿಂದ ಭೂಮಿಯನ್ನು ನಿರ್ಮಿಸಲು ಬ್ರಹ್ಮನಿಗೆ ಸೂಚಿಸಿದನು. ಹೀಗೆ ಮಧು-ಕೈಟಭರ ಮೇದಸ್ಸಿನಿಂದ ಸೃಷ್ಟಿಯಾದ ಕಾರಣ ಈ ಭೂಮಿಗೆ 'ಮೇದಿನಿ' ಎಂಬ ಹೆಸರು ಬಂದಿತು. ಅವರ ದೇಹದ ಅವಶೇಷಗಳು ಭೂಮಿಯ ಹನ್ನೆರಡು ಭೂಫಲಕಗಳಾಗಿ (Tectonic Plates) ಬದಲಾದವು ಎಂದು ಪುರಾಣಗಳು ಹೇಳುತ್ತವೆ.

ಕೆಲವೊಮ್ಮೆ ನಮ್ಮ ಎದುರಾಳಿಗಳನ್ನು ನಾವು ಹಗುರಾಗಿ ಪರಿಗಣಿಸಿಬಿಡುತ್ತೇವೆ; ಆದರೆ ಯಾವುದೇ ಕಾರ್ಯ ಮುಗಿಯುವವರೆಗೂ ಹಾಗೆ ಸಂಪೂರ್ಣವಾಗಿ ಸಂಭ್ರಮಿಸಬಾರದು ಎನ್ನುವುದಕ್ಕೆ ಮೇಲಿನ ಕಥೆ ಸಾಕ್ಷಿ. ಕೊನೆಯ ಕ್ಷಣದಲ್ಲೂ ಯಾವುದೇ ಒಂದು ಸ್ಪರ್ಧೆ, ಕೆಲಸ ಇವುಗಳಲ್ಲಿ ಎಂಥ ಬದಲಾವಣೆ ಬೇಕಾದರೂ ಆಗಬಹುದು. ಆದ್ದರಿಂದಲೇ ಎಂದಿಗೂ ಮುಂಚಿತವಾಗಿ ಸಂಭ್ರಮಿಸಬಾರದು. ಕೆಲಸ ಆಗುವುದಕ್ಕೆ ಮುಂಚೆಯೇ ನಮ್ಮ ಯೋಜನೆಗಳನ್ನು ಅನಗತ್ಯವಾಗಿ ಹಂಚಿಕೊಳ್ಳಲೂಬಾರದು. ಎಲ್ಲಕ್ಕಿಂತ ಹೆಚ್ಚಾಗಿ ವಾಮಮಾರ್ಗದಿಂದ ಅಧಿಕಾರ ಸ್ವೀಕರಿಸಿದವರಿಗೆ ಎಂದಾದರೂ ಒಂದು ದಿನ ಸೋಲು ಕಟ್ಟಿಟ್ಟಬುತ್ತಿ. ಆದ್ದರಿಂದಲೇ ಸರಿಯಾದ ದಾರಿಯಲ್ಲಿ ನಡೆಯಬೇಕು ಒಳ್ಳೆಯ ರೀತಿಯಲ್ಲಿ ಬೆಳೆಯಬೇಕು....

ಎಲ್ಲವನ್ನೂ ಗಮನಿಸುವ ಇದಕೆ ಸಂಶಯ ಬೇಡ...

• ವಿದ್ಯಾಶಂಕರ ಶರ್ಮ, ಬೆಂಗಳೂರು

ನಮ್ಮ ಇಚ್ಛೆಗೆ ವಿರುದ್ಧವಾಗಿ ಏನಾದರೂ ಸಂಭವಿಸಿದಾಗ– 'ಇದು ನಮಗೆ ದೇವರು ಮಾಡಿದ ಅನ್ಯಾಯ' ಅಂತ ನಾವು ಅಂದುಕೊಳ್ಳುವುದುಂಟು. ಪ್ರತಿಕೂಲ ಪ್ರಸಂಗಗಳಲ್ಲಿ ಉದ್ಭವಿಸುವ ಭಾವನೆಯಿದು. ಆದರೆ ಒಳಿತಿನ ಕಾಲವೂ ಅವನ ಉಡುಗೊರೆಯೇ. ಅಂದರೆ ಅಸಮಾನ ಅಳತೆಗೋಲಿನಡಿಯಲ್ಲಿ ನಮ್ಮ ವಿಚಾರಗಳು ನಡೆಯುತ್ತವೆ. ಆದರೆ ನಮ್ಮ ಈ ಎರಡೂ ಬಗೆಯ ವಿಚಾರಧಾರೆಗಳು ತಪ್ಪು. ವಾಸ್ತವವಾಗಿ ದೇವರು ಎಂಬ ಅಗೋಚರ ಶಕ್ತಿಯು ನಮ್ಮ ಒಳಿತು ಮತ್ತು ಕೆಡುಕುಗಳಿಗೆ ಕಾರಣಕರ್ತನಲ್ಲ. ನಮ್ಮ ಪುಣ್ಯ ಮತ್ತು ಪಾಪ ಕರ್ಮಗಳು ನಮಗೆ ಫಲದ ರೂಪದಲ್ಲಿ ಪರಿಸ್ಥಿತಿಗಳಾಗಿ ಬಂದೊದಗುತ್ತವೆ. ಹೀಗೆ ಫಲಗಳು ಬರುವುದಕ್ಕೆ ಒಂದು ವ್ಯವಸ್ಥೆಯೂ ಇದೆ. ಈ ವ್ಯವಸ್ಥೆಯಲ್ಲಿ ಭಗವಂತನು 'ಕರ್ಮಾಧ್ಯಕ್ಷ'ನಾಗಿರುತ್ತಾನೆ. ಅಂದರೆ, ನಮ್ಮ ಸಂಚಿತ ಕರ್ಮಗಳಿಗೆ ಫಲಗಳನ್ನು ಕೊಡುವ ಕೆಲಸ ಅವನದು. ಯಾವ ಕರ್ಮಕ್ಕೆ ಏನು ಫಲವೆಂಬುದು ಮೊದಲೇ ನಿರ್ಧಾರವಾಗಿರುತ್ತದೆ. ಕರ್ಮಾಧ್ಯಕ್ಷನು ಅವುಗಳನ್ನು ವಿತರಿಸುವ ಕಾಯಕವನ್ನು ಮಾತ್ರ ಮಾಡುತ್ತಾನೆ. ಅಂದರೆ, ನಾವೇ ಪುಣ್ಯ ಅಥವಾ ಪಾಪ ಕಾರ್ಯಗಳನ್ನು ಮಾಡಿ ಅದಕ್ಕೆ ತಕ್ಕುದಾದ ಪರಿಣಾಮಗಳಿಗೆ ಹೊಣೆಗಾರರಾಗಿರುತ್ತೇವೆ. ಭಗವಂತನೆಂಬ ಕರ್ಮಾಧ್ಯಕ್ಷನು ಅವುಗಳ ಸರಿಯಾದ ವಿತರಣೆಯನ್ನು ನೋಡಿಕೊಳ್ಳುತ್ತಾನೆ ಅಷ್ಟೇ.

ಶ್ವೇತಾಶ್ವತರ ಉಪನಿಷತ್ತಿನ ಮಂತ್ರವು ಇದನ್ನು ಬಲು ಅರ್ಥಗರ್ಭಿತವಾಗಿ ಹೇಳಿದೆ: 'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥' ಅಂದರೆ– ದೇವರೊಬ್ಬನೇ ನಾಮ ಹಲವು, ಅವನೇ ನಮ್ಮೆಲ್ಲರ ಆತ್ಮವು. ಅವನು ನಮ್ಮ ಎಲ್ಲ ಕಾರ್ಯಗಳಿಗೂ ಸಾಕ್ಷಿಯು. ಅವನು ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವವನು. ಅವನು ನಮ್ಮ ಕರ್ಮಗಳಿಗೆ ಅಧಿಪತಿಯು. ನಾವು ರಹಸ್ಯದಲ್ಲಿ ಮಾಡುತ್ತಿರುವ ಕಾರ್ಯಗಳು ಯಾರಿಗೂ ತಿಳಿಯದು ಎಂದು ನಾವು ಅಂದುಕೊಳ್ಳುವುದುಂಟು. ಸುತ್ತಮುತ್ತಲಿನ ಜನರ ಕಣ್ಣಿಗೆ ಮಣ್ಣೆರಚಬಹುದು, ಆದರೆ ಸರ್ವಾಂತರ್ಯಾಮಿಯಾದ ಭಗವಂತನ ದೃಷ್ಟಿಗೆ ನಾವು ಪರದೆ ಹಾಕಲಾರೆವು. ಇಂಥ ಅರಿವು ನಮಗೆ ಬಲು ಅವಶ್ಯವಾಗಿ ಬೇಕಾಗಿದೆ. ನಮ್ಮ ದುರಾಲೋಚನೆಗಳನ್ನು ಭಗವಂತನ ಕಣ್ಣಿನಿಂದ ಮರೆಮಾಚಲಾರೆವು ಎಂಬ ಒಳನುಡಿಯು ನಮ್ಮಿಂದ ಆಗಬಹುದಾದ ಅನಾಹುತಗಳನ್ನು ತಡೆಯುತ್ತದೆ. ಎಲ್ಲದಕ್ಕೂ ಸಾಕ್ಷಿಯಾದ ಪರಮಾತ್ಮನು ನಮ್ಮ ಕರ್ಮಗಳನ್ನು ಗಮನಿಸುವವನು ಎಂದಾಗ, ನಮ್ಮಲ್ಲಿ ಪಾಪ ಪುಣ್ಯಗಳ ಬಗೆಗೆ ಜಾಗೃತಿ ಮೂಡುತ್ತದೆ. ಸೃಷ್ಟಿಕರ್ತನು ಈಗಾಗಲೇ ಇದ್ದುಕೊಂಡಿರುವ, ನಮ್ಮ ಕರ್ಮಗಳ ಚೀಲಗಳಲ್ಲಿ ಬರೆದಿಟ್ಟಿರುವ ಫಲಗಳ ಚೀಟಿಯನ್ನು ಹಂಚುವವನು ಮಾತ್ರ ಎಂಬುದನ್ನು ನಾವು ಮನದಲ್ಲಿ ಗಟ್ಟಿಮಾಡಿಕೊಂಡರೆ, ಸುಖಾಸುಮ್ಮನೆ ದೇವರನ್ನು ಹಳಿಯುವ ವ್ಯರ್ಥ ಪ್ರಲಾಪಗಳಿಂದ ನಾವು ದೂರವಾಗುತ್ತೇವೆ.

ನಮ್ಮ ಮೂಲಚಿಂತನೆಯಲ್ಲಿಯೇ ಬಹುದೊಡ್ಡ ದೋಷವಿದೆ. ಅದೆಂದರೆ– 'ಯಶಸ್ಸಿಗೆ, ಸಂತಸಕ್ಕೆ, ಸಾಧನೆಗಳಿಗೆ ನಾವೇ ಒಡೆಯರು; ಸೋಲಿಗೆ, ದುಃಖಗಳಿಗೆ,ಅಧಃಪತನಗಳಿಗೆ ಭಗವಂತನೇ ಹೊಣೆ!' ಎಂಬುದು. ಇದು ವಿರೋಧಾಭಾಸದ ತುತ್ತತುದಿ. ನಮ್ಮ ಏಳು-ಬೀಳುಗಳು ನಮ್ಮದೇ ನಿರ್ಧಾರಗಳ, ಆಯ್ಕೆಗಳ ಫಲಗಳು. ನಮ್ಮ ಮನದಲ್ಲಿ ಉದಯಿಸುವ ಆಲೋಚನೆಗಳು ಕೂಡ ನಮ್ಮ ಪೂರ್ವಾರ್ಜಿತ ಕರ್ಮಗಳ ಪರಿಣಾಮಗಳೇ. ಅಂದರೆ ಎಲ್ಲ ರೀತಿಯಿಂದಲೂ ನಾವೇ ನಮ್ಮ ಜೀವನದ ಶಿಲ್ಪಿಗಳು. ಈ ವಿಷಯವನ್ನು ನಾವು ಶ್ರದ್ಧೆಯಿಂದ ಗ್ರಹಿಸಿದಾಗ, ನಮ್ಮ ಪ್ರತಿ ಹೆಜ್ಜೆಯೂ ಎಚ್ಚರಿಕೆಯ ಪ್ರತಿಬಿಂಬವಾಗಿರುತ್ತದೆ. ನಮ್ಮ ಬದುಕಿನ ಹಾದಿಯು ಬಹು ಮಟ್ಟಿಗೆ ಹಸನಾಗುವುದು ಕೂಡ. ಮಿತಿಮೀರಿದ ಆಸೆ, ಹದ್ದುಮೀರಿದ ಮನದ ವಾಂಛೆಗಳು, ಅಸೂಯೆ, ಭೋಗಯುತ ಜೀವನದ ಹುಚ್ಚು, ಶ್ರಮ ಪಡದೆ ಎಲ್ಲವೂ ದಕ್ಕಬೇಕೆಂಬ ಮನಸ್ಥಿತಿಗಳ ಮೇಲಾಟದ ಗೂಡಾಗಿರುವ ಇಂದಿನ ಪ್ರಪಂಚದಲ್ಲಿ ಮನುಜರೊಳಗೆ ಪಾಪ ಪ್ರಜ್ಞೆಯು ತೀವ್ರವಾಗಿ ಮೂಡಬೇಕಾಗಿದೆ. ಕರ್ಮಾಧ್ಯಕ್ಷನು ಎಲ್ಲವನ್ನೂ ಗಮನಿಸುವವನು ಎಂಬ ಅರಿವು ಅಂಥ ಬದಲಾವಣೆಗೆ ದಾರಿಯಾಗಬಲ್ಲದು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದುಃಖ ಅಥವಾ ಅತಿಯಾದ ತಾಪ (3)
3. ಅನ್ಯರ ಮೇಲೆ ತಪ್ಪು ಹೊರಿಸುವುದು (4)
5. ಇತ್ತೀಚಿನ ಅಥವಾ ಹೊಸತಾದ (3)
6. ಇದು ಒರಟಲ್ಲದುದು (3)
7. ದಾಖಲೆಮಾಡು ಎಂದರ್ಥ (4)
9. ದೇಶ ಅಥವಾ ರಾಜ್ಯಗಳ ಎಲ್ಲೆ (2)
10. ಸದ್ದು ಅಥವಾ ಗದ್ದಲ (2)
14. ಮತ್ತೊಂದು ನಾಶ (2)
16. ಸತಿಯ ಬಳಿಯಿರುವ ಗಂಡ (2)
17. ಮರದ ನಡುವೆ ಕಾಣುವ ಭ್ರಮರ (4)
19. ರಾಷ್ಟ್ರಪಕ್ಷಿಗೆ ಮತ್ತೊಂದು ಹೆಸರು (3)
20. ಉದ್ದವಾಗಿ ಬಾಗಿರುವ ತುತ್ತೂರಿ ದಿಕ್ಕು ತಪ್ಪಿಸಿ ಬಂದಿದೆ (3)
21. ದೇವಾಲಯದ ಸಭಾಮಂಟಪ (4)
22. ಹುಟ್ಟಿನಿಂದ ಇಲ್ಲಿಯವರೆಗೆ ಕಳೆದಿರುವ ಕಾಲ (3)

ಮೇಲಿಂದ ಕೆಳಕ್ಕೆ

2. ಮಾತೃಭಾಷೆಗೆ ಇನ್ನೊಂದು ಹೆಸರು (4)
3. ಆತನ ಮುಖ (3)
4. ಜ್ಞಾಪಿಸಿಕೊಳ್ಳು ಅಥವಾ ಒದ್ದೆಮಾಡು ಎಂದರ್ಥ (3)
5. ಪುರದಿಂದ ತಂದ ಕಾಲಂದುಗೆ (3)
8. ಗಣೇಶನ ವಾಹನ (3)
9. ಜಗದಲ್ಲಿ ಕಂಡಿತು ಆನೆ (2)
11. ನ್ಯಾಯಾಲಯದಲ್ಲಿ ವಕಾಲತ್ತು ಮಾಡುವವನು (3)
12. ಉದಯಕಾಲದಲ್ಲಿ ಕಂಡ ನೀರು (3)
13. ಪಾಂಡವರ ತಾಯಿ (2)
15. ಜೋಡಿಯಲ್ಲಿ ಮೃತ್ಯುದೇವನೂ ಇದ್ದಾನೆ (3)
16. ಈತ ಹೊರಗಿನವನು (4)
17. ಇನ್ನೊಂದು ಹಸುವಿನೊಂದಿಗೆ ಬಂದಿರುವ ಮನ್ಮಥ (3)
18. ಅಸ್ತವ್ಯಸ್ತವಾಗಿ ಬಂದಿರುವ ಗೊಂದಲ, ಪೀಡೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ

ಮೇಲಿಂದ ಕೆಳಕ್ಕೆ

ನೀವೂ ಬರೆಯಬಹುದು | **ನಮ್ಮ ವಿಳಾಸ**
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಖೇಲೊ ಇಂಡಿಯಾ ಚಳಿಗಾಲ ಕ್ರೀಡೆ

ಲೇಹ್ (ಲಡಾಕ್): 2026ರ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟವು ಲಡಾಖ್‌ನ ಲೇಹ್‌ನಲ್ಲಿ ಇಂದು ಆರಂಭವಾಗಲಿದ್ದು, ಒಂದು ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಸ್ಪರ್ಧಾಕಣದಲ್ಲಿದ್ದಾರೆ. ಇಲ್ಲಿನ ನವಾಂಗ್ ದೋರ್ಜನ್ ಸೊಬ್ದಾನ್ (ಎನ್‌ಡಿಎಸ್) ಕ್ರೀಡಾಂಗಣ, ಸೇನಾ ಮೈದಾನ ಮತ್ತು ಹೆಪ್ಪುಗಟ್ಟಿದ ಗುಪುಖ್ ಕೊಳವು ಕ್ರೀಡಾಕೂಟದ ಆಕರ್ಷಣೆಯ ಕೇಂದ್ರಗಳಾಗಿವೆ. ಇದೇ 26ರವರೆಗೆ ಕೂಟ ನಡೆಯಲಿದೆ. ಮಂಜುಗಡ್ಡೆ ಮೇಲೆ ನಡೆಯುವ ಹಾಕಿ ಮತ್ತು ಸ್ಕೇಟಿಂಗ್ ಕ್ರೀಡೆಯಲ್ಲಿ 472 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಕಳೆದ ವರ್ಷವೂ ಇದೇ ತಾಣದಲ್ಲಿ ಕೂಟ ನಡೆದಿದ್ದು, ಆತಿಥೇಯ ತಂಡವು 13 ಚಿನ್ನದ ಪದಕಗಳಲ್ಲಿ ನಾಲ್ಕು ಅನ್ನು ಗೆದ್ದು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿತ್ತು. ತಮಿಳುನಾಡು ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನಗಳನ್ನು ಗಳಿಸಿದ್ದವು.

ವಿರಾಮ
ಪ್ರತಿ ಭಾನುವಾರ

ಏಕದಿನ ಸರಣಿ ಸೋಲಿನ ಬೆನ್ನಲ್ಲೇ ರಣಜಿ ಕ್ರಿಕೆಟ್ ಆಡಲು ನಿರ್ಧರಿಸಿದ ಇಬ್ಬರು ಭಾರತೀಯ ಆಟಗಾರರು

ಗಿಲ್, ಜಡೇಜಾ ಚಿತ್ತ ರಣಜಿ ಪಂದ್ಯಗಳತ್ತ

ದೆಹಲಿ: ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿ ಸೋಲಿನ ನಂತರ ಭಾರತ ತಂಡದ ನಾಯಕ ಶುಭ್‌ಮನ್ ಗಿಲ್ ಮತ್ತು ತಂಡದ ಹಿರಿಯ ಆಲ್‌ರೌಂಡರ್ ರವೀಂದ್ರ ಜಡೇಜಾ ರಣಜಿ ಟ್ರೋಫಿಯಲ್ಲಿ ಭಾಗವಹಿಸಲು ರಾಜ್‌ಕೋಟ್‌ಗೆ ತೆರಳಲಿದ್ದಾರೆ. ಬುಧವಾರದಿಂದ ನ್ಯೂಜಿಲೆಂಡ್ ವಿರುದ್ಧ ಭಾರತವು 5 ಪಂದ್ಯಗಳ ಟಿ20 ಪಂದ್ಯಗಳನ್ನಾಡಲಿದ್ದು, ಇವರಿಬ್ಬರೂ ಟಿ20 ತಂಡದಲ್ಲಿ ಸ್ಥಾನ ಪಡೆದಿಲ್ಲ.

ಈ ಋತುವಿನ ಎರಡನೇ ಹಂತದ ರಣಜಿ ಪಂದ್ಯಾವಳಿಯಲ್ಲಿ ಜನವರಿ 22ರಂದು ರಾಜ್‌ಕೋಟ್‌ನ ನಿರಂಜನ್ ಶಾ ಕ್ರೀಡಾಂಗಣದಲ್ಲಿ ಜಡೇಜಾ ಅವರ ಸೌರಾಷ್ಟ್ರ ತಂಡವು ಗಿಲ್ ಅವರ ಪಂಜಾಬ್ ತಂಡವನ್ನು ಎದುರಿಸಲಿದ್ದು, ಈ ಜೋಡಿ ಪರಸ್ಪರ ಎದುರಾಗುವ ಸಾಧ್ಯತೆ ಇದೆ. ಈ ಋತುವಿನಲ್ಲಿ ಗಿಲ್ ಯಾವುದೇ ರಣಜಿ ಪಂದ್ಯದಲ್ಲಿ ಕಾಣಿಸಿಕೊಂಡಿಲ್ಲ, ಕಳೆದ ಋತುವಿನಲ್ಲಿ ಕರ್ನಾಟಕ ವಿರುದ್ಧ ಕೊನೆಯ ಬಾರಿಗೆ ಆಡಿದ್ದರು. ಆದರೆ ಜಡೇಜಾ ಕೇವಲ ಒಂದು ದೇಶೀಯ ಪಂದ್ಯವನ್ನು ಆಡಿದ್ದು, ಮಧ್ಯಪ್ರದೇಶ ವಿರುದ್ಧ ತಮ್ಮ ತಂಡಕ್ಕಾಗಿ ಆಡಿದ್ದಾರೆ.

ಸೌರಾಷ್ಟ್ರ ಮತ್ತು ಪಂಜಾಬ್ ಎರಡೂ ತಂಡಗಳು ತಮ್ಮ ಕೊನೆಯ ಐದು ಪಂದ್ಯಗಳಲ್ಲಿ ತಲಾ ಒಂದು ಪಂದ್ಯವನ್ನು ಮಾತ್ರ ಗೆದ್ದಿದ್ದು, ಮತ್ತು ಬಿ-ಗುಂಪಿನ ಅಂಕಪಟ್ಟಿಯಲ್ಲಿ ಕ್ರಮವಾಗಿ ನಾಲ್ಕನೇ ಮತ್ತು ಆರನೇ ಸ್ಥಾನದಲ್ಲಿವೆ. ಈ ಪಂದ್ಯದ ನಂತರ ಎರಡೂ ತಂಡಗಳಿಗೆ ಇನ್ನೂ ಒಂದು ಲೀಗ್ ಪಂದ್ಯ ಮಾತ್ರ ಉಳಿಯಲಿದೆ. ಗಿಲ್ ಮತ್ತು ಜಡೇಜಾ ಟಿ 20 ವಿಶ್ವಕಪ್ ತಂಡದಲ್ಲಿಲ್ಲ. ಹೀಗಾಗಿ ಉಭಯ ಆಟಗಾರರು ಅಂತಿಮ ರಣಜಿ ಪಂದ್ಯಕ್ಕೂ ಲಭ್ಯವಾಗಬಹುದು. ಕಿವೀಸ್ ವಿರುದ್ಧದ ಏಕದಿನ ಸರಣಿಯಲ್ಲಿ ಜಡೇಜಾ ಮೂರು ಇನ್ನಿಂಗ್ಸ್‌ಗಳಲ್ಲಿ 14.33 ಸರಾಸರಿಯಲ್ಲಿ ಕೇವಲ 43 ರನ್ ಗಳಿಸಿದ್ದಲ್ಲದೆ, ಒಂದೇ ಒಂದು ವಿಕೆಟ್ ಪಡೆಯಲು ವಿಫಲರಾದರು. ಹಾಗಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಇನ್ನಷ್ಟು ಲಯ ಕಾಣಬೇಕೆನ್ನುವ ಯೋಚನೆಯಿಂದ ರಣಜಿ ಆಟದತ್ತ ಮುಖ ಮಾಡಲು ತೀವ್ರ ಆಸಕ್ತಿ ತೋರಿಸಿದ್ದಾರೆ.

ಹಾಗೆಯೇ ಏಕದಿನ ತಂಡದ ನಾಯಕನಾಗಿ ಕಿವೀಸ್ ವಿರುದ್ಧದ ಸರಣಿಯಲ್ಲಿ ಸ್ಥಿರ ಪ್ರದರ್ಶನ ನೀಡುವಲ್ಲಿ ಶುಭ್‌ಮನ್ ಗಿಲ್ ವಿಫಲರಾಗಿದ್ದಾರೆ. ಆ ಕಾರಣಕ್ಕಾಗಿ ಬ್ಯಾಟಿಂಗ್‌ನಲ್ಲಿ ಸ್ಥಿರತೆ ಕಾಣುವುದು ಗಿಲ್‌ಗೆ ಅತ್ಯಗತ್ಯ. ಹಾಗಾಗಿ ಇನ್ನುಳಿದಿರುವ ರಣಜಿ ಪಂದ್ಯಗಳು ತನ್ನ ಬ್ಯಾಟಿಂಗ್ ಅಭ್ಯಾಸದ ಪಾಲಿಗೆ ಸೂಕ್ತ ವೇದಿಕೆಯಾಗಲಿದೆ ಎಂಬ ಯೋಚನೆಯ ಕಾರಣಕ್ಕಾಗಿ ಆ ನಿಟ್ಟಿನಲ್ಲಿ ಗಿಲ್, ದೇಶೀಯ ಪಂದ್ಯವಾಡಲು ಸಜ್ಜಾಗಿದ್ದಾರೆ.

ರೋಹಿತ್ ಬಗ್ಗೆ ಗಿಲ್ ಸಮರ್ಥನೆ

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ಹಿರಿಯ ಅನುಭವಿ ಆಟಗಾರ ರೋಹಿತ್ ಶರ್ಮಾ ಅವರ ಕಳಪೆ ಫಾರ್ಮ್ ಅನ್ನು ಭಾರತದ ಏಕದಿನ ತಂಡದ ನಾಯಕ ಶುಭ್‌ಮನ್ ಗಿಲ್ ಸಮರ್ಥಿಸಿಕೊಂಡಿದ್ದಾರೆ. ಅಂತಾರಾಷ್ಟ್ರೀಯ ಟೂರ್ನಿಗಳಲ್ಲಿ ಪ್ರತೀ ಬಾರಿಯೂ ಒಬ್ಬರ ಉತ್ತಮ ಆರಂಭ ಮತ್ತು ಇಲ್ಲವೇ ಸ್ಥಿರತೆ ನಿರೀಕ್ಷೆ ಸರಿಯಲ್ಲ ಎಂದು ಹೇಳಿದ್ದಾರೆ. ಮೂರು ಪಂದ್ಯಗಳ ಸರಣಿಯಲ್ಲಿ ರೋಹಿತ್ ಶರ್ಮಾ ತಂಡಕ್ಕೆ ಗಮನಾರ್ಹ ಕೊಡುಗೆ ನೀಡುವಲ್ಲಿ ವಿಫಲರಾಗಿದ್ದರು. ಮೂರು ಇನ್ನಿಂಗ್ಸ್‌ಗಳಿಂದ 20.33 ಸರಾಸರಿಯಲ್ಲಿ ಕೇವಲ 61 ರನ್ ಮಾತ್ರ ಗಳಿಸಿದ್ದರು.

ಗೌತಮಿ ಬಿರುಸಿನ ಬ್ಯಾಟಿಂಗ್ | ಗುಜರಾತ್‌ಗೆ ಸೋಲು

ಆರ್‌ಸಿಬಿಗೆ ಪಂಚಾಮೃತ

ವಡೋದರ: ಗೌತಮಿ ನಾಯಕ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಇಲ್ಲಿ ಸೋಮವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ ಆರ್‌ಸಿಬಿ ತಂಡವು ಗುಜರಾತ್ ಜೈಂಟ್ಸ್ ತಂಡವನ್ನು 61 ರನ್‌ಗಳ ಭರ್ಜರಿ ಅಂತರದಿಂದ ಸೋಲಿಸಿ ಟೂರ್ನಿಯಲ್ಲಿ ಸತತ 5ನೇ ಗೆಲುವನ್ನು ದಾಖಲಿಸಿತು.

ಟಾಸ್ ಗೆದ್ದ ಗುಜರಾತ್ ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ರಾಯಲ್ ಚಾಲೆಂಜರ್ಸ್‌ನ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ ಕೇವಲ 2 ರನ್ ಆದಾಗ ಮೊದಲ ವಿಕೆಟ್ ಕಳೆದುಕೊಂಡಿತು. 9 ರನ್ ಆದಾಗ 2ನೇ ವಿಕೆಟ್ ಕೂಡಾ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಆದರೆ 3ನೇ ವಿಕೆಟ್‌ಗೆ ನಾಯಕಿ ಸ್ಮೃತಿ ಮಂಧಾನಾ ಮತ್ತು ಗೌತಮಿ ನಾಯಕ್ 60 ರನ್‌ಗಳ ಉತ್ತಮ ಜತೆಯಾಟ ಆಡಿದರು. ಮಂಧಾನಾ 23 ಬಾಲ್‌ಗಳಿಂದ 26 ರನ್ ಗಳಿಸಿದರೆ, ಗೌತಮಿ 55 ಬಾಲ್‌ಗಳಲ್ಲಿ 73 ರನ್ ಗಳಿಸಿ ಆರ್‌ಸಿಬಿಯ ಗೌರವಾರ್ಹ ಮೊತ್ತಕ್ಕೆ ಕಾರಣರಾದರು. ರಿಚಾ ಘೋಷ್ 20 ಬಾಲ್‌ಗಳಲ್ಲಿ 27 ರನ್ ಗಳಿಸಿದರು. ಆ ಮೂಲಕ ಆರ್‌ಸಿಬಿ 6 ವಿಕೆಟ್‌ಗೆ 178 ರನ್ ಗಳಿಸಿತು.



179 ರನ್‌ಗಳ ಗುರಿ ಬೆಂಬತ್ತಿದ ಗುಜರಾತ್ ಕೂಡಾ ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡದ ಮೊತ್ತ ಕೇವಲ 5 ರನ್ ಆಗುವಷ್ಟರಲ್ಲಿ ಅದು 3 ವಿಕೆಟ್‌ಗಳನ್ನು ಕಳೆದುಕೊಂಡಿತು. ಆ ಬಳಿಕ ಆಶ್ಲೇಘ್ ಗಾರ್ಡ್ನರ್ (54 ರನ್) ಮತ್ತು ಅನುಷ್ಕಾ ಶರ್ಮಾ (18 ರನ್) ಆರ್‌ಸಿಬಿ ತಂಡಕ್ಕಾಗಿ ಉತ್ತಮ ಜತೆಯಾಟ ಆಡಿದರು. ಭಾರತಿ ಫುಲ್ಮಲಿ 14 ರನ್ ಗಳಿಸಿದರೂ, ಗುಜರಾತ್‌ನ ಉಳಿದ ಬ್ಯಾಟರ್‌ಗಳು ತಂಡವನ್ನು ಗೆಲುವಿನತ್ತ ಕೊಂಡೊಯ್ಯುವಲ್ಲಿ ವಿಫಲರಾದರು.

ಆಸ್ಟ್ರೇಲಿಯನ್ ಓಪನ್ ಟೆನಿಸ್ | ಅಗ್ರ ಶ್ರೇಯಾಂಕಿತ ಆಟಗಾರರ ಶುಭಾರಂಭ

ಸಬಲೆಂಕಾ, ಅಲ್ಕರಾಜ್‌ಗೆ ಮುನ್ನಡೆ

ಸಿಡ್ನಿ: ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೊದಲ ಪಂದ್ಯವನ್ನು ಗೆಲ್ಲುವ ಮೂಲಕ ಅಗ್ರ ಟೆನಿಸ್ ಶ್ರೇಯಾಂಕಿತೆ ಅರಿನಾ ಸಬಲೆಂಕಾ (ಬೆಲಾರಸ್) ಉತ್ತಮ ಆರಂಭವನ್ನು ಪಡೆದುಕೊಂಡಿದ್ದಾರೆ. ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಟಿಯಾಂಟ್ಸೊವಾ (ಫ್ರಾನ್ಸ್) ಅವರನ್ನು 6-4, 6-1 ಸೆಟ್‌ಗಳಿಂದ ಸೋಲಿಸಿದರು. ಮೊದಲ ಸೆಟ್‌ನಲ್ಲಿ ತನ್ನ ಪ್ರತಿಸ್ಪರ್ಧಿಯಿಂದ ಕಠಿಣ ಸವಾಲು ಎದುರಿಸಿದ ಸಬಲೆಂಕಾ ಒಂದು ಹಂತದಲ್ಲಿ ಸೆಟ್ ಹಿನ್ನಡೆ ಅನುಭವಿಸುವ ಭೀತಿ ಎದುರಾಗಿತ್ತು. ಟಿಯಾಂಟ್ಸೊವಾ ಅದ್ಭುತ ಪ್ರದರ್ಶನ ನೀಡಿ 4-4 ರಲ್ಲಿ ಸಮಬಲ ಸಾಧಿಸಿದ್ದರು. ಹತ್ತನೇ ಸುತ್ತಿನಲ್ಲಿ ಟಿಯಾಂಟ್ಸೊವಾ ಎಡವಿದ ಕಾರಣ ಸಬಲೆಂಕಾ ಮೊದಲ ಸೆಟ್ ಗೆದ್ದುಕೊಂಡರು.

ಎರಡನೇ ಸೆಟ್‌ನಲ್ಲಿ ಸಬಲೆಂಕಾ ಬಲವಾದ ಸರ್ವ್ ಗಳೊಂದಿಗೆ ಪುಟಿದೆದ್ದರು. ಎರಡನೇ ಗೇಮ್‌ನಲ್ಲಿಯೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ನಂತರ ಅವರು 5-1 ಅಂಕಗಳೊಂದಿಗೆ ಅಜೇಯ ಮುನ್ನಡೆ ಸಾಧಿಸಿದರು. ಕೊನೆಯವರೆಗೂ ಇದೇ ವೇಗವನ್ನು ಕಾಯ್ದುಕೊಂಡ ಸಬಲೆಂಕಾ ಸೆಟ್ ಮತ್ತು ಪಂದ್ಯವನ್ನು ಗೆಲ್ಲುವಲ್ಲಿ ಯಶಸ್ವಿ ಆದರು.

ಅಲ್ಕರಾಜ್‌ಗೆ ಮುನ್ನಡೆ: ಚೊಚ್ಚಲ ಗ್ರ್ಯಾಂಡ್‌ಸ್ಲ್ಯಾಮ್ ಮೇಲೆ ಕಣ್ಣಿಟ್ಟಿರುವ ಸ್ಪ್ಯಾನಿಷ್ ತಾರೆ ಕಾರ್ಲೋಸ್ ಅಲ್ಕರಾಜ್ ಆಸ್ಟ್ರೇಲಿಯನ್ ಓಪನ್‌ನ ಮೊದಲ ಪಂದ್ಯದಲ್ಲೇ ಉತ್ತಮ ಪ್ರದರ್ಶನ ನೀಡಿದರು. ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಅವರು ವಾಲ್ಟನ್ (ಆಸ್ಟ್ರೇಲಿಯಾ) ಅವರನ್ನು 6-3, 7-6 (7-2), 6-2 ಸೆಟ್‌ಗಳಿಂದ ಸೋಲಿಸಿದರು. ಮೊದಲ ಸೆಟ್ ಅನಾಯಾಸವಾಗಿ ಗೆದ್ದ ಅಲ್ಕರಾಜ್, ಎರಡನೇ ಸೆಟ್‌ನಲ್ಲಿ ವಾಲ್ಟನ್‌ನಿಂದ ಕಠಿಣ ಸ್ಪರ್ಧೆಯನ್ನು ಎದುರಿಸಿದರು.



ಆಥರ್ವ ತಾಯಿಡೆ ಅತ್ಯಾಕರ್ಷಕ ಶತಕ | ಫೈನಲ್‌ನಲ್ಲಿ ಸೋಲುಂಡ ಸೌರಾಷ್ಟ್ರ ತಂಡ

ವಿಜಯ್ ಹಜಾರೆ: ವಿದರ್ಭಕ್ಕೆ ಟ್ರೋಫಿ

ಬೆಂಗಳೂರು: ಆಥರ್ವ ತಾಯಿಡೆ ಅವರ ಅದ್ಭುತ ಶತಕದ ನೆರವಿನಿಂದ ಸೌರಾಷ್ಟ್ರವನ್ನು 38 ರನ್‌ಗಳಿಂದ ಸೋಲಿಸಿದ ವಿದರ್ಭ ತಂಡ ಚೊಚ್ಚಲ ಬಾರಿ ವಿಜಯ್ ಹಜಾರೆ ಪ್ರಶಸ್ತಿ ಜಯಿಸಿ ಐತಿಹಾಸಿಕ ಸಾಧನೆ ಮಾಡಿದೆ. ಕಳೆದ ಆವೃತ್ತಿಯಲ್ಲಿ ಫೈನಲ್‌ವರೆಗೂ ಬಂದು ಕರ್ನಾಟಕದ ವಿರುದ್ಧ ಸೋಲನುಭವಿಸಿ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿದ್ದ ವಿದರ್ಭ ತಂಡ ಈ ಬಾರಿ ಚಾಂಪಿಯನ್ ಆಗಿ ಮೆರೆಯಿತು. ಎರಡು ತಂಡಗಳು ಉತ್ತಮ ಪ್ರದರ್ಶನ ನೀಡಿದರೂ ವಿದರ್ಭ ತಂಡದ ಶಿಸ್ತುಬದ್ಧ ಬೌಲಿಂಗ್ ಗಮನ ಸೆಳೆಯಿತು.

ಬೆಂಗಳೂರಿನ ಸಿಒಇ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ವಿಜಯ ಹಜಾರೆ ಟ್ರೋಫಿ 2025-26ರ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವಿದರ್ಭ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 317 ರನ್ ಗಳಿಸಿತು. ಈ ಮೊತ್ತವನ್ನು ಬೆಂಬತ್ತಿ ಹೊರಟ ಸೌರಾಷ್ಟ್ರ ತಂಡ 48.5 ಓವರ್ ಗಳಲ್ಲಿ 279 ರನ್‌ಗಳಿಗೆ ಆಲೌಟ್ ಆಯಿತು. 118 ಎಸೆತಗಳಲ್ಲಿ 15 ಬೌಂಡರಿ ಹಾಗೂ 3 ಸಿಕ್ಸರ್‌ಗಳನ್ನೊಳಗೊಂಡ 128 ರನ್‌ಗಳ ಗಳಿಸಿದ್ದ ಅಥರ್ವ ಥಾಯಿಡೆ ಅವರು ಪಂದ್ಯಶ್ರೇಷ್ಠ ಪ್ರಶಸ್ತಿ ಗಳಿಸಿದರು.

ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕದ ವಿರುದ್ಧ ಅಮೋಘ ಶತಕ ಬಾರಿಸಿದ್ದ ಅಮನ್ ಮೋಖಾಡೆ ಅವರು ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸ್ಕೋರ್: ವಿದರ್ಭ-50 ಓವರ್‌ಗಳಲ್ಲಿ 317/8: ಅಥರ್ವ ತಾಯಿಡೆ 128, ಯಶ್ ರಾಥೋಡ್ 54, ಅಮನ್ ಮೋಖಾಡೆ 33, ಆರ್ ಸಮರ್ಥ್ 25, ಚೇತನ್ ಸಕರಿಯಾ 45 ರನ್‌ಗೆ 2 ವಿಕೆಟ್, ಚಿರಾಗ್ ಜಾನಿ 65 ರನ್‌ಗೆ 2 ವಿಕೆಟ್

ಸೌರಾಷ್ಟ್ರ-48.5 ಓವರ್‌ಗಳಲ್ಲಿ 279: ಪ್ರೇರಕ್ ಮಂಕಡ್ 88(92), ಚಿರಾಗ್ ಜಾನಿ 64(63), ಸಮ್ಮರ್ ಗುಜ್ಜರ್ 25(36), ಯಶ್ ಠಾಕೂರ್ 50ರನ್‌ಗೆ 4 ವಿಕೆಟ್, ನಚಿಕೇತ್ ಭೂತೆ 46 ರನ್‌ಗೆ 3 ವಿಕೆಟ್, ದರ್ಶನ್ ನಾಲ್ಕಂಡೆ 52 ರನ್‌ಗೆ 2 ವಿಕೆಟ್

ತನ್ನ ಅಂತಿಮ ನಿಲುವನ್ನು ಐಸಿಸಿಗೆ ತಿಳಿಸಲಿರುವ ಬಾಂಗ್ಲಾದೇಶ

ನಾಳೆಯೊಳಗೆ ಬಾಂಗ್ಲಾದ ನಿರ್ಧಾರ ಸಾಧ್ಯತೆ

ಢಾಕಾ: ಟಿ20 ವಿಶ್ವಕಪ್‌ನಲ್ಲಿ ಬಾಂಗ್ಲಾದೇಶ ಭಾಗವಹಿಸುವಿಕೆಯ ಬಗ್ಗೆ ಮಾತ್ರವಲ್ಲದೆ, ತಂಡವು ಪಂದ್ಯಾವಳಿಗಾಗಿ ಭಾರತಕ್ಕೆ ಪ್ರಯಾಣಿಸುತ್ತದೆಯೇ ಎಂಬುದರ ಕುರಿತು ಜನವರಿ 21ರೊಳಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆಯಿದೆ. ಢಾಕಾದಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಈ ಗಡುವನ್ನು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗೆ (ಬಿಸಿಬಿ) ತಿಳಿಸಿದೆ.

ಕಳೆದ ವಾರದಲ್ಲಿ ಐಸಿಸಿ ಮತ್ತು ಬಿಸಿಬಿ ನಡುವಿನ ಎರಡು ಸಭೆಗಳು ನಡೆದಿದ್ದು, ಮಾತುಕತೆಯ ಸಮಯದಲ್ಲಿ ಬಿಸಿಬಿ ಪಂದ್ಯಾವಳಿಯಲ್ಲಿ ಭಾಗವಹಿಸುವ ತನ್ನ ಬಯಕೆಯನ್ನು ಪುನರುಚ್ಚರಿಸಿತು, ಆದರೆ ಭದ್ರತಾ ಕಾಳಜಿಯನ್ನು ಉಲ್ಲೇಖಿಸಿ ಭಾರತದ ಹೊರಗೆ ಆಡಲು ಆದ್ಯತೆ ನೀಡುವುದಾಗಿ ಸಮರ್ಥಿಸಿಕೊಂಡಿತು. ಸಹ ಆತಿಥೇಯರಾಗಿ ಶ್ರೀಲಂಕಾವನ್ನು ಬಿಸಿಬಿ ಅತ್ಯಂತ ಕಾರ್ಯಸಾಧ್ಯವಾದ ಪರ್ಯಾಯ ಸ್ಥಳವೆಂದು ಸೂಚಿಸಿದೆ. ಚರ್ಚೆಯ ಸಮಯದಲ್ಲಿ ಶ್ರೀಲಂಕಾದಲ್ಲಿ ಆಡಲು ಅನುಕೂಲವಾಗುವಂತೆ ಐರ್ಲೆಂಡ್ ತಂಡದ ಗ್ರೂಪ್ ಬದಲಾವಣೆಗೂ ಮನವಿ ಸಲ್ಲಿಸಿತ್ತು. ಆದರೆ ಬಿಸಿಬಿಯ ಆ ಪ್ರಸ್ತಾಪವನ್ನು ಐಸಿಸಿ ತಿರಸ್ಕರಿಸಿತ್ತು. ಭಾರತದಲ್ಲಿ ಬಾಂಗ್ಲಾದೇಶ ತಂಡಕ್ಕೆ ಯಾವುದೇ ನಿರ್ದಿಷ್ಟ ಭದ್ರತಾ ಬೆದರಿಕೆ ಇಲ್ಲ ಎಂದು ಬಿಸಿಬಿಗೆ ಐಸಿಸಿ ಭರವಸೆ ನೀಡಿದೆ ಎಂದು ತಿಳಿದುಬಂದಿದೆ.

ಫೆಬ್ರವರಿ 7ರಿಂದ ಟಿ20 ವಿಶ್ವಕಪ್ ಪಂದ್ಯಾವಳಿ ಪ್ರಾರಂಭವಾಗಲಿದ್ದು, ಇನ್ನು ಅದರ ಸಿದ್ಧತೆಗೆ ಉಳಿದಿರುವ ಸಮಯ ತೀರಾ ಕಡಿಮೆಯಾಗಿದೆ. ಈಗಿನ ವೇಳಾಪಟ್ಟಿಯ ಪ್ರಕಾರ ಬಾಂಗ್ಲಾದೇಶವು ವೆಸ್ಟ್ ಇಂಡೀಸ್ ವಿರುದ್ಧ ತಮ್ಮ ಆರಂಭಿಕ ಪಂದ್ಯವನ್ನು ಕೋಲ್ಕತ್ತಾದಲ್ಲಿ ಆಡಬೇಕಾಗಿದ್ದು, ಮುಂದಿನ ಎರಡು ಪಂದ್ಯಗಳನ್ನು ಮುಂಬೈನಲ್ಲಿ ಆಡಬೇಕಾಗಿದೆ.

ಕರಿಕೋಟು ತೊಟ್ಟ ಕೋಮಲ್

ನಟ ಕೋಮಲ್ ಕಳೆದ ವರ್ಷ ಕೋಣನ ಹಿಂದೆ ಬಂದು ಬ್ಲಾಕ್ ಮ್ಯಾಜಿಕ್ ಮಾಡಿ ಮನಗೆದ್ದಿದ್ದರು. ಅಂತೆಯೇ ಈ ವರ್ಷವೂ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದು ಭರ್ಜರಿಯಾಗಿ ತೆರೆಗೆ ಬರಲಿದ್ದಾರೆ. ಅದರಲ್ಲಿ ತೆನಾಲಿ ಡಿಎ ಎಲ್‌ಎಲ್‌ಬಿ ಕೂಡ ಒಂದು. ಹೌದು, ಕೋಮಲ್ ಅಭಿನಯದ ಹೊಸ ಸಿನಿಮಾ ಘೋಷಣೆಯಾಗಿದ್ದು ಈ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ. ತೆನಾಲಿ ಡಿಎ ಎಲ್‌ಎಲ್‌ಬಿ ಶೀರ್ಷಿಕೆಯೇ ಹೇಳುವಂತೆ ಇದು ಕೋರ್ಟ್ ಡ್ರಾಮಾ ಹಾಗೂ ವಕೀಲನ ಸುತ್ತ ಸಾಗುವ ಕಥೆಯಾಗಿದೆ. ಈ ಹಿಂದೆ ಕನ್ನಡದಲ್ಲಿ ಹಲವು ಕೋರ್ಟ್ ಡ್ರಾಮಾ ಜಾನರ್‌ನ ಸಿನಿಮಾಗಳು ತೆರೆಗೆ ಬಂದಿವೆ. ಅವುಗಳಲ್ಲಿ ಬಹುತೇಕ ಸಿನಿಮಾಗಳು ಕ್ರೈಂ, ಥ್ರಿಲ್ಲರ್, ಸಸ್ಪೆನ್ಸ್ ಜಾನರ್ ಚಿತ್ರಗಳೇ ಆಗಿವೆ. ಆದರೆ ತೆನಾಲಿ ಡಿಎ ಎಲ್‌ಎಲ್‌ಬಿ ಸಂಪೂರ್ಣ ಹಾಸ್ಯಮಯ ಸಿನಿಮಾ ಎಂಬುದು ತಿಳಿಯುತ್ತದೆ. ಕರಿಕೋಟು ತೊಟ್ಟ ಕೋಮಲ್, ತಲೆಗೆ ಮೈಸೂರು ಪೇಟ ಹಾಕಿ, ಹಳೇ ಬೈಕ್‌ನಲ್ಲಿ ಸವಾರಿ ಮಾಡುತ್ತಿರುವುದನ್ನು ಗಮನಿಸಿದರೆ ಇದು ಸಂಪೂರ್ಣ ಕಾಮಿಡಿ ಕಥೆಯ ಸಿನಿಮಾ ಎಂಬುದು ಸ್ಪಷ್ಟವಾಗುತ್ತದೆ. ಬಿಎಎಲ್ ಎಲ್‌ಬಿ ಕೇಳಿದ್ದೇವ. ಆದರೆ ಡಿಎ ಎಲ್ ಎಲ್‌ಬಿ ಎಂದರೆ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು ಎನ್ನುತ್ತಾರೆ ಕೋಮಲ್.

ಈ ಹಿಂದಿನ ಸಿನಿಮಾಗಳಲ್ಲಿ ಹಲವು ವಿಭಿನ್ನ ಪಾತ್ರಗಳಲ್ಲಿ ನಟಿಸಿರುವ ಕೋಮಲ್ ಇದೇ ಮೊದಲ ಬಾರಿಗೆ ವಕೀಲನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಸಿನಿಮಾ ಸೆಟ್ಟೇರುವ ಮೊದಲೇ ನಿರೀಕ್ಷೆ ದುಪ್ಪಟ್ಟಾಗಿದೆ. ಈ ಹಿಂದೆ ಮರೀಚಿ ಸಿನಿಮಾವನ್ನು ನಿರ್ದೇಶಿಸಿದ್ದ ಸಿದ್ರುವ್ ಈ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಮರೀಚಿಯಲ್ಲಿ ಥ್ರಿಲ್ಲಿಂಗ್ ಸ್ಟೋರಿ ಹೇಳಿದ್ದ ಸಿದ್ರ್ ಈ ಬಾರಿ ಕಾಮಿಡಿ ಕಥೆಯನ್ನು ಆಯ್ದುಕೊಂಡಿದ್ದಾರೆ. ಇನ್ನು ಈ ಸಿನಿಮಾದಲ್ಲಿ ಕೋಮಲ್ ಜತೆಗೆ ದೊಡ್ಡ ತಾರಾಬಳಗವೇ ಇದೆ. ಸದ್ಯ ಸಿನಿಮಾದ ಪ್ರೀಪ್ರೊಡಕ್ಷನ್ ಕಾರ್ಯಗಳು ಭರದಿಂದ ಸಾಗಿದ್ದು, ಮೇ ತಿಂಗಳಿನಿಂದ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ. ಈ ಸಿನಿಮಾದ ಜತೆಗೆ ಕೋಮಲ್ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್, ರೋಲೆಕ್ಸ್ ಚಿತ್ರಗಳಲ್ಲಿಯೂ ನಟಿಸುತ್ತಿದ್ದಾರೆ. ಈ ಸಿನಿಮಾಗಳು ಈ ವರ್ಷವೇ ತೆರೆಗೆ ಬರಲಿವೆ. ಹಾಗಾಗಿ ಕೋಮಲ್ ಈ ವರ್ಷ ಹಲವು ಸಿನಿಮಾಗಳ ಮೂಲಕ ತೆರೆಯಲ್ಲಿ ಮಿಂಚಲಿದ್ದಾರೆ. ಪ್ರೇಕ್ಷಕರನ್ನು ಹಾಸ್ಯದ ಹೊನಲಿನಲ್ಲಿ ತೇಲಿಸಲಿದ್ದಾರೆ.

ಗ್ರಾಮಗಳಲ್ಲೂ ಗ್ರಾಮಾಯಣದ ಗಾನ

ಹಲವು ವರ್ಷಗಳ ಹಿಂದೆಯೇ ಸೆಟ್ಟೇರಿದ್ದ ಗ್ರಾಮಾಯಣ ಚಿತ್ರ ಈಗ ಚಿತ್ರೀಕರಣ ಮುಗಿಸಿದ್ದು ತೆರೆಗೆ ಸಿದ್ಧವಾಗಿದೆ. ಶೀರ್ಷಿಕೆಯೇ ಹೇಳುವಂತೆ ಗ್ರಾಮೀಣ ಸೊಗಡಿನ ಈ ಸಿನಿಮಾ ಹಾಡಿನ ಮೂಲಕವೇ ಸಖತ್ ಸದ್ದು ಮಾಡುತ್ತಿದೆ. ಗ್ರಾಮಾಯಣದ ಬೆಂಕಿ... ಹಾಡನ್ನು ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಇದು ಶಿವರಾಜ ಕುಮಾರ್ ಅಭಿನಯಿಸಿದ್ದ ಮನ ಮೆಚ್ಚಿದ ಹುಡುಗಿ ಚಿತ್ರದ ನಿನ್ನಾಣೆ ನಾನು ಬೆಂಕಿಯಲ್ಲೂ ತಂಪು ಕಂಡೇನು.. ಹಾಡಿನ ರೀಮಿಕ್ಸ್ ಆಗಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿರುವ ಈ ಹಾಡಿಗೆ ಕಪಿಲ ಕಪಿಲನ್ ಹಾಗೂ ಐರಾ ಉಡುಪಿ ದನಿಯಾಗಿದ್ದಾರೆ. ಹಿಂದಿನ ಹಾಡಿಗೆ ಚಿ.ಉದಯಶಂಕರ್ ಸಾಹಿತ್ಯ ಬರೆದಿದ್ದು ಉಪೇಂದ್ರ ಕುಮಾರ್ ಸಂಗೀತ ಸಂಯೋಜಿಸಿದ್ದರು. ಎಸ್ .ಪಿ.ಬಾಲಸುಬ್ರಮಣ್ಯಂ ಹಾಗೂ ಎಸ್. ಜಾನಕಿ ಅವರ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿತ್ತು. ಈಗ ಇದೇ ಹಾಡನ್ನು ಗ್ರಾಮಾಯಣ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಲಹರಿ ಫಿಲಂಸ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಗ್ರಾಮಾಯಣ ಚಿತ್ರವನ್ನು ದೇವನೂರು ಚಂದ್ರು ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ವಿನಯ್ ರಾಜಕುಮಾರ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಮೇಘಾ ಶೆಟ್ಟಿ ನಾಯಕಿಯಾಗಿ ಅಭಿನಯಿಸಿದ್ದಾರೆ. ಅಚ್ಯುತ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಬಲ ರಾಜವಾಡಿ, ಅಪರ್ಣಾ, ಸೀತಾ ಕೋಟೆ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಲೂಸ್ ಮಾದ ಯೋಗಿ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಗ್ರಾಮಾಯಣ ನಮ್ಮ ಲಹರಿ ಸಂಸ್ಥೆ ನಿರ್ಮಾಣದ ಒಂಬತ್ತನೇ ಚಿತ್ರ. ದೇವನೂರು ಚಂದ್ರು ಒಂದೊಳ್ಳೆಯ ಗ್ರಾಮೀಣ ಸೊಗಡಿನ ಕಥೆ ಹೆಣೆದು ಚಿತ್ರ ನಿರ್ದೇಶನ ಮಾಡಿದ್ದಾರೆ. ಮನ ಮೆಚ್ಚಿದ ಹುಡುಗಿ ಚಿತ್ರದ ಮೂಲ ಹಾಡು ನಮ್ಮ ಲಹರಿ ಸಂಸ್ಥೆಯಿಂದ ಬಿಡುಗಡೆಯಾಗಿತ್ತು. ಈಗ ರೀಮಿಕ್ಸ್ ಹಾಡು ಕೂಡ ನಮ್ಮ ಸಂಸ್ಥೆಯಿಂದಲೇ ಬಿಡುಗಡೆಯಾಗುತ್ತಿದೆ ಎಂದು ಲಹರಿ ಸಂಸ್ಥೆಯ ಮುಖ್ಯಸ್ಥ ಲಹರಿ ವೇಲು ಹೇಳಿದರು.

ಗ್ರಾಮಾಯಣ ಪಕ್ಕಾ ಗ್ರಾಮೀಣ ಸೊಗಡಿನ ಸಿನಿಮಾ. ಈವರೆಗೂ ನೀವು ನೋಡಿರದ ವಿನಯ್ ರಾಜಕುಮಾರ್ ಅವರನ್ನು ಈ ಚಿತ್ರದಲ್ಲಿ ನೋಡಬಹುದು. ಬೆಂಕಿ... ಹಾಡು ಸೇರಿದಂತೆ ಚಿತ್ರದ ಎಲ್ಲಾ ಹಾಡುಗಳು ಸುಮಧುರವಾಗಿ ಮೂಡಿಬಂದಿವೆ. ಇಡೀ ಚಿತ್ರತಂಡದ ಶ್ರಮದಿಂದ ಗ್ರಾಮಾಯಣ ಒಂದೊಳ್ಳೆಯ ಚಿತ್ರವಾಗಿ ಮೂಡಿಬಂದಿದೆ ಎಂದು ನಿರ್ದೇಶಕ ದೇವನೂರು ಚಂದ್ರು ಸಂತಸದಿಂದ ನುಡಿದರು.

ಲಹರಿ ಸಂಸ್ಥೆಯು ಐವತ್ತನೇ ವರ್ಷದ ಸಂಭ್ರಮದಲ್ಲಿದೆ. ಈ ಸಂದರ್ಭದಲ್ಲಿಯೇ ಗ್ರಾಮಾಯಣ ಚಿತ್ರ ತೆರೆಗೆ ಬರುತ್ತಿರುವುದು ಖುಷಿಕೊಟ್ಟಿದೆ. ಇದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾ, ಸಿಕ್ತ್ ಸೆನ್ಸ್ ಸೀನ ಎಂಬ ಪಾತ್ರದಲ್ಲಿ ನಾನು ನಟಿಸಿದ್ದೇನೆ. ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣ ಸಿನಿಮಾದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಪೂರ್ಣಚಂದ್ರ ತೇಜಸ್ವಿಯವರ ಹಾಡುಗಳೇ ಗ್ರಾಮಾಯಣ ಏನೆಂದು ಹೇಳಲಿದೆ. ಎಂದು ವಿನಯ್ ರಾಜಕುಮಾರ್ ತಿಳಿಸಿದರು.

ನಾನು ಈ ಸಿನಿಮಾದಲ್ಲಿ ಕುಸುಮ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಯಾವುದಕ್ಕೂ ಹೆದರದ ಹಠಮಾರಿ ಹುಡುಗಿಯ ಪಾತ್ರವದು ಎಂದು ನಟಿ ಮೇಘಾ ಶೆಟ್ಟಿ ತಮ್ಮ ಪಾತ್ರದ ಬಗ್ಗೆ ಹೇಳಿದರು. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ, ಪೂರ್ಣಚಂದ್ರ ತೇಜಸ್ವಿ, ಸಂಗೀತ ನಿರ್ದೇಶನ ಗ್ರಾಮಾಯಣ ಚಿತ್ರಕ್ಕಿದೆ.



ಪುಣೆ ಚಿತ್ರೋತ್ಸವದಲ್ಲಿ ವನ್ಯ

ಪ್ರತಿಷ್ಠಿತ ಇಪ್ಪತ್ತ ನಾಲ್ಕನೇ ಪುಣೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನಿರ್ದೇಶಕ ಬಡಿಗೇರ್ ದೇವೇಂದ್ರ ನಿರ್ದೇಶನದ ವನ್ಯ ಚಿತ್ರ ಪ್ರದರ್ಶನಗೊಂಡು, ಸಿನಿ ಪ್ರಿಯರ ಹಾಗೂ ವಿಮರ್ಶಕರಿಂದ ಮೆಚ್ಚುಗೆ ಪಡೆದಿದೆ. ವಿಶ್ವದಾದ್ಯಂತ ಸಲ್ಲಿಕೆಯಾಗಿದ್ದ ಸುಮಾರು ಸಾವಿರದ ಇನ್ನೂರಕ್ಕೂ ಹೆಚ್ಚು ಸಿನಿಮಾಗಳ ಪೈಕಿ ವನ್ಯ ಚಿತ್ರವು ಅಧಿಕೃತವಾಗಿ ಆಯ್ಕೆಯಾಗುವ ಮೂಲಕ ಗಮನ ಸೆಳೆದಿತ್ತು. ಈ ಚಿತ್ರ ಪ್ರದರ್ಶನದ ನಂತರ ನಡೆದ ಸಂವಾದದಲ್ಲಿ, ಪ್ರೇಕ್ಷಕರು ಸಿನಿಮಾದ ಸೂಕ್ಷ್ಮ ಕಥಾವಸ್ತು, ನೈಜ ಚಿತ್ರಣ ಹಾಗೂ ದೇವೇಂದ್ರ ಅವರ ವಿಭಿನ್ನ ನಿರ್ದೇಶನ ಶೈಲಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಸಾಮಾಜಿಕ ಮೌಲ್ಯಗಳು ಮತ್ತು ಮಾನವೀಯ ಸಂಬಂಧಗಳ ಸುತ್ತ ಹೆಣೆಯಲಾದ ಈ ಸಿನಿಮಾ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಚಿತ್ರಗಳಿಗೆ ಹೊಸ ಆಯಾಮವನ್ನು ನೀಡಿದೆ. ಒಳ್ಳೆಯ ಸಿನಿಮಾಗಳಿಗೆ ಭಾಷೆಯ ಹಂಗಿಲ್ಲ ಎಂಬುದನ್ನು ವನ್ಯ ಮತ್ತೊಮ್ಮೆ ಸಾಬೀತುಪಡಿಸಿದೆ. ನಮ್ಮ ಮಣ್ಣಿನ ಕಥೆ ಜಾಗತಿಕ ವೇದಿಕೆಯಲ್ಲಿ ಸದ್ದು ಮಾಡುತ್ತಿರುವುದು ಹೆಮ್ಮೆಯ ವಿಚಾರ. ಈಗಾಗಲೇ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಸೈ ಎನಿಸಿಕೊಂಡಿರುವ ವನ್ಯ, ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರತಿಷ್ಠಿತ ವೇದಿಕೆಗಳಲ್ಲಿ ರಾರಾಜಿಸುವ ನಿರೀಕ್ಷೆಯಿದೆ. ಈ ಸಾಧನೆಯು ಸ್ಯಾಂಡಲ್‌ವುಡ್‌ನ ಸೃಜನಶೀಲ ಚಿತ್ರತಂಡಗಳಿಗೆ ಹೊಸ ಸ್ಫೂರ್ತಿಯನ್ನು ನೀಡಿದೆ.ಕನ್ನಡದ ಕಲಾತ್ಮಕ ಸಿನಿಮಾಗಳು ಜಾಗತಿಕ ವೇದಿಕೆಯಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿರುವುದು ಚಿತ್ರರಂಗದ ಬೆಳವಣಿಗೆಗೆ ಶುಭ ಸೂಚನೆಯಾಗಿದೆ. ಸಾಮಾಜಿಕ ಸಂಕಥನದ ವನ್ಯ ಚಿತ್ರದಲ್ಲಿ ಹಿರಿಯ ನಟ ಬಿರಾದಾರ್ ವೈಜನಾಥ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಹಾಸ್ಯಮಯ ಕಥೆಯ ನಮ್ ಕಾಲ್ದಲ್ ಹಿಂಗಿರ್ಲಿಲ್ಲ ಬಿಡಿ

ನಮ್ಮ ಹಿರಿಯರು ಇಂದಿನ ಜನ ಜೀವನ, ಕಾಲಮಾನದ ಬಗ್ಗೆ ಮಾತನಾಡುವಾಗ ನಮ್ ಕಾಲ್ದಲ್ ಹಿಂಗಿರ್ಲಿಲ್ಲ ಬಿಡಿ... ಎಂದು ಹೇಳುತ್ತಾರೆ. ಈಗ ನಮ್ ಕಾಲ್ದಲ್ ಹಿಂಗಿರ್ಲಿಲ್ಲ ಬಿಡಿ... ಎಂಬ ಜನಪ್ರಿಯ ಮಾತನ್ನೇ ಶೀರ್ಷಿಕೆಯಾಗಿಟ್ಟುಕೊಂಡು ಚಿತ್ರವೊಂದು ತೆರೆಗೆ ಬರುತ್ತಿದೆ. ಬಹುತೇಕ ಹೊಸಬರೇ ಸೇರಿ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ನಮ್ ಕಾಲ್ದಲ್ ಹಿಂಗಿರ್ಲಿಲ್ಲ ಬಿಡಿ... ಸಂಪೂರ್ಣ ಹಾಸ್ಯಮಯ ಸಿನಿಮಾವಾಗಿದ್ದು, ಎರಡು ತಲೆಮಾರಿನ ಜನರ ನಡುವಿನ ವಿಭಿನ್ನ ಯೋಚನೆಗಳು, ಅವುಗಳ ನಡುವಿನ ಸಣ್ಣ ಸಂಘರ್ಷ, ಯಾವುದು ಸರಿ, ಯಾವುದು ತಪ್ಪು ಎಂಬ ಗೊಂದಲಗಳ ಸುತ್ತ ಇಡೀ ಚಿತ್ರದ ಕಥಾಹಂದರ ಸಾಗುತ್ತದೆ. ಅವೆಲ್ಲವನ್ನೂ ಈ ಚಿತ್ರದ ಮೂಲಕ ಪ್ರೇಕ್ಷಕರಿಗೆ ಮನರಂಜನಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗುತ್ತಿದೆ. ಹೊಯ್ಸಳ ಸಿನಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ರಘು ಹೊಯ್ಸಳ ಮತ್ತು ಅಮೋಘವರ್ಷ ಈ ಚಿತ್ರವನ್ನು ನಿರ್ಮಿಸಿದ್ದು, ಎಸ್.ಎಸ್.ಅಮೋಘವರ್ಷ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ರಿತ್ಯಾ, ರಾಘು ರಾಮನಕೊಪ್ಪ, ಜಯಪ್ರಕಾಶ್, ಯಶವಂತ ಶೆಟ್ಟಿ, ಅಕ್ಷಯ್, ತೀರ್ಥ ಪೊನ್ನು, ಚಂದ್ರಮೌಳಿ, ಹರಿ ಧನಂಜಯ ಮೊದಲಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.